ಕರ್ಣಾಟಕ ಪಂಚತಂತ್ರಂ

ಮಿತ್ರಭೇದನೆಂಬ ಪ್ರಥಮತಂತ್ರಂ

|| ಟಿಪ್ಪಣಿಸಹಿತ ||

ಬೆಲೆ. ೧—೮—೦

THE
KARNATAKA GRANTHAMALA
SERIES No. 83.

ಕರ್ಣಾಟಕ ಪಂಚತಂತ್ರಂ.

ಮಿತ್ರಭೇದ.

ಎಂಬ

ಪ್ರಥಮತಂತ್ರಂ.

ಮೈಸೂರು ಸೀತಾರಾಮಶಾಸ್ತ್ರಿಗಳಿಂದ
ವಿರಚಿತವಾದುದು.

MYSORE:
THE G. T. A. PRESS,
1919.

ಪೀಠಿಕೆ.

ಪಂಚ (ಐದು) ತಂತ್ರಗಳುಳ್ಳುದರಿಂದ ಇದಕ್ಕೆ ಪಂಚತಂತ್ರವೆಂದು ಹೆಸರು. ಆ ಐದು ತಂತ್ರಗಳು—ಮಿತ್ರಭೇದ, ಮಿತ್ರಸಂಪ್ರಾಪ್ತಿ, ಕಾಕೋಲೂಕೀಯ, ಲಬ್ಧಪ್ರಣಾಶ, ಅಪರೀಕ್ಷಿತಕಾರಕ—ಎಂಬುವು. ಎರಡನೆಯ ತಂತ್ರಕ್ಕೆ ಮಿತ್ರಪ್ರಾಪ್ತಿ, ಮಿತ್ರಪ್ರಾಪಕ, ಸುಹೃಲ್ಲಾಭ —ಎಂದೂ, ಮೂರನೆಯದಕ್ಕೆ ಸಂಧಿವಿಗ್ರಹವೆಂದೂ, ಐದನೆಯದಕ್ಕೆ ಅಸಂಪ್ರೇಕ್ಷ್ಯಕಾರಿತ್ವವೆಂದೂ ಕೆಲವು ಪುಸ್ತಕಗಳಲ್ಲಿ ಹೆಸರುಗಳಿವೆ; ಆದರೆ ಮೊದಲು ವಿವರಿಸಿದ ಐದು ಹೆಸರುಗಳೇ ಪ್ರಖ್ಯಾತಗಳು.

ಈ ಪಂಚತಂತ್ರವು—ಹಿಂದೆ ಮಹಿಲಾರೋಪ್ಯವೆಂಬ ಪಟ್ಟಣದಲ್ಲಿ ರಾಜ್ಯಭಾರ ಮಾಡುತಿದ್ದ ಅಮರಶಕ್ತಿಯೆಂಬ ರಾಜನ ಪುತ್ರರಾದ ದುಷ್ಟಬುದ್ಧಿಯುಳ್ಳ ಬಹುಶಕ್ತಿ, ಉಗ್ರಶಕ್ತಿ, ಅನಂತಶಕ್ತಿಯೆಂಬ ಮೂವರನ್ನು ಆರುತಿಂಗಳೊಳಗೆ ನೀತಿಶಾಸ್ತ್ರದಲ್ಲಿ ನಿಪುಣರನ್ನಾಗಿ ಮಾಡುವೆನೆಂದು ಸಭೆಯಲ್ಲಿ ಪ್ರತಿಜ್ಞೆಮಾಡಿ ಆ ರಾಜಕುಮಾರರಂ ನಿಮಿತ್ತಮಾಡಿಕೊಂಡು ಲೋಕೋಪಕಾರಕ್ಕೋಸ್ಕರ ವಿಷ್ಣುಶರ್ಮನೆಂಬ ಪಂಡಿತೋತ್ತಮನಿಂದ ಸಂಸ್ಕೃತದಲ್ಲಿ ವಿರಚಿತವಾದುದೆಂಬುದು ಸುಪ್ರಸಿದ್ಧವಾಗಿಯೇ ಇದೆ.

ಚಮತ್ಕಾರವುಳ್ಳ ಅನೇಕಕಥಾಸಂದರ್ಭಗಳಿಂದ ಬಾಲಕರಿಗೆ ಹೃದಯಂಗಮವಾಗುವಂತೆ ಅನೇಕನೀತಿವಿಷಯಗಳನ್ನು ಪ್ರತಿಪಾದಿಸುತಿರುವ ಈ ಗ್ರಂಥವು ಬಹುಕಾಲದಿಂದ ಪ್ರಚಾರದಲ್ಲಿರುತ್ತ ಅನೇಕಪರೀಕ್ಷೆಗಳಲ್ಲಿ ಪಠನೀಯವಾಗಿ ನಿಯಮಿಸಲ್ಪಡುತ್ತಿದೆ. ಸಕಲರಿಂದಲೂ ಆದರಣೀಯವಾದ ಸರ್ವೋತ್ತಮವೆನಿಸಿದ ಈ ಗ್ರಂಥವು " ಮೊದಲು ಆರನೆಯ ಶತಮಾನದಲ್ಲಿ ಪಾರ್ಸಿಭಾಷೆಗೂ, ಒಂಬತ್ತನೆಯ ಶತಮಾನದಲ್ಲಿ ಪಾರ್ಸಿಭಾಷೆಯಿಂದ ಅರಬ್ಬಿಭಾಷೆಗೂ ಅನಂತರ ಹೀಬ್ರೂ, ಗ್ರೀಕ್, ಲ್ಯಾಟಿನ್ ಸಿರಿಯಕ್ ಭಾಷೆಗಳಿಗೂ ಇವುಗಳಿಂದ ಯೂರೋಪ್‌ಖಂಡದ ಇತರವಾದ ಎಲ್ಲಾಭಾಷೆಗಳಿಗೂ ಪರಿವರ್ತಿಸಲ್ಪಟ್ಟಿದೆ. ಹದಿನಾರನೆಯ ಶತಮಾನದಲ್ಲಿ ಮತ್ತೆ ಪಾರ್ಸಿಭಾಷೆಗೆ ಪರಿವರ್ತಿತವಾಗಿ ಮೊದಲನೆಯದಕ್ಕಿಂತ ಪ್ರಶಸ್ತಿಯಂ ಪಡೆದಿರುವುದು. ಬಳಿಕ ಇದರಿಂದ ತುರ್ಕಿಭಾಷೆಗೂ ಪರಿವರ್ತಿಸಲ್ಪಟ್ಟಿರುವುದು. ಅಲ್ಲದೆ ಇಂಡಿಯಾದೇಶದ ಅನೇಕಭಾಷೆಗಳಲ್ಲಿಯೂ ಪರಿವರ್ತಿತವಾಗಿದೆ. ಪ್ರಪಂಚದ ನಾನಾಭಾಷೆಗಳಲ್ಲಿ ಪರಿವರ್ತಿಸಲ್ಪಟ್ಟದು ಬೈಬಲ್ ಒಂದು, ಈ ಪಂಚತಂತ್ರ

ವೊಂದು ಅಲ್ಲದೆ ಮತ್ತಾವುದೂ ಇಲ್ಲ—ಎಂದು ಧಾರಾಳವಾಗಿ ಹೇಳಬಹುದು. ಪ್ರಖ್ಯಾತರಾದ ಸರ್. ವಿಲಿಯಂಜೋನ್ಸ್, ಮತ್ತು ಸರ್ ಛಾರಲ್ಸ್ ವಿಲ್‌ಕಿನ್ಸ್ ಎಂಬಿವರಿಂದ ಇಂಗ್ಲೀಷಿಗೂ ಪರಿವರ್ತಿಸಲ್ಪಟ್ಟಿದೆ” ಎಂದೂ ತಿಳಿಯಬರುವುದು.

ಕನ್ನಡದಲ್ಲಿ—ದುರ್ಗಸಿಂಹನ ಪಂಚತಂತ್ರವೆಂಬುದೊಂದು ಮುದ್ರಿತವಾಗಿರುವುದು. ಇದು ಹಳೆಗನ್ನಡದ ಶೈಲಿಯುಳ್ಳ ಪದ್ಯಗಳಿಂದಲೂ ವಚನಗಳಿಂದಲೂ ಕೂಡಿದೆ. ಇದು ಪ್ರಖ್ಯಾತವಾದ ವಿಷ್ಣುಶರ್ಮನ ಪಂಚತಂತ್ರವನ್ನು ಅನುಸರಿಸಿ ರಚಿತವಾದುದಲ್ಲ. ವಿಷ್ಣುಶರ್ಮನ ಪಂಚತಂತ್ರದ ಕಥಾಭಾಗಕ್ಕೂ ಇದಕ್ಕೂ ಅನೇಕವ್ಯತ್ಯಾಸಗಳಿವೆ. ದುರ್ಗಸಿಂಹನ ಪಂಚತಂತ್ರವು ವಸುಭಾಗಭಟ್ಟನ ಪಂಚತಂತ್ರವನ್ನು ಅನುಸರಿಸಿದುದೆಂದು ಆ ಗ್ರಂಥದಿಂದ ತಿಳಿಯಬರುವುದು.

ಹಿಂದೆ ಮೈಸೂರ್‌ದೇಶದ ವಿದ್ಯಾಭ್ಯಾಸದಿಲಾಖೆಯ ಮುಖ್ಯಾಧ್ಯಕ್ಷರಾಗಿದ್ದ ಮೆ|| ಜಿ ಗ್ಯಾರೆಟ್ ಸಾಹೇಬರವರು ಮದ್ರಾಸ್ ಗವರ್ನ್ಮೆಂಟ್ ಟ್ರಾನ್ಸ್ಲೇಟರವರ ಮುನಷಿ ಎಂ ಡಿ. ಶಿಂಗರಾಚಾರ್ಯರ ಸಾಹಾಯ್ಯದಿಂದ ೧೮೯೦ ರಲ್ಲಿ ಮುದ್ರಿಸಿದ ಕನ್ನಡದ ಪಂಚತಂತ್ರವೊಂದಿರುವುದು. ಇದರೊಳಗೆ ಅಲ್ಲಲ್ಲಿ ಸಂಸ್ಕೃತ ಮೂಲಗ್ರಂಥದ ಒಂದೊಂದು ಶ್ಲೋಕವೂ ಲಕ್ಷಣಬದ್ಧವಲ್ಲದ ಕೆಲವು ಕನ್ನಡದ ಪದ್ಯಗಳೂ ಇವೆ. ಸಂಸ್ಕೃತಶ್ಲೋಕಗಳೆಲ್ಲವೂ ಪರಿವರ್ತಿಸಲ್ಪಟ್ಟಿಲ್ಲ. ಮಾತುಗಳು ಸಾಧಾರಣವಾಗಿವೆ. ಕಥಾಭಾಗವು ಕೇವಲಸಂಗ್ರಹವುಳ್ಳದಾಗಿದೆ. ಇದು ವಿದ್ಯಾರ್ಥಿಗಳಿಗೆ ಈಗ ಅಷ್ಟೊಂದು ಪ್ರಯೋಜನಕರವಾಗಿಲ್ಲ.

“ಸಟೀಕವಿಷ್ಣುಶರ್ಮಪಂಚತಂತ್ರ” ಎಂದು ಇನ್ನೊಂದು ಪ್ರತಿ ೧೮೮೯ ರಲ್ಲಿ ಮದ್ರಾಸ್‌ಪಟ್ಟಣದಲ್ಲಿ ಮುದ್ರಿತವಾಗಿದೆ. ಇದರೊಳಗೆ ಅಲ್ಲಲ್ಲಿ ಒಂದೊಂದು ಸಂಸ್ಕೃತಶ್ಲೋಕವೂ ಅದರ ಕೆಳಗೆ ಟೀಕೆಯೂ ಕಥಾಭಾಗವೂ ಇದೆ. ಶ್ಲೋಕಗಳು ಅಸಂಬದ್ಧಗಳು, ಮತ್ತು ಅಶುದ್ಧಗಳು. ಟೀಕೆ ಅಸಮಂಜಸವಾದುದು. ಕಥಾಭಾಗ ಮೂಲಕ್ಕೆ ವಿರುದ್ಧವಾಗಿಯೂ ಅಸಂಗತವಾಗಿಯೂ ಇದೆ. ಇದೇ ಪ್ರತಿಯನ್ನು ಅನುಸರಿಸಿ ಈಚೆಗೆ ಬೇರೆಕಡೆಯಲ್ಲಿಯೂ ಕೆಲವು ಪ್ರತಿಗಳು ಮುದ್ರಿತವಾಗಿವೆ. ಇವು ವಿದ್ಯಾರ್ಥಿಗಳಿಗೆ ಸ್ವಲ್ಪವೂ ಉಪಯೋಗಕರವಾಗಿಲ್ಲ.

ಓಹ. ನೀತಿರಂಜಿತವೂ ವ್ಯುತ್ಪಾದಕವೂ ಅರ್ಥಸಾಧಕವೂ ಆದ ವಿಷ್ಣುಶರ್ಮನ ಪಂಚತಂತ್ರವು ಪ್ರಪಂಚದ ನಾನಾಭಾಷೆಗಳಲ್ಲಿ ಪರಿವರ್ತಿತವಾಗಿ ಪ್ರಖ್ಯಾತವಾಗಿದ್ದರೂ ಇದುವರೆಗೆ ಕನ್ನಡದಲ್ಲಿ ತಕ್ಕ ರೀತಿಯಿಂದ ಪರಿವರ್ತಿಸಲ್ಪಡದೆ ಇರು

ವುದು ಅದೊಂದು ಕೊರತೆಯೇ ಸರಿ. ಇದರಿಂದ ಪರೀಕ್ಷೆಗಳಲ್ಲಿ ಸಂಸ್ಕೃತಭಾಗವಂ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಪಂಚತಂತ್ರವು ಆಗಾಗ ಪಠನೀಯಗ್ರಂಥವಾಗಿ ನಿಯಮಿಸಲ್ಪಡುತಿದ್ದರೂ ಪರೀಕ್ಷೆಗಳಲ್ಲಿ ಕನ್ನಡದ ಭಾಗವಂ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಅದನ್ನು ಪಠನೀಯವಾಗಿ ನಿಯಮಿಸಲು ಅವಕಾಶವಿರಲಿಲ್ಲ.

ನಮ್ಮ ಸಂಸ್ಥಾನದ ವಿದ್ಯಾಭ್ಯಾಸದಿಲಾಖೆಯ ಮುಖ್ಯಾಧ್ಯಕ್ಷಪದವಿಯನಲಂಕರಿಸಿದ್ದು ಈಗಲೂ ಕನ್ನಡಕ್ಕೆ ವಿಶೇಷಪ್ರೋತ್ಸಾಹವನ್ನುಂಟುಮಾಡುತಿರುವ ರಾವ್‌ಬಹದೂರ್. ರಾಜಕಾರ್ಯಪ್ರಸಕ್ತ, ಎಂ. ಶ್ಯಾಮರಾವ್, ಎಂ ಎ, ಯವರು ಮೇಲಣ ವಿಷಯವನ್ನು ಪರ್ಯಾಲೋಚಿಸಿ, ಸಂಸ್ಕೃತಪಂಚತಂತ್ರವನ್ನು ಕನ್ನಡಿಸುವಂತೆ ನನಗೆ ಅಪ್ಪಣೆಯನಿತ್ತರು. ದೊಡ್ಡದಾದ ಈ ಗ್ರಂಥವನ್ನು ಕ್ಷಿಪ್ರದಲ್ಲಿ ಒಟ್ಟಿಗೆ ಕನ್ನಡಿಸಿ ಪ್ರಕಟಿಸಲು ಆಗದಿದ್ದರೂ, ಒಂದೊಂದು ಭಾಗವನ್ನಾದರೂ ಪೂರೈಸಿ ಪ್ರಕಟಿಸಬೇಕೆಂದು ಪ್ರೋತ್ಸಾಹಿಸಿದರು. ವಿದ್ಯಾಭಿಮಾನಿಗಳೂ ಮಹಾಶಯರೂ ಆದ ಇವರ ಪ್ರೋತ್ಸಾಹದಿಂದ ಪ್ರೇರಿತನಾದ ನಾನು ಪಂಚತಂತ್ರವನ್ನು ಕನ್ನಡಿಸಲು ಪ್ರಾರಂಭಿಸಿದೆನು. ಮೊದಲು ಮಿತ್ರಭೇದವೆಂಬ ಈ ಮೊದಲನೆಯ ತಂತ್ರದಲ್ಲಿ ಕೆಲವು ಭಾಗಗಳನ್ನು ಬರೆದೆನು. ಈ ತಂತ್ರವು ದೊಡ್ಡದಾದುದರಿಂದ ಕ್ಷಿಪ್ರದಲ್ಲಿ ಪೂರೈಸಲು ಆಗಲಿಲ್ಲ. ಮಿತ್ರಸಂಪ್ರಾಪ್ತಿಯೆಂಬ ಎರಡನೆಯ ತಂತ್ರವನ್ನು ಕನ್ನಡಿಸಿ ಪೂರೈಸಿದೆ. ಸುಗೃಹೀತನಾಮಧೇಯರಾದ ರಾಯರವರು ಎರಡನೆಯ ತಂತ್ರದ ಎಲ್ಲಾ ಪದ್ಯಗಳನ್ನೂ ಮೊದಲನೆಯ ತಂತ್ರದ ನೂರಾರು ಪದ್ಯಗಳನ್ನೂ ಕೇವಲಸಾವಧಾನತೆಯಿಂದ ಓದಿಸಿ ಕೇಳಿ ಸಂತೋಷಗೊಂಡು ತತ್ಕಾಲದಲ್ಲಿ ಸಿದ್ಧವಾಗಿದ್ದ ಎರಡನೆಯ ತಂತ್ರವನ್ನು ಮುದ್ರಣಗೊಳಿಸಲು ಅನುಜ್ಞೆಯನಿತ್ತು, ಮುದ್ರಿತವಾದಬಳಿಕ ಹೆಚ್ಚಾದ ಪ್ರತಿಗಳನ್ನು ಸರಕಾರಕ್ಕೆ ಕೊಂಡುಕೊಂಡು ಪ್ರೋತ್ಸಾಹಿಸಿದರು.

ಗ್ರಂಥವು ಸುಲಭಶೈಲಿಯಲ್ಲಿರಬೇಕೆಂಬ ಇವರ ಅಭಿಪ್ರಾಯವನ್ನು ಅನುಸರಿಸಿ ವಚನಗಳನ್ನು ಸುಲಭವಾದ ಶೈಲಿಯಲ್ಲಿಯೂ ಪದ್ಯಗಳನ್ನು ಸರಳವಾದ ರೀತಿಯಲ್ಲಿಯೂ ಬರೆದಿರುವೆನು. ಆದರೂ ಲಕ್ಷಣವಂ ಮೀರಿ ಪದ್ಯಗಳನ್ನು ರಚಿಸಿಲ್ಲ. ಪದ್ಯಗಳು ಲಕ್ಷಣಬದ್ಧವಾಗಿರಬೇಕೆಂಬುದೇ ನನ್ನ ಅಭಿಮತ; ಆದರೆ ಪ್ರಾಸವಿಷಯದಲ್ಲಿ ರೇಫಱಕಾರಂಗಳನ್ನೂ ಱಟಿಕುಳಕ್ಷಳಂಗಳನ್ನೂ ಸಮತೆಯಿಂದ ಸೇರಿಸಿರುವೆನು. ಇದು ಶಬ್ದಮಣಿದರ್ಪಣಕಾರನಾದ ಕೇಶಿರಾಜನಿಗೆ ಅನಭಿಮತವಾದುದಾ

ದರೂ ಶಬ್ದಾನುಶಾಸನಕಾರನಾದ ಭಟ್ಟಾಕಳಂಕನಿಗೆ ಸಂಮತವಾದುದು. ಇಂತು ಅನುಸರಿಸಿಹೋಗದಿದ್ದರೆ ಅಂತಹ ಪ್ರಾಸನಿರ್ಬಂಧದಿಂದ ಬಂಧವು ಕಟುವಾದೀತೆಂದು ಎಣಿಸಿ ಗೌಣಪಕ್ಷವಂ ವಹಿಸಿರುವೆನು.

ಪದ್ಯಗಳನ್ನು ಸರಳವಾದ ರೀತಿಯಲ್ಲಿ ಬರೆದಿರುವೆನೆಂದು ನಾನು ತಿಳಿದಿರುವೆನು. ಆದರೂ ಶೈಲಿಯನ್ನು ಅನುಸರಿಸಿ ಅಲ್ಲಲ್ಲಿ ಪ್ರೌಢವಾದ ಶಬ್ದಗಳು ಬೀಳದಿರವು. ವ್ಯುತ್ಪಾದಕವಾದ ಅಂತಹ ಶಬ್ದವೊಂದೊಂದೂ ಇಲ್ಲದಿದ್ದರೆ ಪದ್ಯವು ಕೇವಲ ಪೇಲವವೆನಿಸುವುದು. ಆದಕಾರಣ ಅಂತಹ ಶಬ್ದಗಳ ಪ್ರಯೋಗವು ಪದ್ಯಗಳಲ್ಲಿ ಆವಶ್ಯಕವೆನಿಸಿರುವುದು. ವಿದ್ಯಾರ್ಥಿಗಳ ಉಪಯೋಗಕ್ಕೋಸ್ಕರ ಟಿಪ್ಪಣವನ್ನು ರಚಿಸಿ ಕಡೆಯಲ್ಲಿ ಸೇರಿಸಿರುವೆನು. ಇದರಲ್ಲಿ ಪ್ರತಿಪದ್ಯದ ಕೆಲವು ಪದಗಳಿಗೆ ಅರ್ಥವೂ ಅಲ್ಲಲ್ಲಿ ವಿಶೇಷವಿಚಾರಗಳೂ ತಾತ್ಪರ್ಯವೂ ಬರೆಯಲ್ಪಟ್ಟಿವೆ.

ಮುದ್ರಿತವಾಗಿದ್ದ ಎರಡನೆಯತಂತ್ರದ ಒಂದುಸಾವಿರ ಪ್ರತಿಗಳನ್ನೂ ಸರಕಾರದವರು ತೆಗೆದುಕೊಂಡು ಪ್ರೋತ್ಸಾಹಿಸಿದುದರಿಂದ ಆ ಭಾಗವನ್ನು ಹೊರಗಣ ಪಾಠಕಜನಮಂಡಲಿಯ ಮುಂದಿಡೆಯಲ್ಲಿ ಇಡಲು ಅವಕಾಶವಾಗಲಿಲ್ಲ. ಪಂಚತಂತ್ರದ ರಸಾಸ್ವಾದನೆಯಲ್ಲಿ ಕುತೂಹಲಿಗಳಾದ ಕನ್ನಡಿಗರ ಉಪಯೋಗಕ್ಕೋಸ್ಕರ ಎಲ್ಲಾ ತಂತ್ರಗಳನ್ನೂ ಒಟ್ಟಿಗೆ ಒಡನೆಯೆ ಮುದ್ರಣಗೊಳಿಸಬೇಕೆಂದಿದ್ದೆ. ಆದರೆ ಈ ಗ್ರಂಥಮಾಲೆಯ ಸಂಪಾದಕರಾದ ಮ॥ ರಾ॥ ರಾ॥ ಜಿ. ಸುಬ್ಬರಾವ್, ಬಿ. ಎ., ಯವರು ಯಾವುದಾದರೂ ಗ್ರಂಥವನ್ನು ಬರೆದುಕೊಡಬೇಕೆಂದು ನನ್ನನ್ನು ಬಹುದಿವಸಗಳಿಂದ ಪ್ರೋತ್ಸಾಹಿಸುತ್ತಿದ್ದಕಾರಣ ಇವರ ಪ್ರೋತ್ಸಾಹಕ್ಕೆ ಸಂತುಷ್ಟನಾಗಿ ಈ ಪಂಚತಂತ್ರವನ್ನು ಗ್ರಂಥಮಾಲೆಗೆ ಸಮರ್ಪಿಸಿದೆನು. ದಯೆಯಿಟ್ಟು ಇದರಲ್ಲಿ ಈಗ ಈ ಭಾಗವನ್ನು ಮುದ್ರಿಸಿಕೊಟ್ಟುದಕ್ಕಾಗಿ ಸಂಪಾದಕರಿಗೆ ಅತ್ಯಂತಕೃತಜ್ಞನಾಗಿರುವೆನು. ಮುಂದಣಭಾಗಗಳೂ ಇದರಲ್ಲಿಯೇ ಮುದ್ರಿಸಲ್ಪಡುವುವು. ಈ ಗ್ರಂಥವೆಲ್ಲವೂ ಇದರಲ್ಲಿ ಸಮಗ್ರವಾಗಿ ಮುದ್ರಿತವಾಗಬೇಕಾದರೆ ಬಹುಕಾಲವಾಗಬೇಕಾಗುವುದರಿಂದ ಗ್ರಾಹಕರ ಸೌಲಭ್ಯಕ್ಕೋಸ್ಕರ ಇಂತು ಬೇರೆ ಬೇರೆ ಭಾಗವಾಗಿ ಮಾಡಲ್ಪಟ್ಟಿರುವುದು.

ನನ್ನ ಈ ಪರಿವರ್ತನವು ಮೂಲಗ್ರಂಥವನ್ನು ಸ್ವಲ್ಪವೂ ಅತಿಕ್ರಮಿಸಿಲ್ಲ; ಆದರೆ ಈ ಪ್ರಥಮತಂತ್ರದಲ್ಲಿ—ಮೊದಲನೆಯ ಕಥೆಯಲ್ಲಿ ಒಂದು ಶ್ಲೋಕವೂ, ಮೂರನೆಯ ಕಥೆಯಲ್ಲಿ ಹನ್ನೊಂದು ಶ್ಲೋಕಗಳೂ,

जम्बुको डुडुयुद्धेन वयं चाषाडभूतना ।
दूतिका परकार्येण त्रयोदेषास्स्वयंकृताः ॥

ಎಂಬ ನಾಲ್ಕನೆಯ ಕಥೆಯಲ್ಲಿ ಮೂರನೆಯ ವಿಷಯವೂ, ಐದನೆಯ ಕಥೆಯಾದ್ಯಂತವೂ ವಿದ್ಯಾರ್ಥಿಗಳಿಗೆ ಹೇಯವಾದುದರಿಂದ ಬಿಡಲ್ಪಟ್ಟಿದೆ. ನಾಲ್ಕನೆಯ ಕಥೆಯೊಳಗಣ ಮೂರನೆಯ ವಿಷಯವು ಬಿಡಲ್ಪಟ್ಟಿದ್ದರೂ ಅದರಲ್ಲಿ ಉಚಿತವಾದ ಕೆಲವು ಪದ್ಯಗಳನ್ನು ಮಾತ್ರ ಮೂರನೆಯ ಕಥೆಯಲ್ಲಿ ಸೇರಿಸಿಕೊಂಡಿದೆ. ೧೯೦೨ ರಲ್ಲಿ ಮುಂಬಯಿ ನಿರ್ಣಯಸಾಗರಮುದ್ರಾಲಯದಲ್ಲಿ ಮುದ್ರಿತವಾದ ಪುಸ್ತಕದ ಆಧಾರದಿಂದ ನಾನು ಪರಿವರ್ತಿಸಿರುವೆನು. ಮೂಲಗ್ರಂಥವು ಇದುವರೆಗೆ ಅನೇಕಾವೃತ್ತಿ ಮುದ್ರಿತವಾಗಿರುವಕಾರಣ ಪುಸ್ತಕಭೇದದಿಂದ ಒಂದೊಂದು ಪಾಠಭೇದವೇನಾದರೂ ಇರಬಹುದು. ಇಷ್ಟುಮಾತ್ರದಿಂದ ಪಾಠಕರು ನನ್ನ ಈ ಪರಿವರ್ತನೆಯಲ್ಲಿ ಹೆಚ್ಚಾದ ವ್ಯತ್ಯಾಸವನ್ನು ಎಣಿಸಲಾಗದು.

ಇದರಲ್ಲಿರುವ ಪದ್ಯಗಳೆಲ್ಲವನ್ನೂ ಸಂಸ್ಕೃತಮೂಲಶ್ಲೋಕಗಳೊಡನೆ ಸಾವಧಾನತೆಯಿಂದ ಪರಾಮರ್ಶಿಸಿ ಕೆಲವು ತಿದ್ದುಪಾಟುಗಳನ್ನು ಸೂಚಿಸಿ, ಕನ್ನಡಿಗರ ದೌರ್ಭಾಗ್ಯದಿಂದ ಅಕಾಲದಲ್ಲಿ ಯಶಶ್ಶೇಷರಾದರೂ ಅಸಾಧಾರಣವಾದ ಕರ್ಣಾಟಭಾಷಾವಿಷಯಾಭಿಜ್ಞತೆಯಿಂದ ಸಕಲರಿಗೂ ಸ್ಮರಣೀಯರಾಗಿರುವ ನನ್ನ ಮಿತ್ರರಾದ ಎಸ್. ತಿಮ್ಮಪ್ಪಯ್ಯಶಾಸ್ತ್ರಿಗಳ ವಿಷಯದಲ್ಲಿ ಅತ್ಯಂತಕೃತಜ್ಞನಾಗಿ ಅವರ ಹೆಸರನ್ನು ಸ್ಮಾರಕವಾಗಿರುವಂತೆ ಇಲ್ಲಿ ಕುತೂಹಲದಿಂದ ಬರೆದಿಡುವೆನು.

ಗುಣಜ್ಞರಾದ ವಿದ್ವಾಂಸರು ಈ ಗ್ರಂಥವನ್ನು ಆದರದಿಂದ ಅವಲೋಕಿಸಿ ತಮಗೆ ತೋರಿದ ನ್ಯೂನತೆಗಳನ್ನು ದಯೆಯಿಟ್ಟು ತಿಳಿಯಿಸಿದರೆ ಅವನ್ನು ಅತ್ಯಂತ ಕೃತಜ್ಞತೆಯಿಂದ ಅಂಗೀಕರಿಸಿ ಇನ್ನೊಂದು ಮುದ್ರಣದಲ್ಲಿ ಸರಿಪಡಿಸುವೆನು.

೨೫-೨-೧೯೧೯.
ಮೈಸೂರು.

ಮೈಸೂರ್ ಸೀತಾರಾಮಶಾಸ್ತ್ರೀ.

ಶೋಧನಪತ್ರ.

ಪದ್ಯಸಂಖ್ಯೆ	ಅಶುದ್ಧ	ಶುದ್ಧ
೩	ಪ್ರಣೇತೃಗಳೆಱಗಿದಪೆಂ	ಪ್ರಣೇತೃಗಳ್ಗೆಱಗಿದಪೆಂ
೬೨	ಸಱಿ	ನೆಱೆ
೬೪	ವೇಱ್ಕುಂ	ವೇೞ್ಕುಂ
೭೦	ಮುಂಗೊಡು	ಮುಂಗೊಂಡು
೭೬	ಹದವಳೆ	ಹದವೞ್
೯೫	ಜ್ವಲಪ	ಜ್ವಲಿಪ
೯೬	ನೆರೆ	ನೆಱೆ
೧೧೪	ದೂರ್ವೆಗೋವ	ದೂರ್ವೆತಾಂಗೋವ
೧೨೦	ಪೇೞ್ಕುಂ	ವೇೞ್ಕುಂ
೧೪೬	ಕಾಲಾಲ್ಗಳನುಂ	ಕಾಲಾಳ್ಗಳನುಂ
೧೬೪	ಜೂದುಗಗ	ಜೂದುಗ
೧೮೬	ಸಿರಿವಡೆಯನೆ	ಸಿರಿವಡೆಯನೇ
೨೪೭	ವೆೞ್ವಂ	ವೇೞ್ವಂ
೨೫೧	ಒಱೆದರ್	ಒೞೆದರ್
೨೫೩	ಗಳಿಸಲ್	ಗೞಸಲ್
೨೬೯	ನಿತ್ಯವಾಸಂ	ನಿತ್ಯನಿವಾಸಂ
೩೩೦	ಜನವಱಪಿ	ಜನಂಬಲನಱಪಿ

ಪುಟ	ಪಜ್ಕ್ತಿ	ಅಶುದ್ಧ	ಶುದ್ಧ
೩೧	೧೬	ಮಾತನಾರಿಸಿ	ಮಾತನಾಲಿಸಿ
೩೨	೨೧	ಸ್ವಾಮಿಯು	ಸ್ವಾಮಿಯೂ

೩೪ ನೆಯ ಪುಟದಲ್ಲಿ ೧೨ ನೆಯ ಪಜ್ಕ್ತಿಯ ಕೆಳಗೆ "ಕಥೆ ೨" ಎಂದಿರಬೇಕು.

ಪುಟ	ಪಜ್ಕ್ತಿ	ಅಶುದ್ಧ	ಶುದ್ಧ
೩೫	೧೬	ಭೃತ್ಯರ	ಭೃತ್ಯರು

೭೨ ನೆಯ ಪುಟವಾದಮೇಲೆ ೮೧ ರವರೆಗೆ ಪುಟಸಂಖ್ಯೆ ತಪ್ಪುಬಿದ್ದಿದೆ.

ಪುಟ	ಪಜ್ಕ್ತಿ	ಅಶುದ್ಧ	ಶುದ್ಧ
೬೨	೨೨	ಬಿಟ್ಟುಬಿಟ್ಟು	ಬಿಟ್ಟುಬಿಟ್ಟೆ
೧೩೫	೧೨	ಬಿದ್ದ	ಬಿದ್ದು

ಶ್ರೀರಸ್ತು

||ಶ್ರೀರಾಮಜಯ||

ಕರ್ಣಾಟಕಪಂಚತಂತ್ರಂ.

ಮಿತ್ರಭೇದವೆಂಬ ಪ್ರಥಮತಂತ್ರಂ.

ಕಥಾಮುಖಂ.

ಕಂ|| ಚತುರಾನನಮುಖರಮರರ್ |
ಕೃತಿಗಳ ಮೊದಲಲ್ಲದಾವನಂ ವಂದಿಸಿ ತಾಂ ||
ಕೃತಕೃತ್ಯರಾದರಾಗಣ |
ಪತಿಯಂ ನಾಂ ಭಕ್ತಿಭಾವದಿಂ ವಂದಿಸುವೆಂ ||೧||

ಬಿದಿ ರುದ್ರಂ ಷಣ್ಮುಖಂ ಶ್ರೀಪತಿ ವರುಣಯಮರ್ ವಹ್ನಿಯಿಂದ್ರಂ ಕುಬೇರಂ |
ಬಿದು ಸೂರ್ಯಂ ವಾಣಿ ರತ್ನಾಕರಯುಗಗಿರಿಗಳ್ ವಾಯು ಭೂಪನ್ನಗಂಗಳ್ ||
ನದಿಗಳ್ ಸಿದ್ಧಾಳಿ ದಸ್ರರ್ ಸಿರಿ ದಿತಿಯಮರರ್ ಮಾತೃಗಳ್ ಮೇಣ್ ಗ್ರಹಂಗಳ್ |
ಪದೆದೆಂದುಂ ಪಾಲಿಕೆಮ್ಮಂ ಗಣವಸುಮುನಿಗಳ್ ವೇದತೀರ್ಥಾಧ್ವರಂಗಳ್ ||೨||

ಮನುಗಂ ಗುರುಗಂ ಕವಿಗಂ |
ಮುನಿಪಂಗೆ ಪರಾಶರಂಗೆ ಮವನಣುಗಂಗಂ ||
ವಿನುತಂ ಚಾಣಕ್ಯಂಗಂ |
ಘನನಯಶಾಸ್ತ್ರಪ್ರಣೇತೃಗಳ್ಗೆಱಗಿದಪೆಂ ||೩||

ಬಗೆಯುತ್ತೆ ವಿಷ್ಣುಶರ್ಮಂ|
ನೆಗಳ್ದ ಸಮಸ್ತಾರ್ಥಶಾಸ್ತ್ರ ಸಾರಮನೊಲವಿಂ ||
ಬಗೆವುಗೆಯ್ದುಂ ತಂತ್ರದೆ |
ನೆಗಳ್ದನಿದಂ ನೀತಿಶಾಸ್ತ್ರಮಂ ಸುರುಚಿರಮಂ ||೪||

ಅದೆಂತೆನೆ :—

ದಕ್ಷಿಣದೇಶದಲ್ಲಿ ಮಹಿಲಾರೋಪ್ಯವೆಂಬ ಒಂದು ಪಟ್ಟಣವುಂಟು. ಅಲ್ಲಿ ಯಾಚಕರೆಲ್ಲರಿಗೂ ಕಲ್ಪತರುವೆನಿಸಿದವನೂ, ಆಶ್ರಿತರಾಜರ ಕಿರೀಟ ರತ್ನಂಗಳ ಹೊಳೆಪಿನಿಂದ ಕಂಗೊಳಸುವ ಅಡಿದಾವರೆಗಳುಳ್ಳವನೂ, ಸಕಲ ವಿದ್ಯಾಪಾರಂಗತನೂ ಆದ ಅಮರಶಕ್ತಿಯೆಂಬ ಅರಸು ಇದ್ದನು. ಆತನಿಗೆ ಬಹುಶಕ್ತಿ ಉಗ್ರಶಕ್ತಿ ಅನಂತಶಕ್ತಿಯೆಂಬ ಅತಿದುಷ್ಟಬುದ್ಧಿಗಳಾದ ಮೂವರು ಮಕ್ಕಳಿದ್ದರು. ಅವರು ಶಾಸ್ತ್ರವ್ಯಾಸಂಗಮಾಡದೆ ಇದ್ದುದಂ ನೋಡಿ ಅರಸು ಮಂತ್ರಿಗಳಂ ಕರೆಯಿಸಿ ಇಂತೆಂದನು :—

ಎಲೆಮಂತ್ರಿಗಳಿರಾ! ನನ್ನ ಮಕ್ಕಳು ಶಾಸ್ತ್ರಂಗಳನೋದದೆ ವಿವೇಕವೂ ಇಲ್ಲದೆ ಇರುವರೆಂಬುದು ನಿಮಗೆ ತಿಳದುದಾಗಿದೆ. ಇವರಂ ನೋಡು ತಿರುವ ನನಗೆ ಮಹತ್ತಾದ ರಾಜ್ಯಸಂಪತ್ತಿಯಿಂದಲೂ ಸುಖವಿಲ್ಲ. ಇದು ಯುಕ್ತವಾದ ಮಾತು :—

ಜನಿಸದನೞಿದಂ ಮೇಣ್ ಗಾಂ |
ಪನೆಂಬರೊಳ್ ಜನಿಸದವನು ಮೞಿದವನುಂ ಮೇ ||
ಲೆನಿಸುವರವರಿರ್ವರಿ ನೞಿ |
ಲೆನಿಸಕ್ಕುಂ ಗಾಂಪನಿರ್ಪವರೆಗಂ ದಹಿಪಂ ||೫||

ಅದುವುಂ ಮೇಲೆಂದೆನಿಕ್ಕುಂ ಬಸಿರೞಿವುದು ಮೇಣ್ ನೋಡೆ ತಾಯ್ಗಬ್ಬದಿಂ ತಾ|
ನುದಯಂಬೆತ್ತಾಗಳೇ ಜೀವಿತವುೞಿವುದು ಮೇಲ್ ಮೇಲ್ಗಡಾ ಪೆಣ್ಣ ಜನ್ಮಂ ||
ವದುವೆಂದುಂ ಬಂಜೆಯಾಗಿರ್ಪೊಡಮದುಗಡಮೇಲ್ ಗರ್ಭದಲ್ಲಿರ್ಪುದುಂ ಮೇ |
ಲದಟಂ ರೂಪಿಂ ಮನಂಗೊಂಡಿರೆಯುಮಕಟ ಮೇಲಲ್ತು ಗಾಂಪಂ ಕುಮಾರಂ ||೬||

ಈನದ ಮೇಣ್ಪಾಲ್ಗಱೆಯದ |
ಧೇನುವಿನಿಂದೇಂ ಪ್ರಯೋಜನಂ ಮೇದಿನಿಯೊಳ್ ||
ತಾನೋದಂ ಕಲ್ಲದ ಮೇಣ್ |
ಮಾನಿಸರೊಳ್ ನಲ್ಮೆಯಿಲ್ಲದಾಮಗನಿಂದೇಂ ||೭||

ತನುಭವನಱಿದೊಡಮೊಳ್ಳಿತು |
ಘನಕುಲಜಂಗೆಗ್ಗನಾಗಬಾರದವನದೇ ||
ಕೆನಲಂತಹ ಮಗನಿಂ ಬುಧ |
ಜನದಲ್ಲಿವನಕಟ ನಾಣ್ಚಿ ತಲೆವಾಗಿದಪಂ ||೮||
ಗುಣಿಗಳ ಗಣಿಪೆಡೆಯೊಳ್ ಲೆ |
ಕ್ಕಣಿಯಾವನ ಕುಱಿತು ಬೇಗದಿಂ ನಡೆಯದೊ ಧಾ ||
ರಿಣಿಯೊಳ್ ತಾಯವನಿಂ ಪು |
ತ್ರಿಣಿಯಪ್ಪೊಡೆ ಪೇೞ ಬಂಜೆಯೆಂತಹಳಕ್ಕುಂ ||೯||

ಆದುದರಿಂದ ಇವರ ಬುದ್ಧಿ ಪ್ರಕಾಶಿಸುವ ತೆರದಲ್ಲಿ ಯಾವುದಾದರೂ ಒಂದು ಉಪಾಯವಂ ಮಾಡಬೇಕು. ನಾನು ಕೊಟ್ಟ ವೃತ್ತಿಗಳನ್ನು ಅನುಭವಿಸುತ್ತ ಜೀವಿಸುವ ಪಂಡಿತರು ಈ ಯಾಸ್ಥಾನದಲ್ಲಿ ಐನೂರು ಮಂದಿಗಳಿರುವರು. ಆದಕಾರಣ ನನ್ನ ಕೋರಿಕೆಗಳು ಈಡೇರುವಂತೆ ಮಾಡಿ.

ಆ ಮಂತ್ರಿಗಳಲ್ಲಿ ಒಬ್ಬನಿಂತೆಂದನು :—ಪ್ರಭುವೆ ! ವ್ಯಾಕರಣಶಾಸ್ತ್ರವು ಹನ್ನೆರಡು ವರ್ಷಗಳವರೆಗೆ ಓದತಕ್ಕದೆಂದು ಕೇಳಿರುವೆನು. ಆಮೇಲೆ ಮನ್ವಾದಿಧರ್ಮಶಾಸ್ತ್ರಂಗಳನ್ನೂ, ಚಾಣಕ್ಯಾದ್ಯರ್ಥಶಾಸ್ತ್ರಗಳನ್ನೂ, ವಾತ್ಸ್ಯಾಯನಾದಿ ಕಾಮಶಾಸ್ತ್ರಗಳನ್ನೂ ಓದಬೇಕು. ಇಷ್ಟಾದರೆ ಧರ್ಮಾರ್ಥಕಾಮಶಾಸ್ತ್ರಂಗಳು ತಿಳಿಯಲ್ಪಡುವುವು. ಆಮೇಲೆ ಜ್ಞಾನವುಂಟಾಗುವುದು.

ಬಳಿಕ ಆ ಸಭೆಯ ನಡುವೆ ಸುಮತಿಯೆಂಬ ಮಂತ್ರಿ ಇಂತೆಂದನು:— ಈ ಜೀವಮಾನವು ಶಾಶ್ವತವಲ್ಲ. ವ್ಯಾಕರಣಾದಿಶಾಸ್ತ್ರಗಳು ಬಹುಕಾಲ ಓದಿ ತಿಳಿಯತಕ್ಕುವು. ಆದುದರಿಂದ ಸಂಗ್ರಹಿಸಲ್ಪಟ್ಟ ಯಾವುದಾದರೂ ಒಂದು ಶಾಸ್ತ್ರವನ್ನು ಇವರ ತಿಳಿವಳಿಕೆಗೋಸ್ಕರ ಆಲೋಚಿಸಬೇಕು. ಏಕೆಂದರೆ ಇಂತು ಹೇಳಲ್ಪಟ್ಟಿರುವುದು :—

ಕೊನೆಯಿಲ್ಲ ಶಾಸ್ತ್ರಕಾಯಂ ।
ತನಗಿನಿಸೆಡರೆನಿತೊ ಅಂಚೆ ನೀರೊಳಗಣ ಪಾ ॥
ಲನೆಕೊಳ್ವಂತಿರೆ ಶಾಸ್ತ್ರದೊ ।
ಳನುವಿಂ ಬಳ್ಕುಳಿದು ಸಾರಮಂ ಕೊಳವೇಳ್ಕುಂ ॥೧೧॥

ಆದರಿಂದ ನಾನು ಬಿನ್ನವಿಸುವೆನು. ಸಕಲಶಾಸ್ತ್ರಪಾರಂಗತನೂ ಶಿಷ್ಯಮಂಡಲಿಯಲ್ಲಿ ಕೀರ್ತಿಗೊಂಡವನೂ ಆದ ವಿಷ್ಣುಶರ್ಮನೆಂಬ ಬ್ರಾಹ್ಮಣನು ಇಲ್ಲಿರುವನು. ಈತನಿಗೆ ಈ ಕುಮಾರರನ್ನು ಒಪ್ಪಿಸು. ಈತನು ದಿಟವಾಗಿ ಇವರನ್ನು ಜ್ಞಾನವಂತರಂ ಮಾಡುವನು.

ಆ ರಾಯನು ಆ ನುಡಿಯಂ ಕೇಳಿ ವಿಷ್ಣುಶರ್ಮನನ್ನು ಒಳಗೆ ಕರೆಯಿಸಿ—ಎಲೆ ಪೂಜ್ಯನೆ! ಈ ಕುಮಾರರು ಅರ್ಥಶಾಸ್ತ್ರದಲ್ಲಿ ಅಸಾಧಾರಣರೆನಿಸುವ ರೀತಿ ಯಾವುದೋ ಅದಂ ನೀನು ನನಗೋಸ್ಕರ ಬೇಗಮಾಡಬೇಕು. ನೀನು ಅಂತು ಮಾಡುವುದಾದರೆ ನಿನಗೆ ನೂರು ಮಾನ್ಯಗಳನ್ನು ಬರೆದುಕೊಡುವೆನು—ಎನಲು, ಅದಕ್ಕೆ ಆ ವಿಷ್ಣುಶರ್ಮನು ಆತನಂ ಕುರಿತು—ಪ್ರಭುವೆ! ನಾನು ಸತ್ಯವಾಗಿ ಬಿನ್ನವಿಸುವುದನ್ನು ಆಲಿಸು. ನೂರು ಮಾನ್ಯಗಳನ್ನು ಬರೆದುಕೊಟ್ಟರೂ ನಾನು ವಿದ್ಯಾವಿಕ್ರಯವಂ ಮಾಡುವನಲ್ಲ. ಆದರೆ ನಿನ್ನ ಮಕ್ಕಳನ್ನು ನಾನು ಆರುತಿಂಗಳಲ್ಲಿ ನೀತಿಶಾಸ್ತ್ರಜ್ಞರಂ ಮಾಡದಿದ್ದರೆ ನನ್ನ ಈ ಹೆಸರನ್ನು ಬಿಟ್ಟುಬಿಡುವೆನು. ಹೆಚ್ಚು ಮಾತಿನಿಂದೇನು? ನನ್ನ ಈ ಸಿಂಹನಾದವು ಆಲಿಸಲ್ಪಡಲಿ. ನಾನು ಧನಾಶೆಯುಳ್ಳವನಾಗಿ ಹೇಳುವುದಿಲ್ಲ. ಈಗ ನನಗೆ ಎಂಬತ್ತು ವರ್ಷ. ವಿಷಯಸುಖವೆಲ್ಲವೂ ಅನುಭವಿಸಲ್ಪಟ್ಟುದಾಯಿತು. ಈಗ ನನಗೆ ಧನದಿಂದ ಪ್ರಯೋಜನವೇನೂ ಇಲ್ಲ. ಆದರೆ ನಿನ್ನ ಪ್ರಾರ್ಥನೆಯನ್ನು ನೆರವೇರಿಸಬೇಕೆಂದು ವಿದ್ಯಾವಿನೋದವನನುಭವಿಸುವೆನು. ಆದುದರಿಂದ ಇಂದಿನ ದಿವಸವನ್ನು ಗುರುತು ಮಾಡಿಕೊಳ್ಳಬೇಕು. ನಾನು ಆರುತಿಂಗಳೊಳಗೆ ನಿನ್ನಮಕ್ಕಳನ್ನು ನೀತಿ

ಶಾಸ್ತ್ರದಲ್ಲಿ ಅಸದೃಶರಂ ಮಾಡದಿದ್ದರೆ ದೇವರು ನನಗೆ ಸದ್ಗತಿಯನುಂಟು ಮಾಡನು.—ಎಂದು ನುಡಿದನು.

ಬಳಿಕ ಆ ರಾಯನು ಅಸಾಧ್ಯವಾದ ಆ ಬ್ರಾಹ್ಮಣನ ಪ್ರತಿಜ್ಞೆಯಂ ಕೇಳಿ ಮಂತ್ರಿಗಳೊಡನೆ ಸಂತೋಷಿಸಿ ಅಚ್ಚರಿಗೊಂಡು ಆತನಿಗೆ ಆ ಕುಮಾರರನ್ನು ಆದರಪೂರ್ವಕವಾಗಿ ಅರ್ಪಿಸಿ ನಿರಾಳಗೊಂಡು ಸುಖದಿಂದಿದ್ದನು.

ವಿಷ್ಣುಶರ್ಮನೂ ಆ ರಾಜಕುಮಾರರಂ ಕರೆದುಕೊಂಡು ಹೊರಟು, ಅವರಿಗೋಸ್ಕರ ಮಿತ್ರಭೇದ, ಮಿತ್ರ (ಸಂ) ಪ್ರಾಪ್ತಿ, ಕಾಕೋಲೂಕೀಯ, ಲಬ್ಧಪ್ರಣಾಶ, ಅಪರೀಕ್ಷಿತಕಾರಕ—ಎಂಬ ಐದು ತಂತ್ರಗಳನ್ನು ರಚಿಸಿ ಅವರಿಗೆ ಪಾಠಹೇಳಿದನು. ಅವರೂ ಆ ಐದು ತಂತ್ರಗಳನ್ನು ಓದಿ ಆರು ತಿಂಗಳಲ್ಲಿ ಹೇಳಿದಂತೆ ಜ್ಞಾನವಂ ಪಡೆದರು.

ಅದು ಮೊದಲುಗೊಂಡು ಈ ಪಂಚತಂತ್ರವೆಂಬ ನೀತಿಶಾಸ್ತ್ರವು ಬಾಲಕರ ಬೋಧೆಗೋಸ್ಕರ ಭೂಮಿಯಲ್ಲಿ ಪ್ರಚಾರಗೊಂಡಿತು. ಹೆಚ್ಚು ಮಾತಿನಿಂದೇನು ?

ಸಂದೀನೀತಿಯಶಾಸ್ತ್ರಮ |
ನೆಂದು ಮೊಱಲ್ದಾವನೋದುವಂ ಮೇಣ್ ಕೇಳ್ವಂ ||
ಇಂದಿರನಿಂದಾದೊಡಮವ |
ನೆಂದಿಂಗಂ ಪಡೆಯನಲ್ತೆ ತಾಂ ಪರಿಭವಮಂ ||೧೧||

ಇಂತಿದು ಕಥಾಮುಖಂ.

ಮಿತ್ರಭೇದವೆಂಬ ಮೊದಲನೆಯ ತಂತ್ರವಿನ್ನು ಆರಂಭಿಸಲ್ಪಡುವುದು. ಇದರ ಮೊದಲನೆಯ ಶ್ಲೋಕವಿದು :—

ಎಸೆವಿನೆಗಂ ಸಿಂಗಕ್ಕಂ ।
ಬಸವಂಗಂ ಬನದೆ ಬಳೆಯುತಿರ್ದಾ ಸ್ನೇಹ ॥
ಪ್ರಸರಂ ನಾಶಿತವಾದುದು ।
ಪಿಸುಣಂ ಮೇಣ್ ಪರಮಲೋಭಿಯೆನಿಸಿದನರಿಯಿಂ ॥೧೨॥

ಅದೆಂತೆನೆ :—

ದಕ್ಷಿಣದೇಶದಲ್ಲಿ ಮಹಿಳಾರೋಪ್ಯವೆಂಬ ಪಟ್ಟಣವುಂಟು. ಅಲ್ಲಿ ಧರ್ಮದಿಂದ ಮಹಾಸಂಪತ್ತಿಯಂ ಪಡೆದ ವರ್ಧಮಾನಕನೆಂಬ ವರ್ತಕ ನಿದ್ದನು. ಅವನು ಒಂದುದಿನ ರಾತ್ರಿ ಮಲಗಿಕೊಂಡಿದ್ದಾಗ ಅವನ ಮನಸ್ಸಿ ನಲ್ಲಿ ಇಂತು ಚಿಂತೆಯುಂಟಾಯಿತು :—ಹೆಚ್ಚಾದ ಹಣವಿದ್ದರೂ ಮತ್ತೆ ಹಣವಂ ಸಂಪಾದಿಸಲು ತಕ್ಕ ಉಪಾಯಂಗಳಂ ಆಲೋಚಿಸಬೇಕು. ಅದ ರಂತೆ ನಡೆಯಲೂ ಬೇಕು. ಏಕೆಂದರೆ ಇಂತು ಹೇಳಿದೆ :—

ಪಣದಿಂದೆ ಸಾಧ್ಯವಾಗದು ।
ದೆಣೆಪೊಡೆ ಧಾರಿಣಿಯೊಳಿಲ್ಲವಾವುದು ಮದುಕಾ ॥
ರಣದಿಂದೆ ಬುದ್ಧಿಮಂತಂ ।
ಪಣಮನದೆಂತಾನುಮಿರದೆ ಸಾಧಿಸವೇಳ್ಕುಂ ॥೧೩॥

ಪಣವುಳ್ಳವಂಗೆ ಕೆಳೆಯರ್ ।
ಪಣವುಳ್ಳಾತಂಗೆ ನಂಟರಿರ್ದ್ದಪರಿಳೆಯೊಳ್ ॥
ಪಣವುಳ್ಳಾತನೆ ಪುರುಷಂ ।
ಪಣಮಂ ಪಡೆದಾತನಲ್ತೆ ಪಂಡಿತನೆನಿಪಂ ॥೧೪॥

ಅದುಬಿಜ್ಜೆಯಲ್ತು ಚಾಗಮು ।
ಮದಲ್ತು ಮೇಣಲ್ತು ಶಿಲ್ಪಮದು ಮೇಣ್ ಕಲೆಯ ॥

ಲ್ತುದುವುಂ ಸ್ಥೈರ್ಯವದಲ್ತಾ |
ವುದನೆರೆವರ್ ಪಾಡಿ ಪೊಗಱಿರೋಧನಿಜನದಾ ||೧೫||
ಪೊಡವಿಯೊಳ್ಸಿರಿಯನದಾರ್ |
ಪಡೆದಿರ್ಪ್ಪರವರ್ಗ್ಗೆ ನಂಟನಕ್ಕುಂ ಪಗೆಯುಂ ||

ಬಡತನವುಳ್ಳಗ್ಗಾರ |
ಯ್ವೊಡೆ ನಂಟನುಮಕಟ ನಿಚ್ಚಲುಂ ಪಗೆಯಃಕ್ಕುಂ ||೧೬||
ಪಿರಿದೆಂಬಿನ ಮತ್ತಿತ್ತಲ್ |
ದೊರೆಕೊಂಡ ಧನಂಗಳತ್ತಣಿಂ ಕ್ರಿಯೆಯೆಲ್ಲಂ ||

ಭರದಿಂದೆ ಪೊಣ್ಮುಗುಂ ಗಡ |
ತೊಱೆಗಳ್ ಬೆಟ್ಟಂಗಳತ್ತಣಿಂ ಪೊಣ್ಮುವವೋಲ್ ||೧೭||
ಕ್ಷಿತಿಯೊಳಪೂಜ್ಯಂ ಪರಿಪೂ |
ಜಿತನಪ್ಪುದು ಮತ್ತಮಾಶ್ರಯಾನರ್ಹನು ಮಾ ||

ಶ್ರಿತನಪ್ಪುದವಂದ್ಯಂ ವಂ |
ದಿತನಪ್ಪುದು ಮಱರೆ ಪಣದ ಮೈಮೆಯದಲ್ತೇ ||೧೮||
ಪಣದಿಂದೆಲ್ಲಾ ಕಜ್ಜಮು |
ಮುಣಿಸಿಂದಖಿಳೇಂದ್ರಿಯಂಗಳಪ್ಪವೊಲಕ್ಕುಂ ||

ಪಣಮುಂ ಜಗತಿಯೊಳೀಕಾ |
ರಣದಿಂ ಸಕಳಾರ್ಥಸಾಧಕಂ ಗಡ ಮೆಂಗುಂ ||೧೯||
ಪಣನೆಂಬುದು ದೊರೆವೊಡೆ ನರ |
ನಣಿಯರ ವೋಲಗಿಪನಕ್ಕಟಾ ಮಸಣಮುಮಂ ||

ಪಣವಿಲ್ಲದನಂ ತನ್ನಾ |
ಪ್ರಣಯದ ತಂದೆಯುಮನುಱಿದು ದೂರಕೆ ಪೋಪಂ ||೨೦||

ಪರಿಕಿಸೆ ಸಂಪದವುಳ್ಳರ್ |
ಪುರುಷರ್ಕಳ್ ಮುದುಪರಾದೊಡಂ ತರುಣರವರ್ ||
ಧರೆಯೊಳ್ ಧನರಹಿತರ್ಕಳ್ |
ತರುಣತೆವಡೆದಿರ್ದ್ದು ಮರರೆ ಮುದುಪರೆನಿಪ್ಪರ್ ||೨೧||

ಆ ಧನವು ಮನುಷ್ಯರಿಗೆ ಆರು ಉಪಾಯಗಳಿಂದ ಉಂಟಾಗುವುದು. ಆವುಪಾಯಂಗಳು ಭಿಕ್ಷೆ, ರಾಜಸೇವೆ, ಬೇಸಾಯ, ವಿದ್ಯಾಪ್ರಾಪ್ತಿ, ವ್ಯವಹಾರ, ವಾಣಿಜ್ಯ-ಎಂಬಿವು. ಅವೆಲ್ಲವಕ್ಕೂ ಉತ್ತಮವಾದುದು ವಾಣಿಜ್ಯ. ಅದರಿಂದ ತಿರಸ್ಕಾರವಿಲ್ಲದ ಧನಲಾಭವುಂಟಾಗುವುದು. ಏಕೆಂದರೆ, ಇಂತು ಹೇಳಿದೆ :—

ಪಲಬರ್ ಭಿಕ್ಷಿಪರಾಢ್ಯನೊಲ್ದುಚಿತವೀಯಂ ಪಾಡು ಬೇಸಾಯಮುಂ |
ಕಲೆಯಂ ಕಲ್ವುದು ಕಷ್ಟಮೋಜನೊಸೆವಂತೋಲೈಸವೇಳ್ಪಿಂತಱಿಂ ||
ಸಲೆ ತಾಂ ನೀಡಿದ ಗಂಟಿ ಪೋಗುವುದಱಿಂ ದಾರಿದ್ರ್ಯದಂ ಬಡ್ಡಿವಾೞ್ |
ನೆಲದೊಳ್ ನೋೞ್ಪೊಡೆ ಜೀವನಂ ಪರದಿನಿಂ ಮೇಲಾದುದಿಲ್ಲಾವುದುಂ ||೨೨||

ವಿಸ್ತರಧನಲಾಭಕ್ಕೆ ಸ |
ಮಸ್ತೋಪಾಯಂಗಳಲ್ಲಿಯುಂ ಬೆಲೆವಡೆವಾ ||
ವಸ್ತುಗಳ ಸಂಗ್ರಹಿಪ್ಪುದೆ |
ಶಸ್ತಮುಪಾಯಮದು ಪೇೞ್ತು ಸಂಶಯಿತಫಲಂ ||೨೩||

ಧನಲಾಭವಿಷಯದಲ್ಲಿ ಆ ವ್ಯಾಪಾರವೂ ಏಳು ತೆರವಾಗಿರುವುದು. ಅದೆಂತೆಂದರೆ—ಸುಗಂಧದ್ರವ್ಯಗಳನ್ನು ಮಾರುವುದು, ಬಂಡವಾಳವಿಟ್ಟುಕೊಳ್ಳುವುದು, ಇತರರಾದ ವ್ಯಾಪಾರಿಗಳೊಡನೆ ಸೇರಿ ಕೆಲಸಮಾಡುವುದು, ಪರಿಚಿತರಾದ ಕೊಂಡುಕೊಳ್ಳುವ ಜನಗಳನ್ನು ಬರಮಾಡಿಕೊಳ್ಳುವುದು, ಸುಳ್ಳು ಕ್ರಯವಂ ಹೇಳುವುದು, ಮೋಸದ ತಕ್ಕಡಿಯಲ್ಲಿ ತೂಗುವುದು, ದೇಶಾಂತರಗಳಿಂದ ವಸ್ತುಗಳನ್ನು ತರಿಸುವುದು-ಎಂದು.

ಇಂತು ಹೇಳಿಯುಂ ಇದೆ :—

ಅವುವೊಂದಱಿಂದೆ ಕೊಂಡುದು |
ಸಮಯದೆ ನೂಱರ್ಕೆ ಕುಡುಗುವುದಱಿಂ ವಸ್ತ್ರ ||
ತ್ರಮುಮೆನಿಕುಂ ಗಂಧದ್ರ |
ವ್ಯಮೆ ಪೊರ್ಕ್ಕ ಮುಂತಾದುದೇವುದೋ ಪೇಱತೆಲ್ಲಂ ||೨೪||

ಧನಮಂ ತಂದಿಡೆ ತನ್ನಯ |
ಮನೆಯೊಳ್ ನಲಿಯುತ್ತೆ ಸೆಟ್ಟಿ ನಿಜದೇವತೆಯಂ ||
ಧನವಿಟ್ಟಾತಂ ಮುಡಿದೊಡೆ |
ನಿನಗಿಷ್ಟಂಸಲಿಪೆನೆಂದು ಬೇಡುತೆ ಪೊಗೞ್ವಂ* ||೨೫||

ಧನಕನಕದೆ ತೀವಿದ ಮೇ |
ದಿನಿಯಂ ಗಳಿಯಿಸಿದೆ ನೀಗಳಾಂ ಪೇಱತಱನೇ ||
ನೆನೆತುಂ ಪರದಂ ಬೀಗುವ |
ನನುವಿಂ ಪೆಱರೊಡನೆ ಸೇರುತುಬ್ಬುಗಿಪಾತಂ ||||೨೬||

ನಡೆತರೆ ಬಲ್ಲಂ ಕೊಳ್ವಂ |
ಕಡುರಾಗದಿನವನ ಕಂಡಿವಂ ತದ್ಧನಮಂ ||
ಪಡೆವಾಸೆಯಿಂದೆ ಪುತ್ರನ |
ಪಡೆಪಿನಿನೆಂತಂತು ಮನದೊಳಾನಂದಿಸುವಂ ||೨೭||

ಅಂತಲ್ಲದೆ,—

ನೆಱೆದುದು ನೆಱೆಯದಿದೆಂಬಂ |
ತಿರೆಯಳೆಯುತೆ ಬಲ್ಲಜನವನುಱೆ ಬಂಚಿಪುದೋ ||
ಸರಿಸುತೆ ಪುಸಿವೆಲೆವೇೞ್ವುದು |
ಕಿರಾತರೆನಿಪರ್ಗ್ಗೆ ನೋಡೆ ನೈಜಂ ಧರ್ಮಂ ||೨೮||

ಮತ್ತೆ,

ಪರದೇಶದ ವಸ್ತುಗಳಂ |
ತರಿಸುತೆ ವಿಕ್ರಯಿಸಬಲ್ಲರೈದುತೆ ದೇಶಾಂ ||
ತರಮಂ ಪಡೆವರ್ ಪಣಮಂ |
ಪರದಿನಿಸಿರ್ಮಡಿಯನಲ್ಲದಿರೆ ಮೂವಡಿಯಂ ||೨೯||

ಇಂತೆಂದು ನಿಶ್ಚಯಿಸಿ, ಒಂದು ಶುಭದಿವಸ ಮಥುರೆಯಲ್ಲಿ ಬೆಲೆಯಾಗುವ ಪದಾರ್ಥಗಳನ್ನು ತೆಗೆದುಕೊಂಡು ಹಿರಿಯರ ಅನುಜ್ಞೆಯಂ ಪಡೆದು, ಉತ್ತಮವಾದ ಬಂಡಿಯನ್ನೇರಿ ಹೊರಟನು. ಮನೆಯಲ್ಲಿ ಹುಟ್ಟಿದ ಸಂಜೀವಕ ನಂದಕಗಳೆಂಬ ಸುಲಕ್ಷಣವಾದ ಎರಡು ಎತ್ತುಗಳು ಅವನ ಬಂಡಿಗೆ ಕಟ್ಟಲ್ಪಟ್ಟಿದ್ದುವು. ಅವುಗಳಲ್ಲಿ ಸಂಜೀವಕವೆಂಬ ಒಂದು ಎತ್ತು ಯಮುನಾ ನದಿಯ ಒರತೆನೆಲದಲ್ಲಿ ಇಳಿದು ಅಲ್ಲಿ ಆಳವಾದ ಕೆಸರಲ್ಲಿ ಕಾಲುಹೂಳಕೊಂಡು ನೊಗಮುರಿದು ಬಿದ್ದಿತು. ಬಳಿಕ ಅಂತಹ ಅವಸ್ಥೆಯಲ್ಲಿದ್ದ ಆ ಯೆತ್ತನ್ನು ನೋಡಿ ವರ್ಧಮಾನನು ಬಹುವಾಗಿ ದುಃಖಪಟ್ಟು ಮನದಲ್ಲಿ ಕನಿಕರಗೊಂಡು ಅದಕ್ಕೋಸ್ಕರ ಮೂರುರಾತ್ರಿ ಪ್ರಯಾಣನಿಲಿಸಿದನು. ಅಂತು ದುಃಖಪಡುತಿದ್ದ ಅವನನ್ನು ನೋಡಿ ಜತೆಯ ವರ್ತಕರು ಇಂತೆಂದರು :—ಎಲೈ ಸೆಟ್ಟಿ ! ಇದೇನು ಒಂದೆತ್ತಿಗೋಸ್ಕರ ಸಿಂಹಗಳೂ ಹುಲಿಗಳೂ ಇರುವ ಮಹಾಪಾಯಕರವಾದ ಈ ಕಾಡಿನಲ್ಲಿ ನೀನು ಎಲ್ಲಾ ವರ್ತಕರ ಜೀವಕ್ಕೂ ಸಂದೇಹವನ್ನು ತಂದಿಡುವೆ? ಇಂತು ಹೇಳಲ್ಪಟ್ಟಿದೆ; ಕೇಳು :—

ಮತಿಶಾಲಿಯಾದ ಪುರುಷಂ |
ಕ್ಷಿತಿಯೊಳ್ ಕಿಱಿದರ್ಕೆ ತವಿಸಲಾಗದು ಪಿರಿದಂ ||
ಯತನಂಗೈಯುತೆ ಕಿಱಿದಱಿ |
ನತಿಶಯಮೆಸೆ ಪಿರಿದ ನೋವುವುದೆ ಬುಧರಲ್ತೇ ||೩೦||

ಬಳಿಕ ಇವನು ಆ ಮಾತನವಧರಿಸಿ ಸಂಜೀವಕದ ಹತ್ತಿರ ಜನಗಳನ್ನು ಕಾವಲಿಟ್ಟು ಎಲ್ಲಾ ವರ್ತಕರನ್ನೂ ಸಂಗಡ ಕರೆದುಕೊಂಡು ಹೊರಟನು. ಬಳಿಕ ಕಾವಲಿನವರೂ ಆ ಕಾಡು ಮಹಾಭಯಂಕರವೆಂದು ತಿಳಿದು ಸಂಜೀವಕವನ್ನು ಬಿಟ್ಟು ಹಿಂದೆಯೇ ಹೊರಟು ಮರುದಿವಸ ಆ ವರ್ಧಮಾನನನ್ನು ಸೇರಿ ಇಂತು ಸುಳ್ಳಾಡಿದರು :—ಎಲೆ ಒಡೆಯನೆ! ಎತ್ತು ಸತ್ತುಹೋಯಿತು. ಇದು ಸಾಧುಕಾರನಿಗೆ ಇಷ್ಟವಾದುದೆಂದು ತಿಳಿದು ನಾವು ಅಗ್ನಿಯಿಂದ ಸಂಸ್ಕರಿಸಿದೆವು.

ಸಾಧುಕಾರನು ಆ ನುಡಿಯಂ ಕೇಳಿ ಕೃತಜ್ಞತೆಯಿಂದ ಮನದಲ್ಲಿ ಪ್ರೀತಿಗೊಂಡು ಆ ಸಂಜೀವಕಕ್ಕೆ ವೃಷೋತ್ಸರ್ಗ ಮುಂತಾದ ಎಲ್ಲಾ ಪರಲೋಕಕ್ರಿಯೆಗಳನ್ನೂ ನೆರವೇರಿಸಿದನು.

ಸಂಜೀವಕವು ಇನ್ನೂ ಆಯುಸ್ಸು ಇದ್ದಕಾರಣ ಯಮುನಾನದಿಯ ನೀರಮೇಲಣ ತಂಗಾಳಿಯಿಂದ ಚೇತರಿಸಿಕೊಂಡು ಬಹುಪ್ರಯತ್ನದಿಂದೆದ್ದು ಯಮುನಾತೀರವಂ ಸೇರಿತು. ಅಲ್ಲಿ ಮರಕತಮಣಿಗೆ ಸಮವಾದ ಗರಿಕೆಗಳನ್ನು ಮೇಯುತ್ತ ಕೆಲವು ದಿನಗಳಲ್ಲಿ, ಶಿವನೇರುವ ಬಸವನಂತೆ ಕೊಬ್ಬಿ ಉನ್ನತವಾದ ಹಿಳಲಿಂದ ಕೂಡಿ ಬಲವುಳ್ಳುದಾಯಿತು. ಪ್ರತಿದಿವಸವೂ ಶಿಖರದಂತಿರುವ ಹುತ್ತದ ತುದಿಗಳನ್ನು ಕೊಂಬುಗಳಿಂದ ಭೇದಿಸುತ್ತ ಘುಟರಾಯಿಸುತಿದ್ದಿತು. ಯುಕ್ತಿವಿದು :—

ಪೆರರ್ಗಳ್* ರಕ್ಷಿಸದಿರ್ದೊಡಂ ಬಿಡದೊಱಲ್ದಾ ದೈವಮೇ ರಕ್ಷಿಕುಂ |
ಪೆಱರಿಂ ರಕ್ಷಿತನಾದೊಡಂ ಮಸುಳೆ ದೈವಾನುಗ್ರಹಂ ಕೆಟ್ಟಪಂ ||
ನೆಱೆಜೀವಿಪ್ಪನನಾಥನೆಂದೆನಿಪೊಡಂ ಕಾಂತಾರದೊಳ್ ಬಿಟ್ಟವಂ |
ಪಿರಿದುಂ ಯತ್ನದೊಳಿರ್ದೊಡಂ ಭವನದೊಳ್ ನಾಶಕ್ಕೆ ಪಕ್ಕಾದಪಂ ||೩೧||

ಬಳಿಕ ಒಂದು ಕಾಲದಲ್ಲಿ ಪಿಂಗಲಕವೆಂಬ ಸಿಂಹವು ಎಲ್ಲಾ ಮೃಗಗಳಿಂದಲೂ ಕೂಡಿ, ಬಾಯಾರಿಕೆಗೊಂಡು ನೀರುಕುಡಿಯಲು ಯಮುನಾ

ತೀರವಂ ಸೇರಿ, ಸಂಜೀವಕದ ಬಹುಗಂಭೀರವಾದ ಧ್ವನಿಯಂ ದೂರದಿಂದಲೇ ಆಲಿಸಿತು. ಅದನಾಲಿಸಿ ಮನದಲ್ಲಿ ಬಹುವಾಗಿ ತಲ್ಲಣಿಸಿ ಭಯದಿಂ ಕೂಡಿದ ಆಕಾರವನ್ನು ಮುಚ್ಚಿಕೊಂಡು ಆಲದಮರದ ಕೆಳಗೆ ತಾನು, ತನ್ನ ಅನುಯಾಯಿಗಳು, ವಾಚಾಳಕರು, ಏನೆಂದು ವಿಚಾರಮಾಡುವವರು—ಎಂಬ ಚತುರ್ಮಂಡಲವಂ ಮಾಡಿಕೊಂಡು ಇದ್ದಿತು.

ಬಳಿಕ ಆ ಸಿಂಹದ ಮಂತ್ರಿಯ ಮಕ್ಕಳಾದ ಕರಟಕದಮನಕ—ಎಂಬ ಎರಡು ನರಿಗಳು ಅಧಿಕಾರತಪ್ಪಿ ಆ ಸಿಂಹವನ್ನು ಯಾವಾಗಲೂ ಅನುಸರಿಸಿಕೊಂಡಿದ್ದುವು. ಅವೆರಡೂ ಪರಸ್ಪರವಾಗಿ ಆಲೋಚಿಸಿದುವು:—ಅವುಗಳಲ್ಲಿ ದಮನಕವೆಂದಿತು :—ಅಯ್ಯಾ ಕರಟಕ ! ನಮ್ಮ ಒಡೆಯನಾದ ಪಿಂಗಲಕನು ನೀರಿಗೋಸ್ಕರ ಬಂದವನು ಬಾಯಾರಿದವನಾದರೂ ಏತಕ್ಕೆ ಹಿಂದಿರುಗಿ ವ್ಯೂಹರಚನೆಯಂ ಮಾಡಿಕೊಂಡು ಮನೋವ್ಯಾಕುಲತೆಯಿಂದ ಕಳೆಗುಂದಿ ಆಲದಮರದ ಕೆಳಗೆ ನಿಂತಿರುವನು ? ಕರಟಕವೆಂದಿತು :—ಅಯ್ಯಾ ! ಈ ವ್ಯಾಪಾರದಿಂದ ನಮಗೇನು ? ಏಕೆಂದರೆ ಇಂತು ಹೇಳಿದೆ :—

ಎಸಗುವುದಿಲ್ಲದ ಪದದ |
ಲ್ಲಿ ಸಕಮನೆಸಗಲ್ಕೆವೇಟ್ಕುಮೆಂದಾವನಪೇ ||
ಕ್ಷಿಸುವಂ ಕೀಲಮನುತ್ಪಾ |
ಟಿಸಿದಾ ಕೋಡಗದವೋಲವಂ ಮೃತಿವಡೆವಂ ||೩೨||

ದಮನಕವು-ಇದೆಂತೆನಲು, ಅದು ಇಂತೆಂದಿತು :—

ಕಥೆ ೧.

ಒಬ್ಬ ವರ್ತಕನ ಮಗನು ಒಂದು ಊರಹತ್ತಿರ ಮರಗಳ ಸಂದಣಿಯ ನಡುವೆ ದೇವಾಲಯವನ್ನು ಕಟ್ಟಿಸಲಾರಂಭಿಸಿದನು. ಅಲ್ಲಿ ಕೆಲಸಮಾಡುವ ಶಿಲ್ಪಿ ಮುಂತಾದವರು ನಿತ್ಯವೂ ಮಧ್ಯಾಹ್ನವಾಗುವುದೂ ಊಟಕ್ಕೋಸ್ಕರ ಊರೊಳಗೆ ಹೋಗುತಿದ್ದರು. ಒಂದುದಿವಸ ಅಲ್ಲಿ ಸೇರಿದ್ದ ಕಪಿಗಳ ಹಿಂಡು

ಅತ್ತಿತ್ತ ಸುತ್ತಾಡುತಿದ್ದಿತು. ಅಲ್ಲಿ ಒಬ್ಬ ಶಿಲ್ಪಿ ಒಂದು ಮತ್ತಿಮರದ ಕಂಬವನ್ನು ಅರ್ಧಕೊಯ್ದು ಅದರ ನಡುವೆ ಒಂದು ಕಗ್ಗಲಿಯ ಬೆಣೆಯನ್ನು ಸಿಕ್ಕಿಸಿದ್ದನು. ಅಷ್ಟರಲ್ಲಿ ಆ ಕಪಿಗಳು ವೃಕ್ಷಗಳ ತುದಿಗೊಂಬುಗಳಲ್ಲಿಯೂ ಮರದ ದಿಮ್ಮಿಗಳೆಡೆಯಲ್ಲಿಯೂ ಸ್ವೇಚ್ಛೆಯಿಂದ ಆಟವಾಡಲು ತೊಡಗಿದುವು. ಅವುಗಳಲ್ಲಿ ಆಸನ್ನಮೃತ್ಯುವಾದ ಒಂದು ಕೋಡಗವು ಅರ್ಧ ಕೊಯ್ದು ನಿಲಿಸಿದ್ದ ಆ ಕಂಬದಲ್ಲಿ ಚಾಪಲ್ಯದಿಂದ ಕುಳಿತು ಕೈಗಳಿಂದ ಬೆಣೆಯನ್ನು ಕಿತ್ತುಕೊಂಡು ಮುರಿದುಹಾಕಬೇಕೆಂಬಷ್ಟರಲ್ಲಿ ಕಂಬದ ನಡುವೆ ಆ ಕೋಡಗದ ದೇಹಭಾಗವು ಸಿಕ್ಕಿಕೊಂಡಿತು. ಇದರಿಂದ ಅದಕ್ಕೆ ಏನಾಯಿತೋ ಅದನ್ನು ಮೊದಲೇ ತಿಳಿಯಿಸಿರುವೆನು. ಇಂತಿರುವುದರಿಂದ ನಾನು ಹೇಳುವೆನು:—" ಎಸಗುವುದಿಲ್ಲದ ಪದದಲ್ಲಿ '' ಎಂದು. ಅಲ್ಲದೆ ನಮ್ಮಿಬ್ಬರಿಗೆ ತಿಂದರೂ ಮಿಕ್ಕ ಆಹಾರವು ಇದ್ದೇ ಇರುವುದು. ಅದಕಾರಣ ಈ ವಿಚಾರದಿಂದ ನಮಗೇನು ?

ದಮನಕವೆಂದಿತು :—ಆದರೆ ನೀನು ಬರಿಯಕೂಳ್ವಣಿಗನೇಸರಿ. ಅದು ಯುಕ್ತವಲ್ಲ. ಇಂತು ಹೇಳದೆ :—

ಕೆಳೆಯುಗ್ಗುಪಕೃತಿಗೆಯ್ಯಲು |
ಮೞಲಿಪ ಪಗೆಗಳ್ಗೆ ಬಿಡದೆಯಪಕೃತಿಗೆಯಲುಂ ||
ತಿಳಿದರ್ ನೃಪಸಂ ಸೇವಿಪ |
ರಿಳೆಯೊಳದಾವಂ ತನತ್ತುಪೊಡೆಯಂ ಪೊರೆಯಂ ||೩೩||

ಮತ್ತೆ,

ಧರೆಯೊಳದಾವಂ ಜೀವಿಸು |
ತಿರಲವನಾಶ್ರಯದೆ ಪಲಬರುಜ್ಜೀವಿಪರೋ ||
ಚಿರಕಾಲಮವಂ ಜೀವಿಕೆ |
ಪೊರೆಯುದೆ ಕೊಕ್ಕಿಂದೆ ತನ್ನ ಪೊಡೆಯಂ ಬಕಮುಂ ||೩೪||

ಅದಟಱ್ವುಂ ಸಿರಿ ಮೊದಲಾ |
ದುದಿತಗುಣಂಗಳಿನದೊರ್ಚ್ಚಣಂ ಬರ್ದುಕಿದೊಡಂ ||
ಅದವನ ಬರ್ದುಕಿನ ಫಲಮೆನಿ |
ಪುದು ಚಿರಮಿರ್ಕ್ಕುಂ ತಿನುತ್ತೆ ವಾಯಸಮುಮದೇಂ ||೩೫||

ಪೊರೆಯುನೊ ತಾನಾವಂ ಮೇಣ್ |
ಪೆಱರಿಂ ಪೊರೆಯಿಸನೊ ನಂಟರಂ ಬಡವರುಮಂ ||
ನರನವನ ಬಾಳಿದೇವುದೊ |
ಧರೆಯೊಳ್ ಬಲಿದಿನುತೆ ಕಾಗೆಯುಂ ಚಿರಮಿರದೇ ||೩೬||

ಕಿಱುದೊಱೆ ತುಂಬಿತುಳುಂಕುಗು |
ಮರರೇ ಮೂಷಿಕದ ಬೊಗಸೆ ತುಂಬುಗುಮೆನಸುಂ ||
ಪರಿಕಿಸೆಯುೞ್ವಾನಿಸನುಂ |
ಹರಿಸಂಬಡುಗುಂ ದಲಲ್ಪವಾದುದಱ್ನೆ ತಾಂ ||೩೭||

ಅಲ್ಲದೆ,

ಜನಿಸಿದನದಾವನಡಱ್ನೊ |
ತನತ್ತುಘನವಂಶದಗ್ರಮುಂ ಪೞಿಯಿಗೆವೋಲ್ ||
ಜನನಿಯ ಜೌವನಮುಂ ಜ |
ಗ್ಗನೆ ಜಗುೞ್ಸಿದಾತನಿಂದ ಮೇಂ ಫಲವಕ್ಕುಂ ||೩೮||

ಪರಿಪರ್ತಿಪ ಸಂಸಾರದೆ |
ಮರಣಮನೊಂದಿದವನಾವನೊಡನೆಯೆ ಜನಿಸಂ ||
ಧರೆಯೊಳ್ ಸಿರಿಯಿಂ ಮೇಲಾ |
ಗಿರುತುಂ ಶೋಭಿಪೊಡೆ ಜನಿಸಿದಾತಂ ಗಣ್ಯಂ ||೩೯||

ಮತ್ತೆ,

ನದಿಯೆಡೆಯೊಳ್ ಸಂದಣಿಗೊಂ |
ಡುದಯಿಸಿದಾತೃಣದ ಜನ್ಮಮುಂ ಗಡ ಸಫಳಂ ||

ಉದಕದೆ ಬಿಟ್ಟು ಭಯಂಮಿಗೆ |
ಹೃದಯದೊಳಾಕುಲಿಪ ಜನದ ಕೈಗಿಂಬೆನಿಕುಂ ||೪೦||

ಅಂತಲ್ಲದೆ,

ಪರಿಯಂ ಮಿಾಱದೆ ತಾಂ ಮೇ |
ಲಿರುತುಂ ಮೇಣ್ ಜನದ ಬೇಗೆಯಂ ತವಿಸುತ್ತುಂ ||
ಮೆಱೆವ ಮುಗಿಲ್ಗಳವೋಲ್ ಸ |
ತ್ಪುರುಷರ್ ನೆಲದಲ್ಲಿ ಕೆಲಬರೇ ಜನಿಯಿಸುವರ್ ||೪೧||

ಪಿರಿಯರ್ಗ್ಗಂ ಗುರುವೆನಿಪನ |
ನೊಱಲ್ದು ನಿಜಗರ್ಭದಲ್ಲಿ ಧರಿವುದಱಿಂದಂ ||
ದೊರೆಕೊಂಡಿರ್ಕ್ಕುಂ ಜನನಿಗೆ |
ಪರಮಂ ಗೌರವಮೆನುತ್ತೆ ಬಗೆವರ್ ವಿಬುಧರ್ ||೪೨||

ನರನದಟಿಗನಾದೊಡಮೇಂ |
ಮೆಱೆಯದೊಡದಟಂ ತಿರಸ್ಕೃತಂ ತಾನಕ್ಕುಂ ||
ಮರದೊಳಡಂಗಿರಲನಲಂ |
ಪರಿಭವಿಪರ್ ಜ್ವಲಿಸುತಿರ್ದ್ದೊಡಂಜುವರಲ್ತೇ ||೪೩||

ಕಂಟಕವೆಂದಿತು :—ನಾವಿಬ್ಬರೂ ಅಷ್ಟು ಮುಖ್ಯರಾದವರಲ್ಲ. ಆದ ಕಾರಣ ಈ ವ್ಯಾಪಾರದಿಂದ ನಮಗೇನು ?

ಜಡಮತಿಯಾವನಮುಖ್ಯಂ |
ನುಡಿವಂ ಬೆಸಗೊಳ್ಳದಿರೆಯು ಮವನಿಪನೆಡೆಯೊಳ್ ||
ಪಡೆಯಂ ಮೆಚ್ಚನದೆಂದುಂ |
ಪಡೆವಂ ಧಿಕ್ಕಾರಮುಂ ವಲಂ ತಾನಾತಂ ||೪೪||

ಅಲ್ಲದೆ,

ನುಡಿದುದು ತಪ್ಪದೆ ಫಲಮುಂ |
ಪಡೆವೆಡೆಯೊಳ್ ನುಡಿಯ ನುಡಿಯುವೇೞ್ಕುಂ ಪುರುಷಂ ||

ಬಿಡದವನೊಳ್ ನೆಲೆಗೊಳ್ಗುಂ |
ಕಡುರಾಗಂ ಬಿಳಿಯಬಟ್ಟೆಯೊಳ್ ನೆಲಸುವವೋಲ್ ||೪೫||

ದಮನಕವೆಂದಿತು :—ಇಂತು ನುಡಿಯಬೇಡ.

ಕ್ಷಮೆಯಾಣ್ಮನ ನೋಲಗಿಸುವ |
ನಮುಖ್ಯನಾಗಿರ್ದೊಡಂ ಪ್ರಮುಖ್ಯನೆನಿಪ್ಪಂ ||
ಕ್ಷಮೆಯಾಣ್ಮನ ನೋಲಗಿಸದ |
ನಮುಖ್ಯನೆನಿಪಂ ಪ್ರಮುಖ್ಯನೆಂದೆನಿಸಿರ್ದುಂ ||೪೬||

ಇಂತು ಹೇಳಿಯುಂ ಇದೆ.

ನರಪತಿ ಕೆಲದನನೇ ತಾಂ |
ವರಿಸುವನಕುಲಿಯನೊ ಜಡನನೋ ವ್ರಾತ್ಯನನೋ ||
ಅರಸರ್ ಪೆಣ್ಗಳ್ ಲತೆಗಳ್ |
ಪಿರಿದುಂ ಪಕ್ಕದದನಲ್ತೆ ಸುತ್ತುಂಗೊಳ್ಗುಂ ||೪೭||

ಅಂತಲ್ಲದೆ,

ಒಡರಿಕುಮಿದು ಕೋಪಮನಿದು |
ಬಿಡದೆ ಹಸಾದಂಗೊಳಿಪ್ಪುದೆಂಬುದ ನಾರ ||
ಯ್ವೆಡೆಯೊಳ್ಗಳ್ ತರದೆ ಬಸಂ |
ಬಡಿಪರ್ ಮಾಮುಸಕವಾಂತ ಮಾರಾಜನುಮಂ ||೪೮||

ವರವಿದ್ವನ್ಮಂಡಲಿಗಂ |
ಪಿರಿದುಂ ಶಿಲ್ಪಜ್ಞವರ್ಗಕಂ ಬೇರಗ್ಗಂ ||
ಪರಿಚರ್ಯೆಯ ಬಲ್ಲಗ್ಗಂ |
ನರಪಾಲನನುಳಿದು ಬೇಱೆಯಾಶ್ರಯವಿಲ್ಲಂ ||೪೯||

ಧನಜಾತ್ಯಾದ್ಯಭಿಮಾನದೆ |
ಜನಪತಿಗಳನಾರೊಱಲ್ದುಪಾಶ್ರಯಿಸರೊ ಮೇ ||
ದಿನಿಯೊಳ್ ಪ್ರಾಯಶ್ಚಿತ್ತಂ |
ಧನಭಿಕ್ಷೆಯವರ್ಗೆ ಸಾವವರೆಗಂ ಏಹಿಕಂ ||೫೦||

ಪೊಡವಿಯಪತಿಗಳ್ ದುರುಳರ್ |
ಪಿಡಿದೋಲಗಿಸಲ್ಕಶಕ್ಯರೆಂದಾರ್ ನುಡಿಗುಂ ||
ದಿಡದಿಂ ನೆಗಳ್ತೆವಡಿಪರ್ |
ಜಡತಾಲಸ್ಯಪ್ರಮಾದಮಂ ತಮತನವರ್ ||೫೧||
ಬಿಡದೆಯುಪಾಯದೊಳೆ ಬಸಂ |
ಬಡಿಸಿದ ಪಾವುಪುಲಿಯಾನೆಸಿಂಗಂಗಳ ನೋ ||
ೞ್ಪೊಡೆಯಪ್ರಮತ್ತರೆನಿಸಿದ |
ಕಡುಚದುರಗ್ಗ್ರಸನೆಂಬನೆನಿಃಖಿಳವಂ ತಾಂ ||೫೨||
ಇಳೆಯಾಣ್ಮನನಾಶ್ರಯಿಸಿಯೆ |
ವಿಳಸತ್ಸಂಪದಮನೊಂದುವಂ ವಿದ್ವಾಂಸಂ ||
ಬೆಳಸಂ ಮಿಗೆಯೊಂದದುಗಡ |
ಮಳೆಯಾದ್ರಿಯನುೞಿದು ಚಂದನಂ ಬೇಱೆಡೆಯೊಳ್ ||೫೩||
ಪಿಱಿದುಂ ಬೆಳ್ಗೊಡೆಗಳ್ ಸುಂ |
ದರಂಗಳೆಂದೆನಿಪ ಕುದುರೆಗಳ್ ಮದಕರಿಗಳ್ ||
ದೊರೆಕೊಳ್ವುವು ತನಗನಿಶಂ |
ನರಪಾಲಂ ಸುಪ್ರಸನ್ನನಾದೊಡೆ ತನ್ನೊಳ್ ||೫೪||

ಕರಟಕವೆಂದಿತು:—ಆದರೆ ನೀನು ಏನನ್ನುಮಾಡಬೇಕೆಂದಿರುವೆ ?

ಅದೆಂದಿತು:—ಈಗ ನಮ್ಮೊಡೆಯನಾದ ಪಿಂಗಲಕನು ಹೆದರಿರುವನು. ಇವನ ಪರಿಜನವೂ ಹೆದರಿದೆ. ಆದಕಾರಣ ಇವನ ಬಳಿಗೆಹೋಗಿ ಹೆದರಿರುವುದೇಕೆಂಬುದನ್ನು ತಿಳಿದು, ಸಂಧಿ ವಿಗ್ರಹ ಯಾನ ದ್ವೈಧೀಭಾವ ಆಶ್ರಯ-ಎಂಬಿವುಗಳಲ್ಲಿ ಯಾವುದಾದರೂ ಒಂದರಿಂದ ಸಂವಿಧಾನಮಾಡುವೆನು.

ಕರಟಕವೆಂದಿತು:—ಈ ಒಡೆಯನು ಹೆದರಿರುವನೆಂಬುದನ್ನು ನೀನು ಅದೆಂತು ತಿಳಿದೆ ?

ಅದೆಂದಿತು:—ಈ ವಿಷಯದಲ್ಲಿ ತಿಳವುದೇನಿದೆ ? ಏಕೆಂದರೆ, ಇಂತು ಹೇಳಿದೆ:—

ಒರೆದುದನಱಿಗುಂ ಪಶುವುಂ |
ಪೊಱಗುಂ ಪ್ರೇರಣದೆ ಕುದುರೆಯಾನೆಗಳುಂ ಪ್ರಾ ||
ಜ್ಞರುಮೂಹಿಪರೊರೆಯದುದಂ |
ಪರೇಂಗಿತಜ್ಞಾನವಲ್ತೆ ಮತಿಗಳ್ಗೆ ಫಲಂ ||೫೫||

ಅಂತೆಮನುವೂ ಹೇಳಿರುವನು:—

ತೋಱದೆ ಮುಚ್ಚಿರ್ದೊಡಮಾ |
ಕಾರದಿನಿಂಗಿತದೆ ಚೇಷ್ಟೆಯಿಂ ಗತಿಯಿಂ ವ್ಯಾ ||
ಹಾರದೆ ಮೇಣ್ ಕಣ್ಮೊಗದ ವಿ |
ಕಾರದೆ ಭಾವಿಪೊಡೆ ಕಾಣ್ಗುಮೊಳಗಣಚಿತ್ತಂ ||೫೬||

ಅದಕಾರಣ ಈಗ ಭಯಾಕುಲನಾದ ಈತನ ಬಳಿಗೆಹೋಗಿ ನನ್ನ ಬುದ್ಧಿಯ ಪ್ರಭಾವದಿಂದ ಈತನ ಭಯಮಂನಿವಾರಿಸಿ ಈತನನ್ನು ವಶಮಾಡಿಕೊಂಡು ಸ್ವಕೀಯವಾದ ಮಂತ್ರಿಪದವಿಯಂ ಸಂಪಾದಿಸುವೆನು.

ಕರಟಕವೆಂದಿತು:—ನೀನು ಸೇವಾಧರ್ಮವನ್ನು ಅರಿಯೆ. ಅದೆಂತು ಈತನನ್ನು ವಶಮಾಡಿಕೊಳ್ಳುವೆ?

ಅದೆಂದಿತು:—ಅದೆಂತು ನಾನು ಸೇವಾಧರ್ಮವನರಿಯದವನು ? ನಾನು ನಮ್ಮ ತಂದೆಯ ತೊಡೆಯನೇರಿ ಆಡುತಿರುವಾಗ ಸಾಧುಗಳು ಬಂದು ನೀತಿಶಾಸ್ತ್ರವಿಷಯಗಳನ್ನು ಹೇಳುತಿದ್ದರು. ಅವುಗಳಲ್ಲಿ ನಾನುಕೇಳಿದ ಸಾರಭೂತವಾದ ಸೇವಾಧರ್ಮದ ವಿಷಯವನ್ನು ಹೃದಯದಲ್ಲಿ ಚೆನ್ನಾಗಿ ಗ್ರಹಿಸಿರುವೆನು. ಕೇಳು ಇದೊ ನಾನು ಹೇಳುವುದನ್ನು:—

ಮಿಸುನಿಗಳಿಂ ಕುಸುಮಿತೆಯೆನೆ |
ಮಿಸುಗುವ ವಸುಧೆಯನಳುಂಬಮಱಿಸುತುಮಿರ್ಪರ್ ||

ಎಸೆವದಟುಳ್ಳಂ ವಿದ್ವ |
ದ್ರಸಿಕಂ ಮೇಣ್ ಸೇವೆಯಱಿ ತನೆಂಬರ್ ಮೂವರ್ ||೫೭||
ಸೇವೆಯದಾವುದು ನೃಪತಿಹಿ |
ತಾವಹ ಮದನೊಲ್ದು ಕೊಳ್ವದೊಳ್ವಾತುಗಳಿಂ ||
ಕೋವಿದನರಸನಸೇವೆಯ |
ಗೈವುದು ಗತಿಯಿಲ್ಲ ಬೇಱೆಯದನುಱಿಯಲೊಡಂ ||೫೮||
ಅಱಿಯಸದಾವಂ ಗುಣಮಂ |
ಪರಿಚರಿಸಲ್ಬಾರದಾತನಂ ಮತಿಮಂತಂ ||
ಕರಮುೞ್ತುಬಿತ್ತಿದೂಷರ |
ಧರೆಯಿಂದೆಂತಂತವಂಗೆ ಫಲಮಿಲ್ಲವನಿಂ ||೫೯||
ಸೇವೆಗೆ ತಕ್ಕ ಗುಣಂಗಳ |
ದಾವನೊಳಿರ್ದಪುವೊ ಸಿರಿಗಳಿರದೊಡಮವನಂ ||
ಸೇವಿಪುದವನಿಂದಕ್ಕುಂ |
ಜೀವಿಸುವನ್ನೆಗಮೆ ಸಾಲ್ವ ಫಲವೆಂದಾನುಂ ||೬೦||
ಪಸಿವಂ ಸೈರಿಸಲಾಱದೆ |
ಬಸವೞಿದೊಡಲೊಣಗಿ ಮೋಟುಮರದವೊಲಿರ್ದುಂ ||
ಅಸದಾತ್ಮನತ್ತಣಿಂದಾ |
ಶಿಸಬಾರದು ಜೀವನಾರ್ಥಮಂ ಮತಿಮಂತಂ ||೬೧||
ಧನಲೋಭಿಯ ನಱಿವಾತೊರೆ |
ವನನೊಡೆಯನನಿರದೆ ಸೇವಕಂ ದ್ವೇಷಿಸುವಂ ||
ಅನುವಿಂದಸೇವ್ಯನಂ ಸೇ |
ವ್ಯನನಱಿಯದ ತನ್ನನೇಕೆ ತಾಂ ದ್ವೇಷಿಸನೋ ||೬೨||
ಆವನನಾಳ್ಗಳ್ ಪಸಿದುಂ |
ಸೇವಿಸಿ ವಿಶ್ರಾಂತಿವಡೆಯರೋ ತ್ಯಜಿಸುವುದಾ ||

ಭೂವರನನೆಕ್ಕೆ ಪುಷ್ಪಫ |
ಲಾವಹವಾಗಿರೆಯುಮುದನಣಂ ತ್ಯಜಿಸುವವೋಲ್ ||೬೩||
ಅರಸನ ತಾಯೊಳಮರಸಿಯೊ |
ಳರಗುವರನೊಳಂ ಪ್ರಧಾನನೊಳ್ ಮಂತ್ರಿಯೊಳಂ ||
ಅರರೆ ಪುರೋಹಿತನೊಳ್ಪಡಿ |
ಯರನೊಳಮವನಿಪನೊಳಿರ್ಪವೋಲಿರವೇಳ್ಕುಂ ||೬೪||
ಅವನೀಶನನೊಲಿಪೊಡೆ ಆ |
ತ್ರವನೊಲಿಪುದು ಬಱಿಯನೃಪನನೊಲಿಪುದಱಿಂದೇಂ ||
ಅವಲೋಕಿಸಯ್ಯ ವೃತ್ತಿಂ |
ಡವುಮಾಂಪುದು ಚಕ್ರಮಹಿಮೆಯಿಂ ಪಾತ್ರತೆಯಂ ||೬೫||
ಮಿಗೆಕೃತ್ಯಾಕೃತ್ಯಂಗಳ |
ಒಗೆಯುತೆ ಮೇಣ್ಸ್ವಾಮಿ ನುಡಿಯೆ ಜಯಜೀಯೆಂದೋ ||
ಲಗಿಸುತೆ ಮಾನಸದೊಳ್ಸಂ |
ದೆಗವಿಲ್ಲದೆ ಕಜ್ಜವೆಸಗುವಂ ಪ್ರಭುಗಿಷ್ಟಂ ||೬೬||
ಅರಸನ ಹಸಾದದಿಂದಂ |
ದೊರೆತರ್ಥವನಾವನಱಿಪುವಂ ಜನದೊಳ್ಮೇಣ್ ||
ಧರಿಪನವನಿತ್ತವಸ್ತ್ರಾ |
ಭರಣಮನೊಡಲಲ್ಲವಂ ನೃಪಪ್ರಿಯನಕ್ಕುಂ ||೬೭||
ನರನಾವನಂತಪುರದೊಳ್ |
ಚರಿಸುವಜನದಲ್ಲಿಯುಂ ನೃಪಾಂಗನೆಯರೊಳಂ ||
ಪರಿಯಾಲೋಚಿಸದಿರ್ಪಂ |
ಧರೆಯೊಳವಂ ಭೂಮಿಪಂಗೆ ವಲ್ಲಭನಕ್ಕುಂ ||೬೮||
ಜೂದಂ ತಾನೆಣಿಪನೊ ಜವ |
ದೂದನವೋಲ್ ಕಳ್ಳುಮಂ ಬಿಸಂಬೊಲದಾವಂ ||

ಆದರಿಸನೊ ಪೇಳ್ಪುವಂ |
ಮೇದಿನಿಯಲ್ಲವನೆ ರಾಜವಲ್ಲಭನಕ್ಕುಂ ||೬೯||

ಬವರದೊಳರಸನ ಮುಂಗೊ |
ಡವನಂ ಬೆಂಗೊಂಡು ಪೋಲಿಲೊಳಾವಗಮುವನಾ ||
ಭವನದೆ ಪಡಿಯರನೆನಿಸಿ |
ರ್ಪವನವನೀಪಾಲನೊಲ್ಮೆಗಾಶ್ರಯನಕ್ಕುಂ ||೭೦||

ಅರಸಂಗದಾವಗಂ ತಾಂ |
ಪರಮಪ್ರಿಯನೆನಿಸಿಯುಂ ವಲಂ ಕಷ್ಟದೊಳಂ ||
ಮರೆಯಾದೆವಿಾಱಿ ನಡೆಯದ |
ನರನಲ್ತೆ ನೃಪಾಲಕಂಗೆ ವಲ್ಲಭನೆನಿಪಂ ||೭೧||

ಜನಪನ ಪಗೆವವರೊಳ್ ಪಗೆ |
ತನವಂ ಗೆಯ್ಯುತೆಂದುಮಾತನೊಲ್ದರೊಳೊಲವಂ ||
ಅನುಗೊಳಿಸುತಾವನಿರ್ಪಂ |
ಮನುಜನವಂ ಭೂಮಿಪಂಗೆ ವಲ್ಲಭನೆನಿಪಂ ||೭೨||

ಅರಸಂ ವಿರುದ್ಧಮೊರೆದೊಡ |
ಮೊರೆಯುಂ ತಾನಾವನೇನುಮಂ ಪಡಿನುಡಿಯಂ |
ಅರಸನ ಸರಿಸದೊಳೆಂದುಂ |
ಪಿರಿದುಂ ನಗನಾವನವನೆ ತತ್ಪ್ರಿಯನೆನಿಪಂ ||೭೩||

ಧರಿಸದೆ ಮನದೊಳ್ ಭಯಮಂ |
ನರನಾವಂ ಸಮರರಂಗಮಂ ಮನೆವೊಲ್ ಮೇಣ್ ||
ಪರದೇಶವಾಸಮಂ ನಿಜ |
ಪುರದಾವಾಸದವೊಲಱಿವನವನೆ ನೃಪೇಷ್ಟಂ ||೭೪||

ಅರಸನ ಸರಸಿಜಮುಖಿಯರ |
ಸರಿಸದೆ ನಿಲ್ಲದೆ ವಿವಾದಮೆಸಗದೆ ಪೞಿಯಂ ||

ವಿರಚಿಸದೆ ಯಾವನಿರ್ಪಂ |
ನರನಾಥಂಗಿಷ್ಟನೆನಿಸುವಂ ನರನಾಥಂ ||೭೫||

ಕರಟಕವೆಂದಿತು :—ನೀನು ಅಲ್ಲಿಗೆ ಹೋಗಿ ಮೊದಲು ಏನು ಮಾತನಾಡಬೇಕೆಂದಿರುವೆ? ಅದನ್ನು ಹೇಳು.

ದಮನಕವೆಂದಿತು:—

ಇದಿರೊಳ್ ನುಡಿಯಂ ನುಡಿವ |
ಗರ್ಗ್ಗದಯಿಪುದುತ್ತರದಿ ನುತ್ತರಂ ತರದಿಂದಂ ||
ಹದವಳಿಯಿಂದಂ ಸೊಂಪೇ |
ಅಱಿದ ಬೀಜದೆ ಪೆಱತು ಬೀಜಮುದಯಿಪತೆಱದಿಂ ||೭೬||

ನಯಗುಣಕನುಸಾರದೆ ಬುಧ |
ಚಯಮೆಂತುಮುಪಾಯದೊಗೆವ ಕೇಡನುಪಾಯಂ ||
ಗೆಯಲೊಡಮಾಗುವ ಜಯಸಿ |
ದ್ಧಿಯುಮಂ ಸುವ್ಯಕ್ತಮಪ್ಪವೊಲ್ ನಿರವಿಸುಗುಂ ||೭೭||

ಕೆಲಬರ್ ಬಾಯೊಳ್ ಗಿಳಿವೊಲ್ |
ಕೆಲಬರ್ ಬಗೆಯಲ್ಲಿ ಮೂಗರಂತಿರ್ದ್ದಪರಿಂ ||
ಕೆಲಬರ್ಗ್ಗಿಂಪಿನ ನುಡಿಗಳ್ |
ವಲಮುಣ್ಮುಗುಮಲ್ತೆ ಬಾಯೊಳಂ ಬಗೆಯೊಳಗಂ ||೭೮||

ಸಮಯವೊದವದೆ ನಾನು ಮಾತಾಡೆನು. ಹಿಂದೆ ನಾನು ನಮ್ಮ ತಂದೆಯ ತೊಡೆಯಮೇಲೆ ಆಡುತಿದ್ದಾಗ ನೀತಿಸಾರವನ್ನು ಕೇಳಿರುವೆನು:—

ಅಮರಗುರುವಾದೊಡಂ ತಾಂ |
ಸಮಯಂ ಸಮನಿಸದ ಪದದೆ ನುಡಿದೊಡೆ ನುಡಿಯಂ ||
ಅಮತಿಯುತನೀತನೆನಿಸುತು |
ಮಮಿತಮೆನಿಪ್ಪೇಳಿದಕ್ಕೆ ಭಾಜನಮಕ್ಕುಂ ||೭೯||

ಕರಟಕವೆಂದಿತು :—

ಅತಿವಿಷಮಂ ಬಹುಕರಿನಂ |
ಸತತಂ ವ್ಯಾಳಕುಲಯುಕ್ತಮೆನಿಸುವಧರಣೀ ||
ಪತಿಜನವಮಮಾ ಗಿರಿವ್ರೋ |
ಲತಿಕಷ್ಟದೆ ಸೇವಿಸಲ್ಕೆ ಸಾಧ್ಯವೆನಿಕ್ಕುಂ ||೮೦||

ಅಂತು :—

ಸಲೆ ಭೋಗಯುತಂ ಕಂಚುಕ ||
ಕಲಿತಂ ಕೌಟಿಲ್ಯಸಂಗತಂ ಕ್ರೂರಂ ಕೇ ||
ವಲಮಂತ್ರಸಾಧ್ಯಮೆನಿಸುವ |
ನೆಲದಾಣ್ಮರ ನೆರವಿ ಭುಜಗತತಿಗೆಣೆಯಕ್ಕುಂ ||೮೧||

ಜನಪತಿಯೊಲವಂ ಪಡೆದವ |
ರನಿಸಾದೊಡಮಾರವಂಗೆ ಕೇಡೆಣಿಪರೊ ಆ ||
ಘನಪಾಪಾತ್ಮರ್ ಪಿಡಿತೆಗ |
ಳನಲನೊಳೆಂತಂತು ಸುಟ್ಟುಪೋಗುವರಲ್ತೇ ||೮೨||

ಪಡೆಯಲಶಕ್ಯವೆನಿಪ್ಪಿಳೆ |
ಯೊಡೆಯರ ಪದವಖಿಳವಂದ್ಯವೆನಿಸಿರ್ದಪುದಾ ||
ದೊಡೆಯಿನಿಸು ಪೊಲ್ಲದಂ ಮಾ |
ಡೊಡೆಯುಂ ಬ್ರಾಹ್ಮಣ್ಯದಂತೆ ದೂಷಿತವಕ್ಕುಂ ||೮೩||

ನೆಲದಾಣ್ಮಗ್ಗ್ರರ್ಸಿರಿಗಳ್ |
ಸಲೆಸೇವಿಸಲೊಂದಲ್ಲದೆ ನಿಲಿಸಲಸಾಧ್ಯಂ ||
ಜಲವಮಾಧಾರದೆ ನೆಲಸುವ |
ಪೊಲವರೊಳುರುಯತ್ನದಿಂದಮವು ನೆಲಸಿಕ್ಕುರ್ಗಂ ||೮೪||

ದಮನಕವೆಂದಿತು :—ಇದೇನೋ ದಿಟ ; ಆದರೆ—

ಆವನ ಬಗೆಯಿರವೆಂತೆಂ |
ತಾವಗಮಂತಂತು ಪದೆದು ಬಗೆಪೊಕ್ಕವನಂ ||

ಸೇವಿಸುತುಂ ತೊಟ್ಟನೆ ಮೇ |
ಧಾವಿಗಳನುವಿಂದೆ ತಾಂಬಸಂಗೆಯುವೇೞ್ಕುಂ ||೮೫||
ಒಡೆಯನನನುವರ್ತಿಸುತುಂ |
ನಡೆವುದು ತೊೞ್ತಿರ್ಗ್ಗೆ ತಕ್ಕ ನಡೆವಳಿಯೆನಿಕುಂ ||
ಕಡುರಕ್ಕಸರುಂ ಪಿಡಿಯ |
ಲ್ಪಡುಗುಂ ಛಂದಾನುವರ್ತಿಯೆನಿಸುವ ಜನದಿಂ ||೮೬||
ಅರಸು ಕನಲ್ದೊಡೆ ಪೊಗೞ್ವುದು* |
ಕರುಣಿಸೆ ರಾಗಿಸುವುದವನ ಪಗೆಯಂ ತಾನಾ ||
ದರಿಸದೆ ಪಗೆವುದು ಕೊಟ್ಟೊಡೆ |
ನೆಱೆಕೊಂಡಾಡುವುದಮಂತ್ರತಂತ್ರಂ ವಶ್ಯಂ ||೮೭||

ಕರಟಕವು—ನಿನ್ನ ಅಭಿಮತವು ಇಂತಿದ್ದರೆ ಹೊರಡು ; ನಿನಗೆ ಮಾರ್ಗವು ಮಂಗಳಕರವೆನಿಸಲಿ. ಇಷ್ಟವಾದಂತೆ ಮಾಡು—ಎನಲು, ಅದೂ ನಮಸ್ಕರಿಸಿ ಪಿಂಗಲಕವಿದ್ದೆಡೆಗೆ ತೆರಳಿತು.

ಬಳಿಕ ಪಿಂಗಲಕವು ಬರುತಿದ್ದ ದಮನಕವಂ ನೋಡಿ, ಬಾಗಿಲ ಕಾಯುತಿದ್ದ ಪ್ರಾಣಿಯುಂ ಕುರಿತು—ತೆಗೆ ಬೆತ್ತವನ್ನು ; ಇವನು ನಮಗೆ ಬಹುಕಾಲದಿಂದ ಬಂದ ಮಂತ್ರಿಪುತ್ರನು ; ದಮನಕನೆಂದು ಇವನ ಹೆಸರು; ಒಳಗೆ ಬರಲು ತಕ್ಕವನು ; ಆದುದರಿಂದ ಎರಡನೆಯ ಮಂಡಲಕ್ಕೆ ಸೇರಿದ ಇವನನ್ನು ಒಳಗೆ ಬರಿಸು—ಎನಲು, ಅದು—ಅಪ್ಪಣೆಯಾದಂತಾಗಲಿ—ಎಂದಿತು.

ಬಳಿಕ ದಮನಕವು ಒಳಗೆ ಬಂದು ಪಿಂಗಲಕವಂ ನಮಿಸಿ ಅನುಜ್ಞೆ ಪಡೆದು ತನಗೆ ತೋರಿಸಿದ ಆಸನದಲ್ಲಿ ಕುಳಿತುಕೊಂಡಿತು.

ಪಿಂಗಲಕವು ವಜ್ರದಂತಹ ಉಗುರುಗಳಿಂದ ಅಲಂಕೃತವಾದ ಬಲಗೈಯನ್ನು ಮೇಲೆತ್ತಿ ಬಹುಮಾನಪೂರ್ವಕವಾಗಿ ಇಂತೆಂದಿತು :—ನಿನಗೆ ಕುಶಲವೆ ? ನಿನ್ನನೋಡಿ ಬಹುದಿವಸವಾಯಿತು ; ಅದೇಕೆ ?

ದಮನಕವೆಂದಿತು:—ಸ್ವಾಮಿಗೆ ನಮ್ಮಿಂದ ಸ್ವಲ್ಪವೂ ಪ್ರಯೋಜನವಿಲ್ಲ. ಸಮಯಬಂದಾಗ ತಾವು ನನಗೆ ಅಪ್ಪಣೆಮಾಡಬೇಕು. ಏಕೆಂದರೆ, ಲೋಕದಲ್ಲಿ ಅರಸುಗಳಿಗೆ, ಉತ್ತಮರು ಮಧ್ಯಮರು ಅಧಮರು—ಎಂಬ ಮೂರು ವರ್ಗದವರಲ್ಲಿ ಎಲ್ಲರಿಂದಲೂ ಪ್ರಯೋಜನವುಂಟು. ಹೇಳಿಯೂ ಇದೆ :—

ಎಂದುಂ ಪಲ್ಲುಜ್ಜಲ್ ನಲ |
ವಿಂದೆ ಕೊಡಂಕೆಗಳ ತುರಿಸಲರಸರ್ಗ್ಗಮವಾ ||
ಸಂದಪುದು ಪುಲ್ಲಕಡ್ಡಿಯು |
ಮೊಂದೆನೆ ಬಾಯ್ಕೃಗಳುಳ್ಳನಿಂ ಫಲಮಿರದೇ ||೮೮||

ಈರೀತಿಯಲ್ಲಿ ನಾವು ಸ್ವಾಮಿಗೆ ಕುಲಕ್ರಮಾಗತರಾದ ಭೃತ್ಯರು ; ವಿಪತ್ಕಾಲದಲ್ಲಿ ಹಿಂಬಾಲಿಸಿರುವರು. ಆದರೆ ಈಗ ನಮಗೆ ಅಧಿಕಾರದ ಪ್ರಾಪ್ತಿಯಿಲ್ಲ. ಆದರೂ ಸ್ವಾಮಿಯು ಇಂತು ಮಾಡಿರುವುದು ಯುಕ್ತವಲ್ಲ. ಹೇಳಿಯೂ ಇದೆ :—

ಇಡವೇೞ್ಕುಂ ಸಮುಚಿತಮೆನಿ |
ಪೆಡೆಗಳೊಳೇ ತೊೞ್ತರಂ ತೊಡಂಗಳುಮಂ ತಾಂ ||
ಮುಡಿಯೊಳಿಡತಕ್ಕರನ್ನಮ |
ನಡಿಯೊಳದಾವನುಮಿಡಂಗಡಾರ್ಪನೆನುತ್ತುಂ ||೮೯||

ಏಕೆಂದರೆ—

ಸುವಿಭವನುತ್ತಮಕುಲಸಂ |
ಭವಂ ಕುಲಕ್ರಮದಿನರಸುಗೈವವನೆನೆಯುಂ |
ಅವನಿಪನಾವಂ ಸುಗುಣಾಂ |
ಶವನಱಿಯುಂ ತೊೞ್ತರವನನೊಲ್ದೋಲಗಿಸರ್ ||೯೦||

ಹೇಳಿಯೂ ಇದೆ—

ಸರಿಸಮವೆನಿಸದ ಜನದೊಡ |
ನಿರಿವುದು ಸಮರೊಡನೆ ಮಚ್ಚನೀಯದುದು ಪುರ |
ಸ್ಕರಿಸದುದೆಂಬೀಮೂಱುಱ |
ನರಸನನಸವಸದಿ ನುಱಿದುಪೋಪಂ ಭೃತ್ಯಂ ||೯೧||

ಒಂದುವೇಳೆ ಅರಸು ಅವಿವೇಕದಿಂದ ಉತ್ತಮಸ್ಥಾನಯೋಗ್ಯರಾದ ಭೃತ್ಯರನ್ನು ನೀಚಸ್ಥಾನದಲ್ಲಿ ನಿಯೋಜಿಸಲು, ಆಭೃತ್ಯರು ಅಲ್ಲಿಯೇ ಇರುವುದಿಲ್ಲ. ಅದು ಅರಸನ ದೋಷವಲ್ಲದೆ ಭೃತ್ಯರದಲ್ಲ. ಹೇಳಿಯೂ ಇದೆ :—

ಕನಕದೆ ಸೇರಲ್ ಸಮುಚಿತ |
ವೆನಿಸುವ ಮಣಿ ತವರದಲ್ಲಿ ಸೇರಿಸೆಯದುದು ತಾಂ ||
ದನಿಯಂಗೈಯದು ಮತ್ತಂ |
ಮಿನುಗದು ಬಗೆವೊಡದು ಸೇರಿಪಾತನ ದೋಷಂ ||೯೨||

"ನಿನ್ನನ್ನು ನೋಡಿ ಬಹುದಿವಸವಾಯಿತು; ಅದೇಕೆ" ಎಂದು ಸ್ವಾಮಿ ಬೆಸಗೊಂಡ ವಿಷಯದಲ್ಲಿ ಹೇಳುವೆನು ಆಲಿಸಬೇಕು :—

ಇದುಗಡಮೆಡಗೈ ಬಲಗೈ |
ಯಿದೆಂಬ ತರತಮತೆಯಿಲ್ಲ ದಿರ್ಪೆಡೆಯೊಳಗೊ
ಳ್ಳಿದನಾವಂ ಗತಿಯುಳ್ಳವ |
ನದೊಂದುಜಣವಾದೊಡಂ ಮನಂಗೊಂಡಿರ್ಪಂ ||೯೩||

ಮಣಿಯೆಂದೆನುತುಂ ಗಾಜಂ |
ಮಣಿಯಂ ಗಾಜೆನುತುಮಾರ್ ವಿಕಲ್ಪದೆ ಬಗೆಗುಂ ||
ಎಣಿಸುವೊಡವಂದಿರೆಡೆಯೊಳ್ |
ಪ್ರಣಯದೆ ಸೇವಕನೆನಿಪ್ಪಪೆಸರವನುಮಿರಂ ||೯೪||

ಬೆಲೆವಡೆಯದು ಮಾರನ್ನಂ |
ಸಲೆಪರಿಕಿಪರಿಲ್ಲದೆಡೆಗಳೊಳ್ ಗೋವಳರು ||
ಜ್ವಲಪಿಂದುಕಾಂತಮಣಿಯಂ |
ನೆಲವಿಂ ಮೂಗವಡೆಗಿತ್ತಪರ್ತವಮ್ಮೊರೊಳ್ || ||೯೫||

ಪರಿಕಿಪೊಡೆ ತಾರತಮ್ಯಂ |
ನೆರೆ ಲೋಹಿತಮೆಂಬ ಮಣಿಗಮಾಮಾಣಿಕಕಂ ||
ಇರದಾವೆಡೆಯಲ್ಲಿತ್ತಲ್ |
ಸುರತ್ನವಿಕ್ರಯವದೆಂತು ಮಾಡಲ್ಪಡುಗುಂ ||೯೬||

ಜನಪತಿ ತನ್ನಯ ಸೇವಕ |
ಜನಂಗಳೊಳ್ ತಾರತಮ್ಯವಿಲ್ಲದೆ ಸಮಭಾ ||
ವನೆಯಿಂದಿರೆ ಕೃತಿದಕ್ಷರ |
ಮನಸ್ಸಿನುತ್ಸಾಹಮಿರದೆ ಭಂಗಮನಡರ್ಗುಂ* ||೯೭||

ಅರಸಂ ಸೇವಕರಿಲ್ಲದೆ |
ಯರಸಿಲ್ಲದೆ ಸೇವಕರ್ಕಳೆಂಬರುಮಿಲ್ಲಂ ||
ಧರಣಿಯೊಳವಂಗಮವರ್ಗಂ* |
ಪರಸ್ಪರಾನುಗತವೆನಿಸುಗುಂ ಸಂಬಂಧಂ ||೯೮||

ನೆಱೆ ಜಗಮನನುಗ್ರಹಿಸುವ |
ಕಿರಣಂಗಳನುೞದದೆಂತು ತಪನನುಮೊಪ್ಪಂ ||
ಉಱೆ ಜನಕುಪಕೃತಿಯೆಸಗುವ |
ವರಸೇವಕರಿಲ್ಲದೊಪ್ಪನೆಂತು ನೃಪಾಲಂ ||೯೯||

ಗುಂಬಂ ಚಕ್ರದರಂಗಳಿ |
ನಿಂಬೆನೆ ಗುಂಬದಿನರಂಗಳುಂ ನಿಂದಿರ್ಕುಂ ||
ಸಂಬಂದಿಸಿರ್ಕ್ಕೆ ಯಿಂತುಟು |
ಕುಂಬಿಣಿಯೊಳ್ ವೃತ್ತಿಚಕ್ರಮರಸಂಗಾಳ್ಗಂ ||೧೦೦||

ಸಿರದೊಳದೆಂದುಂ ವಹಿಸುತೆ |
ಪಿರಿದುಂ ಸ್ನೇಹದಿನೆ ಪೊರೆದ ಕುರುಳುಂ ರೀತ್ಯಂ ||
ತರವೊಂದುಗುಮೆನಲಸ್ನೇ |
ಹಂಬದ ಸೇವಕರ ವಿಷಯದೊಳ್ ಪೇೞ್ವುದದೇಂ ||೧೦೧||
ಅರಸಂ ಹರ್ಷಂಗೊಂಡೊಡೆ |
ಸರಿಸದ ತೊೞ್ತಿರ್ಗೆ ಒಱೆಯ ಪಣಮಂ ಕುಡುವಂ ||
ಪರಿತೋಷಿತರವರಾದೊಡೆ |
ಹರಣಂಗಳ ತೆಱುವಂಗೊಱಲ್ದುಪಕರಿಪರ್ ||೧೦೨||
ಇಂತುಟು ತಿಳಿದು ಧರಿತ್ರೀ |
ಕಾಂತಂ ಜಡರಕ್ಕರ್ಲೆನರದಟಿಗರಂಬರ್ಪರ್ |
ಸಂತತಿಯಿಂ ಬಂದವರೊಲ |
ವಾಂತವರೆನಿಪಾಳ್ಗಳಂ ನಿಯೋಜಿಸವೇಳ್ಕುಂ ||೧೦೩||
ಪಟಮಂ ಹಿತವೆನಿಸುವ ದು |
ಷ್ಕರಮಾದೆಸಕಮ ನೊಡಱ್ಚಿ ಭೃತ್ಯನದಾವಂ ||
ಉಱೆ ನಾಣ್ಚುತ್ತುಮದೇನುಮ |
ನೊರೆಯನೊ ಭೂಪಾಲನಾತನಿಂ ನೆರವುಳ್ಳಂ ||೧೦೪||
ಎಸಕದ ಭಾರಮನಾವನೊ |
ಳೊಸೆದಿರಿಸಿ ನಿರಾಳವಾಂತು ಮನದೊಳ್ ಪ್ರಭು ಚಿಂ ||
ತಿಸನೆರಡನೆಯ ಮನಃಪ್ರೇ |
ಯಸಿಯೆನಲವನೊಲ್ಮೆಗಾಶ್ರಯಂ ಭೃತ್ಯನವಂ ||೧೦೫||
ಕರೆಯುದೊಡಂ ಬಱಸಾರ್ವನೊ |
ನರನಾವಂ ಪಡಿಯೊಳೆಂದುವಿರ್ಪನೊ ಬೆಸನಾಂ ||
ತೊರೆವನೊ ಮಿತವೆನೆ ದಿಟವಮಂ |
ನರಪತಿಗಳ್ಗವನೆ ತಕ್ಕ ಭೃತ್ಯನೆನಿಪ್ಪಂ ||೧೦೬||

ಭಂಗಂ ಪ್ರಭುಗೇನಾನುಂ |
ಸಂಗಡಿಸಿರೆ ಕಂಡು ತಾಂ ಬೆಸಂಬಡೆಯದೊಡಂ ||
ಪಿಂಗಿಸಲದನಾವಂ ಯ |
ತ್ನಂಗೈದಪನವನೆ ತಕ್ಕ ಭೃತ್ಯನೆನಿಪ್ಪಂ ||೧೦೬||

ಜನಿಯಿಸೆ ಮನ್ನಣೆ ಬಿಂಕದೆ |
ತೊನೆಯದೆ ಯುಪಮಾನವಾಗೆ ಕುದಿಯದೆ ಮನದೊಳ್ ||
ಮನುಜನದಾವನಡಂಗಿ |
ರ್ಪ್ಪನವಂ ಜನಪರ್ಗ್ಗೆ ತಕ್ಕ ಭೃತ್ಯನೆನಿಪ್ಪಂ ||೧೦೮||

ಪಿಡಿದು ನೃಪಂ ಪೊಡೆದೊಡಮಱಿ |
ನುಡಿಯಾಡಿದೊಡಂ ಕನಲ್ದು ದಂಡನಮಂ ಗೈ ||
ದೊಡಮಾವಂ ಪೊಲ್ಲೆಣಿಸನೊ |
ಪೊಡವಿಯುಪತಿಗವನೆ ತಕ್ಕ ಭೃತ್ಯನೆನಿಪ್ಪಂ ||೧೦೯||

ಪಸಿವಿಂ ಪೀಡಿತನಾಗದೆ |
ಬಸನಾಗದೆ ನಿದ್ರೆಗಾವಗಂ ಚಳಿಮಳೆಯುಂ ||
ಬಿಸಿಲಂ ಗಾಳಿಯುಮಂ ಸೈ
ರಿಸುವವನರಸರ್ಗ್ಗೆ ತಕ್ಕ ಭೃತ್ಯನೆನಿಪ್ಪಂ ||೧೧೦||

ಸಂಭವಿಸುವ ಸಂಗರಸಂ |
ರಂಭದ ಸಂಗತಿಯ ಕೇಳ್ದು ನಾಥನ ಮುಂದಾ ||
ವಂ ಭರದಿನುರ್ಬಿ ನಲಿವನ |
ವಂ ಭೂಪತಿಗಳ್ಗೆ ತಕ್ಕ ಭೃತ್ಯನೆನಿಪ್ಪಂ ||೧೧೧||

ಎಸಕಂಗಳೊಳಾವನ ನಿಯ |
ಮಿಸಿದುದಱಿಂ ಸೀಮೆ ಶುಕ್ಲಪಕ್ಷದ ಸಸಿವೊಲ್ ||
ಪಸರಿಸಿ ದಿನದಿನಕಭಿವ |
ರ್ಧಿಸಿದಪುದವನಲ್ತೆ ತಕ್ಕ ಭೃತ್ಯನೆನಿಪ್ಪಂ ||೧೧೨||

ಆವಂ ನಿಯುಕ್ತನಾಗಿರೆ |
ಪಾವಕನಲ್ಲಿಟ್ಟ ತೊವಲವೋಲ್ ಸೀಮೆ ಕೃಶೀ ||
ಭಾವಮನಾಶ್ರಯಿಸುಗು ಮಾ |
ಸೇವಕನಂ ರಾಜ್ಯಕಾಮಿ ವಿಭು ಬಿಡವೇಳ್ಕುಂ ||೧೧೩||

ಅಂತು ಇವನು ಅಲ್ಪನಾದ ಜಂಬುಕನೆಂದು ತಿಳಿದು ಸ್ವಾಮಿಯು ನನ್ನನ್ನು ತಿರಸ್ಕರಿಸುವುದೂ ಯುಕ್ತವಲ್ಲ. ಏಕೆಂದರೆ, ಹೇಳಿದೆ:—

ಉದಯಿಕ್ಕುಂ ಪುೞುವಿಂದೆ ಪಟ್ಟೆ ಶಿಲೆಯಿಂ ಪೊನ್ ದೂರ್ವೆ ಗೋವ ರೋ|
ಮದೆ ಪದ್ಮಂ ಕೆಸಱಿಂ ಸುಧಾಂಶು ಕಡಲಿಂದಿಂದೀವರಂ ಗೋಮಯಾ ||
ಗ್ರದೆ ಮೇಣ್ ಕಾಷ್ಠದಿನಗ್ನಿ ಪಾವ ಪೆಡೆಯಿಂದಂ ರನ್ನಮುಂ ಗೋವ ಪಿ |
ತ್ತದೆ ಗೋರೋಚನೆ ಸದ್ಗುಣರ್ ಸ್ವಗುಣದಿಂ ಸಂಶೋಭಿಕುಂ ಪುಟ್ಟಿಸೇಂ||

ಇಳಿಯಪಕೃತಿಗೈವುದಱಿಂ |
ಕೊಲತಕ್ಕುದು ಭವನದಲ್ಲಿ ಸಂಜನಿಸಿದೊಡಂ ||
ಸಲಿಸುತ್ತೆ ಭಕ್ಷ್ಯಭೋಜ್ಯವ |
ನೊಲವಿಂ ಬೇಡಿದಪರೊಳ್ಪನೆಸಗುವ ಬೆಕ್ಕಂ ||೧೧೪||

ಪಿರಿದುಂ ಸಂಗ್ರಹಿಸುತ್ತುಂ |
ನೆಱಪಿದ ಹರಳೆಕ್ಕೆಜೊಂಡುಗಡ್ಡಿಗಳಿಂದಂ ||
ಮರಗೆಲಸವೆಂತು ಸಿದ್ಧಿಸ |
ದಱುವಿಲ್ಲದ ಜನದಿನಂತು ಸಮನಿಸದುಫಲಂ ||೧೧೫||

ಶಕ್ತಿಯದಿಲ್ಲದ ಭಕ್ತಂ |
ಭಕ್ತಿಯದಿಲ್ಲದ ಸುಶಕ್ತನೆಂಬವರಿಂದೇಂ ||
ಯುಕ್ತಜ್ಞ ದೇವ ಶಕ್ತಂ |
ಭಕ್ತನು ಮೆನಿಸಿರ್ಪ ನನ್ನನೋಸರಿಸದಿರೈ ||೧೧೬||

ಪಿಂಗಲಕವೆಂದಿತು :—ಇಂತು ಹೇಳಿದಂತಾಗಲಿ. ಶಕ್ತನೋ ಅಶಕ್ತನೋ ನೀನು ನಮಗೆ ಬಹುಕಾಲದಿಂದ ಬಂದ ಮಂತ್ರಿಯ ಮಗನು;

ಆದಕಾರಣ ಏನಾದರೂ ಹೇಳತಕ್ಕುದಿದ್ದರೆ ನಂಬುಗೆಯಿಟ್ಟು ಹೇಳು.

ದಮನಕವಿಂತೆಂದಿತು :—ಸ್ವಾಮಿಯೇ ! ಬಿನ್ನವಿಸತಕ್ಕುದು ಸ್ವಲ್ಪವಿದೆ.

ಪಿಂಗಲಕವೆಂದಿತು :—ಹೇಳಬೇಕೆಂದಿರುವುದನ್ನು ಹೇಳು.

ಅದು ಹೇಳಿತು:—

ಕಿಱಿದೆಂದೆನಿಸಿದೊಡೇಂಗಡ |
ಧರಣೀಪಾಲಕನ ಕಾರ್ಯವೇನಾನುಮದಂ ||
ಒರೆವುದು ಸರಿಯಲ್ತು ಸಭಾಂ |
ತರದಲ್ಲೆಂದಿತು ದೇವಗುರು ನುಡಿದಿರ್ಪಂ ||೧೧೮||

ಆದರಿಂದ ನನ್ನ ಬಿನ್ನಪವನ್ನು ರಹಸ್ಯದಲ್ಲಿ ಆಲಿಸಬೇಕು; ಏಕೆಂದರೆ:—

ಅಱುಗಿವಿಪ್ರೋಕ್ಕಾಳೋಚನೆ |
ಪಱಿಗುಂ ನಾಲ್ಗಿವಿಗೆ ಬಿಟ್ಟುದದು ಕಿಡದದಱಿಂ ||
ಆಱಿವುಳ್ಳವ ನೆಲ್ಲಂದದಿ |
ನಱುಗಿವಿಯುಂ ಪುಗಿಸಬಾರದಾಳೋಚನೆಯಂ ||೧೧೯||

ಬಳಿಕ ಪಿಂಗಲಕದ ಅಭಿಪ್ರಾಯವನರಿತ ಹುಲಿ ಕಿರಬ ತೋಳ ಮುಂತಾದುವುಗಳೆಲ್ಲವೂ ಆ ಮಾತನಾರಿಸಿ ಸಭೆಯಲ್ಲಿ ಒಡನೆಯೆ ದೂರಸರಿದುವು.

ಬಳಿಕ ದಮನಕವೆಂದಿತು :—ನೀರಿಗೋಸ್ಕರ ಬಂದ ಸ್ವಾಮಿಯು ಏಕೆ ಹಿಂದಿರುಗಿ ಬಂದು ಇಲ್ಲಿ ನಿಂದುದು ?

ಪಿಂಗಲಕವು-ಆಚ್ಚರಿಯಿಂದಲೂ ನಗೆಯಿಂದಲೂ ಕೂಡಿ, “ ಏನೂ ” ಎಂದು ಅಷ್ಟರಲ್ಲಿಯೆ ಸುಮ್ಮನಾಗಲು, ದಮನಕವು—ಸ್ವಾಮಿಯೆ ! ನುಡಿಯತಕ್ಕುದಲ್ಲವಾದರೆ ಬೇಡ ; ಏಕೆಂದರೆ, ಹೇಳಿದೆ:—

ಕೆಲವಂ ಪತ್ನಿಯರಲ್ಲಿ ಮತ್ತೆ ಕೆಲವಂ ನಂಟರ್ಕಳೊಳ್ ಮಿತ್ರರೊಳ್ |
ಕೆಲವಂ ಮೇಣ್ ಕೆಲವಂ ತನೂಜರೊಳಭಿಜ್ಞಂ ಪೇೞದೆಂತಾದೊಡಂ ||

ಸಲೆಗುಪ್ತಂಗೆಯವೇೞ್ಕುಮಂತಿರದವರ್ ನೀಡುಂ ನಯಂಗೊಂಡು ಬೇ।
ಡಲೊಡಂ ಚಿಂತಿಸಿತಕ್ಕುದಂ ತಗದುದಂ ಪೇೞಲ್ಕೆ ಪೇೞ್ಕುಂಗಡಾ ॥೧೨॥

ಅದನಾಲಿಸಿ ಪಿಂಗಲಕವು ಚಿಂತಿಸಿತು :—ಇವನು ಗುಣವಂತನಾಗಿ ಕಾಣುವನು. ಅದರಿಂದ ಇವನ ಮುಂದೆ ನನ್ನ ಅಭಿಪ್ರಾಯವನ್ನು ನುಡಿವೆನು. ಹೇಳದೆ :—

ಮನದೊಳ್ ಕಪಡಿಲ್ಲದ ಮಿ ।
ತ್ರನೊಳಂ ಗುಣವಂತನಾದ ಭೃತ್ಯನೊಳಂ ಸ ॥
ಚ್ಚಿನ ಮಡದಿಯೊಳಂ ನಲ್ಲೊಡೆ ।
ಯನೊಳಂ ಜನವಱಲ ನಱುಪಿ ಸುಖಮಂ ಪಡೆಗುಂ ॥೧೨೧॥

ಎಂದು ಅದಂ ಕುರಿತು :—

ಎಲೆ ದಮನಕ! ಇದೋ ದೂರದಲ್ಲಿ ಆಗುವ ಮಹಾಶಬ್ದವು ಕಿವಿಗೆ ಬೀಳುವುದೇ ?—ಎನಲು, ಅದು—ಸ್ವಾಮಿ! ಕಿವಿಗೆ ಬೀಳುವುದು; ಅದರಿಂದೇನು ?—ಎಂದಿತು.

ಪಿಂಗಲಕವೆಂದಿತು :—ಅಯ್ಯ! ನಾನು ಈ ವನವನ್ನು ಬಿಟ್ಟು ಹೋಗಬೇಕೆಂದಿರುವೆನು.

ದಮನಕವೆಂದಿತು :—ಏತರಿಂದ ?

ಪಿಂಗಲಕವು ಹೇಳಿತು :—ಇಂತು ಮಹಾಶಬ್ದವನ್ನು ಮಾಡುತಿರುವ ಅಪೂರ್ವವಾದ ಯಾವುದೋ ಒಂದು ಜಂತು ಈಗ ನಮ್ಮ ವನವನ್ನು ಪ್ರವೇಶಿಸಿರುವುದರಿಂದ ಈ ಧ್ವನಿಗೆ ತಕ್ಕಂತೆ ಅದಕ್ಕೆ ತಕ್ಕ ಪರಾಕ್ರಮವೂ ಇರಬೇಕು.

ದಮನಕವೆಂದಿತು;-ಶಬ್ದವನ್ನು ಕೇಳದ ಮಾತ್ರಕ್ಕೆ ಸ್ವಾಮಿಯ ಭಯಗೊಂಡುದು ಯುಕ್ತವಲ್ಲ. ಏಕೆಂದರೆ :—

ಜಳದಿಂ ಕಿಡುಗುಂ ಸೇತುವು ।
ಮೊಳಗೋವದ ಕತದೆ ಕಿಡುಗು ಮಾಳೋಚನೆಯುಂ ॥

ಘೞಿಲನೆ ಕಿಡುಗುಂ ಪಿಸುಣಿಂ |
ಕೆಳೆತನಮುಂ ಶಬ್ದದಿಂ ಭಯಾರ್ತಂ ಕಿಡುಗುಂ || ೧೨೨ ||

ಪೂರ್ವಿಕರು ಗಳಯಿಸಿದ ಈ ವನವನ್ನು ಸ್ವಾಮಿಯು ಬಿಡುವುದು ತರವಲ್ಲ. ಭೇರಿ ವೇಣು ವೀಣೆ ಮೃದಂಗ ತಾಳ ಪಟಹ ಶಂಖ ಕಾಹಳ ಮುಂತಾದವುಗಳ ಭೇದದಿಂದ ಶಬ್ದಗಳೂ ಹಲವು ತೆರಗಳಾಗಿರುವುವು. ಕೇವಲಶಬ್ದಮಾತ್ರದಿಂದ ಹೆದರಬಾರದು; ಧೈರ್ಯವನ್ನು ತಾಳಬೇಕು. ಹೇಳಿಯೂ ಇದೆ:—

ಸಂಗರದುದ್ಧತನೆನಿಸಿ ಭ |
ಯಂಗೊಳಿಸುವ ಶತ್ರು ಮುಂದೆ ಬಂದೊದವಲೊಡಂ ||
ಪಿಂಗದದಾವನ ಧೈರ್ಯಮ |
ವಂಗಡ ಲೋಗರಪಹಾಸಕಾಶ್ರಯನೆನಿಸಂ || ೧೨೩ ||

ಬಿದಿ ಭಯಮಂ ಬೀಱುವೊಡಂ |
ಹೃದಯದೆ ಧೀರರ್ಗೆ ಕಿಡದು ಧೈರ್ಯಮದೆಂದುಂ ||
ಒದವೆ ಕೊಳಂಗಳನೊಣಗಿಪ |
ನಿದಾಘಮಾದಮೆ ಸಮುದ್ರನುಕ್ಕಿಸೊಳಿಕ್ಕುಂ || ೧೨೪ ||

ಎಡರೊಳ್ ಧೀರಂ ಸಿರಿಯೊಳ್ |
ಕಡಂಗದಂ ರಣದೊಳಂಜದಂ ಮೂಜಗಕಂ ||
ತೊಡಮುಮೆನಿಪ್ಪಾತ್ಮಜನಂ |
ಪೊಡವಿಯೊಳಾರಯ್ಯೆ ಜನನಿ ಪಡೆವುದು ವಿರಲಂ || ೧೨೫ ||

ಅಂತಲ್ಲದೆ:—

ಅನತಿಗೆಯ್ಯುತೆ ಶಕ್ತಿಮಿ |
ಹೀನತೆಯಿನಸಾರದಿಂದೆ ಲಘುವೆನಿಸಿ ಮಲಂ ||
ಮಾನವದಿಲ್ಲದೆ ವರ್ತಿಪ |
ಮಾನವನುಂ ಪುಲ್ಲುಮೊರ್ತೆರಂಗಡ ಬಗೆಯಲ್ || ೧೨೬ ||

ಮತ್ತೆ—

ಅರರೇ ಪರಪ್ರತಾಪಂ |
ದೊರೆಕೊಳೆ ದೃಢಭಾವವೊಯ್ಯನಳಿವುದಱಿಂದಂ ||
ಅರಗಿನೊಳೆಸಗಿದ ಪಚ್ಚಕೆ |
ದೊರೆಯೆನಿಪನ ರೂಪಿನಿಂದ ಮೇಂ ಫಲವಿಳೆಯೊಳ್ || ೧೨೭ ||

ಆದಕಾರಣ ಇಂತು ಅರಿತು ಸ್ವಾಮಿಯು ಧೈರ್ಯವನ್ನು ತಾಳ ಬೇಕು. ಶಬ್ದಮಾತ್ರಕ್ಕೆ ಭಯಪಡಲಾಗದು. ಹೇಳಿಯೂ ಇದೆ:—

ಮೊದಲೊಳ್ ವಲಮುವಧರಿಸಿದೆ |
ಸಿದುಮೇದೋಮಾಂಸದಿಂದೆ ತುಂಬಿದುದೆನುತುಂ ||
ಅದಱೊಳಪೊಕ್ಕಬಳಿಕ್ಕಿ |
ಪೂರ್ದು ಕೋವಲುಂ ಮರಮುಮಿದಱೊಳೆಂದಾಂ ತಿಳಿದೆಂ ||೧೨೮||

ಪಿಂಗಲಕವು—ಇದು ಎಂತು?—ಎನಲು, ಅದು ಇಂತೆಂದಿತು:—

ಗೋಮಾಯುವೆಂಬ ಒಂದು ನರಿಯು ಹಸಿವುಗೊಂಡು ಬಾಯೊಣಗಿ ಬೆಂಡಾಗಿ ಅಡವಿಯಲ್ಲಿ ಅತ್ತಿತ್ತ ಅಲೆಯುತ್ತ ಸೇನೆಗಳೆರಡು ಸಂದಣಿಸಿದ ರಣರಂಗವಂ ನೋಡಿತು. ಅಲ್ಲಿ ಗಾಳಿಯು ಹೊಡೆತಕ್ಕೆ ಇದಿರಾದ ಬಳ್ಳಿಯು ಕೊಂಬೆದುದಿಗಳಿಂದ ಬಾರಿಸಲ್ಪಡುತ್ತ ಬಿದ್ದಿದ್ದ ಒಂದು ನಗಾರಿಯು ಶಬ್ದವು ಕಿವಿಗೆ ಬೀಳಲು, ಎದೆಯೊಡೆದು ಇಂತು ಚಿಂತಿಸಿತು:—ಅಹಹ ! ಕೆಟ್ಟೆನು. ಆರ್ಭಟಿಸುತ್ತಿರುವ ಇದರ ದೃಷ್ಟಿಗೆ ಬೀಳುವುದಕ್ಕೆ ಮುಂಚೆ ಇನ್ನೆಲ್ಲಿಗಾದರೂ ಹೋಗುವೆನು. ಅಥವಾ ತಾತ ಮುತ್ತತಾತರಿಂದ ಬಂದ ಈ ವನವನ್ನು ಥಟ್ಟನೆ ಬಿಟ್ಟು ಹೋಗುವುದು ಯುಕ್ತವಲ್ಲ. ಹೇಳಿದೆ:—

ಉಱೆಭಯಮೊದವಲೊಡಂ ಮೇಣ್ |
ಹರಿಸಂ ಲಭಿಸಲೊಡಮಾವನಾರಯ್ದುಪಸೋ ||
ತುರಿಪದಿನೆಸಕಮನೆಸಗನೊ |
ಧರಣಿಯೊಳಾಪುರುಷನದವಟಿಲ್ಗೆ ಡೆಯೆನಿಸಂ ||೧೨೯||

ಅದರಿಂದ ಈ ಶಬ್ದವು ಯಾರದೆಂಬುದನ್ನು ತಿಳಿವೆನು.

ಎಂದು ಧೈರ್ಯವಂ ತಾಳಿ ವಿಮರ್ಶಿಸುತ್ತ ಮೆಲ್ಲಮೆಲ್ಲನೆ ಹೋಗು ವಷ್ಟರಲ್ಲಿ ನಗಾರಿ ಕಣ್ಣಿಗೆ ಕಂಡಿತು. ಅದನರಿತು ಹತ್ತಿರ ಹೋಗಿ ತಾನೆ ಉತ್ಸಾಹದಿಂದ ಮನದಲ್ಲಿ—ಆಃ ! ಬಹುದಿವಸಕ್ಕೆ ಅತಿಶಯಿತವಾದ ಈ ಆಹಾರವು ಸಿಕ್ಕಿತು. ನಿಶ್ಚಯವಾಗಿ ಇದು ಮಹತ್ತಾದ ಮೇದೋಮಾಂಸಗ ಳಿಂದ ತೀವಿರಬಹುದು.——ಎಂದು ಚಿಂತಿಸಿ ಕಠಿನವಾದ ತೊವಲಿನಿಂದ ಮುಚ್ಚಲ್ಪಟ್ಟ ಆ ನಗಾರಿಯನ್ನು ಬಹುಪ್ರಯತ್ನದಿಂದ ಸೀಳಿ ಬಂದುಕಡೆ ರಂಧ್ರವಂ ಮಾಡಿ ಸಂತಸಗೊಂಡು ನಡುವೆ ನುಗ್ಗಿತು. ತೊವಲಿಗೆ ಸಿಕ್ಕಿದು ದರಿಂದ ದಂಷ್ಟ್ರ ಭಂಗವಾಯಿತು. ಬಳಿಕ ನಿರಾಶವಾಗಿ ಉಳಿದ ಅದರ ಮರವನ್ನು ನೋಡಿ "ಮೊದಲೊಳ್ ವಲಮವಧರಿಸಿದೆಂ" ಎಂಬ ಪದ್ಯವಂ ಪಠಿಸಿತು.

ಆದಕಾರಣ ಶಬ್ದಮಾತ್ರದಿಂದ ಹೆದರಬಾರದು.

ಪಿಂಗಳಕವೆಂದಿತು:—ಅಯ್ಯಾ! ನೋಡು. ನನ್ನ ಈ ಪರಿವಾರವೆಲ್ಲವೂ ಭಯದಿಂದ ತಲ್ಲಣಿಸುತ್ತ ಓಡಿಹೋಗಬೇಕೆಂದಿರುವುದು. ಅದರಿಂದ ನಾನು ಅದೆಂತು ಧೈರ್ಯವಂತಾಳಲಿ?

ಅದೆಂದಿತು:—ಇದು ಇವರ ದೋಷವಲ್ಲ. ಏಕೆಂದರೆ, ಭೃತ್ಯರ ಸ್ವಾಮಿಗೆ ತಕ್ಕಂತಿರುವರು.

ತುರಗಂ ಕೈದುಂ ಶಾಸ್ತ್ರಂ |
ಸರಸತಿಯುಂ ಬೀಣೆ ಮಾನಿಸಂ ಮಾನಿನಿಯುಂ |
ದೊರೆತಂತಹ ಪುರುಷನನನು |
ಸರಿಸುತ್ತುಂ ತಕ್ಕರಂತು ತಗದರುಮಕ್ಕುಂ ||೧೩೦||

ಆದುದರಿಂದ ನಾನು ಈ ಶಬ್ದದ ಸ್ವರೂಪವನ್ನು ತಿಳಿದು ಬರುವ ವರೆಗೂ ನೀನು ಪೌರುಷವನ್ನು ಅವಲಂಬಿಸಿ ಇಲ್ಲಿಯೇ ಇರು. ಆಮೇಲೆ ಮಾಡಬೇಕಾದುದನ್ನು ಮಾಡಬಹುದು.

ಪಿಂಗಲಕವೆಂದಿತು:—ನೀನು ಅಲ್ಲಿಗೆ ಹೋಗುವುದಕ್ಕೆ ಅಷ್ಟು ಉತ್ಸಾಹಶಾಲಿಯಾಗಿರುವೆಯಾ?

ಅದೆಂದಿತು:—ಯೋಗ್ಯನಾದ ಭೃತ್ಯನಿಗೆ ಸ್ವಾಮಿಯ ಅಪ್ಪಣೆಯಂ ನೆರವೇರಿಸುವುದಕ್ಕಿಂತಲೂ ಮತ್ತೇನು ಕಾರ್ಯವುಂಟು?

ನೆಗಳ್ದೊ*ಡೆಯನಾಜ್ಞೆಯಿಂದಂ |
ಸುಗುಣಿಗೆ ತೊಳ್ತಂಗೆ ಶಂಕೆಯಿಲ್ಲೇತಱೊಳಂ ||
ಪುಗಲಾರ್ಪಂ ಪೆರ್ವಾವಿನ |
ಮೊಗಮಂ ಪೆರ್ಗಡಲ ದಾಂಟಲಾದೊಡಮಾರ್ಪಂ ||೧೩೧||

ಅಲ್ಲದೆ :—

ತುರಿಪದೆ ತನ್ನಾಜ್ಞೆಯನಾ |
ಚರಿಸದೆ ಸುಕರಮಿದು ಬಗೆವೊಡಿದು ದುಷ್ಕರಮೆಂ ||
ದಱಿವನೊ ಭೃತ್ಯನದಾವಂ |
ಸಿರಿಬಯಪರಸವನನಿರಿಸಲಾಗದು ಕೆಲದೊಳ್ ||೧೩೨||

ಪಿಂಗಲಕವೆಂದಿತು :—ಅಯ್ಯಾ ! ಇಂತು ನಿಶ್ಚಯವುಳ್ಳವನಾಗಿದ್ದರೆ ಹೊರಡು. ನಿನಗೆ ಮಂಗಳವಾಗಲಿ. ದಮನಕವೂ ಅದಕ್ಕೆ ವಂದನೆಯಂ ಮಾಡಿ ಸಂಜೀವಕದ ಶಬ್ದವನ್ನನುಸರಿಸುತ್ತ ತೆರಳಿತು.

ದಮನಕವು ಹೊರಟುಹೋದಮೇಲೆ ಪಿಂಗಲಕವು ಭಯದಿಂದ ಆಕುಲವಾದ ಮನವುಳ್ಳುದಾಗಿ ಇಂತು ಚಿಂತಿಸಿತು :—ಅಹಹ ! ನಾನು ಮಾಡಿದ ಕೆಲಸವು ಸರಿಹೋಗಲಿಲ್ಲ. ದಮನಕನನ್ನು ನಂಬಿ ನನ್ನ ಅಭಿಪ್ರಾಯುವನ್ನು ತಿಳಯಿಸಿಬಿಟ್ಟೆ. ಬಂದುವೇಳೆ ಇವನು ಎರಡುಕಡೆಯಲ್ಲಿಯೂ ಸಂಬಳವಂ ತೆಗೆದುಕೊಂಡು ಅಧಿಕಾರ ತಪ್ಪಿಹೋಗಿದ್ದುದರಿಂದ ನನಗೆ ಕೆಟ್ಟುದನ್ನು ಆಲೋಚಿಸಬಹುದು. ಹೇಳದೆ :—

ನರಪತಿಯಾರಂ ಮೊದಲೊಳ್ |
ನೆಱೆಬಹುಮಾನಿಸಿ ಒಱಿಕ್ಕಮವಮಾನಿಸನೋ ||

ವರವಂಶಜರಾದೊಡಮವ |
ರಿರದವನಂ ನಾಶಿಸಲ್ಕೆ ಯತ್ನಿಪರೆಂದುಂ ||೧೩೩||

ಆದಕಾರಣ ಇವನು ಏನನ್ನು ಮಾಡಬೇಕೆಂದಿರುವನೋ ಅದನ್ನು ತಿಳಿಯಲು ಬೇರೊಂದೆಡೆಗೆ ಹೋಗಿ ನಿರೀಕ್ಷಿಸಿಕೊಂಡಿರುವೆನು. ಒಂದು ವೇಳೆ ಈ ದಮನಕನು ಆ ಪ್ರಾಣಿಯಂ ಕರೆದುಕೊಂಡು ಬಂದು ನನ್ನನ್ನು ಕೊಲ್ಲಬೇಕೆಂದಿರಬಹುದು. ಹೇಳಿದೆ:—

ಅದಟಿಗರಲ್ಲದೊಡಂ ನಂ |
ಬದವರ್ ಬಲಶಾಲಿಗಳ್ಗವಧ್ಯರೆನಿಪ್ಪರ್ ||
ಅದಟುಳ್ಳರಾದೊಡಂ ನಂ |
ಬಿದವರ್ ವಲಮುಬಲರಿಂದೆ ವಧಿಸಲ್ಪಡುಗುಂ ||೧೩೪||

ಮಿಗೆ ತನಗೇೞ್ಗೆಯುಮಾಯುಂ |
ಸೊಗಮುಂ ಸಮನಿಸುಗೆನುತ್ತೆ ಬಯಸುವ ಪುರುಷಂ ||
ಜಗದೊಳ್ ನಂಬಲೆಬಾರದು |
ನೆಗೞ್ದ* ಬೃಹಸ್ಪತಿಯಿನಱಿತನೆಂದೆನಿಸಿದ್ದುಂ ||೧೩೫||

ತೆಗೆ ಶಪಥಂಗೆಯ್ಯುತೆ ನಂ |
ಬಿಗೆ ಸಂದೊಡಮುಹಹ ನಂಬಲಾಗದು ಪಗೆಯಂ ||
ಮಿಗೆ ಶಪಥಂಗೈದಿಂದ್ರಂ |
ನೆಗೞ್ದಂ ವೃತ್ರವಧಮನೆಂಗುಂ ಪಿರಿಯರ್ ||೧೩೬||

ಬಗೆವೊಡೆ ನಂಬುಗೆಯಿಲ್ಲದೆ |
ಪಗೆ ದೇವತೆಗಳ್ಗಮುಹಹ ಬಸನೆನಿಸಂ ನಂ ||
ಬುಗೆಯಂ ಬಗೆಗೊಳಿಸುತೆ ಸ |
ಗ್ಗಿಗರೊಡೆಯಂ ದಿತಿಯ ಗಬ್ಬಮಂ ಭೇದಿಸಿದಂ ||೧೩೭||

ಎಂದು ನಿಶ್ಚಯಿಸಿ ಬೇರೆಡೆಗೆ ಹೋಗಿ ದಮನಕನ ದಾರಿಯನ್ನು ನೋಡುತ್ತಾ ಬಂದೆ ಇದ್ದಿತು. ದಮನಕವೂ ಸಂಜೀವಕದ ಬಳಿಗೆ ಹೋಗಿ

ಬಸವನಿವನೆಂದು ತಿಳಿದು ಸಂತಸಗೊಂಡು ಇಂತು ಆಲೋಚಿಸಿತು:—ಅಹಹ! ಲೇಸಾಯಿತು. ಇದರಿಂದ ಇವನಲ್ಲಿ ಸಂಧಿ ವಿಗ್ರಹವಂ ಬಳೆಯಿಸಿ ಪಿಂಗಲಕನನ್ನು ವಶಮಾಡಿಕೊಳಬಹುದು. ಹೇಳಿದೆ:—

ಪೊಡವಿಯ ಪತಿ ಸತ್ಕುಲಜರ್ |
ಕಡುನೇಹಿಗರೆಂದು ಪದೆದು ಸಚಿವರ ನುಡಿಯಂ ||
ಎಡೆಗೊಳುತುಂ ನಡೆಯಂ ತನ |
ಗೆಡಱುಂ ದುಗುಡಂ ಸಮಂತು ಸಮನಿಪವರೆಗಂ ||೧೩೮||

ಎಡೆವಿಡದೆಡರ್ಗೆಡೆಯೆನಿಸಿದ |
ಪೊಡವಿಯಪತಿ ಮಂತ್ರಿಗಳ್ಗೆ ಭೋಗ್ಯನೆನಿಪ್ಪಂ ||
ಪೊಡವಿಯೊಳದಱಿನೆ ಮಂತ್ರಿಗ |
ಳೆಡರ್ಗೆಡೆಯಾಗಿರ್ಪ ನೃಪನನೆಳಸುವರಲ್ತೇ ||೧೩೯||

ಆರೋಗ್ಯಭಾಗ್ಯವುಳ್ಳಂ |
ಪೂರುಷನೆಂತೆಳಸನಾರ್ಪ ಬೆಜ್ಜನನೆಂದುಂ ||
ಆರಯಲೆಡರ್ಗೆಡೆಯಾಗದ |
ಭೂರಮಣನುಮಂತು ಮಂತ್ರಿಯಂ ತಾನೆಳಸಂ ||೧೪೦||

ಎಂದು ಆಲೋಚಿಸಿ ಪಿಂಗಲಕವಿದ್ದ ಕಡೆಗೆ ಹೊರಟಿತು. ಪಿಂಗಲಕವೂ ಬರುತ್ತಿದ್ದ ದಮನಕವಂ ಕಂಡು ಮೊದಲಂತೆ ತನ್ನ ಆಕಾರವನ್ನು ರಕ್ಷಿಸಿಕೊಂಡು ಇದ್ದಿತು. ದಮನಕವೂ ಪಿಂಗಲಕದ ಬಳಿಗೆ ಬಂದು ವಂದಿಸಿ ಕುಳಿತುಕೊಂಡಿತು.

ಪಿಂಗಲಕವು—ನೀನು ಆ ಪ್ರಾಣಿಯನ್ನು ನೋಡಿಬಂದೆಯಾ?—ಎನಲು, ದಮನಕವು—ಸ್ವಾಮಿಯ ಪ್ರಸಾದದಿಂದ ನೋಡಿಬಂದೆನು—ಎಂದಿತು.

ಪಿಂಗಲಕವು—ಸತ್ಯವೆ?—ಎನಲು, ದಮನಕವು—ಸ್ವಾಮಿಯ ಸನ್ನಿಧಿಯಲ್ಲಿ ಅಸತ್ಯವನ್ನು ಬಿನ್ನವಿಸುವುದು ಉಂಟೇ? ಹೇಳಿದೆ:—

ಜನಪಾಲರ ಮೇಣ್ ದೇವರ |
ಸನಿಹದೊಳೆಳ್ಳನಿತನಾದೊಡಂ ನರನಾವಂ ||
ಅನೃತಮನೊರೆದಪನವನೊ |
ಯ್ಯನೆಕಿಡುವಂ ಪೆರ್ಮೆಯೊಡೆಯನೆಂದೆನಿಸಿದೊಡಂ ||೧೪೧||

ನರಪಂ ಸಮಸ್ತದೇವ |
ಸ್ವರೂಪನೆಂದೊರೆಗುಮಲ್ತೆ ಮನುವದಱಿಂ ದೇ ||
ವರನೆಂತಂತವನಂ ಪದೆ |
ದಱಿವುದು ಕೊಂಕಿಂದೆ ಬಗೆಯಲಾಗದದೆಂದುಂ ||೧೪೨||

ಅರಸಂಸಮಸ್ತದೇವ |
ಸ್ವರೂಪನೆನಿಸಿದೊಡಮಿರ್ಕುವೊಂದು ವಿಶೇಷಂ ||
ಅರಸು ಶುಭಾಶುಭಮಂ ಜೆ |
ಜ್ಜರಿಪಾಗುಂ ದೇವರನ್ಯಜನ್ಮದೊಳೀಗುಂ ||೧೪೩||

ಪಿಂಗಲಕವೆಂದಿತು:—ನೀನು ನೋಡಿಬಂದುದು ಯಥಾರ್ಥವಿರಬಹುದು. ದೊಡ್ಡವರು ಅಲ್ಪನಮೇಲೆ ಕೋಪಿಸಿಕೊಳ್ಳಲಾಗದೆಂದು ಆ ಪ್ರಾಣಿ ನಿನ್ನನ್ನು ನಾಶಗೊಳಿಸಲಿಲ್ಲ. ಏಕೆಂದರೆ:—

ಕೆಳಗೆಱಗಿದ ಮೆಲ್ವುಲ್ಗಳ್ |
ನೆಳವಿಂ ಬಿಱುಗಾಳಿಕೀೞದಿದು ಘನಚಿತ್ತ ||
ರ್ಕ್ಕಳ ಸಂಸುತಸ್ವಭಾವಂ |
ಬಳವುಳ್ಳರೊಳಲ್ತೆ ಮೆಱೆವರದಟನವಂದಿರ್ ||೧೪೪||

ಮತ್ತು:—

ಮದವೊಸರ್ವ* ಕಟಸ್ಥಲದೊಳ್ |
ಪದೆದೆಱೆವಾರಡಿಗಳಡಿಗಳಿಂ ಹತಿವಡೆದುಂ ||
ಮದಕರಿ ಕನಲದು ಬಲ್ಪು |
ಳ್ಳದಾದೊಡಂ ಒಲಿ ಕನಲ್ದಪಂ ಸಮಬಲನೊಳ್ ||೧೪೫||

ದಮನಕವೆಂದಿತು:—ಸ್ವಾಮಿ ಹೇಳಿದಂತೆ ಆ ಪ್ರಾಣಿ ಘನತೆಯುಳ್ಳದೂ ನಾವು ದೀನರೂ ಆಗಲಿ; ಆದರೂ ಸ್ವಾಮಿ ಅಪ್ಪಣೆ ಮಾಡಿದರೆ ಆತನನ್ನು ಸನ್ನಿಧಿಯಲ್ಲಿ ಸೇವಕನನ್ನಾಗಿ ಸೇರಿಸುವೆನು.

ಪಿಂಗಲಕವು ನಿಟ್ಟುಸಿರುಬಿಟ್ಟು—ಏನಯ್ಯಾ ! ನೀನು ಈ ಕಾರ್ಯವನ್ನು ಮಾಡಲಾಪೆಯಾ?—ಎನಲು, ದಮನಕವು ಬುದ್ಧಿಗೆ ಅಸಾಧ್ಯವಾದುದುಂಟೆ?—ಎಂದು, ಇಂತೆಂದಿತು:—

ಸೊಗಯಿಪ ಬುದ್ಧಿಯ ಬಲದಿಂ |
ಮಿಗೆ ಕಜ್ಜಂ ಫಲಿಸುವಂತೆ ಫಲಿಸದುಗಡ ಕೈ ||
ದುಗಳಿಂ ಮತ್ತಂ ಪೇರಾ |
ನೆಗಳಿಂ ಕುದುರೆಗಳಿನಂಕು ಕಾಲಾಳ್ಗಳಿನಂ ||೧೪೬||

ಪಿಂಗಲಕವೆಂದಿತು:—ಈ ಕಾರ್ಯವು ನಿನ್ನಿಂದ ನೆರವೇರಿದುದಾದರೆ ಮಂತ್ರಿಪದವಿಯನ್ನು ಕೊಡುವೆನು. ಇಂದು ಮೊದಲುಗೊಂಡು ನಿಗ್ರಹಾನುಗ್ರಹಗಳನ್ನು ನೀನೇ ಮಾಡತಕ್ಕುದೆಂದು ನಿಶ್ಚಯಮಾಡಿರುವೆನು.

ಬಳಿಕ ದಮನಕವು ಥಟ್ಟನೆ ಹೋಗಿ ಆ ಬಸವನಂ ಕುರಿತು ಆಕ್ಷೇಪದಿಂದ ಇಂತೆಂದಿತು:—ಎಲೆ ದುರುಳಬಸವ ! ಬಾಬಾ. ಸ್ವಾಮಿ ಪಿಂಗಲಕನು ನಿನ್ನನ್ನು ಕರೆತರಬೇಕೆಂದು ಹೇಳಿರುವನು. ಅದೇನು ಸ್ವಲ್ಪವೂ ಅಳುಕದೆ ಅಡಿಗಡಿಗೂ ಸುಮ್ಮನೆ ಕೂಗಿಕೊಳ್ಳುವೆ?

ಸಂಜೀವಕವು ಆ ನುಡಿಯನ್ನು ಕೇಳಿ ಪ್ರಿಯನೆ! ಪಿಂಗಲಕನು ಯಾವನು? ಎನಲು, ದಮನಕವು-ಏನೆಲೆವೊ! ಸ್ವಾಮಿಯಾದ ಪಿಂಗಲಕನನ್ನೂ ಅರಿಯೆಯಾ? ತಕ್ಕ ಫಲವನ್ನನುಭವಿಸಿದಮೇಲೆ ಅರಿವೆ. ಅದುವರೆಗೆ ಒಂದು ಕ್ಷಣ ನಿರೀಕ್ಷಿಸು. ಈ ವಟವೃಕ್ಷದ ಕೆಳಗೆ ಸ್ವಾಮಿಯಾದ ಪಿಂಗಲಕನೆಂಬ ಮೃಗೇಂದ್ರನು ಸಕಲಮೃಗಪರಿವೃತನಾಗಿರುವನಲ್ಲವೆ. ?

ಸಂಜೀವಕವು ಅದನಾಲಿಸಿ, ತನಗೆ ಆಯುಸ್ಸು ತೀರಿತೆಂದು ತಿಳಿದು, ಬಹುವಾಗಿ ದುಗುಡಗೊಂಡು ಇಂತೆಂದಿತು :—ಅಯ್ಯಾ ! ನೀನು ಘನವಾದ ನಡೆತೆಯುಳ್ಳವನಾಗಿಯೂ ಮಾತಿನಲ್ಲಿ ಚದುರನಾಗಿಯೂ ಕಾಣುವೆ. ಅವಶ್ಯವಾಗಿ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿ, ಸ್ವಾಮಿ ಅಭಯವಿತ್ತು ನನ್ನಲ್ಲಿ ಅನುಗ್ರಹಿಸುವಂತೆ ಮಾಡಬೇಕು—ಎನಲು, ದಮನಕವು— ಅಯ್ಯಾ ! ನೀನು ಸತ್ಯವಾದ ಮಾತನಾಡಿದೆ. ಇದು ನೀತಿ. ಏಕೆಂದರೆ:—

ಧರಣಿಯ ಜಲಧಿಯ ಶಿಖರಿಯ |
ಪರಿಯಂತಮನಱಿಯಲಕ್ಕುಮದನೆಂತಾನುಂ ||
ನರಪಾಲನ ಮಾನಸದಂ |
ತರಮನದಾವಂಗಮಱಿಯಲೆಂತುಮಶಕ್ಯಂ ||೧೪೭||

ಆದಕಾರಣ ನಾನು ಹೋಗಿ ತಕ್ಕಸಮಯವರಿತು ಸ್ವಾಮಿಯಂ ಕಂಡು ಮತ್ತೆ ಬರುವೆನು. ಅದುವರೆಗೂ ನೀನು ಇಲ್ಲಿಯೇ ಇರು— ಎಂದು ನುಡಿದು ಪಿಂಗಲಕದ ಬಳಿಗೆ ಹೋಗಿ ಇಂತೆಂದಿತು :—ಸ್ವಾಮಿ ! ಅದು ಸಾಧಾರಣಪ್ರಾಣಿಯಲ್ಲ. ಪೂಜ್ಯನಾದ ಪರಮೇಶ್ವರನ ವಾಹನಭೂತನಾದ ಬಸವನು. ನಾನು ಬೆಸಗೊಂಡುದಕ್ಕೆ—ಸಂತುಷ್ಟನಾದ ಮಹೇಶನು ನನಗೆ ಯಮುನಾತೀರದಲ್ಲಿ ಗರಿಕೆಗಳನ್ನು ತಿಂದುಕೊಂಡಿರುವಂತೆ ಅಪ್ಪಣೆಮಾಡಿರುವನು. ಹೆಚ್ಚುಮಾತಿನಿಂದೇನು ? ಮಹಾದೇವನು ನನಗೆ ಕ್ರೀಡಾರ್ಥವಾಗಿ ಈ ವನವನ್ನು ದಯಪಾಲಿಸಿರುವನು—ಎಂದನು.

ಪಿಂಗಲಕವು ಭಯಗೊಂಡು ಇಂತೆಂದಿತು :—ದಿಟವಾಗಿಯೂ ಈಗ ನನಗೆ ಗೊತ್ತಾಯಿತು. ಗರಿಕೆಗಳನ್ನು ತಿನ್ನುವ ಪಶುಗಳು ದುಷ್ಟಮೃಗ ಪರಿವೃತವಾದ ಇಂತಹ ಕಾಡಿನಲ್ಲಿ ದೇವತಾನುಗ್ರಹವಿಲ್ಲದೆ ನಿರ್ಭಯವಾಗಿ ಕೂಗುತ್ತ ತಿರುಗವು. ಆಯಿತು ; ಆಮೇಲೆ ನೀನೇನೆಂದೆ ?

ದಮನಕವೆಂದಿತು :—ಒಡೆಯನೆ ! ನಾನು—ಈ ವನವು ಚಂಡಿಕಾದೇವಿಯ ವಾಹನಭೂತನೂ ನಮ್ಮೊಡೆಯನೂ ಆದ ಪಿಂಗಲಕನೆಂಬ ಮೃಗರಾಜನಿಗೆ ಸಂಬಂಧಪಟ್ಟುದು. ನೀನು ಪ್ರಿಯನಾದ ಅತಿಥಿಯಾಗಿ ಬಂದಿರುವೆ. ಆತನಲ್ಲಿಗೆ ಹೋಗಿ ಸೋದರಸ್ನೇಹದಿಂದ ಕೂಡಿ ಬಂದೆಡೆಯಲ್ಲಿ ಇರುತ್ತ, ಊಟ ಆಟ ಮುಂತಾದುವುಗಳಿಂದ ಕಾಲವಂ ಕಳೆಯಬೇಕು—ಎಂದು ಹೇಳಿದೆ. ಅದಕ್ಕೆ ಅವನು ಆಗಲೆಂದು ಎಲ್ಲವನ್ನೂ ಒಪ್ಪಿದನು. ಮತ್ತು ಸಂತೋಷಗೊಂಡು ಸ್ವಾಮಿಯ ಸನ್ನಿಧಿಯಲ್ಲಿ ನನಗೆ ಅಭಯದಕ್ಷಿಣೆಯನ್ನು ಕೊಡಿಸಬೇಕೆಂದನು. ಇದರಮೇಲೆ ಸ್ವಾಮಿಗೆ ತೋರಿದಂತೆ ನಡೆಯಿಸಬಹುದು.

ಪಿಂಗಲಕವು ಅದನಾಲಿಸಿ, ಭಾಪು ಸುಮತಿಯೆ ! ಭಾಪು ! ಮಂತ್ರಿವರ್ಯನೆ ಭಾಪು ! ನನ್ನ ಅಭಿಪ್ರಾಯಕ್ಕೆ ತಕ್ಕಂತೆ ಆಲೋಚಿಸಿ ನೀನು ಈ ಮಾತನಾಡಿದೆ. ಇದೊ ನಾನು ಅವನಿಗೆ ಅಭಯದಕ್ಷಿಣೆಯನ್ನು ಕೊಟ್ಟರುವೆನು. ಆದರೆ ನನ್ನ ವಿಷಯದಲ್ಲಿ ಅವನೂ ಅಭಯದಕ್ಷಿಣೆಯನ್ನು ಕೊಡಬೇಕೆಂದು ಬೇಡಿ ಆತನನ್ನು ಥಟ್ಟನೆ ಕರೆದುಕೊಂಡು ಬಾ. ಇದು ಯುಕ್ತವಾದ ಮಾತು :—

ತವೆ ಸಾರಮನೊಳಕೊಂಡುದು |
ಮವಕ್ರಮಚ್ಛಿದ್ರ ಮುಜ್ಜಿ ಪರೀಕ್ಷಿತಮೆನಲೊ ||
ಪ್ಪುವ ಮಂತ್ರಿಕುಲದೆ ರಾಜ್ಯಂ |
ಭವನಂ ನಲ್ಗಂಬಸಾಲಿನಿಪ್ಪವೊಲಿರ್ಕ್ಕುಂ ||೧೪೮||

ಅಲ್ಲದೆ :—

ಒದವಿದ ಭೇದದೆ ಮಂತ್ರಿಯ ||
ಚದುರುಂ ಸನ್ನಿಜರಮಡಸೆ ಬೆಜ್ಜನ ಜಾಣುಂ ||
ಏದಿತಮೆನಿಕ್ಕುಂ ಬಗೆವೊಡೆ |
ಪದುಳದಿನಿರ್ಪಂದದಾವಸ್ನೈ ಬುಧನೆನಿಸಂ ||೧೪೯

ದಮನಕವೂ ಪಿಂಗಲಕವಂ ವಂದಿಸಿ ಸಂಜೀವಕದ ಬಳಿಗೆ ಹೊರಟಿತು. ಮನದಲ್ಲಿ ಸಂತೋಷಿಸಿ ಇಂತು ಆಲೋಚಿಸಿತು:—ಅಹಹ! ನವ್ಮೊಡೆಯನು ಪ್ರಸನ್ನನಾಗಿರುವನು. ಅಲ್ಲದೆ ಮಾತಿಗೆ ಕಟ್ಟುಬಿದ್ದಿರುವನು. ಆದಕಾರಣ ನನ್ನಂತಹ ಧನ್ಯನಾವನೂ ಇಲ್ಲ. ಇದು ಯುಕ್ತವಾದ ಮಾತು :—

ಅಮೃತಂ ಪಾವಕನುಂ ಹಿಮ |
ಸಮಯದೆ ಮೇಣಮೃತ ಮಿಷ್ಟಜನದಾಲೋಕಂ||
ಕ್ಷಮೆಯೊಳ್ಮಾನ ಸನ್ಮಾನಮು |
ಮಮೃತಂ ಮೇಣಮೃತ ಮೆನಿಪುದಿನಿವಾಳೂಟಂ ||೧೫೦||

ಎಂದು ಸಂಜೀವಕದ ಬಳಿಗೆ ಬಂದು ವಿನಯದಿಂ ಕೂಡಿ ಇಂತೆಂದಿತು :—ಎಲೆ ಕೆಳೆಯ! ಅಭಯುವಂ ಕರುಣಿಸಬೇಕೆಂದು ಸ್ವಾಮಿಯಂ ಬೇಡಿಕೊಂಡಿರುವೆನು. ಆದರಿಂದ ನೀನು ಅಳುಕದೆ ಹೊರಡು. ಆದರೆ ಒಡೆಯನ ಒಲ್ಮೆಯಂ ಸಂಪಾದಿಸಿದ ಬಳಿಕ ನೀನು ನನ್ನ ವಿಷಯದಲ್ಲಿ ನಿಬಂಧನೆಗೆ ತಕ್ಕಂತೆ ನಡೆದುಕೊಳ್ಳಬೇಕು. ಪ್ರಾಭವ ಬಂದಿತೆಂದು ಕೊಬ್ಬಿ ನಡೆಯಲಾಗದು. ನಾನೂ ಮಂತ್ರಿಪದವಿಯಲ್ಲಿ ಇದ್ದುಕೊಂಡು ಸಂಕೇತದಿಂದ ನಿನಗೆ ರಾಜ್ಯಭಾರವೆಲ್ಲವನ್ನೂ ವಹಿಸಿಕೊಡುವೆನು. ಈ ರೀತಿ ಮಾಡುವುದರಿಂದ ನಾವಿಬ್ಬರೂ ರಾಜ್ಯಲಕ್ಷ್ಮಿಯನ್ನು ಅನುಭವಿಸಬಹುದು. ಏಕೆಂದರೆ : -

ಪ್ರೇರಿಸಲೊರ್ವಂ ಬೇಂಟೆಯೊ |
ಳಾರಯ್ದು ಪೆಱಂ ಮಿಗಂಗಳಂ ಸಾಧಿಪವೋಲ್ ||
ಪ್ರೇರಣೆಯಂ ಗೆಯಲೊರ್ವ್ವಂ |
ಪೂರುಷನಿನ್ನೊರ್ವನರ್ಥಮಂ ಸಾಧಿಸುವಂ ||೧೫೧||

ಅಲ್ಲದೆ :—

ಉತ್ತಮರಂ ಮಧ್ಯಮರಂ |
ಮತ್ತಧಮರನಾವನುಕ್ಕಿನಿಂದೊಲಿಸನೊ ಭೂ ||

ಪೋತ್ತಮಸೊಲವಿಂ ಮಾನ್ಯತೆ |
ವೆತ್ತಿರ್ದ್ದಂ ದಂತಿಲಂಬೊಲಾತಂ ಕಿಡುಗುಂ ||೧೫೩||

ಸಂಜೀವಕವು ಇದು ಎಂತೆನಲು, ಅದು ಇಂತೆಂದಿತು :—

ಕಥೆ. ೩.

ಈ ಭೂಮಿಯಲ್ಲಿ ವರ್ಧಮಾನವೆಂಬ ಒಂದು ಪಟ್ಟಣವುಂಟು. ಅಲ್ಲಿ ಬಗೆಬಗೆಯ ಬೆಲೆಯ ವಸ್ತುಗಳೊಡೆಯನೂ ಪಟ್ಟಣದ ಎಲ್ಲಾಕಾರ್ಯಗಳ ನಿರ್ವಾಹಕನೂ ಆದ ದಂತಿಲನೆಂಬವನಿದ್ದನು. ಪುರಕಾರ್ಯವನ್ನೂ ರಾಜಕಾರ್ಯವನ್ನೂ ನಿರ್ವಹಿಸುತ್ತಿದ್ದ ಆತನಿಂದ ಆಪುರದ ಜನಗಳೂ ರಾಜನೂ ಸಂತೋಷಗೊಂಡಿದ್ದರು. ಹೆಚ್ಚು ಮಾತಿನಿಂದೇನು? ಅಂತಹ ಕಾರ್ಯದಕ್ಷನನ್ನು ಯಾವನೂ ಎಲ್ಲಿಯೂ ನೋಡಿಲ್ಲ; ಕೇಳಿಲ್ಲ. ಇದು ಯುಕ್ತವಾದ ಮಾತು :—

ಜನಪತಿಗೊಳ್ಳಿತಂ ನೆಗ್ಟ್ಬಿವಂ ಜನದಲ್ಲಿ ವಿರೋಧಿಯಾದಪಂ |
ಜನತತಿಗೊಳ್ಳಿತಂ ನೆಗ್ಟ್ಬಿವಂ ತೊಱೆಯಲ್ಪಡುಗುಂ ಜನೇಶನಿಂ |
ಅನುಗೊಳುತಿಂತು ಒಂದೊದವೆ ವೆಗ್ಗಳಮಾದ ವಿರೋಧವಕ್ಕಟಾ |
ಜನಪತಿಗಂ ಜನಕ್ಕಮನುಕೂಲತೆಯಂ ರಚಿಪಂ ಸುದುರ್ಲಭಂ ||೧೫೪||

ಇಂತಿರಲು, ಒಂದುಕಾಲದಲ್ಲಿ ದಂತಿಲನಿಗೆ ಮದುವೆಯಾಯಿತು. ಆ ಮದುವೆಯಲ್ಲಿ ಆತನು ಎಲ್ಲಾಪುರನಿವಾಸಿಗಳನ್ನೂ ಆಸ್ಥಾನದ ಜನಗಳನ್ನೂ ಸನ್ಮಾನಪೂರ್ವಕವಾಗಿ ಬರಮಾಡಿಕೊಂಡು ಭೋಜನವಂ ಮಾಡಿ ಉಡುಗೊರೆಗಳಿಂದ ಸತ್ಕರಿಸಿದನು. ಮದುವೆಯಾದಮೇಲೆ ರಾಜನು ಅಂತಃಪುರದವರೊಡಗೂಡಿ ಆ ದಂತಿಲನನ್ನು ಅರಮನೆಗೆ ಕರೆಯಿಸಿ ಸನ್ಮಾನಿಸಿದನು.

ಆ ರಾಜನ ಮನೆಯಲ್ಲಿ ಸಂಮಾರ್ಜನಕಾರ್ಯವನ್ನು ಮಾಡಿಕೊಂಡಿದ್ದ ಗೋರಂಭನೆಂಬ ಸೇವಕನು ಒಂದುದಿನ ದಂತಿಲನ ಮನೆಗೆ ಬಂದು

ಅನುಚಿತವಾದ ಸ್ಥಾನದಲ್ಲಿ ಕುಳಿತುಕೊಂಡನು. ದಂತಿಲನು ತಿರಸ್ಕರಿಸಿ ಕೈಕೊಟ್ಟು ನೂಕಿದನು. ಗೋರಂಭಕನೂ ಅಪಮಾನಗೊಂಡು ಅಂದಿನಿಂದ ವ್ಯಸನಾಕ್ರಾಂತನಾಗಿ ನಿಟ್ಟುಸಿರುಬಿಡುತ್ತ ರಾತ್ರಿಕಾಲದಲ್ಲಿಯೂ ಮಲಗದೆ “ಈ ದಂತಿಲನಿಗೆ ನಾನು ಎಂತು ಅರಸನ ಪ್ರಸಾದವನ್ನು ತಪ್ಪಿಸಲಿ” ಎಂದು ಚಿಂತಿಸುತ್ತ ಒಂದುದಿನ, “ಅಥವಾ ಶರೀರಶೋಷಕವಾದ ಈ ಬರಿಯ ಚಿಂತೆಯಿಂದಲೂ ಕೋಪದಿಂದಲೂ ಏನು ? ಅವನಿಗೆ ಅಪಕಾರಮಾಡುವುದು ನನ್ನಿಂದ ಸಾಧ್ಯವಲ್ಲ. ಇದು ಯುಕ್ತವಾದಮಾತು :—

ಬಿಡದೆ ಪೆಱಂಗಪಕಾರಮ |
ನೊಡರಿಸಲಾಱದವನೇಕೆ ತಾಂ ಮುಳಿದಪನೋ ||
ಕಡುನೆಗೆದು ಬಿಱಿರ್ದೊಡಂ ಪೇಱ್ |
ಕಡಲೆಯುದೇಸೊಡೆಯುಲಾರ್ಪುದೇ ಹುರಿವೋಡಂ ||೧೫೪||

ಎಂದು ಆಲೋಚಿಸಿ ಮತ್ತೊಂದು ದಿವಸ ಪ್ರಾತಃಕಾಲದಲ್ಲಿ ಅರಸು ಯೋಗನಿದ್ರೆಯಲ್ಲಿರುವಾಗ ಹಾಸಿಗೆಯ ಹತ್ತಿರ ಗುಡಿಸುತ್ತ ಇಂತೆಂದನು:— ಅಬ್ಬಾ ! ದಂತಿಲನ ಕೊಬ್ಬು ಎಂತಹುದೊ ! ರಾಜನ ಪಟ್ಟದ ರಾಣಿಯನ್ನೂ ಆಲಿಂಗಿಸಿಕೊಳ್ಳುವನು.

ಅರಸನು ಆ ನುಡಿಯನಾಲಿಸಿ ಥಟ್ಟನೆ ಎದ್ದು ಆ ಗೋರಂಭನನ್ನು ಕುರಿತು—ಎಲೆಲವೊ ಗೋರಂಭ ! ನೀನು ನುಡಿದ ನುಡಿ ಸತ್ಯವೇ ? ದೇವಿ ದಂತಿಲನಿಂದ ಆಲಿಂಗಿಸಲ್ಪಟ್ಟಳೇ ?

ಗೋರಂಭನು ಇಂತೆಂದನು :—ಪ್ರಭುವೆ ! ಜೂಜಾಡಿ ರಾತ್ರಿಯೆಲ್ಲವೂ ಎಚ್ಚರಗೊಂಡಿದ್ದ ನನಗೆ ನಿದ್ರೆ ಬಲಾತ್ಕಾರದಿಂದ ಬಂದಿತು. ನಾನು ಏನುಮಾತನಾಡಿದೆನೋ ತಿಳಿಯೆ.

ಅರಸನು ಸಹಿಸದೆ ತನ್ನಲ್ಲಿ—ಈ ಗೋರಂಭನಿಗೆ ಅರಮನೆಯಲ್ಲಿ ಎಲ್ಲಿಯೂ ತಡೆಯಿಲ್ಲ. ದಂತಿಲನಿಗೂ ಅಂತೆಯೆ. ಯಾವುದಾದರೂ ಒಂದು

ಸಮಯದಲ್ಲಿ ದಂತಿಲನು ದೇವಿಯನಾಲಿಂಗಿಸಿಕೊಳ್ಳುತ್ತಿದ್ದುದನ್ನು ಈ ಗೋರಂಭನು ನೋಡಿರಬಹುದು. ಆದರಿಂದ ಈಮಾತನಾಡಿದನು. ಇಂತು ಹೇಳಿಯೂ ಇದೆ.

ಮನುಜಂ ಪಗಲಿನೊಳೇನಂ |
ಮನದೊಳ್ ಬಯಸುವನೊ ನೋಳ್ಪನೋ ವಿರಚಿಪನೋ ||
ತನಗಾದವಱಭ್ಯಾಸದೆ |
ಕನಸಿನೊಳಂ ನುಡಿವನದನೆ ಮೇಣ್ ವಿರಚಿಸುವಂ ||೧೫೫||

ಅಲ್ಲದೆ :—

ಎನಸುಂ ನಲ್ಲದೊ ಪೊಲ್ಲದೊ |
ಮನುಜರ ಮಾನಸದೆ ಭಾವಮೇನಿರ್ದಪುದೋ ||
ಕನಸಿನ ನುಡಿಯಿಂ ಮೇಣ್ ಸೊ |
ರ್ಕಿನಿಂದೆ ತಿಳಿಯಲ್ಕೆ ಬರ್ಪುದದು ಬೈತಿರೆಯುಂ ||೧೫೬||

ಅಥವಾ ಸ್ತ್ರೀಯರೆಲ್ಲರನ್ನೂ ನಂಬುವುದೆಂತು ?

ಆವುದು ಶಂಬರಮಾಯೆಯ |
ದಾವುದು ನಮುಚಿಯದು ಬಲಿಯದಾವುದು ಮತ್ತಂ ||
ಆವುದು ಕುಂಭೀನಸಿಯದು |
ತಾವಾಮಾಯೆಗಳನೈದೆ ಬಲ್ಲರ್ ಪೆಣ್ಗಳ್ ||೧೫೭||

ನಗುತಿರ್ಪರೊಡನೆ ತಾವುಂ |
ನಗುವರಳುತ್ತಿರ್ಪರೊಡನೆಯಳ್ವರ್ ತಾವುಂ ||
ಮೃಗನೇತ್ರೆಯರೊಲ್ಲದನಂ |
ಮಿಗೆಯೊಲಿಪರ್ ಸಮಯವೊದವೆ ಸವಿಮಾತುಗಳಿಂ ||೧೫೮||

ಕವಿಯಾವುದನಱಿವಂ ಶಾ |
ಸ್ತ್ರವನಮರಾಚಾರ್ಯನಾವ ಶಾಸ್ತ್ರಮನಱಿಪಂ ||

ಅವನಿಯೊಳಂಗನೆಯರ ಮತಿ |
ಗವು ಮಿಂಚಿದುವಲ್ತದೆಂತೊ ರಕ್ಷಿಪುದವರಂ ||೧೫೯||
ಪುಸಿನುಡಿಯಂ ದಿಟವೆನುತುಂ |
ಪುಸಿನುಡಿಯೆಂದೆನುತೆ ದಿಟಮನಾರೊರೆದಪರೋ ||
ವಸುಮತಿಯೊಳ್ ತಿಳಿವುಳ್ಳರ್ |
ಬಿಸಜದಳಾಕ್ಷಿಯರನವರನೋವುವುದೆಂತೋ ||೧೬೦||
ಇಳೆಯೊಳ್ ಪೆಣ್ಗಳ್ ಮೋಹಂ |
ಗೊಳಿಪರ್ ಸೊಕ್ಕಿಸುವರಣಕಿಪರ್ ತರ್ಜಿಸುವರ್ ||
ಅೞಲಿಪರಾಡಿಪರೇನೇ |
ನೆಳವಡಿಸರೊ ಪೊಕ್ಕು ನರರ ಮೆಲ್ಪಿನ ಮನಮಂ ||೧೬೧||
ನಂಜಿನ ರೂಪಾಂತೊಳಗತಿ |
ಮಂಜುಲವಿಭ್ರಮದೆ ಪೊೞಗೆ ತಾಂ ತೋಱುತ್ತುಂ ||
ಗುಂಜಾಫಲದಂತಿರೆ ಪರಿ |
ರಂಜಿಪ ಪೆಣ್ಗಳನದಾವನಿರದೆಸಗಿದನೋ ||೧೬೨||

ಎಂದು ಹಲವುತೆರದಿಂದ ಹಂಬಲಿಸಿ ಅಂದು ಮೊದಲುಗೊಂಡು ದಂತಿಲನ ವಿಷಯದಲ್ಲಿ ಅಪರಕ್ತನಾಗಿದ್ದನು. ಹೆಚ್ಚೇಕೆ? ಅರಮನೆಯ ಬಾಗಿಲಿಗೂ ಬರಲಾಗದೆಂದು ದಂತಿಲನು ತಡೆಯಲ್ಪಟ್ಟನು.

ದಂತಿಲನೂ ಇಂತು ಆಕಸ್ಮಿಕವಾಗಿ ಅರಸನು ಅಪರಕ್ತನಾದುದನ್ನು ಕಂಡು ತನ್ನಲ್ಲಿ ಇಂತೆಂದನು :—ಅಹಹ! ಇದು ಯುಕ್ತವಾದ ಮಾತು :—

ಮದಿಸಂ ಶ್ರೀವಡೆದಾವನ್ಯೆದೆ ವಿಷಯಾಸಕ್ತಂಗದಾವಂಗೆ ಪೋ |
ದುದೆಡಱ್ ಪೆಣ್ಗಳಿನಾರ ಬುದ್ಧಿ ಹೃತವಲ್ತಾವಂ ನೃಪರ್ಗಿಷ್ಟನಾ ||
ಸ್ಪದವಲ್ತಂತಕನಕ್ಷಿಗಾವನೆರೆವಂಗಾವಂಗೆ ಪೆಂಪೊಳ್ಪನೈ |
ದಿದನಾವಂ ಖಳಸಂಗಮೆಂಬ ಬಲೆಯೊಳ್ ಬಿೞ್ದಂ ನರಂಲೋಕದೊಳ್||೧೬೩||

ಅಲ್ಲದೆ :—

ಪರಿಶುದ್ಧಿ ಕಾಗೆಯೊಳ್ ದಿಟ |
ಪೊರೆವುದು ಜೂದುಗಗನೊಳುರಗನೊಳ್ ಕ್ಷಮೆ ಧೃತಿ ಕಾ ||
ತರನೊಳ್ ಕುಡಿವನೊಳಱಿವರ |
ಸರೊಳಂ ದೃಢಮೈತ್ರಿ ಕಂಡುಕೇಳ್ದುದುಮುಂಟೇ ||೧೬೪||

ನಾನು ಈ ರಾಜನಿಗಾಗಲಿ ಈತನ ಕಡೆಯುವನಾದ ಮತ್ತಾವನಿಗಾಗಲಿ ಕನಸಿನಲ್ಲಿಯೂ ಕೇಡನ್ನು ಬಗೆದವನಲ್ಲ. ಆದರೂ ಇದೇನು? ಅರಸನು ನನ್ನ ಮೇಲೆ ಅಪರಾಗವುಳ್ಳವನಾಗಿರುವನು.—ಎಂದು ಚಿಂತಿಸಿದನು.

ಇಂತಿರಲು, ಒಂದುದಿವಸ ಅರಮನೆಯ ಬಾಗಿಲಲ್ಲಿ ದಂತಿಲನಿಗೆ ಉಂಟಾದ ತಿರಸ್ಕಾರವನ್ನು ಸಂಮಾರ್ಜನಕಾರ್ಯದ ಗೋರಂಭನು ಕಂಡು ನಕ್ಕು ದ್ವಾರಪಾಲಕರನ್ನು ಕುರಿತು ಇಂತೆಂದನು :—

ಎಲೆ ದ್ವಾರಪಾಲಕರಿರ! ಈ ದಂತಿಲನು ರಾಜನ ಕಟಾಕ್ಷಕ್ಕೆ ಪಾತ್ರವಾದವನು. ತಾನೇ ನಿಗ್ರಹಾನುಗ್ರಹಗಳನ್ನು ಮಾಡತಕ್ಕವನು. ಈತನನ್ನು ನೀವು ತಡೆದರೆ ನನಗಾದಂತೆ ನಿಮಗೂ ಅರ್ಧಚಂದ್ರಪ್ರಯೋಗವಾಗದಿರದು

ದಂತಿಲನು ಆಮಾತನಾಲಿಸಿ ತನ್ನಲ್ಲಿ ಇಂತೆಂದನು :—ದಿಟವಾಗಿ ಇದು ಈ ಗೋರಂಭನ ಚೇಷ್ಟೆ. ಇದು ಯುಕ್ತವಾದಮಾತು :—

ಕುಲಹೀನನಾದೊಡಂ ಗಾ |
ವಿಲನಾದೊಡಮಃಹಕ ಮಾನ್ಯನಲ್ಲದೊಡಂ ಭೂ ||
ಕಲದೊಳದಾವಂ ನೃಪತಿಯ |
ನೊಲವಿಂ ಸೇವಿಪನೊ ಪೂಜ್ಯನವನೆಲ್ಲಗ್ಗಂ ||೧೬೫||

ಭೂಪನ ಸೇವಿಪನಾವಂ |
ಕಾಪುರುಷಂ ಮತ್ತೆ ಪಂದೆಯೆಂದೆಸಿಸಿದೊಡಂ ||
ಆಪುರುಷಂ ಜನದತ್ತಣಿ |
ನೀಪೊಡವಿಯೊಳೊಂದನಲ್ತೆ ತಾನೇಳಿದಮಂ ||೧೬೬||

ಎಂದು ಬಹುವಿಧವಾಗಿ ವಿಲಪಿಸಿ ಮನದಲ್ಲಿ ಅಚ್ಚರಿಗೊಂಡು ದುಃಖಿಸುತ್ತ ನಿಸ್ತೇಜಸ್ಕನಾಗಿ ತನ್ನ ಮನೆಗೆ ಬಂದು ಸಾಯಂಕಾಲ ಗೋರಂಭನನ್ನು ಕರೆಯಿಸಿ ಉಡುಗೊರೆಯಾಗಿ ಎರಡು ವಸ್ತ್ರಗಳನ್ನು ಕೊಟ್ಟು ಅವನಂ ಕುರಿತು—ಅಯ್ಯಾ ! ನೀನು ಆದಿವಸ ನಮ್ಮ ಮನೆಗೆ ಬಂದಿದ್ದಾಗ ನಾನು ಬಿಂಕದಿಂದ ನಿನ್ನನ್ನು ಹೊರಗೆ ಕಳುಹಿಸಲಿಲ್ಲ. ನೀನು ಬ್ರಾಹ್ಮಣರ ಮುಂದೆ ಅಯೋಗ್ಯವಾದ ಕಡೆಯಲ್ಲಿ ಕುಳಿತುಕೊಂಡುದನ್ನು ನಾನು ಕಂಡು ಅಪಮಾನಮಾಡಿದೆನು. ಅದನ್ನು ನೀನು ಕ್ಷಮಿಸು—ಎನಲು, ಅವನು ಆ ಯೆರಡು ವಸ್ತ್ರಗಳು ತನಗೆ ದೊರೆತುದನ್ನು ರಾಜ್ಯಲಾಭಕ್ಕೆ ಸಮವಾಗಿ ಎಣಿಸಿ ಬಹುವಾಗಿ ಸಂತೋಷಗೊಂಡು ಆತನಂ ಕುರಿತು—ಅಯ್ಯಾ ಸೆಟ್ಟಿ ! ಆಗ ನೀನು ಮಾಡಿದ ಅಪಮಾನವನ್ನು ಮನ್ನಿಸಿರುವೆನು. ಈಗ ನೀನು ಮಾಡಿದ ಬಹುಮಾನಕ್ಕೋಸ್ಕರ ಸಂತೋಷಗೊಂಡಿರುವೆನು. ನನ್ನ ಬುದ್ಧಿಯ ಪ್ರಭಾವವನ್ನೂ ಅರಸನ ಹಸಾದವನ್ನೂ ನೋಡು——ಎಂದು ಹೇಳಿ ಸಂತುಷ್ಟನಾಗಿ ಹೊರಟುಹೋದನು. ಯುಕ್ತಿಯಿದು :—

*
ಅಡಗರ್ಗಂ ಮೇಲಣ್ಗಲ್ಪದೆ |
ಪಡೆಗುಮಧೋಗತಿಯನಲ್ಪದಿಂದಮೆ ಎನೆ ತ ||
ಕ್ಕಡಿಗೋಲ ಮೇಣ್ ದುರಾತ್ಮನ |
ನಡೆವಳಿ ನೋಡಲ್ಕೆ ನಾಡೆ ಸರಿಸಮಮಕ್ಕುಂ ||೧೬೭||

ಬಳಿಕ ಮತ್ತೊಂದುದಿವಸ ಆ ಗೋರಂಭನು ಅರಮನೆಗೆ ಹೋಗಿ ಅರಸು ಯೋಗನಿದ್ರೆಯಲ್ಲಿ ಇರುವಾಗ ಸಂಮಾರ್ಜನಕಾರ್ಯವಂ ಮಾಡುತ ಇಂತೆಂದನು :—ಅಹಹ ! ನಮ್ಮರಸಿನದು ಅವಿವೇಕವು. ಅದೇನೆಂದರೆ—ಪುರೀಷೋತ್ಸರ್ಜನಕಾಲದಲ್ಲಿ ಸೌತೆಕಾಯಿತಿನ್ನುವನು.

ಅರಸು ಆಮಾತಂ ಕೇಳಿ ಅಚ್ಚರಿಗೊಂಡು ಅವನಂ ಕುರಿತು—ಎಲೆ ಎಲೆ ಗೋರಂಭ ! ಇದೇನು ಅಪ್ರಸಕ್ತವಾದ ಮಾತನಾಡುವೆ ? ಅರಮನೆಯ

ಕೆಲಸಗಾರನೆಂದು ನಿನ್ನನ್ನು ಕೊಲ್ಲದೆ ಬಿಟ್ಟಿರುವೆನು. ನಾನು ಅಂತಹ ಕೆಲಸವಂ ಮಾಡುತ್ತಿದ್ದುದನ್ನು ನೀನು ಕಂಡೆಯಾ?—ಎನಲು, ಅವನು—ಪ್ರಭುವೆ! ಜೂದಾಟದಿಂದ ರಾತ್ರಿ ಎಚ್ಚರಗೊಂಡಿದ್ದು ಈಗ ಕೆಲಸಮಾಡುತ್ತಿದ್ದ ನನಗೆ ಬಲಾತ್ಕಾರದಿಂದ ನಿದ್ರೆ ಬಂದಿತು. ಈ ಅವಸ್ಥೆಯಿಂದ ಏನನೋ ಮಾತನಾಡಿದೆ. ನಾನು ಆವಿಷಯವನರಿಯೆನು. ನಿದ್ರಾಪರವಶನಾದ ನನ್ನ ವಿಷಯದಲ್ಲಿ ಸ್ವಾಮಿಯು ಅನುಗ್ರಹವಂಮಾಡಬೇಕು—ಎಂದನು.

ಅರಸು ಈಮಾತಂ ಕೇಳಿ ನಾನು ಜನ್ಮಾಂತರದಲ್ಲಿಯೂ ಯಾವಾಗಲೂ ಪುರೀಷೋತ್ಸರ್ಜನದ ಕಾಲದಲ್ಲಿ ಸೌತೆಕಾಯಿ ತಿಂದವನಲ್ಲ. ಇಂತಹ ಅಸಂಭಾವ್ಯವಾದ ಸಂಗತಿಯನ್ನು ನನ್ನ ವಿಷಯದಲ್ಲಿ ಅವಿವೇಕಿಯಾದ ಇವನು ಆಡಿದನು. ದಂತಿಲನ ವಿಷಯದಲ್ಲಿ ಇವನಾಡಿದುದೂ ಅಸಂಭಾವಿತವಾದುದೇ ಸರಿ. ಅಯ್ಯೋ! ನಾನುಮಾಡಿದುದು ತಪ್ಪು. ಆತನಿಗೆ ಆಗುತ್ತಿದ್ದ ಸನ್ಮಾನವಂ ತಪ್ಪಿಸಿದೆನು. ಅಂತಹ ಮನುಷ್ಯರು ಇಂತಹ ಅನುಚಿತವಾದ ಕೆಲಸಗಳನ್ನು ಎಂದಿಗೂ ಮಾಡರು. ಆತನಿಲ್ಲದುದರಿಂದ ರಾಜ್ಯಕಾರ್ಯಗಳೂ ಪುರಕಾರ್ಯಗಳೂ ಸಡಲಿಹೋಗುತಿರುವುವು.—ಎಂದು ಬಹುವಿಧವಾಗಿ ಪರಿಚಿಂತಿಸಿ ದಂತಿಲನನ್ನು ಕರೆಯಿಸಿ ತಾನು ಧರಿಸತಕ್ಕ ವಸ್ತ್ರಾಭರಣಗಳನ್ನು ಕೊಟ್ಟು ಆತನ ಅಧಿಕಾರದಲ್ಲಿ ಸೇರಿಸಿದನು. ಇದರಿಂದ ನಾನುಹೇಳುವೆನು:—
" ಉತ್ತಮರಂ ಮಧ್ಯಮರಂ............ಎಂದು.

ಸಂಜೀವಕವು—ಪ್ರಿಯನೆ! ಇದು ಹಾಗೆಯೇ ಸರಿ. ನೀನು ಹೇಳಿದುದನ್ನು ನಾನು ಮಾಡಲೇಬೇಕು—ಎನಲು, ದಮನಕವು ಅದಂ ಕರೆದುಕೊಂಡು ಪಿಂಗಲಕವಿದ್ದೆಡೆಗೆ ಹೋಗಿ—ಸ್ವಾಮಿ! ಇದೋ ಈ ಸಂಜೀವಕನನ್ನು ಕರೆದುಕೊಂಡುಬಂದಿರುವೆನು. ಇನ್ನು ಮುಂದೆ ಸ್ವಾಮಿಗೆ ತೋರಿದಂತೆ ಮಾಡಬಹುದು—ಎಂದಿತು.

ಸಂಜೀವಕವೂ ಆ ಪಿಂಗಲಕವಂ ಆದರದಿಂದ ಅಭಿವಂದಿಸಿ ವಿನಯದಿಂದ ಮುಂದುಗಡೆ ಕುಳಿತುಕೊಂಡಿತು. ಪಿಂಗಲಕವೂ ಕೊಬ್ಬಿದ ದೊಡ್ಡ

ಹಿಳಲುಳ್ಳ ಆಸಂಜೀವಕವಂ ಕುರಿತು—ವಜ್ರದಂದದ ಉಗುರುಗಳಿಂದ ಅಲಂಕೃತವಾದ ಬಲಗೈಯನ್ನು ಮೇಲೆತ್ತಿ ಬಹುಮಾನಪುರಸ್ಸರವಾಗಿ-ಅಯ್ಯಾ! ನಿನಗೆ ಕುಶಲವೆ? ಅದೇಕೆ ನೀನು ವಿಜನವಾದ ಈ ಅರಣ್ಯಕ್ಕೆ ಬಂದಿರುವೆ?-ಎನಲು, ಅದು ತನ್ನ ಪೂರ್ವವೃತ್ತಾಂತವೆಲ್ಲವನ್ನೂ ತಿಳಿಯಿಸಿತು!

ಅದನ್ನು ಕೇಳಿ ಪಿಂಗಲಕವು ಆದರಗೊಂಡು—ಗೆಳೆಯ! ಹೆದರಬೇಡ. ನೀನು ನನ್ನ ಭುಜಪಂಜರದಿಂದ ಪರಿರಕ್ಷಿತನಾಗಿ ಸ್ವಚ್ಛಂದದಿಂದ ಇರು. ಅಲ್ಲದೆ ನೀನು ಯಾವಾಗಲೂ ನನ್ನ ಸಂಗಡವಿರಬೇಕು. ಏಕೆಂದರೆ, ಕ್ರೂರ ಜಂತುಗಳಿಂದ ಕೂಡಿದ ಈ ವನವು ಅನೇಕವಾದ ಅಪಾಯಗಳಿಗೆ ಆಸ್ಪದವಾದುದು. ದೊಡ್ಡಪ್ರಾಣಿಗಳೂ ಇಲ್ಲಿ ಇರಲಾಗದು. ಗರಿಕೆಗಳನ್ನು ತಿಂದುಕೊಂಡು ಜೀವಿಸುವ ಪಶುಗಳ ವಿಷಯದಲ್ಲಿ ಇನ್ನು ಹೇಳತಕ್ಕುದೇನಿದೆ?-ಎಂದು ಹೇಳಿ ಎಲ್ಲಾ ಮೃಗಗಳಿಂದಲೂ ಕೂಡಿ ಯಮುನಾತೀರಕ್ಕೆ ಹೋಗಿ ಜಲಪಾನವಂಮಾಡಿ ಸ್ವಚ್ಛಂದದಿಂದ ಅದೇ ವನವಂ ಪೊಕ್ಕಿತು. ಬಳಿಕ ರಾಜ್ಯಭಾರವನ್ನು ಕರಟಕದಮನಕಂಗಳಿಗೆ ಒಪ್ಪಿಸಿ ಸಂಜೀವಕನೊಡನೆ ಸುಭಾಷಿತಗೋಷ್ಠೀಸುಖವನನುಭವಿಸುತ್ತ ಇದ್ದಿತು.

ಇದು ಯುಕ್ತವಾದಮಾತು :—

ತಾನಾಗೆ ಯೊಮ್ಮೆಯೊದವಿದ |
ಮಾನಿತಸಜ್ಜನರ ಸಂಗವೆಂಬುದು ಕುಂದಂ ||
ಆನದೆ ಮೆಱೆಗುಂಗಡದ |
ರ್ಕೆನಂತಭ್ಯಾಸರೀತಿಯಿರವೇಳ್ಪುಮೆ ಪೇಳ್ ||೧೬||

ಸಂಜೀವಕವು ಅನೇಕಶಾಸ್ತ್ರವಿಷಯಗಳನ್ನು ತಿಳಿದುದರಿಂದುಂಟಾದ ಜಾಣ್ಮೆಯಿಂದ ಮೂಢಬುದ್ಧಿಯುಳ್ಳ ಪಿಂಗಲಕವನ್ನು ಕೆಲವು ದಿನಗಳಲ್ಲಿಯೇ ಆರಣ್ಯಧರ್ಮದಿಂ ತಪ್ಪಿಸಿ ನಾಗರಿಕಧರ್ಮದಲ್ಲಿ ನೆಲೆಗೊಳಿಸಿ ಬುದ್ಧಿಶಾಲಿಯನ್ನಾಗಿ ಮಾಡಿತು. ಹೆಚ್ಚು ಮಾತಿನಿಂದೇನು? ನಿತ್ಯವೂ ಪಿಂಗಲಕ

ಸಂಜೀವಕಗಳೇ ಒಡಗೂಡಿ ರಹಸ್ಯದಲ್ಲಿ ಆಲೋಚನೆಮಾಡುತಿದ್ದುವು. ಮಿಕ್ಕ ಮೃಗಗಳೆಲ್ಲವೂ ದೂರವಾಗಿದ್ದುವು. ಕರಟಕದಮನಕಂಗಳಿಗೂ ಪ್ರವೇಶವಿಲ್ಲ. ಅಷ್ಟೇಅಲ್ಲದೆ ಸಿಂಹವು ಪರಾಕ್ರಮಹೀನವಾದುದರಿಂದ ಎಲ್ಲಾಮೃಗಗಳೂ ಅಯೆರಡನಂಗಳೂ ಕ್ಷುದ್ರೋಗದಿಂದ ಪೀಡಿತಗಳಾಗಿ ಯಾವುದೋ ಒಂದು ಕಡೆಗೆ ಹೊರಟುಹೋದುವು. ಇದು ಯುಕ್ತ:-

ಅರಸು ಕುಲೀನಂ ಘನನೆನಿ |
ಸಿರೆಯುಂ ಫಲವಿಲ್ಲದಿರ್ದೊಡವನಂ ತೊಱ್ತರ್ ||
ತೊಱೆದೆಯ್ದುವರೊಣಗಿದ ಪೆ |
ರ್ಮರನಂ ಪಕ್ಕಿಗಳ ಹಿಂಡು ತೊಱೆದೆಯ್ದುವವೋಲ್ ||೧೬೯||

ಅಲ್ಲದೆ :—

ಸೇವಕರಮಲಕುಲರ್ ಸಂ |
ಭಾವಿತರುರುಭಕ್ತಿನಿರತರೆಂದೆನಿಸಿದೊಡಂ ||
ಜೀವನಭಂಗವದಾದೊಡೆ |
ಭೂವಲ್ಲಭನಂ ದಲೊಯ್ಯನುೞಿದಪರಲ್ತೇ ||೧೭೦||

ಮತ್ತು :—

ಜನಪಾಲಕನಾವಂ ಜೀ |
ವನಮಂ ಸಲಿಸಲ್ಕೆ ಕಾಲಮಂ ಮೀಱಿನೊ ಭ ||
ರ್ತ್ಸನೆಯಂ ತಾಳ್ದಿದೊಡಂ ತಾ |
ಮನುಚರರೆಂದಿಗಮಾತನಂ ತೊಱೆದೆಯ್ದರ್ ||೧೭೧||

ಸೇವಕಜನವುಮಾತ್ರವೇ ಇಂತಹುದೆನಲಾಗದು. ಈ ಪ್ರಪಂಚವೆಲ್ಲವೂ ಒಂದನೊಂದು ಭಕ್ಷಿಸಲು ಸಾಮಾದ್ಯುಪಾಯಗಳಿಂದ ಸಿದ್ಧವಾಗಿರುವುದು. ಏಕೆಂದರೆ—

ಅರಸಂ ನಾಡಿಗರಂ ಚಿಕಿತ್ಸಕಜನಂ ರೋಗಾರ್ತರಾಗಿರ್ಪರಂ |
ಪರದರ್ಕೊಳ್ವರನೆಗ್ಗರಂ ತಿಳಿದರುಂ ಕಳ್ಳರ್ ಪ್ರಮತ್ತರ್ಕಳಂ ||

ತಿರಿವರ್ ಬಾೞ್ವ ಗೃಹಸ್ಥರಂ ಗಣಿಕೆಯರ್ ಕಾಮಾಂಧರಂ ಶಿಲ್ಪಿಯ |
ಲ್ಲರನಾಂತೊಳ್ನುಡಿನೇಣ್ಗಳಿಂ ಪಗಲಿರುಳ್ ಪಾದಾರ್ಪಿನಿಂ ಜೀವಿಕಂ
[||೧೭೫||]

ಇದು ಯುಕ್ತವಾದ ಮಾತು :—

ತುರಿಪದೆ ಪೆಱಸುಗಳನಪ |
ಹರಿಸುವ ಪಾವುಗಳ ಮೇಣ್ ದುರಾತ್ಮಕರಬ್ಜಂ ||
ತರದೊಳಗಣಾಶಯಂಗಳ್ |
ಪಿರಿದುಂ ಸಿದ್ಧಿಸವು ಜಗವಿದದಱಿಂದಿಕ್ಕಂ ||೧೭೬||

ಶಿವಭುಜಗಂ ಗಣೇಶನಿಲಿಯಂ ಗುಹನಾನವಿಲಾಭುಜಂಗವಂ |
ನವಿಲನದಂ ಗಿರೀಂದ್ರಸುತೆ ಪತ್ತುವ ಕೇಸರಿ ತುತ್ತಲಾಟಿಕಂ ||
ಸವನಿಸೆಯಿಂತು ಸಂಸೃತಿಯುಮಾರ್ಕ್ಮಹೇಶನ ಬೀಡಿನಲ್ಲಿಯುಂ |
ಭುವನದೆ ಪೇೞ್ವುದೇಂ ಪೆಱರ ಬೀಡುಗಳಲ್ಲಿದು ಸಾಜವೆಲ್ಲಿಯುಂ ||೧೭೭||

ಬಳಿಕ ಕರಟಕದಮನಕಂಗಳು ಒಡೆಯನ ಒಲ್ಮೆಯಿಲ್ಲದೆ ಹಸಿವಿನಿಂದ ಬಳಲಿ ಬೆಂಡಾಗಿ ಆಲೋಚಿಸಿದುವು. ಅವುಗಳಲ್ಲಿ ದಮನಕವಿಂತೆಂದಿತು :—ಅಯ್ಯಾ ಕರಟಕ! ನಾವಿಬ್ಬರೂ ಒಡೆಯನಿಗೆ ಅಮುಖ್ಯರೆನಿಸಿದೆವು. ಈತನು ಸಂಜೀವಕನಲ್ಲಿ ಅನುರಕ್ತನಾಗಿರುವನು. ತನ್ನ ಕೆಲಸಗಳಲ್ಲಿಯೂ ಪರಾಙ್ಮುಖನಾಗಿಬಿಟ್ಟನು. ಪರಿಜನವೆಲ್ಲವೂ ಹೊರಟುಹೋಯಿತು. ಈಗ ನಾವೇನನಮಾಡುವುದು ?

ಕರಟಕವೆಂದಿತು :—ಒಡೆಯನು ನಿನ್ನ ಮಾತನ್ನು ನೆರವೇರಿಸನು. ಆದರೂ ನಿನ್ನ ತಪ್ಪನ್ನು ನೀನು ಕಳೆದುಕೊಳ್ಳಲು ಆತನಿಗೆ ಹೇಳಬೇಕು. ಏಕೆಂದರೆ, ಇಂತು ಹೇಳದೆ :—

ವಿದುರಂ ಧೃತರಾಷ್ಟ್ರಂಗಲ |
ಸದೆ ಬೋಧನೆಗೆಯ್ದ ತೆಱದೆ ತಾಂದೋಷಿಗಳಾ ||

ಗದಿರಲ್ ಕೇಳದೊಡಂ ಮಾ |
ಣದೆ ಮಂತ್ರಿಗಳರಸುಗಳ್ಗೆ ಬೋಧಿಸವೇಳ್ಕುಂ ||೧೭೫||
ಮದದಿಂ ಕೊರ್ವಿದ ಮೇಣ್ ಏೞ |
ಱಿದ ಮಾರ್ಗದೆ ನಡೆವ ನೃಪನ ಮೇಣ್ ಗಜದ ಸಮೀ ||
ಪದೊಳಿರ್ಪ ಮಹಾಮಾತ್ರರ್ |
ಪೊದಳ್ದ ನಿಂದನೆಗೆ ಭಾಜನಂ ತಾವಕ್ಕುಂ ||೧೭೬||

ನೀನು ಈ ಬಸವನನ್ನು ಸ್ವಾಮಿಯು ಎಡೆಗೆ ತಂದು ಸೇರಿಸಿದೆ. ಆದಕಾರಣ ತನ್ನ ಕೈಯಿಂದಲೇ ಕೆಂಡಗಳನ್ನು ಎಳೆದುಕೊಂಡಂತಾಯಿತು.

ದಮನಕವೆಂದಿತು :—ಸತ್ಯವಿದು. ಇದು ನನ್ನ ತಪ್ಪಲ್ಲದೆ ಸ್ವಾಮಿಯದಲ್ಲ. ಇದಕ್ಕೆ ನಿದರ್ಶನವುಂಟು :—

ನರಿತಗರ್ಗಳೆಗದಿಂದಂ |
ಪರಿತಂದಾಷಾಢಭೂತಿಯಿಂದಂ ನಾನುಂ ||
ಅರರೇ ಸೊಲ್ಲಿಪುದೇನಿ |
ರ್ವರಾತ್ಮಕೃತದೋಷದಿಂದೆ ಪಡೆದೆವು ಕೇಡಂ ||೧೭೭||

ಕರಟಕವು :—ಇದೆಂತೆನಲು, ಅದಿಂತೆಂದಿತು :—

ಕಥೆ ೪.

ಅದೊಂದು ವಿಜನವಾದ ಪ್ರದೇಶದಲ್ಲಿ ಒಂದು ಮಠವುಂಟು. ಅಲ್ಲಿ ದೇವಶರ್ಮನೆಂಬ ಸಂನ್ಯಾಸಿ ವಾಸಮಾಡಿಕೊಂಡಿದ್ದನು. ಆತನು ಅನೇಕ ಸಾಧುಜನಗಳು ತನಗೆ ಕೊಟ್ಟ ಸೂಕ್ಷ್ಮವಸ್ತ್ರಗಳನ್ನು ಮಾರಿ ಅದರಿಂದ ಕೆಲವು ದಿನಗಳಲ್ಲಿ ಹೆಚ್ಚಾದ ಹಣವನ್ನು ಗಳಯಿಸಿದನು. ಆತನು ಯಾರನ್ನೂ ನಂಬುತಿರಲಿಲ್ಲ. ರಾತ್ರಿ ಹಗಲು ಹಣದ ಚೀಲವನ್ನು ಕವುಂಕಳಿಂದ ಈಚೆಗೆ ತೆಗೆಯುತಿರಲಿಲ್ಲ. ಇದು ಯುಕ್ತವಾದ ಮಾತು :—

ಕಷ್ಟಂ ಪಣಮಂ ಗಳಿಪುದು |
ಕಷ್ಟಂ ಗಳಿಸಿದುದನ್ನೆದೆ ಕಾಪಿಡುವುದು ಮೇಣ್ ||

ನಷ್ಟ ಮದಾದೊಡೆ ಕಷ್ಟಂ |
ಕಷ್ಟಂ ವ್ಯಯಿಸಿದೊಡೆ ಛೀ ಪಣಂ ಕಷ್ಟಕರಂ ||೧೭೮||

ಇಂತಿರಲು, ಪರರ ಗಂಟನ್ನು ಕಳುವ ಆಷಾಢಭೂತಿಯೆಂಬ ಒಬ್ಬ ಧೂರ್ತನು ಆ ಸಂನ್ಯಾಸಿಯ ಕೌಂಕುಳಲ್ಲಿ ಇದ್ದ ಹಣದಚೀಲವನ್ನು ಕಂಡು —ಈತನ ಈ ಹಣದ ಚೀಲವನ್ನು ನಾನು ಎಂತು ಅಪಹರಿಸುವುದು? ಈ ಮಠವು ದೃಢವಾದ ಶಿಲೆಗಳಿಂ ಕಟ್ಟಲ್ಪಟ್ಟುದಾಗಿರುವುದರಿಂದ ಗೋಡೆಯನ್ನು ಭೇದಿಸಲು ಆಗುವುದಿಲ್ಲ. ಬಹುವಾದ ಎತ್ತರವುಳ್ಳಕಾರಣ ಬಾಗಿಲ ಮೇಲೇರಿ ಪ್ರವೇಶಿಸುವುದು ಅಸಾಧ್ಯವು. ಅದರಿಂದ ಈತನನ್ನು ಮಾಯದ ಮಾತುಗಳಿಂದ ನಂಬುಗೆಗೊಳಿಸಿ ಈತನಿಗೆ ಶಿಷ್ಯನೆನಿಸುವೆನು. ಇದರಿಂದ ಒಂದುವೇಳೆ ತಥ್ಯವಾದಿಯೆಂದು ನನ್ನಲ್ಲಿ ನಂಬುಗೆಯಿಡುವನು. ಇಂತು ಹೇಳದೆ :—

ಬಾರಂಗಡ ನಿಸ್ಪೃಹನಧಿ |
ಕಾರಕೆ ಮಂಡನಮನೊಲ್ವ ನೆನಿಸ ನಕಾಮಂ ||
ಆರಯೆ ಹಿತಮಂ ನುಡಿಯನ |
ಸೂರಿ ಪಲಂ ತಥ್ಯವಾದಿ ವಂಚಕನೆನಿಸಂ ||೧೭೯||

ಎಂದು ನಿಶ್ಚಯಿಸಿ ಆತನ ಬಳಗೆ ಹೋಗಿ "ನಮಶ್ಶಿವಾಯ" ಎಂದು ಉಚ್ಚಾರಣೆಮಾಡಿ ಸಾಷ್ಟಾಂಗವಂದನೆಯನೆಸಗಿ ವಿನೀತನಾಗಿ ಇಂತೆಂದನು :—ಪೂಜ್ಯರೆ! ಈ ಸಂಸಾರವು ಅಸಾರವಾದುದು. ಎಂತೆಂದರೆ_ ಯೌವನವು ಗಿರಿನದೀವೇಗಕ್ಕೆ ಸಮಾನವಾದುದು. ಜೀವಿತವು ತೃಣಾಗ್ನಿಗೆ ಸಮವು. ಭೋಗಗಳು ಶರತ್ಕಾಲದ ಮೋಡದ ನೆಳಲಿಗೆ ಸಾಟಿಗಳು. ಕೆಳೆಯರು ಮಡದಿಮಕ್ಕಳು ಭೃತ್ಯರು_ಎಂಬಿವರ ಅನುಬಂಧವು ಕನಸಿಗೆ ಎಣೆ. ಇಂತು ನಾನು ಚೆನ್ನಾಗಿ ತಿಳಿದಿರುವೆನು. ಅದೇನಮಾಡಿದರೆ ನಾನು ಈ ಸಂಸಾರಸಾಗರದಿಂದ ಕಡೆಹಾಯುವೆನು ?

ದೇವಶರ್ಮನು ಅದನಾಲಿಸಿ ಆದರದಿಂದ ಇಂತೆಂದನು :-ಅಣುಗ ! ಈ ಪೂರ್ವವಯಸ್ಸಿನಲ್ಲಿ ಇಂತು ವೈರಾಗ್ಯವಂ ಪಡೆದು ಉಪಶಾಂತನಾಗಿರುವುದರಿಂದ ನೀನುಧನ್ಯನು. ಇಂತು ಪೇಳಿಯೂಇದೆ:-

ಕಡೆದೆಳವರಯದೊಳಾವಂ |
ಪಡೆವಂ ಶಮಮಂ ದಲಾತನೇಗಡ ಶಾಂತಂ ||
ಒಡಲೊಳ್ ತೀವಿದ ಧಾತುಗ |
ಳುಡುಗುತ್ತಿರೆ ಶಮಮದಾರ್ಗ್ಗೆ ಸಮನಿಸದಿರ್ಕ್ಕುಂ ||೧೮೦||

ಮೊದಲೆರ್ದೆಯೊಳ್ ಬೞಿಕೊಡಲೊಳ್ |
ಪುದಿಗುಂ ಸುಜನರ್ಗ್ಗೆ ಮುಪ್ಪು ಬಗೆವೊಡೆ ಜಗದೊಳ್ ||
ಅದು ದುರುಳರ್ಗ್ಗಾದೊಡೆ ನೆಱೆ |
ಪುದಿದಪುದೊಡಲಲ್ಲಿ ಪುದಿಯದೆರ್ದೆಯೊಳಗೆಂದುಂ ||೧೬೧||

ಸಂಸಾರಸಾಗರವನ್ನು ದಾಟುವ ಉಪಾಯವೇನೆಂದು ನೀನು ನನ್ನನ್ನು ಬೆಸಗೊಂಡ ವಿಷಯದಲ್ಲಿ ಹೇಳುವೆನು:—ಕೇಳು,

ಪರಮಷಡಕ್ಷರಮಂತ್ರಮು |
ನೊರೆಯುತೆ ಶಿವಲಿಂಗದುತ್ತಮಾಂಗದೊಳಾವಂ ||
ನಱುವೂವನೊಂದನಾದೊಡ |
ಮಿರಿಪನೊ ಧರೆಯಲ್ಲಿ ಜನಿಸನಾತಂಮಗುೞ್ದುಂ ||೧೮೩||

ಆಷಾಢಭೂತಿ ಆಮಾತಂ ಕೇಳಿ ಆತನ ಕಾಲುಗಳನ್ನು ಹಿಡಿದು ವಿನಯದಿಂ ಕೂಡಿ—ಪೂಜ್ಯರೆ! ಆದರೆ ನನಗೆ ದೀಕ್ಷೆಯಂ ಕೊಟ್ಟು ಅನುಗ್ರಹವಂ ಮಾಡಬೇಕು.—ಎನಲು, ದೇವಶರ್ಮನು--ವತ್ಸ! ನಿನಗೆ ಅನುಗ್ರಹವಂ ಮಾಡುವೆನು. ಆದರೆ ರಾತ್ರಿವೇಳೆಯಲ್ಲಿ ನೀನು ಮಠದೊಳಗೆ ಪ್ರವೇಶಿಸಲಾಗದು. ಏಕೆಂದರೆ, ಯತಿಗಳಿಗೆ ನಿಸ್ಸಂಗತ್ವವು ಮುಖ್ಯವಾದುದು. ಇದಿಲ್ಲದಿದ್ದರೆ ಕೇಡುಂಟಾಗುವುದು. ಈ ವಿಷಯ ಹೇಳಿದೆ:—

ಕ್ಷಿತಿಪಂ ದುರ್ಮಂತ್ರದಿಂ ಸಂಗದೆ ಯತಿ ಕುವರಂ ಮುದ್ದಿನಿಂ ಮೇಣನಧ್ಯಾ |
ಯಿತೆಯಿಂ ವಿಪ್ರಂ ಕುಲಂ ದುಸ್ಸುತನಿನಧಮಸಂಸೇವೆಯಿಂ ಶೀಲಮಪ್ರೀ ||
ತತೆಯಿಂ ನಂಟೇಳ್ಗೆಯುಂ ದುರ್ನಯದಿ ಕೆಳೆ ವಿದೇಶಿತ್ವದಿಂ ಬಿಂಕದಿಂ ಪೆಣ್ |
ಕ್ಷಿತಿಯಾಂಗುಂ ಮೇಣನಾಲೋಕದೆ ಕೃಷಿ ಸಿರಿ ದಾನಪ್ರಮಾದಂಗಳಿಂದಂ ||೧೮೩||

ಆದುದರಿಂದ ನೀನು ವ್ರತವಂ ಕೈಕೊಂಡಬಳಿಕ ಮಠದ ಬಾಗಿಲಲ್ಲಿ ಹುಲ್ಲುಗುಡಿಸಲೊಳಗೆ ಮಲಗಬೇಕು—ಎಂದನು.

ಅವನೆಂದನು:—ಪೂಜ್ಯರೆ! ತಮ್ಮ ಅಪ್ಪಣೆಯಂತೆ ನಡೆವೆನು. ಇದರಿಂದ ನನಗೆ ಪರಲೋಕದಲ್ಲಿ ಸದ್ಗತಿಯುಂಟಾಗುವುದು.

ದೇವಶರ್ಮನು ಅವನಿಗೆ ಮಲಗಲು ಇಂತು ನಿಬಂಧನೆಯನೆಸಗಿ ಅನುಗ್ರಹವಂ ಮಾಡಿ ಶಾಸ್ತ್ರೋಕ್ತವಿಧಿಯಿಂದ ಅವನನ್ನು ಶಿಷ್ಯನನ್ನಾಗಿ ಮಾಡಿಕೊಂಡನು.

ಅವನು ಕೈಕಾಲುಗಳನೊತ್ತುವುದು. ಮುಂತಾದ ಸೇವೆಯಿಂದ ಆತನಿಗೆ ಸಂತೋಷವನ್ನುಂಟುಮಾಡಿದನು. ಆದರೆ ಆ ಸಂನ್ಯಾಸಿ ಹಣದ ಚೀಲವನ್ನುಮಾತ್ರ ಕಂಕುಳಿಂದ ತೆಗೆಯುತಿರಲಿಲ್ಲ. ಇಂತು ಕೆಲವುಕಾಲ ಕಳೆಯಲು, ಆಷಾಢಭೂತಿ ಇಂತು ಚಿಂತಿಸಿದನು:— ಅಹಹ! ಈತನು ಯಾವ ರೀತಿಯಲ್ಲಿಯೂ ನನ್ನನ್ನು ನಂಬುವುದಿಲ್ಲ; ಆದುದರಿಂದ ಹಗಲಿನಲ್ಲಿಯೇ ಈತನನ್ನು ಶಸ್ತ್ರದಿಂದ ಕೊಲ್ಲಲೆ? ಅಥವಾ ವಿಷವನ್ನು ಹಾಕಲೆ? ಅಲ್ಲದಿದ್ದರೆ ಪಶುಗಳನ್ನು ತರಿವಂತೆ ತರಿಯಲೆ?

ಇಂತು ಅವನು ಚಿಂತಿಸುತಿರಲು, ದೇವಶರ್ಮನ ಶಿಷ್ಯಪುತ್ರನೊಬ್ಬನು ಊರಿಂದ ಕರೆವುದಕ್ಕೆಬಂದು—ಪೂಜ್ಯರೆ! ಪವಿತ್ರಾರೋಪಣಕ್ಕೋಸ್ಕರ ನಮ್ಮ ಮನೆಗೆ ಬರಬೇಕು—ಎಂದನು

ಅದನಾಲಿಸಿ ದೇವಶರ್ಮನು ಸಂತೋಷಗೊಂಡು ಆಷಾಢಭೂತಿಯೊಡನೆ ಹೊರಟನು. ಹೋಗುತಿರುವಾಗ ದಾರಿಯಲ್ಲಿ ಒಂದುನದಿ ಸಿಕ್ಕಿತು.

ಅದಂ ಕಂಡು ಚೇಲವನ್ನು ಕೌಂಕುಳಿಂದ ತೆಗೆದು ಕಾಣದಂತೆ ಬಟ್ಟೆಗಳಿಂದ ಸುತ್ತಿ ಒಂದುಕಡೆ ಇಟ್ಟು ಸ್ನಾನಮಾಡಿ ದೇವತಾರ್ಚನೆಯನೆಸಗಿ ಬಳಿಕ ಆಷಾಢಭೂತಿಯಂ ಕುರಿತು-ಅಯ್ಯಾ ಆಷಾಢಭೂತಿ! ನಾನು ಬಹಿರ್ದೇಶಕ್ಕೆ ಹೋಗಿಬರುವೆನು. ಅದುವರೆಗೂ ನೀನು ಈ ಬಟ್ಟೆಯ ಗಂಟನ್ನು ಜಾಗರೂಕತೆಯಿಂದ ಕಾದುಕೊಂಡಿರಬೇಕು--ಎಂದು ಹೇಳಿ ಹೋದನು.

ಆಷಾಢಭೂತಿಯೂ ಅತನು ಮರೆಯಾದೊಡನೆ ಹಣದ ಚೇಲವನ್ನು ತೆಗೆದುಕೊಂಡು ಓಡಿದನು.

ದೇವಶರ್ಮನೂ ಶಿಷ್ಯನ ಗುಣಗಳಿಗೆ ಮನವೊಲಿದವನಾಗಿ ನಂಬುಗೆಗೊಂಡು ಒಂದುಕಡೆ ಕುಳಿತುಕೊಂಡು ಏಳುವಷ್ಟರಲ್ಲಿ ಕಂಗೊಳಿಸುವ ರೋಮಗಳುಳ್ಳ ಪ್ರಾಣಿಗಳ ನಡುವೆ ಎರಡು ತಗರುಗಳು ಕಾಳೆಗಮಾಡುತಿದ್ದುದನ್ನು ಕಂಡನು. ಆಯೆರಡುತಗರುಗಳೂ ರೋಷಗೊಂಡು ದೂರದಿಂ ಬಂದು ಸಂಘಟ್ಟಿಸಿ ಹಣಾಹಣಿ ಹೊಡೆದಾಡುತ್ತಿರುವಾಗ ರಕ್ತಪ್ರವಾಹ ಹರಿಯುತಿದ್ದಿತು. ಒಂದುನರಿ ಜಿಹ್ವಾಚಾಪಲದಿಂದ ಆ ರಂಗಕ್ಕೆ ಬಂದು ಆ ರಕ್ತವನ್ನು ನಕ್ಕುತಿದ್ದಿತು.

ದೇವಶರ್ಮನು ಅದಂ ನೋಡಿ ಇಂತು ಚಿಂತಿಸಿದನು:—ಅಯ್ಯೋ! ಈ ನರಿ ಬುದ್ಧಿಯಿಲ್ಲದುದು. ಈ ತಗರುಗಳು ಬಂದಕೊಂದು ಸಂಘಟ್ಟಿಸುವಾಗ ದಿಟವಾಗಿ ಇದು ಕೆಳಗೆಬಿದ್ದು ಮೃತ್ಯುವಶವಾಗುವುದೆಂದು ತೋರುವುದು.

ಒಂದು ಕ್ಷಣದೊಳಗೆ ಅದೇರೀತಿ ಆ ನರಿ ರಕ್ತವಂ ನಕ್ಕುವ ಚಾಪಲ್ಯದಿಂದ ನಡುವೆ ನುಗ್ಗಿ ಆ ತಗರುಗಳ ತಲೆಗಳ ಹೊಡೆತದಲ್ಲಿ ಸಿಕ್ಕಿಬಿದ್ದು ಸತ್ತುಹೋಯಿತು.

ದೇವಶರ್ಮನು ಆ ನರಿಯಂ ಕುರಿತು ಶೋಕಿಸುತ್ತ ಹಣದ ಚೇಲವನ್ನು ಉದ್ದೇಶಿಸಿ ಮೆಲ್ಲಮೆಲ್ಲನೆ ಹೊರಟು ಆಷಾಢಭೂತಿಯನ್ನು ಕಾಣ

ದಿರುವುದರವರೆಗೆ ಸಾವಧಾನತೆಯಿಂದ ಶೌಚಕೃತ್ಯವನೆಸಗಿ ಅಲ್ಲಿಂದ ಹೊರಟು ಗಂಟನ್ನು ನೋಡಲು, ಹಣದಚೀಲವಿರಲಿಲ್ಲ. ಆ ಮೇಲೆ—ಹಾಹಾ!! ವಂಚಿಸಲ್ಪಟ್ಟೆನು—ಎಂದು ಗೋಳಿಡುತ್ತ ನೆಲದಲ್ಲಿ ಬಿದ್ದು ಮೂರ್ಛೆಗೊಂಡನು. ಸ್ವಲ್ಪಕಾಲವಾದಮೇಲೆ ಎಚ್ಚರಗೊಂಡು ಮತ್ತೆ ಎದ್ದು ನಿಟ್ಟುಸಿರುಬಿಡಲಾರಂಭಿಸಿದನು. ಎಲವೋ! ಆಷಾಢಭೂತಿ! ನನಗೆ ಮೋಸಮಾಡಿ ಎಲ್ಲಿ ಹೋದೆ? ನನಗೆ ಪ್ರತಿವಚನವನ್ನು ಕುಡು—ಎಂದು ಬಹುವಿಧವಾಗಿ ಪ್ರಲಾಪಿಸಿದನು ಅವನ ಹೆಜ್ಜೆಯ ಗುರುತನ್ನು ನೋಡಿಕೊಂಡು ಮೆಲ್ಲಮೆಲ್ಲನೆ ಹೊರಟನು. ಎಷ್ಟುದೂರ ಹೋದರೂ ಅವನು ಸಿಕ್ಕಲಿಲ್ಲ. ಅತ್ಯಂತವ್ಯಾಕುಲನಾಗಿ ತಿರಿಗಿ ತನ್ನ ಮಠಕ್ಕೆಬಂದು ಕುಳಿತುಕೊಂಡು ಈ ಪದ್ಯವಂ ಪಠಿಸಿದನು:—

*ನರಿತಗರ್ಗಾಳಿಗದಿಂದಂ |
ಪರಿಕೆಂದಾಷಾಢಭೂತಿಯಿಂದಂ ನಾನುಂ ||
ಅರರೇ ಸೊಲ್ಲಿಪುದೇನಿ |
ಪರಾತ್ಮಕೃತದೋಷದಿಂದೆ ಪಡೆದೆವು ಕೇಡಂ ||೧೮೪||

ಕರಟಕವು—ಇಂತಹ ಸಂದರ್ಭದಲ್ಲಿ ನಾವೇನಮಾಡಬೇಕು?—ಎನಲು, ದಮನಕವು—ಇಂತಹ ಸಮಯದಲ್ಲಿ ಸಂಜೀವಕನನ್ನು ಸ್ವಾಮಿಯ ಸನ್ನಿಧಿಯಿಂದ ತಪ್ಪಿಸುವರೀತಿ ನನ್ನಬುದ್ಧಿಗೆ ತೋರುತಿರುವುದು. ಬುದ್ಧಿಯಿಂದ ಎಂತಹ ಕೆಲಸವನ್ನಾದರೂ ಮಾಡಬಹುದು. ಕೇಳು:—

ಭೇದಿಪುದೋ ಭೇದಿಸದೋ |
ಸಾಧಿಸಿ ಬಿಲ್ಗಾಱನೆಚ್ಚ ಕಣೆ ಗುಱಿಯೊಂದಂ ||
ಆದೊಡೆ ಮತಿಶಾಲಿಯ ಮತಿ |
ಯಾದಂ ನೃಪನಾಳ್ವರಾಷ್ಟ್ರಮಂ ಭೇದಿಸುಗುಂ ||೧೮೫||

ಆದುದರಿಂದ ರಹಸ್ಯವಾಗಿದ್ದುಕೊಂಡು ಹಲವುತರದ ಮಾಯಾಜಾಲಗಳನ್ನು ಪ್ರಯೋಗಿಸಿ ಅವರಿಬ್ಬರಿಗೂ ಭೇದವನ್ನು ತಂದಿಡುವೆನು—ಎಂದಿತು.

ಕರಟಕವಿಂತೆಂದಿತು :—ಪ್ರಿಯನೆ! ನಿನ್ನ ಮಾಯಾಪ್ರಯೋಗವನ್ನು ಯಾವ ರೀತಿಯಿಂದಲಾದರೂ ಪಿಂಗಲಕನು ತಿಳಿವನು; ಅಥವಾ ಸಂಜೀವಕನಾದರೂ ತಿಳಿವನು. ಆಗ ಆದರಿಂದ ವಿಘಾತವುಂಟಾಗದೆ ಇರದು.

ದಮನಕವೆಂದಿತು :—ಅಯ್ಯ! ಇಂತು ನುಡಿಯಬೇಡ. ಗೂಢಬುದ್ಧಿಯುಳ್ಳವರು ಕಷ್ಟಕಾಲದಲ್ಲಿ ದೈವವು ಪ್ರತಿಕೂಲವಾಗಿದ್ದರೂ ತಮ್ಮ ಬುದ್ಧಿಯನ್ನು ಪ್ರಯೋಗಿಸಬೇಕು. ಮಾಡುವುದನ್ನು ಬಿಡಬಾರದು; ಒಂದು ವೇಳೆ ಘುಣಾಕ್ಷರನ್ಯಾಯದಿಂ ಬುದ್ಧಿಯುದೆಸೆಯಿಂದ ಚಕ್ರವರ್ತಿಪದವಿಯುಂಟಾಗುವುದು. ಇಂತು ಹೇಳಿದೆ :—

ಎಡಱಿರೊಗೆದ ಕಾಲದೊಳಮೆರ್ದೆ |
ಗಿಡಬಾರದದೊರ್ಮ್ಮೆ ಧೈರ್ಯದಿಂ ಲೇಸಾಂಪಂ ||
ಪಡಗು ಮುಳುಂಗಿದೊಡಂ ಬಿಡ |
ದೊಡರ್ಚ್ಚೆ ಸಿರಿವಡೆಯನೇ ಪಡಂಗಿನ ಪರದಂ ||೧೮೬||

ಎಸಗುವನಂ ಸಿರಿ ಪೊರ್ದುಗು |
ಮುಸಿರ್ವರ್ ಬಿದಿಯೀಯುವೇೞ್ಕುಮೆಂದು ಜಡರ್ ಭಂ ||
ಗಿಸಿ ಬಿದಿಯಂ ಶಕ್ತಿಯಿನೆಸ |
ಗೆಸಗಲ್ ಫಲಿಸದೊಡದೇನೊ ತಪ್ಪುಂಟದಱೊಳ್ ||೧೮೭||

ಆದಕಾರಣ ನಾನು ಇಂತು ತಿಳಿದು ಅತಿಗುಪ್ತವಾದ ಬುದ್ಧಿಯ ಪ್ರಭಾವದಿಂದ ಅವರು ತಿಳಿಯದಂತೆ ಅವರಿಬ್ಬರನ್ನೂ ಅಗಲಿಸುವೆನು.

ಕರಟಕವು :—ಪ್ರಿಯನೆ! ನೀನು ಹೇಳುವೆ. ಆದರೂ ನನಗೆ ಮಹಾಭಯವು. ಏಕೆಂದರೆ, ಸಂಜೀವಕನು ಚದುರನು. ಪಿಂಗಳಕನು

ಕ್ರೂರನು. ನೀನು ಪ್ರೌಢವಾದ ಬುದ್ಧಿಯುಳ್ಳವನಾದರೂ ಸಂಜೀವಕನನ್ನು ಪಿಂಗಲಕನಿಂದ ಅಗಲಿಸಲು ಅಸಮರ್ಥನೇಸರಿ—ಎನಲು, ದಮನಕವು—ಅಣ್ಣಾ! ಅಸಮರ್ಥನಾದರೂ ನಾನು ಸಮರ್ಥನೆನಿಸುವೆನು. ಹೇಳದೆ:—

ಸದುಪಾಯದೆ ಸಾಧಿಸಲ |
ಪ್ಪುದು ತಾನದಟಿಂದೆ ಸಾಧಿಸಲ್ಕಾಗದು ಕೇಳ್ ||
ಒದವಿದ ಕಾಂಚನಸೂತ್ರದೆ |
ಸದೆದುದು ಪೆಣ್ಗಾಗೆಯೊಂದು ಕಾಳೋರಗನಂ ||೧೮೮||

ಕರಟಕವು—ಇದು ಎಂತೆನಲು, ಅದೆಂದಿತು :—

ಕಥೆ ೫.

ಒಂದು ಸ್ಥಳದಲ್ಲಿ ಒಂದು ದೊಡ್ಡಾಲದ ಮರವುಂಟು. ಅಲ್ಲಿ ಒಂದು ಹೆಣ್ಣುಕಾಗೆಯೂ ಒಂದು ಗಂಡುಕಾಗೆಯೂ ಇದ್ದುವು. ಹೆಣ್ಣುಕಾಗೆ ಪ್ರಸವಿಸುವುದೂ ಆ ಮರದ ಪೊಟ್ಟರೆಯಿಂದ ಒಂದು ಕೃಷ್ಣ ಸರ್ಪವು ಹೊರಗೆ ಬಂದು ನಿತ್ಯವೂ ಅದರ ಮರಿಗಳನ್ನು ತಿನ್ನುತಿದ್ದಿತು. ಇಂತಿರಲು, ಆ ಕಾಕದಂಪತಿಗಳು ವ್ಯಸನಗೊಂಡು ಮತ್ತೊಂದು ಮರದ ಬುಡದಲ್ಲಿ ವಾಸಿಸುತ್ತಿದ್ದ ಪ್ರಿಯಸುಹೃತ್ತೆನಿಸಿದ ನರಿಯ ಬಳಗೆ ಹೋಗಿ ಇಂತೆಂದುವು :—ಪ್ರಿಯನೆ! ಇಂತಹ ಅವಸ್ಥೆ ಒದವಿರುವಾಗ ನಾವೇನ ಮಾಡಬಹುದು. ಈ ರೀತಿ ದುರಾತ್ಮನಾದ ಕೃಷ್ಣಸರ್ಪನು ಮರದ ಪೊಟ್ಟರೆಯಿಂದ ಬಂದು ನಮ್ಮ ಮರಿಗಳನ್ನು ತಿನ್ನುತ್ತಿರುವನು. ಮರಿಗಳನ್ನು ರಕ್ಷಿಸುವ ವಿಷಯದಲ್ಲಿ ಯಾವುದನಾದರೂ ಒಂದು ಉಪಾಯವನ್ನು ಹೇಳು.

ನದಿಯೆಡೆಯಲ್ಲಾವನ ಪೊಲ |
ನದಾವನಂಗನೆ ಪರಾನುರಾಗಿಣಿ ಮೇಣ್ ಸ ||
ರ್ಪದೆ ಕೂಡಿದ ಮಂದಿರದ |
ಲ್ಲದಾವನಿರ್ದಪನವಂಗೆ ಸುಖವೆಂತಕ್ಕುಂ ||೧೮೯||

ಅಲ್ಲದೆ :—

ಅವಂ ಬಾಜಿಪ್ಪೆರೆಡೆಯೊಳ್ |
ಪಾವಿರ್ದ್ದಪುದಾತನಸುಗೆ ಸಂದೆಗವೆನೆ ಪಾ ||
ವಾವಗಮಿರ್ಪಾಲಯದ |
ಲ್ಲಾವಸಿಪೊಡೆ ಮಿಟ್ಟುಸಿಕ್ಕುವಂ ಸಮನಿಸದೇ ||೯೦||

ಅಲ್ಲಿರುವುದರಿಂದ ನಮಗೆ ಸರ್ವಕಾಲದಲ್ಲಿಯೂ ಪ್ರಾಣಸಂದೇಹವುಂಟಾಗಿರುವುದು.

ಅದೆಂದಿತು :—ಈ ವಿಷಯದಲ್ಲಿ ವ್ಯಸನಪಡಲಾಗದು. ಅತಿಲೋಭವುಳ್ಳ ಆ ಸರ್ಪವನ್ನು ದಿಟವಾಗಿ ಉಪಾಯದಿಂದಲ್ಲದೆ ಬೇರೆತರದಿಂದ ಕೊಲ್ಲಲಾಗುವುದಿಲ್ಲ.

ಸದುಪಾಯದೆ ಗೆಲವೆಂತ |
ಪ್ಪುದಕ್ಕುಮಂತಪ್ಪುದಾಗದಾಯುಧಶತಿಯಿಂ ||
ಸದುಪಾಯಜ್ಞಂ ಪಗೆಯೇ |
ಳಿದಕ್ಕೆ ಗುಱಿಯಾಗನಲ್ಪನೆಂದೆನಿಸಿರ್ದ್ದಂ ||೯೧||

ಅಂತಲ್ಲದೆ :—

ಉತ್ತಮಮುಮಂ ಮಧ್ಯಮಮುಂ |
ಮತ್ತಧಮಮೆನಿಪ್ಪ ಪಲವುಮೀನಂಗಳನೆನಸುಂ ||
ಚಿತ್ತಸ್ಪೃಹೆಯಿಂ ಭಕ್ಷಿಸಿ |
ಸತ್ತುದು ಬಕವೊಂದು ನಳ್ಳಿ ಪಿಡಿದುದಱಿಂದಂ ||೯೨||

ಅವು—ಇದೆಂತೆನಲು, ಅದೆಂದಿತು :—

ಕಥೆ ೬.

ಅದೊಂದು ಕಾಡಿನಲ್ಲಿ ಅನೇಕಮತ್ಸ್ಯಗಳಿಂದ ಕೂಡಿದ ಒಂದು ಸರೋವರವುಂಟು. ಅಲ್ಲಿ ಆಶ್ರಯಮಾಡಿಕೊಂಡಿದ್ದ ಒಂದು ಬಕವು ಮುಪ್ಪುಂಟಾದಕಾರಣ ಮತ್ಸ್ಯಗಳನ್ನು ಹಿಡಿದುಕೊಲ್ಲಲಾರದೆ ಹಸಿವಿನಿಂದ

ಬಸವಳಿದು ಬೆಂಡಾಗಿ ಸರೋವರದ ತಡಿಯಲ್ಲಿ ಕುಳಿತುಕೊಂಡು ಮುತ್ತುಗಳಗೆಣೆಯೆನಿಸಿ ಸುರಿಯುತ್ತಿರುವ ಕಣ್ಣೀರ ಬಿಂದುಗಳಿಂದ ನೆಲವನ್ನು ತೋಯಿಸುತ್ತ ಅಳುತಿದ್ದಿತು.

ಒಂದುನಳ್ಳಿ ಅನೇಕಮತ್ಸ್ಯಗಳಿಂದ ಕೂಡಿ ಬಳಿಗೆ ಬಂದು, ದುಃಖಪಡುತಿರುವ ಆ ಬಕದೊಡನೆ ತಾನೂ ದುಃಖಿಸಿ ಅದಂ ಕುರಿತು—ಮಾವ! ಅದೇಕೆ ನೀನು ಆಹಾರವಂ ತೆಗೆದುಕೊಳ್ಳದಿರುವೆ? ಸುಮ್ಮನೆ ಕಣ್ಣೀರ ಸುರಿಯಿಸುತ್ತ ನಿಟ್ಟುಸಿರ ಬಿಡುವೆ—ಎನಲು, ಅದು—ವತ್ಸ! ನೀನು ಚೆನ್ನಾಗಿ ತಿಳಿದೆ; ನಾನು ಮತ್ಸ್ಯಗಳನ್ನು ತಿನ್ನುವ ವಿಷಯದಲ್ಲಿ ಕೇವಲವೈರಾಗ್ಯವಂ ತಾಳಿ ಈಗ ಪ್ರಾಯೋಪವೇಶವಂ ಮಾಡಿರುವೆನು. ಅದರಿಂದ ನಾನು ಬಳಿಗೆ ಬಂದ ಮತ್ಸ್ಯಗಳನ್ನೂ ತಿನ್ನೆನು—ಎಂದಿತು.

ನಳ್ಳಿ ಆ ಮಾತಂ ಕೇಳಿ—ಮಾವ! ಅದೇನು ವೈರಾಗ್ಯಕ್ಕೆ ಕಾರಣ?—ಎನಲು, ಅದು—ವತ್ಸ! ನಾನು ಈ ಸರೋವರದಲ್ಲಿ ಹುಟ್ಟಿದವನು; ಮತ್ತು ಇಲ್ಲಿಯೆ ಬಳೆದವನು. ಈಗ ಹನ್ನೆರಡುವರ್ಷ ಅನಾವೃಷ್ಟಿ ಉಂಟಾಗುವುದೆಂದು ಕೇಳಿದೆ—ಎಂದಿತು.

ಕುಳೀರಕವೆಂದಿತು :—ಈಸಮಾಚಾರವನ್ನು ಯಾರಮುಖದಿಂದ ಕೇಳಿದೆ?

ಬಕವಿಂತೆಂದಿತು:—ಜೋಯಿಸರ ಮುಖದಿಂದ. ಕಾರಣವೇನೆಂದರೆ, ಶನೈಶ್ಚರನು ರೋಹಿಣೀಶಕಟವನ್ನು ಭೇದಿಸಿಕೊಂಡು ಅಂಗಾರಕನನ್ನಾಗಲಿ ಶುಕ್ರನನ್ನಾಗಲಿ ಸೇರುವನು. ಈ ವಿಷಯದಲ್ಲಿ ವರಾಹಮಿಹಿರಾಚಾರ್ಯರು ಇಂತುಹೇಳಿರುವರು:—

ಬಿಸುಗದಿರನ ಸುತನೆಂದಸ |
ವಸದಿಂ ರೋಹಿಣಿಯ ಶಕಟಮಂ ಭೇದಿಪನೋ ||
ವಸುಧೆಯೊಳಂದುಮೊದಲ್ ಮಳೆ |
ಯೆಸಗಂ ಪನ್ನೆರಡುಬರಿಸದನ್ನೆಗಮಿಂದ್ರಂ ||೧೯೩||

ಅಲ್ಲದೆ—

ಪ್ರಕಟಂ ರೋಹಿಣಿಯ ಮಹಾ |
ಶಕಟಂ ನಿರ್ಭಿನ್ನಮಾಗೆ ಮಹಿ ಪಾಪಂಗೈ |
ದು ಕಲಿತಭಸ್ಮಾಸ್ಥಿಗಳಿಂ |
ದಕಟಾ ಕಾಪಾಲಿಕವ್ರತಸ್ಥೆವೊಲಿರ್ಕುಂ ||೧೯೪||

ಅಂತಲ್ಲದೆ—

ಮಂದಂ ಮೇಣ್ ಭೌಮಂ ಮೇಣ್ |
ಚಂದಂ ರೋಹಿಣಿಯ ಶಕಟಮಂ ಭೇದಿಪೊಡೇ ||
ನೆಂದಪೆನೆಲ್ಲ ಜನಂ ಕ್ಷಯ |
ನೊಂದುಗುಮುದ್ಭವಿಪನಿಷ್ಟವೆಂಬಂಬುಧಿಯೊಳ್ ||೧೯೫||

ಬಿದು ರೋಹಿಣೀಶಕಟಮ |
ಧ್ಯದೊಳಿರೆ ಪೋಕುಂ ಜನಂಗಳೆತ್ತಲೊ ಶರಣಿ ||
ಲ್ಲದೆ ಶಿಶುಗಳನಟ್ಟುಣುತು |
ದ್ಯದರ್ಕನಿಂ ಕುದಿವ ನೀರುಮಂ ಕುಡಿಯುತ್ತುಂ ||೧೯೬||

ಸ್ವಲ್ಪವೇ ನೀರಿರುವುದರಿಂದ ಈ ಸರೋವರವು ಬೇಗನೆ ಬತ್ತಿಹೋಗುವುದು. ನಾನು ಯಾವುವುಗಳೊಡನೆ, ಬಳೆದೆನೋ ನಿತ್ಯವೂ ಆಡುತಿದ್ದೆನೋ ಆ ಜಲಚರಗಳೆಲ್ಲವೂ ಈ ಸರೋವರ ಬತ್ತುವುದೂ, ಜೀವನಭಂಗದಿಂದ ನಾಶವನ್ನೈದುವುವು. ನಾನು ಇವುಗಳ ವಿಯೋಗವನ್ನು ಅನುಭವಿಸಲಾರೆನು. ಅದರಿಂದ ಈ ಪ್ರಾಯೋಪವೇಶವನ್ನು ಮಾಡಿರುವೆನು. ಸಣ್ಣ ಸಣ್ಣ ಜಲಾಶಯಗಳಲ್ಲಿರುವ ಎಲ್ಲಾ ಜಲಚರಂಗಳೂ ತಂತಮ್ಮ ಜನದಿಂದ ದೊಡ್ಡದೊಡ್ಡ ಜಲಾಶಯುಗಳಿಗೆ ಒಯ್ಯಲ್ಪಡುತಿರುವುವು. ಮೊಸಳೆ ನೀರುಡು ನೀರಾನೆ ಮುಂತಾದ ಕೆಲವು ಪ್ರಾಣಿಗಳು ತಾವೇ ಹೋಗುವುವು. ಈ ಸರೋವರದಲ್ಲಿರುವ ಮತ್ಸ್ಯಗಳಾದರೋ ನಿಶ್ಚಿಂತಗಳಾಗಿರುವುವು. ಸಂತತಿಗೊಂದಾದರೂ ಇಲ್ಲಿ ಉಳಿವುದಿಲ್ಲ. ಅದರಿಂದ ನಾನು ಬಹುವಾಗಿ ಶೋಕಿಸುವೆನು.

ಅದು ಆ ಮಾತಂ ಕೇಳಿ, ಇತರಗಳಾದ ಜಲಚರಂಗಳಿಗೂ ಆ ಸಂಗತಿಯನ್ನು ತಿಳಿಯಿಸಿತು. ಬಳಿಕ-ಮತ್ಸ್ಯಗಳು ಆಮೆಗಳು ಮುಂತಾದವುಗಳೆಲ್ಲವೂ ಭಯಾಕುಲವಾದ ಮನಸ್ಸುಳ್ಳವುಗಳಾಗಿ ಬಕದ ಬಳಿಗೆ ಬಂದು_ಮಾವ! ನಾವೆಲ್ಲರೂ ಬದುಕುವಂತೆ ಯಾವುದಾದರೂ ಉಪಾಯವುಂಟೆ?_ಎಂದು ಬೆಸಗೊಳಲು, ಬಕವು-ಇಲ್ಲಿಗೆ ಸ್ವಲ್ಪದೂರದಲ್ಲಿಯೇ ಮಹಾಜಲಭರಿತವಾಗಿಯೂ ತಾವರೆಬಳ್ಳಿಗಳಿಂದ ಅಲಂಕೃತವಾಗಿಯೂ ಇರುವ ಒಂದು ಸರಸ್ಸುಂಟು. ಅದು ಇಪ್ಪತ್ತುನಾಲ್ಕು ವರ್ಷಗಳ ಅನಾವೃಷ್ಟಿ ಬಂದರೂ ಬತ್ತುವುದಿಲ್ಲ. ನನ್ನ ಬೆನ್ನಿನ ಮೇಲೆ ಕುಳಿತುಕೊಂಡರೆ ಅಲ್ಲಿಗೆ ಕರೆದುಕೊಂಡು ಹೋಗಿ ಬಿಡುವೆನು-ಎಂದಿತು.

ಅವು ಆ ಮಾತಂ ನಂಬಿ ಅಯ್ಯಾ ! ಮಾವ ! ಅಣ್ಣ !_ಎಂದು ಹೇಳುತ್ತ, ನಾನು ಮೊದಲು ತಾನು ಮೊದಲು-ಎಂದು ಸುತ್ತಲೂ ಸುತ್ತುಗೊಂಡುವು ದುರಭಿಪ್ರಾಯವುಳ್ಳ ಆ ಬಕವು ಕ್ರಮದಿಂದ ಅವುಗಳನ್ನು ಬೆನ್ನಿನ ಮೇಲೆ ಹತ್ತಿಸಿಕೊಂಡು, ಸ್ವಲ್ಪದೂರದಲ್ಲಿ ಇದ್ದ ಒಂದು ಬಂಡೆಯ ಮೇಲೆ ತೆಗೆದುಕೊಂಡು ಹೋಗಿ ಬಿಟ್ಟು ಸ್ವೇಚ್ಛೆಯಿಂದ ಭಕ್ಷಿಸುತ್ತ ಆ ಸರಸ್ಸಿನ ಎಡೆಗೆ ಬಂದು, ಸುಳ್ಳುಸುದ್ದಿಗಳಿಂದ ಜಲಚರಂಗಳ ಮನಸ್ಸನ್ನು ರಂಜನೆಗೊಳಿಸುತ್ತ ನಿತ್ಯವೂ ಆಹಾರಮಾಡಿಕೊಂಡಿದ್ದಿತು.

ಮತ್ತೊಂದು ದಿನ ನಳ್ಳಿ-ಮಾವ ! ಮೊದಲು ನನ್ನ ಸಂಗಡ ಸ್ನೇಹದಿಂದ ಮಾತನಾಡಿದೆ, ಆದೇಕೆ ನನ್ನನುಳಿದು ಇತರರನ್ನು ಕರೆದುಕೊಂಡುಹೋಗುವೆ? ಈಗ ನನ್ನ ಪ್ರಾಣರಕ್ಷಣೆಯನ್ನು ಮಾಡು_ಎನಲು, ದುರಾಶಯವುಳ್ಳ ಆ ಬಕವು ಆ ಮಾತಂ ಕೇಳಿ ಮತ್ಸ್ಯಗಳ ಮಾಂಸವನ್ನು ತಿಂದು ಬೇಸರುಂಟಾಗಿರುವುದು. ಆದುದರಿಂದ ಈ ನಳ್ಳಿಯನ್ನು ವ್ಯಂಜನಸ್ಥಾನದಲ್ಲಿ ಉಪಯೋಗಿಸಿಕೊಳ್ಳುವೆನು !_ಎಂದಾಲೋಚಿಸಿ ಆ ನಳ್ಳಿಯನ್ನು ಬೆನ್ನೇರಿಸಿಕೊಂಡು ಆ ವಧ್ಯಶಿಲೆಯಂ ಕುರಿತು ಹೊರಟಿತು.

ನಳ್ಳಿಯು ಅಸ್ಥಿಗಳ ರಾಶಿಯುಳ್ಳ ಆ ಶಿಲಾತಲವನ್ನು ದೂರದಿಂದಲೆ ಕಂಡು–ಅಲ್ಲಿ ಬಿದ್ದಿರುವುವು ಮತ್ಸ್ಯಗಳ ಅಸ್ಥಿಗಳೆಂದು ತಿಳಿದು ಆ ಬಕವಂ ಕುರಿತು–ಮಾವ! ಆ ಸರೋವರವಿನ್ನೆಷ್ಟು ದೂರದಲ್ಲಿದೆ? ನೀನು ನನ್ನನ್ನು ಹೊತ್ತು ಬಹುವಾಗಿ ಆಯಾಸಗೊಂಡಿರುವೆ. ಆದರಿಂದ ಹೇಳು–ಎನಲು, ಆ ಬಕವು–ಈ ನಳ್ಳಿ ಮೂಢಬುದ್ಧಿಯುಳ್ಳುದು ; ನೆಲದಲ್ಲಿ ಇದಕ್ಕೆ ಶಕ್ತಿಯಿರುವುದಿಲ್ಲ–ಎಂದು ಬಗೆದು ನಗುತ್ತ–ಎಲೆ ಕುಳೀರಕ! ಬೇರೆ ಸರೋವರವಾವುದು? ಇದು ನನ್ನ ಜೀವನವು ; ಆದುದರಿಂದ ನಿನ್ನ ಇಷ್ಟದೇವರನ್ನು ಮನದಲ್ಲಿ ನೆನೆ. ನಿನ್ನನ್ನೂ ಈ ಶಿಲಾತಲದಲ್ಲಿ ಇಟ್ಟು ತಿನ್ನುವೆನು–ಎಂದಿತು.

ನಳ್ಳಿ ತಂಡಸದಂತಿರುವ ಎರಡು ಕೋರೆಹಲ್ಲುಗಳಿಂದ ತಾವರೆಯ ದಂಟಿನಂತೆ ಬೆಳ್ಳಗೂ ಮೆತ್ತಗೂ ಇದ್ದ ಆ ಬಕದ ಕತ್ತನ್ನು ಹಿಡಿದು ಸಾಯಿಸಿ ಅದರ ಆ ಕತ್ತನ್ನು ತೆಗೆದುಕೊಂಡು ಮೆಲ್ಲಮೆಲ್ಲನೆ ತಾನಿದ್ದ ಆ ಸರೋವರವಂ ಸೇರಿತು.

ಬಳಿಕ ಅಲ್ಲಿದ್ದ ಎಲ್ಲಾ ಜಲಚರಂಗಳೂ–ಎಲೆ ಕುಳೀರಕ! ಏಕೆ ನೀನು ಹಿಂದಿರುಗಿ ಬಂದೆ? ಆ ಮಾವನೇಕೆ ಬರಲಿಲ್ಲ? ಅದೇಕಿಂತು ತಡ ಮಾಡುವನು? ನಾವೆಲ್ಲರೂ ಉತ್ಸಾಹದಿಂದ ನಿರೀಕ್ಷಿಸಿಕೊಂಡಿರುವೆವು–ಎನಲು, ನಳ್ಳಿ ನಕ್ಕು–ಜಲಚರಂಗಳೆಲ್ಲವೂ ಮಂದಮತಿಗಳು. ಆ ಸುಳ್ಳುಗಾರನು ವಂಚಿಸಿ ತೆಗೆದುಕೊಂಡುಹೋಗಿ ಬಂಡೆಯಮೇಲೆ ಇರಿಸಿಕೊಂಡು ಭಕ್ಷಿಸಿದನು. ಇನ್ನೂ ಆಯುಸ್ಸು ಇದ್ದುದರಿಂದ ನಾನು ಆ ವಿಶ್ವಾಸಘಾತಕನ ಅಭಿಪ್ರಾಯವನ್ನು ತಿಳಿದು ಅವನ ಕತ್ತನ್ನು ಖಂಡಿಸಿ ತಂದೆನು. ಇನ್ನು ನೀವು ಸಂಭ್ರಾಂತರಾಗಬೇಡಿ. ಇನ್ನು ಎಲ್ಲಾ ಜಲಚರಗಳಿಗೂ ಕ್ಷೇಮವಾಗುವುದು–ಎಂದಿತು.

ಇದರಿಂದ ನಾನು ಹೇಳುವೆನು :—' ಉತ್ತಮಮುಂ ಮಧ್ಯಮಮುಂ' ಎಂದು.

ಕಾಗೆಯೆಂದಿತು :—ಪ್ರಿಯನೆ ! ಆ ದುಷ್ಟಸರ್ಪನನ್ನು ಕೊಲ್ಲುವು ದೆಂತು ? ಹೇಳು.

ನರಿಯಿಂತೆಂದಿತು :—ರಾಜನಿರುವ ಯಾವುದಾದರೂ ಒಂದು ಪಟ್ಟಣಕ್ಕೆ ನೀನು ಹೋಗು. ಅಲ್ಲಿ ರಾಜ, ಮಂತ್ರಿ, ಸಾಧುಕಾರ ಮುಂತಾದವರಲ್ಲಿ ಯಾರಾದರೂ ಅಜಾಗರೂಕತೆಯಿಂದಿರುವಾಗ ಅವರ ಚಿನ್ನದ ದಾರ, ಹಾರ ಮುಂತಾದ ಯಾವುದಾದರೂ ಒಂದೊಡವೆಯನ್ನು ತೆಗೆದುಕೊಂಡು ಬಂದು ಆ ಪೊಟ್ಟರೆಯಲ್ಲಿ ಹಾಕು; ಅದಂ ತೆಗೆದುಕೊಳ್ಳಲು ಬಂದಾಗ ಸರ್ಪವು ಕೊಲ್ಲಲ್ಪಡುವುದು.

ಬಳಿಕ ಆ ನಿಮಿಷದಲ್ಲಿ ಆ ಕಾಗೆಗಳೆರಡೂ ಅವಮಾತಂ ಕೇಳಿ ಸ್ವೇಚ್ಛೆಯಿಂದ ಹಾರಿದುವು. ಹೆಣ್ಣುಕಾಗೆ ಒಂದು ಸರೋವರದ ಬಳಿಗೆ ಬಂದು ಅಲ್ಲಿ ನೋಡುವಷ್ಟುಹೊತ್ತಿಗೆ ರಾಜನ ಅಂತಃಪುರಸ್ತ್ರೀಯರು ತಾವು ಧರಿಸಿದ್ದ ಚಿನ್ನದದಾರ ಮುತ್ತಿನಹಾರ ಮುಂತಾದ ಆಭರಣಗಳನ್ನು ನೀರ ತಡಿಯಲ್ಲಿ ಇರಿಸಿ ಜಲಕ್ರೀಡೆಯನೆಸಗುತಿದ್ದರು.

ಆ ಕಾಗೆ ಚಿನ್ನದ ದಾರವೊಂದನ್ನು ತೆಗೆದುಕೊಂಡು ತನ್ನ ಗೂಡಿನ ಕಡೆಗೆ ಹೊರಟಿತು. ಕಂಚುಕಿಗಳು ಮುಂತಾದವರು ಅದು ತೆಗೆದುಕೊಂಡು ಹೋಗುವುದನ್ನೇ ಲಕ್ಷಿಸಿ ದೊಣ್ಣೆಯಂ ಹಿಡಿದು ಬೆನ್ನಟ್ಟಿಕೊಂಡು ಹೋದರು. ಕಾಕಿ ಆ ಚಿನ್ನದದಾರವನ್ನು ಸರ್ಪದ ಪೊಟ್ಟರೆಯಲ್ಲಿ ಹಾಕಿ ದೂರವಾಗಿ ಇದ್ದಿತು. ರಾಜಪುರುಷರು ಆ ಮರವನ್ನು ಹತ್ತಿ ಆ ಪೊಟ್ಟರೆಯನ್ನು ನೋಡುವಷ್ಟುಹೊತ್ತಿಗೆ ಕೃಷ್ಣಸರ್ಪವು ಹೆಡೆಯೆತ್ತಿಕೊಂಡು ನಿಂತಿದ್ದಿತು. ಅದನ್ನು ದೊಣ್ಣೆಗಳ ಹೊಡೆತದಿಂದ ಕೊಂದು ಚಿನ್ನದ ದಾರ

ವನ್ನು ತೆಗೆದುಕೊಂಡು ಸಂತೋಷಿಸುತ್ತ ತಮ್ಮ ಸ್ಥಾನಕ್ಕೆ ಹೊರಟು ಹೋದರು.

ಆ ಕಾಗೆಗಳೆರಡೂ ಆಂದಿನಿಂದ ಸುಖವಾಗಿ ವಾಸಮಾಡಿಕೊಂಡಿದ್ದುವು. ಇದರಿಂದ ನಾನು ಹೇಳುವೆನು :—' ಸದುಪಾಯದೆ ಸಾಧಿಸಲಪ್ಪುದು ' ಎಂದು.

ಈ ಲೋಕದಲ್ಲಿ ಬುದ್ಧಿಶಾಲಿಗಳಿಗೆ ಅಸಾಧ್ಯವಾದುದು ಯಾವುದೂ ಇಲ್ಲ. ಇಂತು ಹೇಳದೆ :—

ಪರಮತಿಯುಳ್ಳಂಗೆ ಬಲಂ |
ಮೆಱೆಗುಂ ಮತಿಯಿಲ್ಲದಂಗೆ ಬಲವೆಂತಿರ್ಕ್ಕುಂ ||
ಆರರೆ ಮದೋನ್ಮತ್ತಂ ಕೇ |
ಸರಿ ಹತಿವಡೆದತ್ತು ಕಾಡಿನೊಳ್ ಮೊಲದಿಂದಂ ||೧೯೭||

ಕರಟಕವು—ಇದೆಂತೆನಲು, ಅದಿಂತೆಂದಿತು :—

ಕಥೆ ೭.

ಅದೊಂದು ವನದಲ್ಲಿ ಭಾಸುರಕವೆಂಬ ಸಿಂಹವು ವಾಸಿಸುತಿದ್ದಿತು. ಇದು ವೀರ್ಯಾತಿಶಯದಿಂದ ನಿತ್ಯವೂ ಜಿಂಕೆ ಮೊಲ ಮುಂತಾದ ಅನೇಕ ಪ್ರಾಣಿಗಳನ್ನು ಕೊಲ್ಲುತಲೇ ಇದ್ದಿತು. ಒಂದುದಿವಸ ಆ ಅಡವಿಯಲ್ಲಿದ್ದ ಜಿಂಕೆ, ಹಂದಿ, ಕೋಣ, ಮೊಲ ಮುಂತಾದ ಜಂತುಗಳೆಲ್ಲವೂ ಸೇರಿ ಆಸಿಂಹದ ಬಳಿಗೆ ಬಂದು ಇಂತೆಂದುವು :—

ಒಡೆಯನೆ! ನಿತ್ಯವೂ ಸಿಕ್ಕಿದ ಮೃಗಗಳೆಲ್ಲವನ್ನೂ ಕೊಲ್ಲುವುದರಿಂದೇನು ? ಏಕೆಂದರೆ, ನಿನಗೆ ಒಂದು ಮೃಗದಿಂದಲೆ ತೃಪ್ತಿಯುಂಟಾಗುವುದು. ಆದುದರಿಂದ ನಮ್ಮೊಡನೆ ನೀನು ಒಂದು ನಿಬಂಧನೆಯನ್ನು ಮಾಡಿಕೊಳ್ಳುವುದು. ಇಂದು ಮೊದಲುಗೊಂಡು ಇಲ್ಲಿಯೇ ಇದ್ದುಕೊಂಡಿರುವ ನಿನ್ನ ಬಳಿಗೆ ಜಾತಿಕ್ರಮದಿಂದ ಪ್ರತಿದಿನವೂ ಒಂದೊಂದು ಮೃಗವು ನಿನ್ನ

ಆಹಾರಕ್ಕೋಸ್ಕರ ಬರುವುದು. ನಮಗೂ ಸರ್ವನಾಶವಾಗದೆ ಇರುವುದು. ಆದುದರಿಂದ ಈ ರಾಜಧರ್ಮವನ್ನು ನೀನು ನಡೆಯಿಸಬೇಕು :—

ಮನುಜಾಧೀಶಂ ರಾಜ್ಯಮ |
ನನುವಿಂ ತನ್ನಯ ಬಲಕ್ಕೆ ತಕ್ಕಂತೆ ರಸಾ ||
ಯನಮುಂ ತಿಳಿದವನೆಂತಂ |
ತಿನಿತಿನಿತುಪಭೋಗಿಸಿದೊಡೆ ಪುಷ್ಟಿಯನಾಂಪಂ ||೧೯೮||

ವರಮಂತ್ರವುಳ್ಳ ವಿಧಿಯಿಂ |
ಪಿರಿದುಂ ಮಥಿಸಿದೊಡೆ ಕಠಿನವೆಂದೆನಿಸಿದುದುಂ ||
ಅರಣಿ ಹುತಾಶನನಂ ತೋ |
ರ್ಪರೀತಿಯೊಳ್ ಧರಣಿ ತೋಱುಗುಂ ಗಡ ಫಲಮಂ ||೧೯೯||

ಜನಮಂ ಪಾಲಿಸುವುದು ಮೇ |
ಲೆನಿಸುತ್ತುಂ ಪುಣ್ಯಕೋಶಮಂ ಪೆರ್ಚಿಸುಗುಂ ||
ಜನಮಂ ಪೀಡಿಸುವುದು ಧ |
ರ್ಮನಾಶಿಯಱಜಸಮನಘಮುಮಂ ಪೆರ್ಚಿಸುಗುಂ ||೨೦೦||

ಪಾಲಿಸಿ ಪರಿಪೋಷಿಸಿ ಗೋ |
ಪಾಲಂ ಪ್ರಜೆಯೆಂಬಧೇನುವಂ ನ್ಯಾಯಮನೊ ||
ಲ್ದಾಲಂಬಿಸಿ ಮೆಲ್ಲನೆ ಪಣ |
ವಾಲಂ ಕಱೆಯಲ್ಕೆ ವೇೞ್ಕುಮಾದರದಿಂದಂ ||೨೦೧||

ಕುಱಿಯಂ ತಱಿದಿಕ್ಕುವವೋ |
ಲರಸಾವಂ ಪ್ರಜೆಯನಕಟ ತಱಿದಿಕ್ಕುವನೋ ||
ದೊರೆಕೊಳ್ಗುಮವಂಗನಿತೊಂ |
ದಱನೇ ತಣಿಪಿನ್ನದಾವುದುಂ ಫಲವಿಲ್ಲಂ ||೨೦೨||

ಫಲವೆಳಪ ತೋಂಟಗಾಱಂ |
ಜಲದಿಂ ಮೊಳೆಕೆಗಳನೈದೆ ಪಾಲಿಪ ತೆಱದಿಂ ||

ಫಲವೆಳಪರಸುಂ ಪ್ರಜೆಗಳ |
ನಲಸದೆ ಪಾಲಿಪುದು ದಾನಮಾನಾದಿಗಳಿಂ ||೨೦೩||
ಇಳೆಯಾಣ್ಮನೆಂಬ ದೀಪಂ |
ಬೆಳಗುತೆ ಧನಮೆಂಬ ತೈಲಮಂ ಪ್ರಜೆಯಿಂದಂ ||
ಎಱೆಯುತ್ತಿರ್ದೊಡಮಂತದ |
ನೊಳಗಣ್ಣ ಸುಗುಣಂಗಳಿಂದೆ ತಿಳಿಯರದಾರುಂ ||೨೦೪||
ತುಱುವಂ ಪರಿಪಾಲಿಸಿ ಪಾ |
ಲ್ಗಱೆವವೊಲುಂ ನೀರನೆಱೆದು ಪೋಷಿಸಿ ಲತೆಯಂ ||
ನಱುವೂದಿಱುವವೊಲುಂ ಭೂ |
ವರನೊಲವಿಂ ಪ್ರಜೆಯನೋವಿ ಕೊಳ್ವುದು ಪಣಮಂ ||೨೦೫||
ಕಿಱಿದೆನಿಸಿದುದಂ ಬೀಜಾಂ |
ಕುರಮನದೆಂತಾನುಮೊಲ್ದು ರಕ್ಷಿಸಿದೊಡೆ ಬಿ ||
ತ್ತರಿಪುದು ಕಾಲದೆ ಫಲಮಂ |
ಸುರಕ್ಷಿತಪ್ರಜೆಗಳುಂ ದಲಂತೆನವೇಟ್ಕಂ ||೨೦೬||
ಪೊನ್ನುಂ ದವಸಂ ಏಱುಗುವ |
ರನ್ನಂ ಬಗೆವಗೆಯ ವಾಹನಂ ಮುಂತೆನೆ ಮ ||
ತ್ತಿನ್ನೇನೇಂ ಪ್ರಭುಗಿರ್ಕ್ಕುಂ |
ಕೆನ್ನಂ ಪ್ರಜೆಯತ್ತಣಿಂದೆ ಬಂದುದದೆಲ್ಲಂ ||೨೦೭||
ಭುವನಕೆ ಪದುಳಂಗೈವವ |
ರವಿರತಮಭಿವೃದ್ಧಿಯೊಂದುತಿರ್ದ್ದಪರರಸರ್ ||
ಭುವನಕ್ಕುಪಟಳಮಂ ಗೈ |
ವವರುಂ ಕುಂದುವರದರ್ಕ್ಕೆ ಸಂದೆಗವಿಲ್ಲಂ ||೨೦೮||

ಬಳಿಕ ಭೂಸುರಕವು ಅವುಗಳ ಆ ಮಾತಂ ಕೇಳಿ ಇಂತೆಂದಿತು :—
ಎಲೆ ಮೃಗಗಳಿರ! ನೀವು ಹೇಳಿದುದು ಸರಿ. ಆದರೆ ಇಲ್ಲಿದ್ದುಕೊಂಡಿರುವ

ನನ್ನ ಬಳಿಗೆ ಪ್ರತಿದಿನವೂ ಒಂದೊಂದು ಮೃಗವು ಬಾರದಿದ್ದರೆ ಸತ್ಯವಾಗಿ ಎಲ್ಲರನ್ನೂ ಭಕ್ಷಿಸುವೆನು.

ಅವು ಅದೇರೀತಿಯಾಗಲೆಂದು ಒಪ್ಪಿ ನಿರಾಳಗೊಂಡು ಅನೇ ವನದಲ್ಲಿ ನಿರ್ಭಯಗಳಾಗಿ ತಿರುಗಿಕೊಂಡಿದ್ದುವು. ಆ ಮೃಗಗಳಲ್ಲಿ ವಯಸ್ಸಾದುದೋ ವೈರಾಗ್ಯವುಳ್ಳುದೋ ಶೋಕಾಕುಲವಾದುದೋ ಪುತ್ರಕಳತ್ರನಾಶ ಕಂಜಿದುದೋ ಯಾವುದೋ ಒಂದು ಮೃಗವು ಕ್ರಮದಿಂದ ಆ ಸಿಂಹದ ಆಹಾರಕ್ಕೋಸ್ಕರ ಪ್ರತಿದಿನವೂ ಮಧ್ಯಾಹ್ನಸಮಯಕ್ಕೆ ಹೋಗುತಿದ್ದಿತು.

ಬಳಿಕ ಒಂದುಕಾಲದಲ್ಲಿ ಜಾತಿಕ್ರಮದಿಂದ ಮೊಲದ ಸರದಿ ಬಂದಿತು. ಅದು ಎಲ್ಲಾ ಮೃಗಗಳಿಂದಲೂ ಪ್ರೇರಿತವಾಗಿ ತನಗೆ ಮನಸ್ಸಿಲ್ಲದಿದ್ದರೂ ಮೆಲ್ಲಮೆಲ್ಲನೆ ಹಜ್ಜೆಯಿಟ್ಟು ಸಮಯವಂ ಮೀರಿ ಆಕುಲತೆಯಿಂದ ಗಮಿಸುತಿರುವಾಗ ಒಂದು ಬಾವಿ ಕಣ್ಣಿಗೆ ಬಿದ್ದಿತು. ಅದರ ಮೇಲ್ಗಡೆ ಹೋಗುತ್ತ ಅದರ ನಡುವೆ ತನ್ನ ಪ್ರತಿಬಿಂಬವನ್ನು ಕಂಡಿತು. ಕಂಡು ಮನದಲ್ಲಿ—ತಕ್ಕ ಉಪಾಯವೊಂದು ತೋರಿತು; ನನ್ನ ಬುದ್ಧಿಯ ಬಲದಿಂದ ಭಾಸುರಕನನ್ನು ರೇಗಿಸಿ ಈ ಬಾವಿಯಲ್ಲಿ ಬೀಳಿಸುವೆನು—ಎಂದು ಬಗೆದು, ಹೊತ್ತು ಸ್ವಲ್ಪವುಳಿದಿರುವಾಗ ಸಿಂಹದ ಬಳಿಗೆ ಬಂದಿತು.

ಸಿಂಹವು ಕಾಲಾತಿಕ್ರಮಣದಿಂದ ಹಸಿವುಗೊಂಡು ಬಳಲಿ ಬೆಂಡಾಗಿ ರೋಷಾವೇಶದಿಂದ ಕೂಡಿ ಬಾಯ ಕಡೆಗಳನ್ನು ನಾಲಗೆಯಿಂದ ಸವರುತ್ತ—ಆಃ! ಇನ್ನು ನಾನು ಬೆಳಗಿನ ಆಹಾರಕ್ಕೋಸ್ಕರ ವನವನ್ನು ಯಾವುದೊಂದು ಪ್ರಾಣಿಯೂ ಇಲ್ಲದಂತೆ ಮಾಡಬೇಕು—ಎಂದು ಚಿಂತಿಸುತಿರಲು, ಮೊಲವು ಮೆಲ್ಲಮೆಲ್ಲಗೆ ಬಂದು ಅದರ ಮುಂದೆ ಅಡ್ಡಬಿದ್ದು ನಿಂತಿತು. ಭಾಸುರಕವು ಅದಂ ಕಂಡು ರೇಗಿ ರೋಷದಿಂದ ಪ್ರಜ್ವಲಿಸುತ್ತ ಗದರಿ ಗರ್ಜಿಸಿ—ಎಲವೊ! ನೀಚವಾದ ಮೊಲನೆ! ನೀನೊಬ್ಬನೆ ಬಂದಿರುವವನು. ಮತ್ತು ಲಘು; ಅದರಲ್ಲಿಯೂ ಹೊತ್ತುಮೀರಿ ಬಂದೆ. ಈ ತಪ್ಪಿನಿಂದ

ಈಗ ನಿನ್ನನ್ನು ಧ್ವಂಸಿಸಿ ಬೆಳಗಾಗುವುದೂ ಮೃಗಕುಲವೆಲ್ಲವನ್ನೂ ನಿರ್ಮೂಲವಮಾಡುವೆನು.—ಎನಲು, ಮೊಲವು ವಿನಯದಿಂ ಕೂಡಿ—ಸ್ವಾಮಿಯೆ! ಇದು ನನ್ನ ತಪ್ಪೂ ಅಲ್ಲ; ಇದಕ್ಕೆ ಬೇರೆ ಕಾರಣವುಂಟು; ಕೇಳಬೇಕು—ಎಂದಿತು.

ಸಿಂಹವು—ಅದೇನು? ನೀನು ನನ್ನ ದವಡೆಯೊಳಗೆ ಹೋಗಿ ಸೇರುವುದಕ್ಕೆ ಮುಂಚೆ ಥಟ್ಟನೆ ಹೇಳು—ಎನಲು, ಮೊಲವು—ಪ್ರಭುವೆ! ಜಾತಿಕ್ರಮದಿಂದ ಇಂದು ನನ್ನ ಸರದಿ ಬಂದಿತು. ಎಲ್ಲಾ ಮೃಗಗಳೂ ಸೇರಿ ನನ್ನನ್ನು ಲಘುವೆಂದು ತಿಳಿದು ಇನ್ನೈದು ಮೊಲಗಳೊಡನೆ ಕಳುಹಿಸಿ ಕೊಟ್ಟುವು. ನಾವು ಬರುತಿರುವಾಗ ಮಧ್ಯದಲ್ಲಿ ಇನ್ನೊಬ್ಬ ಮಹಾಮೃಗೇಂದ್ರನು ಬಿಲದೊಳಗಣಿಂದ ಬಂದು ನಮ್ಮನ್ನು ಕುರಿತು—ಎಲೆ ಮೊಲಗಳಿರಾ! ನೀವೆಲ್ಲಿಗೆ ಹೊರಟಿರುವಿರಿ? ನಿಮ್ಮಿಷ್ಟದೇವತೆಯನ್ನು ಸ್ಮರಿಸಿ—ಎನಲು. ನಾನು—ನಾವು ನಮ್ಮೊಡೆಯನಾದ ಭಾಸುರಕನೆಂಬ ಮೃಗೇಂದ್ರನ ಆಹಾರಕ್ಕೋಸ್ಕರ ಕಟ್ಟಳೆಯನನುಸರಿಸಿ ಅತನೆಡೆಗೆ ಹೋಗುವೆವು—ಎಂದು ಹೇಳಿದೆ. ಅದಕ್ಕೆ ಆ ಮೃಗರಾಜನು—ಇದು ನನ್ನ ವನ; ಇಲ್ಲಿಗೆ ನಾನು ಒಡೆಯನು; ಸಮಸ್ತಮೃಗಗಳೂ ನನ್ನೊಡನೆ ಕಟ್ಟಳೆಯಂ ಮಾಡಿಕೊಂಡಿರಬೇಕಾದುದು ಧರ್ಮ. ಆ ಭಾಸುರಕನೆಂಬವನು ಕಳ್ಳ; ಅವನು ಇಲ್ಲಿಗೆ ರಾಜನಾಗಿರುವುದು ದಿಟವಾದರೆ ಇವರೈವರನ್ನೂ ನಂಬುಗೆಗೋಸ್ಕರ ಇಲ್ಲಿಯೆ ನಿಲ್ಲಿಸಿ, ನೀನು ಹೋಗಿ ಅವನನ್ನು ಇಲ್ಲಿಗೆ ಥಟ್ಟನೆ ಕರೆದುಕೊಂಡುಬಾ. ನಮ್ಮಿಬ್ಬರಲ್ಲಿ ಯಾವನು ಪರಾಕ್ರಮದಿಂದ ರಾಜನೆನಿಸಿಕೊಳ್ಳುವನೋ ಅವನು ಎಲ್ಲಾ ಮೃಗಗಳನ್ನೂ ಭಕ್ಷಿಸತಕ್ಕವನು—ಎಂದನು. ಬಳಿಕ ನಾನು ಆ ಕೇಸರಿಯ ಅಪ್ಪಣೆಯಂ ಪಡೆದು ಸ್ವಾಮಿಯ ಸನ್ನಿಧಿಗೆ ಬಂದೆನು. ಮುಂದೆ ಈ ವಿಷಯದಲ್ಲಿ ಸ್ವಾಮಿಗೆ ತೋರಿದಂತೆ ಮಾಡಬಹುದು—ಎಂದು ನುಡಿಯಿತು.

ಭಾಸುರಕವು ಆ ನುಡಿಯಂ ಕೇಳಿ—ಎಲೆ ಸುವೃತ್ತ! ಇದು ದಿಟವಾಗಿದ್ದರೆ ಆ ಚೋರಮೃಗೇಂದ್ರನನ್ನು ಈಗಲೆ ನನಗೆ ತೋರಿಸು. ಮೃಗಗಳ ವಿಷಯದಲ್ಲಿ ಉಂಟಾದ ನನ್ನ ಕೋಪವನ್ನು ಆ ಕೇಸರಿಯ ಮೇಲೆ ವಿನಿಯೋಗಿಸಿ ಸ್ವಸ್ಥನಾಗುವೆನು. ಏಕೆಂದರೆ, ಇಂತುಹೇಳಿದೆ:—

ನೆಲನುಂ ಕೆಳೆಯುಂ ಪೊನ್ನುಂ |
ಫಲವೆನಿಕುಂ ಕಾಳೆಗಕ್ಕೆ ಮೂಱಿವು ಜಗದೊಳ್ ||
ಫಲಿಸದಿರೆಯಿವಱೊಳೊಂದುಂ |
ಚಲದಿಂ ಕಾಳೆಗಮನೆಸಗಬಾರದದೆಂತುಂ ||೧೦೯||

ಎತ್ತ ಫಲಂ ಪಿರಿದಿಲ್ಲಮ |
ದೆತ್ತಲ್ ತನಗೇಳಿದಂ ವಲಂ ಸಮನಿಸುಗುಂ ||
ಅತ್ತೆಸಗಬಾರದಾಜಿಯ |
ನುತ್ತಮಮತಿಶಾಲಿಯಾದ ಪುರುಷಂ ನೆಲದೊಳ್ ||೧೧೦||

ಮೊಲವೆಂದಿತು:—ಸ್ವಾಮಿಯೆ! ಇದು ಸತ್ಯ. ಕ್ಷತ್ರಿಯರು ತಮ್ಮ ನೆಲಕ್ಕೋಸ್ಕರವೂ ತಮಗುಂಟಾದ ತಿರಸ್ಕಾರಕ್ಕೋಸ್ಕರವೂ ಯುದ್ಧಮಾಡುವರು. ಆದರೆ ಅವನು ದುರ್ಗವನ್ನು ಆಶ್ರಯಿಸಿರುವನು. ಅವನು ದುರ್ಗದಿಂದ ಹೊರಗೆ ಬಂದು ನಮ್ಮನ್ನು ತಡೆದನು. ದುರ್ಗಸ್ಥನಾದ ಶತ್ರು ಅಸಾಧ್ಯನು. ಈ ವಿಷಯವಿಂತು ಹೇಳಿದೆ:—

ಧುರಮೊದವಿದಂದು ದುರ್ಗದೆ |
ಧರಣೀಶಂಗಾವುದಹಹ ಸಿದ್ಧಿಪುದದು ತಾಂ ||
ನೆರೆದಿರೆ ಸಾಸಿರವಾನೆಗ |
ಳರರೇ ಸಿದ್ಧಿಸದು ಲಕ್ಕಗುದುರೆಗಳಿರೆಯುಂ ||೧೧೧||

ಬರೆಯುಂ ನೂರ್ವರ್ ಕೋಂಟೆಯೊ |
ಳಿರುತೆಚ್ಚಪಸೊರ್ವನಾದೊಡಂ ಬಿಲ್ಗಾಱಂ ||

ತಿರೆಯೊಳ್ ದುರ್ಗವನದಱಿಂ |
ನೆಱೆ ಪೊಗೞ್ವರ್ ನೀತಿಶಾಸ್ತ್ರದೊಳ್ ತಿಳಿವುಳ್ಳರ್ ||೨೧೨||
ಗುರುವಿನ ನಿಯೋಗದಿಂದಂ |
ಸುರರಾಜಂ ಮುಂ ಹಿರಣ್ಯಕಶಿಪುವ ಭಯದಿಂ ||
ವರದುರ್ಗವನಾಗಿಸಿದಂ |
ದೊರೆವಡೆದಾ ವಿಶ್ವಕರ್ಮನನುಭಾವದೆ ತಾಂ ||೨೧೩||
ಆವಂಗೆ ದುರ್ಗಮಿರ್ದ್ದಪು |
ದಾವಸುಧೇಂದ್ರಂ ಸಮಂತು ವಿಜಯಿಸುಗೆನುತುಂ ||
ದೇವೇಂದ್ರಂ ವರಮಿತ್ರಂ |
ಭೂವಲಯದೊಳದಱಿನಾದುವುಱೆ ದುರ್ಗಂಗಳ್ ||೨೧೪||
ಪಲ್ಲಿಲಿವಾವುಂ ಮದಜಲ |
ವಿಲ್ಲದವಾತಂಗಮುಂ ಧರಿತ್ರೀತಲದೊಳ್ ||
ಎಲ್ಲರ್ಗಂ ವಶವೆನಿಕುಂ |
ಸೊಲ್ಲಿಪುದೇಂ ಪೊದೞ್ದ* ದುರ್ಗಮಿಲ್ಲದ ನೃಪನುಂ ||೨೧೫||

ಅದಂ ಕೇಳಿ ಭಾಸುರಕವು—ಎಲೆ ಭವ್ಯನೆ! ದುರ್ಗಸ್ಥನಾಗಿದ್ದರೂ ಆ ಕೇಸರಿಯನ್ನು ನನಗೆ ತೋರಿಸು. ಅವನನ್ನು ಧ್ವಂಸಮಾಡುವೆನು. ಏಕೆಂದರೆ ಇಂತು ಹೇಳಿದೆ :—

ಹಗೆಯುಂ ಮತ್ತಂ ಕುತ್ತಮ |
ನೊಗೆದೊಡನೆಯೆ ಶಾಂತಿಗೊಳಿಸದಾತಂ ಕಡುಬ ||
ಲ್ಕೆಗನಾದೊಡಮೇಂ ಬಳೆದಾ |
ಹಗೆಕುತ್ತಂಗಳಿನೆ ಶಾಂತಿಗೊಳಿಸಲ್ಪಡುಗುಂ ||೨೧೬||

ಅಲ್ಲದೆ : -

ಅಭಿವೃದ್ಧಿಯಾಂಪ ಪಗೆಯುಂ |
ಶುಭವಭಿಲಷಿಸುವನುಪೇಕ್ಷಿಸಲ್ಬಾರದು ತಾಂ ||

ಅಭಿವರ್ಧಿಪಕಳತ್ತ್ರಮನಂ |
ತಭಿಯಾತಿಯುಮಂ ಮನೀಷಿಗಳ್ ಸರಿಗೆಂಬರ್ ||೨೧೭||

ಅಂತಲ್ಲದೆ :—

ಮದವುಳ್ಳರುಪೇಕ್ಷಿಸೆ ಬ |
ಳ್ಳಿದನಲ್ಲದ ಪಗೆಯುಮಂ ಪ್ರಮಾದದ ವಶದಿಂ ||
ಮೊದಲೊಳ್ ಸಾಧ್ಯನೆನಿಪ್ಪೊಡ |
ಮೊದವಿದ ಬಿಯದಿವೊಲಸಾಧ್ಯನಕ್ಕುಂ ಒಟಿಕಂ ||೨೧೮||

ಅಂತಲ್ಲದೆ:—

ಅವಲೋಕಿಸಿ ತನ್ನದಟಂ |
ತವೆ ಮಾನೋತ್ಸಾಹದಿಂದದಾವಂ ನಡೆವಂ ||
ಅವನೂರ್ವ್ವನಾದೊಡಂ ಭಾ |
ರ್ಗವನಂತರರಕೊಂದ ತೆಱದೆ ಪಲರಂ ಕೊಲ್ವಂ ||೨೧೯||

ಮೊಲವೆಂದಿತು :—ಇದುಸರಿ ; ಆದರೂ ನಾನು ಕಂಡ ಆ ಮೃಗೇಂದ್ರನು ಬಲಿಷ್ಠನು. ಆತನ ಸಾಮರ್ಥ್ಯವನ್ನು ತಿಳಿಯದೆ ಸ್ವಾಮಿ ಹೊರಡುವುದು ಯುಕ್ತವಲ್ಲ. ಏಕೆಂದರೆ ಇಂತು ಹೇಳಿದೆ :—

ಬಗೆಯದೆ ತನ್ನಯ ಬಲಮಂ |
ಪಗೆಯದಟಂ ತಿಳಿಯದಾವನೆರ್ದೆಯುತ್ಸಾಹಂ ||
ಮಿಗೆಯಿದಿರ್ವೋದಪನಱಿವೆ |
ಯ್ದುಗುಮಗ್ನಿಯ ಮುಂದೆ ಪೋಪ ಶಲಭಂಬೊಲವಂ ||೨೨೦||

ಬಲಯುತನಾದೊಡಮಾವಂ |
ಬಲದಿಂದಗ್ಗಳನೆನಿಪ್ಪಪಗೆಯಂ ಚಲದಿಂ ||
ಕೊಲವೇಳ್ಕುಮೆಂದು ನಡೆವಂ |
ದಲವಂ ಪಲ್ಲುಡಿದ ಪಲ್ಲಮರಿವೋಲ್ ಮರಲ್ವಂ ||೨೨೧||

ಭಾಸುರಕವು :—ಎಲೈ ! ಇದರಿಂದ ನಿನಗೇನು ? ಅವನು ದುರ್ಗಸ್ಥ ನಾಗಿದ್ದರೂ ನನಗವನನ್ನು ತೋರಿಸು—ಎನಲು, ಮೊಲವು ಇಂತು ನಿಶ್ಚಯ ವುಳ್ಳವನಾದರೆ ಸ್ವಾಮಿ ದಯೆಮಾಡಬೇಕು—ಎಂದು ಮುಂದೆಬಂದು ಅದನ್ನು ಸಂಗಡ ಕರೆದುಕೊಂಡು, ತಾನು ಮೊದಲು ನೋಡಿದ್ದ ಆ ಬಾವಿಯನ್ನೇ ಸೇರಿ ಸಿಂಹವಂ ಕುರಿತು—ಸ್ವಾಮಿ ! ಯಾವನು ನಿನ್ನಪ್ರತಾಪವನ್ನು ಸೈರಿಸ ಬಲ್ಲನು ? ಆ ಚೋರಮೃಗೇಂದ್ರನು ದೂರದಿಂದಲೇ ನಿನ್ನನ್ನು ನೋಡಿ ತನ್ನ ದುರ್ಗದ ಒಳಗೆ ಸೇರಿಕೊಂಡನು—ಎಂದಿತು.

ಭಾಸುರಕವು—ನನಗೆ ದುರ್ಗವಂ ತೋರಿಸೆನಲು, ಮೊಲವು ಬಾವಿ ಯನ್ನು ತೋರಿಸಿತು. ಬಳಿಕ ಮಂದಬುದ್ಧಿಯುಳ್ಳ ಆ ಸಿಂಹವು ಬಾವಿಯ ನಡುವೆ ನೀರೊಳಗೆ ಪ್ರತಿಫಲಿಸಿದ ತನ್ನ ಪ್ರತಿಬಿಂಬವನ್ನು ಕಂಡು ಗಟ್ಟಿ ಯಾಗಿ ಕೂಗಿತು. ಅಲ್ಲಿ ಪ್ರತಿಶಬ್ದವುಂಟಾಗಿ ಬಾವಿಯ ಮಧ್ಯದಿಂದ ಇಮ್ಮಡಿಯಾದ ಸಿಂಹನಾದವು ಕೇಳಲ್ಪಟ್ಟಿತು. ಆ ಸಿಂಹನಾದದಿಂದ ತನ್ನ ಪ್ರತಿಬಿಂಬವನ್ನೇ ಶತ್ರುವೆಂದರಿತು ಅದರ ಮೇಲೆ ಬಿದ್ದು ಪ್ರಾಣಗಳನ್ನು ಬಿಟ್ಟಿತು.

ಮೊಲವು ಸಂತೋಷಗೊಂಡು ಎಲ್ಲಾ ಮೃಗಗಳನ್ನೂ ಆನಂದಗೊ ಳಿಸಿ ಅವುಗಳಿಂದ ಅಭಿನಂದಿಸಲ್ಪಡುತ್ತ ಅವುಗಳೊಡನೆ ಸುಖದಿಂದ ಆ ವನ ದಲ್ಲಿ ವಾಸಿಸುತಿದ್ದಿತು.

ಇದರಿಂದ ನಾನು ಹೇಳುವೆನು :—“ ಮರಮತಿಯುಳ್ಳಂಗೆ ಬಲಂ| ಮೇಲೆಗುಂ............ಎಂದು. ಆದುದರಿಂದ ನೀನು ಹೇಳಿದರೆ ಅಲ್ಲಿಗೇ ಹೋಗಿ ನನ್ನ ಬುದ್ಧಿಯ ಬಲದಿಂದ ಅವರಿಬ್ಬರಿಗೂ ಸ್ನೇಹಭೇದವನ್ನುಂಟು ಮಾಡುವೆನು.

ಕರಟಕವೆಂದಿತು :—ಪ್ರಿಯನೆ! ಇಂತಾದರೆ ನೀನು ಹೋಗು ; ನಿನಗೆ ಮಾರ್ಗವು ಮಂಗಳಕರವಾಗಲಿ. ನಿನ್ನ ಇಷ್ಟದಂತೆ ಮಾಡು.

ಬಳಿಕ ದಮನಕವು ಪಿಂಗಲಕದಬಳಿ ಸಂಜೀವಕವಿಲ್ಲದ ಸಮಯವನ್ನು ನೋಡಿ ಅಷ್ಟರಲ್ಲಿಯೆ ಹೋಗಿ ಮುಂದೆ ಕುಳಿತುಕೊಂಡಿತು.

ಪಿಂಗಲಕವೆಂದಿತು :—ಅಯ್ಯಾ! ಇದೇನು? ಬಹುದಿವಸಕ್ಕೆ ಕಾಣಿಸಿಕೊಂಡೆ?

ದಮನಕವೆಂದಿತು :—ಸ್ವಾಮಿಯ ಪಾದದಲ್ಲಿ ನಮ್ಮಿಂದ ಪ್ರಯೋಜನವೇನೂ ಇಲ್ಲ. ಅದರಿಂದ ನಾನು ಬರುವುದಿಲ್ಲ; ಆದರೂ ಸ್ವಾಮಿಗುಂಟಾಗುವ ವಿಘಾತವನ್ನು ತಿಳಿದು ವ್ಯಾಕುಲತೆಯಿಂದ ಮನದಲ್ಲಿ ಕುದಿಯುತ್ತ ನಾನೇ ಹೇಳುವುದಕ್ಕೆ ಬಂದೆನು. ಇಂತು ಹೇಳದೆ :—

ಪ್ರಭುಗಾಗದರ್ಕ್ಕೆ ಯಾವಗ |
ಮಭಿಭವಮೆಂದೆಳಸುವಂ ಬೆಸಂಬಡೆಯದೊಡಂ ||
ಶುಭವಶುಭವೋ ಮೇಣಭಿಮತ |
ವಭಿಮತವಲ್ಲದುದೂ ಹಿತಮನೊರೆಯಲ್ವೇಳ್ಕುಂ ||೨೨||

ಪಿಂಗಲಕವು ಅದರ ಸಾಭಿಪ್ರಾಯವಾದ ನುಡಿಯನಾಲಿಸಿ ಇಂತೆಂದಿತು :—ನೀನು ಏನನ್ನು ಹೇಳಬೇಕೆಂದಿರುವೆ? ಏನಾದರೂ ಹೇಳತಕ್ಕುದಿದ್ದರೆ ಹೇಳು.

ಅದೆಂದಿತು :—ಸ್ವಾಮಿ! ಸಂಜೀವಕನು ತಮ್ಮ ಪಾದಮೂಲದಲ್ಲಿ ದ್ರೋಹಬುದ್ಧಿಯುಳ್ಳವನಾಗಿರುವನು. ನಂಬುಗೆಗೆ ಪಾತ್ರನಾದ ನನ್ನಂ ಕುರಿತು ರಹಸ್ಯದಲ್ಲಿ ಅವನಿಂತೆಂದನು :—ಎಲೆ ದಮನಕ! ಈ ಪಿಂಗಲಕನ ಬಲಾಬಲಗಳನ್ನು ನಾನು ತಿಳಿದಿರುವೆನು. ಅದರಿಂದ ಇವನನ್ನು ಕೊಂದು ನಿನ್ನನ್ನು ಮಂತ್ರಿಪದವಿಯಲ್ಲಿ ನೆಲೆಗೊಳಿಸಿ ನಾನು ಸಕಲಮೃಗಾಧಿಪತ್ಯವನ್ನು ವಹಿಸುವೆನು—ಎಂದು.

ಪಿಂಗಲಕವು ವಜ್ರಾಯುಧದ ಪ್ರಹಾರಕ್ಕೆ ಸಾಟಿಯಾದ ಕ್ರೂರವಾದ ಆ ನುಡಿಯಂ ಕೇಳಿ ಮೋಹಗೊಂಡಿತು; ಏನನ್ನೂ ಆಡಲಿಲ್ಲ.

ದಮನಕವು ಅದರ ಆಕಾರವನ್ನುನೋಡಿ ಇಂತು ಚಿಂತಿಸಿತು:— ಈ ಪಿಂಗಲಕನು ಸಂಜೀವಕನಲ್ಲಿ ದೃಢವಾದ ಅನುರಾಗವುಳ್ಳವನು ; ಸರ್ವಾಧಿಕಾರವಂ ಪಡೆದ ಈ ಮಂತ್ರಿಯಿಂದ ನಿಶ್ಚಯವಾಗಿ ಒಡೆಯನು ನಾಶವನ್ನೈದುವನು ; ಇಂತುಹೇಳಿದೆ :—

ಅರಸಂ ಸರ್ವಾಧಿಕಾರಂಗೊಳಿಸಿ ಸಚಿವನಂ ರಾಜ್ಯದಲ್ಲೋರ್ವನಂ ತಾಂ |
ನಿಱಿಸಲ್ ಸಂಮೋಹದಿಂ ಗರ್ವಿಪನವನದಱಿಂ ದಾಸನಾನೆಂದಗಂ ಬೇ ||
ಸಱುವಂ ಜೀಸತ್ತ್ವಂ ತನ್ನಯ ಹೃದಯದೆ ರಾಜ್ಯಸ್ವತಂತ್ರತ್ವಮಂ ತಾ |
ಳ್ದಿರಲಾಟಿಪ್ಪಂ ಒಱ್ಕಂತದಱಿನರಸನಂ ನಾಶಿಸಲ್ಕುಜ್ಜುಗಿಪ್ಪಂ ||೨೨೩||

ಪಿಂಗಲಕವು ಕಷ್ಟದಿಂದ ಪ್ರಜ್ಞೆಯಂಪಡೆದು ದಮನಕವಂ ಕುರಿತು ಸಂಜೀವಕನು ಪ್ರಾಣಸಮಾನನಾದ ಭೃತ್ಯನು ; ಅದೆಂತು ಅವನು ನನ್ನವಿಷಯದಲ್ಲಿ ದ್ರೋಹಬುದ್ಧಿಯಂ ಮಾಡುವನು ?

ದಮನಕವೆಂದಿತು:—ಭೃತ್ಯನು ಭೃತ್ಯನಾಗಿಯೇ ಇರುವನೆಂಬುದು ನಿಯತವಲ್ಲ. ಇಂತು ಹೇಳಿದೆ:—

ನರನಾಥರ್ಕಳ ಸಿರಿಯಂ |
ಪಿರಿದುಂ ಕಾಮಿಸದ ಪುರುಷನಾವನುಮಿಲ್ಲಂ ||
ಧರೆಯೊಳಶಕ್ತರೆನಿಪ್ಪರೆ |
ಧರಣೀವಲ್ಲಭನನೆಲ್ಲಮುಂ ಪರಿಚರಿಪರ್ ||೨೨೪||

ಪಿಂಗಲಕವೆಂದಿತು:—ಅಯ್ಯಾ ! ಆದರೂ ನನಗೆ ಅವನ ವಿಷಯದಲ್ಲಿ ಮನಸ್ಸುಕೆಟ್ಟಿಲ್ಲ. ಇದು ಯುಕ್ತವಾದಮಾತು:—

ಎನಸುಂ ದೋಷಂಗಳ್ಗಿಡೆ |
ಯೆನಿಪುದುಮಂ ತನ್ನ ತನುವನೊಲ್ಲನದಾವಂ ||
ಅನಿಶಮುಮಪರಾಧಂಗಳ |
ನನುಗೊಳಿಪೊಡಮಿಷ್ಟನಾವನವನೆ ದಲಿಷ್ಟಂ ||೨೨೫||

ದಮನಕವೆಂದಿತು :—ಇದರಿಂದಲೆ ಈ ದೋಷವುಂಟಾಗಿರುವುದು ; ಏಕೆಂದರೆ ಇಂತು ಹೇಳಿದೆ :—

ನೆಲದಾಣ್ಮನಾವನೊಳೆ ಮಿಗೆ |
ಸಲಿಪಂ ತನ್ನಯ ಕಟಾಕ್ಷಮಂ ನಲವಿಂದಂ ||
ಕುಲಹೀನನಕ್ಕೆ ಮೇಣ್ ಸ |
ತ್ಕುಲಸಂಭವನಕ್ಕೆ ಸಿರಿಗವಂ ನೆಲೆಯೆನಿಪಂ ||೨೨೬||

ಅಂತಲ್ಲದಿದ್ದರೆ ಒಡೆಯನು ನಿರ್ಗುಣನಾದ ಸಂಜೀವಕನನ್ನು ಅದಾವಗುಣವಿಶೇಷದಿಂದ ಹತ್ತಿರಿಟ್ಟುಕೊಂಡಿರುವುದು? „ಇವನು ಮಹಾ ಶರೀರನು ; ಇವನಿಂದ ಹಗೆಗಳನ್ನು ಕೊಲ್ಲುವೆನು” ಎಂದು ದೇವರು ಮನದಲ್ಲಿ ಎಣಿಸಿರಬಹುದು. ಇವನಿಂದ ಅದೇನೂ ಆಗುವುದಿಲ್ಲ. ಏಕೆಂದರೆ, ಇವನು ಗರಿಕೆಗಳನ್ನು ತಿಂದು ಜೀವಿಸುವವನು; ಸ್ವಾಮಿಯ ಹಗೆಗಳು ಮಾಂಸಭೋಜಿಗಳು ; ಆದಕಾರಣ ಇವನ ಸಾಹಾಯ್ಯದಿಂದ ಹಗೆಗಳನ್ನು ಸಾಧಿಸಲಾಗುವುದಿಲ್ಲ ; ಅದರಿಂದ ಇವನನ್ನು ತಿರಸ್ಕರಿಸಿ ಒಡನೆಯೆ ಕೊಲ್ಲು.

ಪಿಂಗಲಕವೆಂದಿತು :—

ಮುನ್ನಾವನನೋಲಗದೊಳ್ |
ಸನ್ನುತಗುಣಶಾಲಿಯೆಂದು ಪೊಗಳ್ದರ್ಪನೊ ತಾಂ ||
ಇನ್ನವನ ಕೆಗಟಲಾಗದು |
ತನ್ನುಕ್ತಿಗೆ ಬನ್ನಮಕ್ಕುಮೆಂದಂಜುವವಂ ||೨೨೭||

ಅಲ್ಲದೆ ನಿನ್ನಮಾತಿನಿಂದ ನಾನು ಇವನಿಗೆ ಅಭಯವಂ ಕೊಟ್ಟೆನು. ಅದೆಂತು ನಾನೇ ಇವನನ್ನು ಕೊಲ್ಲುವುದು? ಈ ಸಂಜೀವಕನು ಸರ್ವಪ್ರಕಾರದಿಂದಲೂ ನಮಗೆ ಸ್ನೇಹಿತನಾಗಿರುವನು. ನನಗೆ ಇವನ ವಿಷಯದಲ್ಲಿ ಸ್ವಲ್ಪವೂ ಆಗ್ರಹವಿಲ್ಲ. ಇಂತು ಹೇಳಿದೆ :—

ಅಸುರನವಂ ನಮ್ಮಿಂ ವ |
ರ್ಧಿಸಿ ನಮ್ಮಿಂದನೆ ವಿನಾಶಮಾಂಪುದಯುಕ್ತಂ ||
ಬಿಸಮರನನಾದೊಡಂ ಬೆಳೆ |
ಯಿಸಿ ತಾಂ ಛೇದಿಪುದು ಯುಕ್ತಮೆನಿಪುದೆ ಜಗದೊಳ್ ||೨೨೮||

ಮೊದಲಲ್ಲೊಲವಂ ಗೆಯ್ಯಬಾ |
ರದು ಗೈದೊಡೆ ಬಿಡದೆ ಪೊರೆಯವೇಳ್ಕುಂ ನಾಣ್ಚಿ ||
ಪ್ಪುದು ಗಡ ಮೇಲಣ್ಗೆತ್ತಿಡು |
ವುದು ಕೆಳಗಿರ್ಪಂಗೆ ಬೀಳ್ವ ಶಂಕೆಯೆ ಇಲ್ಲಂ ||೨೨೯||

ತನಗುಪಕಾರಮನೊಲ್ದೆಸ |
ಪನೊಳಾವಂ ಸಾಧುವವನ ಸಾಧುತ್ವಮದೇಂ ||
ತನಗಪಕಾರಮನೊಡರಿಸು |
ವನೊಳಾವಂ ಸಾಧು ಸಾಧುವೆಂದಪರವನಂ ||೨೩೦||

ಒಂದುವೇಳೆ ಇವನು ದೋಷಬುದ್ಧಿಯುಳ್ಳವನಾದರೂ ಇವನಿಗೆ ನಾನು ಕೆಟ್ಟದನ್ನು ಮಾಡುವುದು ಸರಿಯಲ್ಲ.

ದಮನಕವೆಂದಿತು :—ಒಡೆಯನೆ, ದೋಷಬುದ್ಧಿಯುಳ್ಳವನ ವಿಷಯದಲ್ಲಿ ಕ್ಷಮೆಮಾಡುವುದು ಇದು ರಾಜಧರ್ಮವಲ್ಲ. ಇಂತು ಹೇಳದೆ.—

ತಮಗೆಣೆಯೆನಲರ್ಥಮುಂ ಮಾ |
ರ್ಪಮುಳ್ಳ ಮರ್ಮಜ್ಞನೆನಿಪ ಯತ್ನಿಪ ರಾಜ್ಯಾ ||
ರ್ಥಮನಪಹರಿಸುವ ಭೃತ್ಯನ |
ನಮಮಾ ಕೊಲ್ಲದವರಾಃಸಿಂ ಹತರಕ್ಕುಂ ||೨೩೧||

ಮತ್ತೇನೆಂದರೆ, ಇವನ ಸ್ನೇಹದಿಂದ ನೀನು ಎಲ್ಲಾ ರಾಜಧರ್ಮಗಳನ್ನೂ ಬಿಟ್ಟುಬಿಟ್ಟು ರಾಜಧರ್ಮವು ನಿನ್ನಲ್ಲಿ ಇಲ್ಲದುದರಿಂದ ಪರಿಜನವೆಲ್ಲವೂ ವಿರಕ್ತಿಯನ್ನು ಹೊಂದಿತು. ಸಂಜೀವಕನು ಗರಿಕೆತಿನ್ನುವವನು.

ನೀನೂ ನಿನ್ನ ಪರಿಜನಗಳೂ ಮಾಂಸಭೋಜಿಗಳು. ನೀನು ವಧ್ಯರಾದವರನ್ನು ವಧಿಸದೆ ಇರುವುದರಿಂದ ನಿನ್ನ ಪರಿಜನಗಳಿಗೆ ಮಾಂಸಭೋಜನವೆಲ್ಲಿಯದು? ಅದಿಲ್ಲದಮೇಲೆ ಅವರೆಲ್ಲರೂ ನಿನ್ನನುಳಿದು ಹೊರಟುಹೋಗುವರು. ಅದರಿಂದಲೂ ನಿನಗೆ ಕೇಡೆ. ಈ ಸಂಜೀವಕನ ಸಹವಾಸದಿಂದ ಯಾವಾಗಲೂ ಬೇಟೆಯಲ್ಲಿ ನಿನಗೆ ಮನಸ್ಸುಂಟಾಗುವುದಿಲ್ಲ. ಇಂತು ಹೇಳಿದೆ :—

ಎಂತಹರಿಂ ಸೇವಿತನ |
ಪ್ಪಂ ತಾನೆಂತಹರನೊಲ್ಮೆಯಿಂ ಸೇವಿಪನೋ ||
ಅಂತಹನಪ್ಪಂ ಪುರುಷಂ |
ಸಂತತಮೀವಿಷಯದಲ್ಲಿ ಸಂದೆಗವಿಲ್ಲಂ ||೨೩೨||

ಅಲ್ಲದೆ:—

ನೆಱೆ ಕಾಯ್ದಾಯಸದೊಳ್ ಜಳಂ ನೆರೆಯೆ ನೀಡುಂ ಕಾಣದಂತೆಯ್ದುಗುಂ |
ನೆರೆಯಲ್ ಪದ್ಮದ ಪತ್ರದಲ್ಲದುವೆ ನಲ್ಮುತ್ತಂತೆ ರಾರಾಜಿಕುಂ ||
ಅರರೇ ಸ್ವಾತಿಯ ವೃಷ್ಟಿಯೊಳ್ ಕಡಲ ಸಿಪ್ಪೊಳ್ ಬೀೞೆ ಮುತ್ತಾಗುಗುಂ |
ಪರಿಕೀರ್ತ್ಯಾಧಮಮಧ್ಯಮೋತ್ತಮಗುಣಂ ಬರ್ಕುಂಗಡಾ ಸಂಗದಿಂ ||೨೩೩||

ಅಂತಲ್ಲದೆ:—

ದುರುಳರ ಸಂಗದ ದೋಷದೆ |
ಸರಳರ್ ಸುಜನರ್ಕಳುಂ ವಿಕಾರಮನಾಂಗುಂ ||
ಕುರುಪತಿಯ ಸಂಗದಿಂ ಗೋ |
ಹರಣಕೆ ಗಾಂಗೇಯನೈದಿದಂ ಗಡ ತಾನುಂ ||೨೩೪||

ಇದರಿಂದಲೆ ಸಂತರು ನೀಚಸಂಗವನ್ನು ಬಿಡುವರು. ಕೇಳು :—

ಬಂದಂಗವಿದಿತಶೀಲಂ |
ಗೆಂದುಂ ಜನವೀಯಬಾರದಾಶ್ರಯಮಂ ಹೇೞ ||

ಮಂದವಿಸರ್ಪಿಣಿಯೆಂಬುದು |
ಪೊಂದಿತ್ತಗ್ನಿಮುಖಮೆಂಬ ತಿಗಣೆಯು ತಪ್ಪಿಂ ||೨೩||

ಪಿಂಗಲಕವು—ಇದು ಎಂತೆನಲು, ಅದಿಂತೆಂದಿತು :—

ಕಥೆ ೮.

ಒಬ್ಬ ರಾಜನ ಅರಮನೆಯಲ್ಲಿ ಮನೋಹರವಾದ ಮಲಗುವ ಮನೆಯಿದ್ದಿತು. ಅಲ್ಲಿಯ ಹಾಸಿಗೆಯಲ್ಲಿ ಬಿಳಿಯ ದುಪ್ಪಟಿಯ ನಡುವೆ ಮಂದವಿಸರ್ಪಿಣಿಯೆಂಬ ಬಿಳಿದಾದ ಒಂದು ಹೇನು ವಾಸಿಸುತಿದ್ದಿತು. ಅದು ಆ ರಾಜನ ರಕ್ತವನ್ನು ಸವಿಯುತ್ತ ಸುಖದಿಂದ ಕಾಲವಂ ಕಳೆಯುತಿದ್ದಿತು. ಒಂದುದಿವಸ ಆ ಹಾಸಿಗೆಯಲ್ಲಿ ಒಂದುಕಡೆ ಸುತ್ತಾಡುತಿದ್ದ ಅಗ್ನಿಮುಖವೆಂಬ ತಿಗಣೆ ಅದರ ಬಳಿಗೆ ಬಂದಿತು. ಆ ಹೇನು ಆ ತಿಗಣೆಯಂ ಕಂಡು ವ್ಯಸನಗೊಂಡು ಇಂತೆಂದಿತು :—ಎಲೆ ಅಗ್ನಿಮುಖ! ಅನುಚಿತವಾದ ಈ ಯೆಡೆಗೆ ನೀನು ಏಕೆ ಬಂದೆ ?

ಅದೆಂದಿತು :—ಪೂಜ್ಯೆ ! ಮನೆಗೆ ಬಂದವನು ದುಷ್ಟನಾದರೂ ಅವನನ್ನು ಕುರಿತು ಈ ಮಾತನಾಡುವುದು ಯುಕ್ತವಲ್ಲ. ಇಂತು ಹೇಳದೆ :—

ಸಣೆತಾರೀಪೀಠದೊಳ್ ಕುಳ್ಳಿರು ಬಹುದಿವಸಕ್ಕಲ್ತೆ ನೀಂ ಕಾಣ್ಬೆಯೇಕೈ |
ಪಡೆವಾತೇಂ ದುರ್ಬಲಂ ನೀನೆನಿಪೆ ಪದುಳಮೇ ನಿನ್ನ ಕಂಡಿಂದು ಮೋದಂ ||
ಬಡುವೇನೆಂದುತ್ತಮರ್ ಬಂದಥಮಜನಮುಮಂ ಕೂರ್ತು ಸಂಭೈಸಿ ಹರ್ಷಂ |
ಒಡಿಸಲ್ವೇಳ್ಕುಂ ಗೃಹಸ್ಥರ್ಗಿದು ಗಡ ಸುಲಭಂ ಧರ್ಮಮೆಂಗುಂಸ್ಮೃತಿಜ್ಞರ್||೨೪||

ಅಲ್ಲದೆ ಆಹಾರದೋಷದಿಂದ ಪರಿಣತವಾದ "ಕಾರ ಕಹಿ ಒಗರು ಹುಳಿ" ಎಂಬ ರಸಗಳ ರುಚಿಯುಳ್ಳ ಅನೇಕಮನುಷ್ಯರ ಅನೇಕವಿಧವಾದ ರಕ್ತಗಳನ್ನು ನಾನು ಹೀರಿರುವೆನು. ಆದರೆ ಸಿಹಿಯಾದ ರಕ್ತವನ್ನು ಯಾವಾಗಲೂ ಹೀರಿದವನಲ್ಲ. ಆದಕಾರಣ ನೀನು ನನ್ನಲ್ಲಿ ಅನುಗ್ರಹವಂ ಮಾಡಿದರೆ ಬಗೆಬಗೆಯ ಭಕ್ಷ್ಯಭೋಜ್ಯಾದಿಗಳ ಆಹಾರವಶದಿಂದ ಈ ರಾಜ

ನ ಶರೀರದಲ್ಲಿ ಹುಟ್ಟಿದ ಶುದ್ಧವಾದ ರಕ್ತವನ್ನು ನಾಲಗೆಯಿಂದ ಹೀರಿ ಸೌಖ್ಯವಂ ಪಡೆವೆನು. ಏಕೆಂದರೆ ಇಂತು ಹೇಳಿದೆ :—

ಬಡವೆಂಗರಸಂಗಂ ಸಂ |
ಗಡಿಸುವ ನಾಲಗೆಯ ಸೌಖ್ಯವೊರ್ಕೆಯನಕ್ಕುಂ ||
ಪೊಡವಿಯೊಳೆಲ್ಲಾ ಜನಮುಂ |
ಕಡುಯತ್ನಿಸಿ ಪಡೆವುದನಿತೆ ಗಡ ಸುಖಸಾರಂ ||೨೩೭||

ಭೂವಲಯದೊಳಣಮಿರದೊಡೆ |
ತೀವಿದ ನಾಲಗೆಗೆ ತುಷ್ಟಿಯಂ ಕುಡುವೆಸಕಂ ||
ಆವನುಮಾವನುಮಂ ಸಂ |
ಸೇವಿಸುತುಂ ತಾನಧೀನನಾಗಿರನಲ್ತೇ ||೨೩೮||

ಪುಸಿವಾತಂ ನುಡಿವುದು ಸೇ |
ವಿಸಲ್ಕೆ ತಗದರುಮನೊಲ್ದು ಸೇವಿಸುವುದು ಸಂ ||
ತಸದೆ ಪದೇಶಕೆ ತೆಂಳ್ವುದು |
ವಸುಮತಿಯುಲ್ಲುದರಪೂರಣಾರ್ಥಮವೆಲ್ಲಂ ||೨೩೯||

ಆದುದರಿಂದ ಹಸಿವಿನಿಂ ಪೀಡಿತನಾಗಿ ಮನೆಗೆ ಬಂದ ನಾನು ನಿನ್ನನ್ನು ಭೋಜನವಂ ಬೇಡುವುದು ಯುಕ್ತ. ನೀನೊಬ್ಬಳೇ ಈ ರಾಜನ ರಕ್ತವನ್ನು ಬುಂಜಿಸುವುದು ಸರಿಯಲ್ಲ.

ಮಂದವಿಸರ್ಪಿಣಿ ಆಮಾತನಾಲಿಸಿ ಇಂತೆಂದಿತು :—ಅಯ್ಯ ! ಈ ರಾಜನು ನಿದ್ರಾಪರವಶನಾದಮೇಲೆ ಈತನ ರಕ್ತವನ್ನು ಆಸ್ವಾದಿಸುವೆನು. ನೀನಾದರೋ ಅಗ್ನಿಮುಖ; ಚಪಲ; ನೀನು ನನ್ನೊಡನೆ ರಕ್ತಪಾನವಂ ಮಾಡುವುದಾದರೆ ಇರು; ಯಥೇಷ್ಟವಾಗಿ ರಕ್ತಪಾನಮಾಡು.

ಅದೆಂದಿತು :—ಎಲೆ ಪೂಜ್ಯೆ ! ನಿನ್ನಮಾತಿನಂತೆ ನಡೆವೆನು. ರಾಜನ ರಕ್ತವನ್ನು ನೀನು ಪಾನಮಾಡುವುದಕ್ಕೆ ಮುಂಚೆ ನಾನು ಪಾನಮಾಡಿದರೆ ದೇವರಾಣೆ ಗುರುಗಳಾಣೆ.

ಎಂದು ಆವೆರಡೂ ಮಾತನಾಡುತಿರಲು, ಆ ರಾಜನು ಆ ಹಾಸಿಗೆಯನ್ನು ಸೇರಿ ಮಲಗಿದನು. ಬಳಿಕ ಈ ತಿಗಣೆ ಬಲವತ್ತರವಾದ ಜಿಹ್ವಾಚಾಪಲ್ಯದಿಂದ ರಾಜನು ಇನ್ನೂ ಎಚ್ಚರದಲ್ಲಿರುವಾಗಲೇ ಕಚ್ಚಿತು. ಇದು ಯುಕ್ತವಾದ ಮಾತು :—

ಪದೆದುಪದೇಶಮನನುಗೊಳೆ |
ವುದಱಿಂದಂ ಪ್ರಕೃತಿ ಬೇಱೆ ತಿರ್ದಲಸಾಧ್ಯಂ ||
ಉದಕಮನುಱೆ ಕಾಯಿಸಿದೊಡ |
ಮದು ಜಣದೊಳ್ ಮಗುೞ್ದು ತಣ್ಣಿತಾಗುವುದಲ್ತೇ ||೨೪೦||
ಜ್ವಳನಂ ಕುಳಿರ್ವೊಡಮಹಹಾ |
ಕುಳಿರ್ಗದಿರಂ ಜ್ವಳನನಂತೆವೋಲ್ ದಹಿಸುವೊಡಂ ||
ಇಳೆಯೊಳ್ ನರಸ್ವಭಾವಮ |
[illegible]ಳಿಯಿಂದಂ ಬೇಱೆಗೈವುದಾರ್ಗಮಶಕ್ಯಂ ||೨೪೧||

ಬಳಿಕ ರಾಜನು ಸೂಜಿಯ ಮೊನೆಯಿಂದ ಚುಚ್ಚಲ್ಪಟ್ಟಂತವನಾಗಿ ಆ ಹಾಸಿಗೆಯಂ ಬಿಟ್ಟು ಆಕ್ಷಣದಲ್ಲಿಯೆ ಎದ್ದು "ಎಲವೊ! ನನ್ನನ್ನು ಕಚ್ಚಿರುವುದು. ಹೊದಿವ ಈ ದುಪ್ಪಟಿಯಲ್ಲಿ ದಿಟವಾಗಿ ತಿಗಣೆಯೋ ಹೇನೋ ಏನೋ ಇದೆ. ನೋಡಿ" ಎಂದು ನುಡಿಯಲು, ಅಲ್ಲಿದ್ದ ಕಂಚುಕಿಗಳು ಥಟ್ಟನೆ ಬಂದು ಆ ದುಪ್ಪಟಿಯನ್ನು ತೆಗೆದು ಹಿಡಿದು ಸೂಕ್ಷ್ಮದೃಷ್ಟಿಯಿಂದ ನೋಡಿದರು. ಇಷ್ಟರಲ್ಲಿ ಆ ತಿಗಣೆ ಚಪಲಭಾವದಿಂದ ಮಂಚದೊಳಗೆ ಸೇರಿಕೊಂಡಿತು. ದುಪ್ಪಟಿಯ ಒಳಭಾಗದಲ್ಲಿದ್ದ ಆ ಮಂದವಿಸರ್ಪಿಣಿ ಕಣ್ಣಿಗೆ ಬಿದ್ದು ಕೊಲ್ಲಲ್ಪಟ್ಟಿತು. ಇದರಿಂದ ನಾನು ಹೇಳುವೆನು: "ಬಂದಂಗವಿದಿತಶೀಲಂ | ಗೆಂದುಂ ಜನವೀಯಬಾರದಾಶ್ರಯಮಂ ||" ಎಂದು.

ಇಂತಿದನರಿತು ನೀನು ಇವನನ್ನು ಕೊಲ್ಲಬೇಕು. ಇಲ್ಲದಿದ್ದರೆ ನಿನ್ನನ್ನು ಕೊಲ್ಲುವನು. ಇಂತು ಹೇಳಿದೆ :—

ಒಳಗಣ ತನ್ನಿರವಂ ಮಱೆ |
ಗೊಳಿಸುತೆ ಪೊಱಗನ್ಯರಿರವನಾವಂ ತೋರ್ಪಂ ||
ಅಱಿವಂ ಪಡೆವನೆವಂ ಭೂ |
ತಳದಲ್ಲಿ ಕಕುದ್ದ್ರುಮಾಖ್ಯರಾಜನ ತೆಱದಿಂ ||೨೪೨||

ಪಿಂಗಲಕವು ಇದೆಂತೆನಲು, ಅದು ಇಂತೆಂದಿತು :—

ಕಥೆ ೯.

ಒಂದು ಕಾಡಿನಲ್ಲಿ ಚಂಡರವವೆಂಬ ನರಿ ವಾಸಿಸುತಿದ್ದಿತು. ಅದು ಒಂದು ಕಾಲದಲ್ಲಿ ಹಸಿದು ಜಿಹ್ವಾಚಾಪಲ್ಯದಿಂದ ಪಟ್ಟಣದೊಳಗೆ ನುಗ್ಗಿತು. ಅಲ್ಲಿಯ ನಾಯಿಗಳು ಅದಂ ಕಂಡು ಬಗುಳುತ್ತ ಸುತ್ತಣಿಂದ ಓಡಿಬಂದು ಮೊನೆಯಾದ ಕೋರೆಹಲ್ಲುಗಳಿಂದ ಕಡಿದು ತಿನಲಾರಂಭಿಸಿದುವು. ಆನರಿ ಅವುಗಳಿಂದ ಅಂತು ತಿನ್ನಲ್ಪಟ್ಟು ಪ್ರಾಣಭಯದಿಂ ಕೂಡಿ ಹತ್ತಿರಿದ್ದ ಅಗಸನ ಮನೆಗೆ ನುಗ್ಗಿತು. ಅಲ್ಲಿ ದೊಡ್ಡ ಭಾಂಡದಲ್ಲಿ ನೀಲಿರಸವನ್ನು ತುಂಬಿ ಸಿದ್ಧಮಾಡಿದ್ದರು. ನಾಯಿಗಳಿಂದ ಹಿಡಿದೆಳೆಯಲ್ಪಟ್ಟ ಆನರಿ ಆ ಭಾಂಡದ ಮಧ್ಯದಲ್ಲಿ ಬಿದ್ದಿತು. ಅಲ್ಲಿಂದ ಈಚೆಗೆ ಬರುವಷ್ಟರಲ್ಲಿ ಮೈಯೆಲ್ಲವೂ ನೀಲಿಯ ಬಣ್ಣವಾಯಿತು. ನಾಯಿಗಳು ಆ ನರಿಯನ್ನು ತಿಳಿಯದೆ ಮನಸ್ಸು ಬಂದೆಡೆಗೆ ಹೊರಟುಹೋದುವು. ಆ ನರಿಯೂ ದೂರವಾದ ಮತ್ತೊಂದು ಪ್ರದೇಶವಂ ಆಶ್ರಯಿಸಿ ಅಲ್ಲಿಂದ ಅರಣ್ಯದ ಕಡೆಗೆ ಹೊರಟಿತು. ಅದರ ನೀಲಿಯ ಬಣ್ಣದ ರಂಗು ಸ್ವಲ್ಪವೂ ಅಳ್ಳಾಡಲಿಲ್ಲ. ಇಂತು ಹೇಳದೆ:—

ಒಡರಿಸಿದ ವಜ್ರಲೇಪಂ |
ಕಡುಮೂರ್ಖಂ ನಾರಿ ನಳ್ಳಿಯುಂ ಮೀನುಂ ನೋ ||
[illegible]ಪ್ಪೊಡೆ ನೀಲಿವಣ್ಣಮುಂ ಕ |
ಳ್ಗಿಡಿವವನುಂ ಪಿಡಿವ ಪಟ್ಟು ಸಮವೆಂದೆನಿಕುಂ ||೨೪೩||

ಬಳಿಕ ನೀಲಕಂಠನ ಕಂಠದಂತೆಯೂ ಕಾಲಕೂಟದಂತೆಯೂ ಹೊಂಗೆಮರದಂತೆಯೂ ಕಪ್ಪಗೆ ಕಂಗೊಳಿಸುವ ಅಪೂರ್ವವಾದ ಆ ಪ್ರಾಣಿ

ಯನ್ನು ಸಿಂಹ ಹುಲಿ ಕಿರುಬ ತೋಳ ಮುಂತಾದ ಆರಣ್ಯಕಜಂತುಗಳೆಲ್ಲವೂ ಕಂಡು ಭಯದಿಂದ ತಲ್ಲಣಿಸುತ್ತ ಸುತ್ತಲೂ ಓಡಿಹೋಗುತ್ತ ಇಂತು ಹೇಳುತಿದ್ದುವು:—ಇದರ ವ್ಯಾಪಾರವೂ ಪೌರುಷವೂ ಎಂತಹುದೋ ತಿಳಿಯದು. ಇದನ್ನು ನಂಬಿ ನಾವು ಇಲ್ಲಿರುವುದು ಸರಿಯಲ್ಲ. ದೂರತರವಾಗಿ ಹೋಗೋಣ; ಏಕೆಂದರೆ ಇಂತುಹೇಳಿದೆ:—

ತಿಳಿಯಲ್ಬಾರದದಾವನ |
ಕುಳಮುಂ ನಡೆವಳಿಯುಮದಟುಮಾನರನಂ ಽಂ||
ಗಳಿಸುಗೆ ತನಗೈಸಿರಿಯೆಂ |
ದೆಳಸುವ ಮತಿಶಾಲಿ ನಂಬಬಾರದದೆಂದುಂ ||೨೪೪||

ಚಂಡರವವು ಆ ಜಂತುಗಳನ್ನು ಹೆದರಿರುವುವೆಂದು ತಿಳಿದು ಇಂತೆಂದಿತು:—ಎಲೆ ಎಲವೂ ಕ್ರೂರಜಂತುಗಳರಾ ! ಇದೇನು ? ನೀವು ನನ್ನನ್ನು ನೋಡಿದವಾತ್ರಕ್ಕೆ ಹೆದರಿ ಓಡುವಿರಿ? ಹೆದರಲಾಗದು. ಬ್ರಹ್ಮನು ಈಗ ನನ್ನನ್ನು ತಾನೇನಿರ್ಮಿಸಿ-ಎಲೈ ! ಕ್ರೂರಜಂತುಗಳ ಮಧ್ಯದಲ್ಲಿ ಒಬ್ಬ ರಾಜನಿಲ್ಲ. ಆದರಿಂದ ಈಗ ನಾನು ನಿನ್ನನ್ನು ಎಲ್ಲಾ ಕ್ರೂರಜಂತುಗಳಗೂ ಅಧಿಪತಿಯನ್ನಾಗಿ ನಿಯಮಿಸಿ ಕಕುದ್ದ್ರುಮನೆಂಬ ಹೆಸರನಿಟ್ಟು ನಿನಗೆ ಪಟ್ಟಾಭಿಷೇಕವಂ ಮಾಡಿರುವೆನು. ಇನ್ನು ನೀನು ಭೂತಲಕ್ಕೆ ಹೋಗಿ ಅವನೆಲ್ಲವನ್ನೂ ಪರಿಪಾಲಿಸು:—ಎಂದು ನನಗೆ ಅಪ್ಪಣೆಯುಂ ಮಾಡಿರುವನು. ಆದರಿಂದ ನಾನು ಇಲ್ಲಿಗೆ ಬಂದೆ. ಎಲ್ಲಾ ಜಂತುಗಳೂ ನನ್ನ ಛತ್ರಿಯ ನೆಳಲಲ್ಲಿ ಇರತಕ್ಕುದು. ನಾನು ಕಕುದ್ದ್ರುಮನೆಂಬ ರಾಜನು ; ಮೂರುಲೋಕಕ್ಕೂ ಒಡೆಯನಾದವನು.

ಸಿಂಹ ಹುಲಿ ಮುಂತಾದ ಜಂತುಗಳು ಆಮಾತಂಕೇಳಿ ಮಹಾಪ್ರಭುವೆ ! ಅಪ್ಪಣೆಮಾಡಬೇಕು—ಎಂದು ಸುತ್ತುಗೊಂಡುವು.

ಆನರಿ ಸಿಂಹಕ್ಕೆ ಮಂತ್ರಿಪದವಿಯುಂ ಕೊಟ್ಟಿತು. ಹುಲಿಯನ್ನು ಶಯನಾಧಿಪತಿಯನ್ನಾಗಿ ಮಾಡಿತು. ಕಿರುಬಕ್ಕೆ ತಾಂಬೂಲಾಧಿಕಾರವಂ ನೀಡಿತು.

ತೋಳನಿಗೆ ದ್ವಾರಪಾಲಕತ್ವವನಿತ್ತುದು. ಸ್ವಕೀಯರುಗಳಾದ ನರಿಗಳೊಡನೆ ಮಾತನೂ ಆಡುತಿರಲಿಲ್ಲ. ಅರ್ಧಚಂದ್ರಪ್ರಯೋಗವಂ ಮಾಡಿ ಅವನೆಲ್ಲವನ್ನೂ ಓಡಿಸಿತು.

ಈ ರೀತಿಯಲ್ಲಿ ಆ ನರಿ ರಾಜ್ಯಾಧಿಕಾರವಂ ವಹಿಸಿರಲು, ಸಿಂಹ ಮುಂತಾದುವುಗಳು ಮೃಗಗಳನ್ನು ಕೊಂದು ತಂದು ಆ ನರಿಯಮುಂದೆ ಇಡುತಿದ್ದುವು. ಆ ಕೊಂದಮೃಗಗಳನ್ನು ಆನರಿ ರಾಜಧರ್ಮದಿಂದ ಎಲ್ಲಕ್ಕೂ ವಿಭಾಗಿಸಿ ಕೊಡುತಿದ್ದಿತು.

ಇಂತು ಬಹುಕಾಲ ಕಳೆಯಲು, ಅದೊಂದುದಿವಸ ಆನರಿ ಓಲಗದಲ್ಲಿ ಇರುವಾಗ ದೂರದಲ್ಲಿ ಆಗುತಿದ್ದ ನರಿಗಳ ಹಿಂಡಿನ ಕೋಲಾಹಲಶಬ್ದವು ಕಿವಿಗೆಬೀಳಲು, ಅದನ್ನುಕೇಳಿ ಮೈಯಲ್ಲಿ ರೋಮಾಂಚವಂತಾಳಿ ಕಣ್ಣುಗಳಲ್ಲಿ ತುಂಬಿತುಳುಕುವ ಆನಂದಬಾಷ್ಪದಿಂ ಕೂಡಿ ಉಚ್ಚಸ್ವರದಿಂದ ಕೂಗಲು ತೊಡಗಿತು. ಆಸಿಂಹ ಮುಂತಾದುವುಗಳು ಅದರ ಉಚ್ಚಸ್ವರವನ್ನು ಕೇಳಿ, ಇದು ನರಿಯೆಂದು ತಿಳದು ನಾಚಿ ಮುಖವಂ ನೆಲಕ್ಕೆ ಬಗ್ಗಿಸಿ ಬಂದುಕ್ಷಣ ಆ ರೀತಿಯಿಂದಿದ್ದು ಬಳಿಕ-ಎಲೈ! ಕ್ಷುದ್ರವಾದ ಈ ನರಿ ನಮ್ಮನ್ನು ವಂಚಿಸಿತು. ಆದಕಾರಣ ಇದನ್ನುಕೊಲ್ಲಬೇಕು-ಎಂದು ತಮ್ಮಲ್ಲಿ ಪರಸ್ಪರವಾಗಿ ಮಾತನಾಡಿಕೊಂಡುವು.

ಆನರಿ ಆ ಮಾತನಾಲಿಸಿ ಓಡಲಿಚ್ಛೆಸಲು, ಸಿಂಹ ಮುಂತಾದುವು ಬಿಡದೆ ಆದನ್ನು ಅಲ್ಲಿಯೇ ಖಂಡಿಸಿ ಸಾಯಿಸಿದುವು. ಇದರಿಂದ ನಾನು ಹೇಳುವೆನು:—ಒಳಗಣ ತನ್ನಿರವಂ ಮ[illegible] ! ಗೂಳಸುತ...... ಎಂದು.

ಅದುಕೇಳಿ ಪಿಂಗಲಕವು-ಎಲೆ ದಮನಕ ! ಆ ಸಂಜೀವಕನು ನನಗೆ ಕೆಟ್ಟುದನ್ನು ಬಗೆದಿರುವನೆಂಬ ವಿಷಯದಲ್ಲಿ ಅದೇನುನಂಬುಗೆ ? -ಎನಲು, ದಮನಕವು-ಬೆಳಗಾಗುವುದೂ ಪಿಂಗಲಕನನ್ನು ಕೊಲ್ಲುವೆನೆಂದು ಅವನು ಈ ದಿವಸ ನನ್ನಮುಂದೆ ನಿಶ್ಚಯಮಾಡಿರುವುದೇ ನಂಬುಗೆ. ಬೆಳಗಾದಮೇಲೆ

ನಿನ್ನ ಬಳಿಗೆ ಬರುವಾಗ ಅವನು ಮುಖವನ್ನೂ ಕಣ್ಣುಗಳನ್ನೂ ಕೆಂಪಗೆಮಾಡಿಕೊಂಡು ದಿಕ್ಕುಗಳನ್ನು ನಿಟ್ಟಿಸುತ್ತ ಅನುಚಿತವಾದ ತಾಣದಲ್ಲಿ ಕುಳಿತು ನಿನ್ನನ್ನು ಕ್ರೂರದೃಷ್ಟಿಯಿಂದ ನೋಡುವನು. ಇದನ್ನು ನೀನು ತಿಳಿದು ಮಾಡತಕ್ಕುದಾವುದೋ ಅದನ್ನು ಮಾಡಬೇಕು.–ಎಂದುಹೇಳಿ ಸಂಜೀವಕದ ಬಳಿಗೆ ಬಂದು ಅದನ್ನು ಅಭಿನಂದಿಸಿ ಕುಳಿತುಕೊಂಡಿತು.

ಸಂಜೀವಕವು–ವ್ಯಸನಗೊಂಡುದಾಗಿ ತೋರುತ್ತ ಮೆಲ್ಲಮೆಲ್ಲಗೆ ಬಂದ ದಮನಕವಂ ನೋಡಿ ಅತ್ಯಂತಾದರದಿಂದ ಇಂತೆಂದಿತು:—ಎಲೆ ಮಿತ್ರ! ನಿನಗೆ ಸುಖಾಗಮನವೆ? ನಿನ್ನನ್ನುನೋಡಿ ಬಹುದಿವಸವಾಯಿತು. ನಿನಗೆ ಕುಶಲವೇ? ಏನುಬೇಕು? ಹೇಳು. ಕುಡತಕ್ಕುದಲ್ಲವಾದುದನಾದರೂ ಮನೆಗೆಬಂದ ನಿನಗೆ ಕುಡುವೆನು. ಇಂತುಹೇಳಿದೆ:—

ತವಕಿಸುತದಾವಪುರುಷರ |
ಭವನಕೆ ಕಾರ್ಯಾರ್ಥಿಗಳಾಗಿ ಬರ್ಪರೊ ಕೆಳೆಯರ್ ||
ಅವನಿಯೊಳವರ್ ಕೃತಾರ್ಥರ್ |
ವಿವೇಕಮುಂ ಬಲ್ಲರವರವಂದಿರೆ ಸಭ್ಯರ್ ||೨೪೫||

ದಮನಕವೆಂದಿತು:—ಸೇವಕರಿಗೆ ಕುಶಲವೆಂತಹುದು?

ಜನಪನ ಸೇವೆಯನೆಸಗುವ |
ಮನುಜಗ್ಗೆಲ್ಸಿರಿಗಳ್ಳೆದೆ ಪರತಂತ್ರಂಗಳ್ ||
ಮನವೆಂದುಂ ಚಿಂತಾಕುಲ |
ಮೆನಿಸಿರ್ಕ್ಕುಂ ಬರ್ದುಕಿನಲ್ಲಿಯುಂ ದಿಡಮಿಲ್ಲಂ ||೨೪೬||

ಅಲ್ಲದೆ;—

ಸೇವೆಯನರ್ಥನನೆಳಸುವ |
ಸೇವಕರೆಸಗಿದುದನಕಟ ನೋಡೇವೆಚ್ಚಿಂ ||
ಗಾವಿಲರವರ್ಗಳ್ ಕಳೆದರ್ |
ತಾವೊಂದಿದ ದೇಹದಾ ಸ್ವತಂತ್ರತ್ವಮುಮಂ ||೨೪೭||

ಜಗತಿಯೊಳುದಯಿಸುವುದು ಕಡು |
ದುಗುಡಂ ದಾರಿದ್ರ್ಯವೆಂತು ನಿಚ್ಚದ ದುಗುಡಂ ||
ಬಗೆವೊಡೆ ಪಂಜನಸೇವೆಯ |
ನೆಗೞುತೆ ಜೀವಿಪುದು ದುಗುಡದೊಟ್ಟಜೆಯೆನಿಕುಂ ||೨೪೮||

ಬಡವಂ ನರಲ್ವನೆಗ್ಗಂ |
ಬಿಡದೋಲೈಪಂ ಪ್ರವಾಸಿಯೆಂಬಿವರೈವರ್ ||
ಪೊಡವಿಯೊಳುಜ್ಜೀವಿಸುತಿ |
ರ್ದೊಡಮುೞಿದವರೆಂದು ಕೇಳ್ಗ ಮಾಭಾರತದೊಳ್ ||೨೪೯||

ಮನಮೊಲ್ವವೊಲಾರೊಗಿಸಂ |
ಜನದಿಂದೆಚ್ಚರಿಸನಱತ ನಿದ್ರಿಸದುಡಱಂ ||
ಮನಮೞ್ಕಿದೆ ನುಡಿಯಂ ಮೇ |
ದಿನಿಯೊಳ್ ಸೇವಕನುಮೆಂತೊ ಜೀವಿಸುತಿರ್ಪಂ ||೨೫೦||

ಅವಲೋಕಿಪೊಡಾರ್ ಸೇವಾ |
ಶ್ವವೃತ್ತಿಯೆಂದೊಱೆವರ್ನೃತವ್ರೊಱದಂವಂದಿರ್ ||
ಬುವಿಯೊಳ್ ಶ್ವಾಸಂ ತಿನ್ನೊ |
ಲ್ದವೊಲಿಕ್ಕುರ್ಗಂ ಸೇವಕಂ ಪೆಱರ್ ಬೆಸಸುವವೋಲ್ ||೨೫೧||

ಬುವಿಯೊಳ್ ಮಲಂಗುವುದು ಮೇ |
ಣವಿರತಮಾಬ್ರಹ್ಮಚರ್ಯ ತಳ್ಪನಿಸುಣಿಸಂ ||
ಬುವು ಯತಿಗಮಾಳ್ಗನೊರ್ತ್ತೆ |
ನವು ಧರ್ಮದಿನಘದಿನಪ್ಪುವೆಂಬಿದೆ ಭೇದಂ ||೨೫೨||

ವಸುವಂ ಗಳಿಸಲ್ ಭೃತ್ಯಂ |
ಬಿಸಿಲಿಂ ಚಳಿಗಾಳಿಮೞೆಗಳಿಂ ಸಮನಿಪ ಕ ||
ಷ್ಟಸಮೂಹವನೇನಂ ಸೈ |
ರಿಸುವನೊ ನಿಜಧರ್ಮವೞಿಯದಿರ್ದೊಡದಲ್ಲಂ ||೨೫೩||

ಸ್ವಾದುವುಮೊಳ್ಳಿತು ಮೆಲ್ಲಿ |
ಕ್ವಾದಂ ಬಟ್ಟೆತ್ತು ತೆಳ್ಳಿತಾಮೋದಕಮುಂ ||
ಆದಾಮೋದಕಮೇವುದೊ |
ಮೇದಿಸಿಯೊಳ್ ಸೇವೆಯಿಂದೆ ದೊರೆಕೊಂಡುದೆನಲ್ ||೨೫೪||

ಸಂಜೀವಕವೆಂದಿತು:—ನೀನು ಏನನ್ನುಹೇಳಬೇಕೆಂದಿರುವೆ?

ಅದೆಂದಿತು:—ಮಿತ್ರ! ಮಂತ್ರಿಗಳು ಪ್ರಭುವಿನ ಮಂತ್ರವನ್ನು ಭೇದಿಸುವುದು ತಕ್ಕುದಲ್ಲ. ಏಕೆಂದರೆ ಇಂತುಹೇಳಿದೆ :—

ಆವನ ನಂಬುಗೆಯಿಂದಮು |
ದಾವಂ ಭೂಮಿಪತಿ ನಾಶಮಂ ಪೊರ್ದುವನೋ ||
ಭಾವಿಪೊಡಾತನೊಡರ್ಚಿದ |
ನಾವಸುಧಾಪತಿಯ ಹತಿಯನೆಂಗುಂ ಮನುವುಂ ||೨೫೫||

ಆದಕಾರಣ ಹೇಳುವೆನು. ನಿನ್ನವಿಷಯದಲ್ಲಿ ಪಿಂಗಲಕನು ದುರಾಲೋಚನೆಯುಳ್ಳವನಾಗಿರುವನು. ಈಗತಾನೇ ಇಬ್ಬರೇ ಇದ್ದಸಮಯದಲ್ಲಿ ಅವನು ನನ್ನಮುಂದೆ ಇಂತು ನುಡಿದನು. ಬೆಳಗಾಗುವುದೂ ಸಂಜೀವಕನನ್ನು ಕೊಂದು ಎಲ್ಲಾಮೃಗಪರಿವಾರಕ್ಕೂ ಬಹುದಿವಸದವರೆಗೆ ತೃಪ್ತಿಯನ್ನುಂಟುಮಾಡುವೆನು—ಎಂದು.

ಅದಕ್ಕೆ ನಾನೆಂದೆ :—ಒಡೆಯ! ಮಿತ್ರದ್ರೋಹಮಾಡಿ ಇಂತು ಜೀವನಮಾಡುವುದಿದು ಯುಕ್ತವಲ್ಲ. ಏಕೆಂದರೆ ಇಂತುಹೇಳಿದೆ:—

ಪಿರಿದುಂ ನಿಷ್ಕೃತಿಯಿಂದಂ |
ಪರಿಶುದ್ಧರ್ ಬ್ರಹ್ಮಹತ್ಯೆಗೈದವರುಂ ಮಿ ||
ತ್ರರ ಬಂಚಿಪವರ್ ತಕ್ಕಂ |
ತಿರೆ ನಿಷ್ಕೃತಿಗೈದೊಡಂ ವಿಶುದ್ಧತೆವಡೆಯರ್ ||೨೫೬||

ಅದಕ್ಕೆ ಅವನು ಕೋಪಗೊಂಡು ಇಂತೆಂದನು:—ಎಲೆದುರ್ಬುದ್ಧಿಯೆ! ಸಂಜೀವಕನು ಗರಿಕೆತಿನ್ನುವನು. ನಾವು ಮಾಂಸವನ್ನು ಬುಂಜಿಸು

ವವರು. ಅವನೊಡನೆ ನಮಗೆ ಹಗೆತನ ಸಹಜವಾದುದು. ಹಗೆಯನ್ನು ಎಂತು ಉಪೇಕ್ಷಿಸುವುದು ? ಆದಕಾರಣ ಸಾಮಾದ್ಯುಪಾಯಗಳಿಂದ ಕೊಲ್ಲಬೇಕು. ಅವನನ್ನು ಕೊಂದುದರಿಂದ ದೋಷವಿಲ್ಲ ಇಂತುಹೇಳಿದೆ:—

ಮತಿಶಾಲಿಯಾದ ಮಾನಿಸ |
ನಿತರೋಪಾಯದಿನಶಕ್ಯನೆನಿಸಿದ ಪಗೆಯಂ ||
ಸುತೆಯಂ ಕೊಟ್ಟಾದೊಡಮಾ |
ಸ್ತ್ರತೆಯಿಂ ಕೊಲವೇೞ್ಕುಮದಱಿನೆಯ್ದದು ದೋಷಂ ||೨೫೭||

ಅನುವರದೊಳ್ ಸಂಗಡಿಸಿದ |
ಜನಪಂ ಕಾರ್ಯಮನಕಾರ್ಯಮಂ ಬಗೆಯಂ ಕೆ ||
ಮ್ಮನೆ ಮಲಗಿದ ಧೃಷ್ಟದ್ಯು |
ಮ್ನನನಶ್ವತ್ಥಾಮನೆಯ್ದಿ ಮುಂ ಸದೆದಿಡನೇ ||೨೫೮||

ಆದರಿಂದ ನಾನು ಅವನ ಮನೋನಿಶ್ಚಯವಂ ತಿಳಿದು ಇಲ್ಲಿ ನಿನ್ನ ಬಳಿಗೆ ಬಂದೆನು. ವಿಶ್ವಾಸಘಾತಕತ್ವದೋಷವೀಗ ನನಗಿಲ್ಲ. ಅತ್ಯಂತಗುಪ್ತವಾದ ಆಲೋಚನೆಯನ್ನು ನಾನು ತಿಳಿಯಿಸಿರುವೆನು. ಇದರಮೇಲೆ ನಿನಗೆ ಏನುತೋರುವುದೋ ಅದನ್ನು ಮಾಡು.

ಸಂಜೀವಕವು ಸಿಡಿಲು ಹೊಡೆದಂತೆ ಕ್ರೂರವಾದ ಅದರ ಆ ನುಡಿಯಂ ಕೇಳಿ ಮೂರ್ಛೆಗೊಂಡು ಮೆಲ್ಲಗೆ ಪ್ರಜ್ಞೆಯಂ ಹೊಂದಿ ವೈರಾಗ್ಯದಿಂ ಕೂಡಿ ಇಂತೆಂದಿತು:—ಅಯ್ಯ! ಇದು ಯುಕ್ತವಾದ ಮಾತು:—

ಲಲನೆಯರೊಲ್ವರ್ ಖಲರಂ |
ವಲಮವನಿಪನೊಲ್ಮೆಯಿಲ್ಲದಿರ್ಪಂ ನೆಲದೊಳ್ ||
ನೆಲಕಲನಂ ಸೇರ್ಗುಂ ಸಿರಿ |
ಸಲೆ ಗಿರಿದುರ್ಗಂಗಳಲ್ಲಿ ಸುರಿಗುಂ ಮುಗಿಲುಂ ||೨೫೯||

ಜನಪಾಲಂಗಾನಭಿಮತ |
ನೆನಿಸುವೆನೆಂದೆಗ್ಗನಾವನೆಣಿಸುವನೋ ಮೇ ||

ದನಿಯೊಳ್ ಕೋಡುಗಳಿಂದೆ |
ಜಿಸ್ತಿನುಕುಂ ಮಾನಿಸನನವನನಱಿಯಲ್ಕೇಱ್ಕುಂ ||೨೬೦||
ವನವಾಸಂ ಮೇಲ್ ಭಿಕ್ಷಾ |
ಟನೆ ಮೇಲ್ ಮೇಲ್ ಪೊಱೆಯ ಪೊಕ್ಕು ಜೀವಿಪುದುಂ ಮೇ ||
ಲೆನಿಕುಂ ಕುತ್ತಂ ಮೇಲ |
ಲ್ತು ನರಗ್ಗಧಿಕಾರದಿಂದಮಾರ್ಜಿಪ ಸಿರಿಗಳ್ ||೨೬೧||

ನಾನು ಅವನೊಡನೆ ಸ್ನೇಹವಂ ಬಳಸಿಸಿದುದು ಸರಿಯಲ್ಲ. ಏಕೆಂದರೆ ಇಂತುಹೇಳಿದೆ:—

ಅವನಿಯೊಳಾರ್ವರ್ ನೈ |
ಭವದೊಳ್ ಸಮರಂತು ಕುಲದೆ ಸಮರಾರಿರ್ವರ್ ||
*ಅವರ್ಗೆಯೆ ಕೆಳೆ ಮೇಣ್ ಕೊಳ್ಕುಡೆ |
ಸವನಿಸಲೊಪ್ಪುವುದು ಕಿಱಿಯಪಿರಿಯರ್ಗಲ್ಲಂ ||೨೬೨||

ಅಲ್ಲದೆ—

ನೆರೆಗುಂ ಮಿಗದೊಡನೆ ಮಿಗಂ |
ತುಱು ತುಱುವೊಡನಶ್ವವಶ್ವದೊಡನೆಗ್ಗನುಮೆ ||
ಗ್ಗರೊಡನೆ ಬುಧರೊಡನೆ ಬುಧಂ |
ಧರೆಯೊಳ್ ಸಮಶೀಲದುಃಖರೊಳ್ ಗಡ ನೇಹಂ ||೨೬೩||

ಅದರಿಂದ ನಾನು ಹೋಗಿ ಅವನನ್ನು ಪ್ರಸನ್ನನಾಗುವಂತೆ ಮಾಡುವೆನು. ಆದರೂ ಅವನು ಪ್ರಸನ್ನನಾಗುವುದಿಲ್ಲ. ಏಕೆಂದರೆ ಇಂತು ಹೇಳಿದೆ :—

ಜನಿಸಿರೆ ನಿಮಿತ್ತವಾವಂ |
ಮುನಿದಪನೆ ನಿಮಿತ್ತವಱಿವುದುಂ ತಿಳಿವನವಂ ||
ಅನಿಶಂ ನಿಮಿತ್ತವಿಲ್ಲದೆ |
ಮುನಿಯುತೆ ಪಗೆವವನನೆಂತು ಗಡ ನರನೊಲಿಪಂ ||೨೬೪||

ಆಹಹ! ಇದು ಯುಕ್ತವಾದ ಮಾತು :—

ಅನುರಕ್ತರ್ ಸುಜನೋಪಕಾರನಿರತರ್ ಸತ್ಕಾರ್ಯದೊಳ್ ವ್ಯಾಪೃತರ್ |
ಘನಸೇವಾವಿಧಿಯಂ ಸಮಂತಱಿತರದ್ರೋಹಪ್ರವೃತ್ತಾತ್ಮರೆಂ ||
ದೆಸೆವಾಳ್ಗಳ್ ನಸು ತಪ್ಪೆ ತಪ್ಪದೆಯೆ ಕೇಡಕ್ಕುಂ ಫಲಂ ಕ್ಲಿಪ್ತಮು |
ಲ್ತನಿಶಂ ಶಂಕಿತಮಬ್ಧಿಸೇವನೆಯವೋಲ್ ಸಂಸೇನೆ ಭೂಪಾಲನಾ ||೨೬೫||

ಅಲ್ಲದೆ:—

ಕಡುರಾಗಂದಾಳುತುಂ ಗೈದೊಡಮುಪಕೃತಿಯಂ ಸೇವಕರ್ ಪೊಲ್ಲರಕ್ಕುಂ |
ನುಡಿದೇಂ ಕಣ್ಣಾಱೆ ನೋಡುಂ ಕೆಲರಪಕೃತಿಯಂ ಗೈದೊಡಂ ನಲ್ಲರಕ್ಕುಂ ||
ಘಡ ನಾನಾರೂಪಮಂ ತಾಳ್ವರಸರ ಮನಮಂ ಮೆಚ್ಚಿಸಲ್ತಕ್ಕುದಾರ |
ಯ್ಯೊವಡೆ ಸೇವಾಧರ್ಮಮಾರ್ಗಂ ಕಡು ಕಡಿದು ಗಡಾ ದುರ್ಗಮಂ ಯೋಗಿಗಳ್ಗಂ ||೨೬೬||

ಇದು ನನಗೆ ಗೊತ್ತಾಯಿತು. ಒಳ್ಳೆಯನ್ನು ಸಹಿಸದ ಸಮೀಪವರ್ತಿಗಳು ಯಾರೋ ಪಿಂಗಲಕನು ನನ್ನಮೇಲೆ ಕೋಪಿಸಿಕೊಳ್ಳುವಂತೆ ಮಾಡಿರುವರು. ಅದರಿಂದ ನಿರ್ದೋಷನಾದ ನನ್ನ ವಿಷಯದಲ್ಲಿಯೂ ಇಂತು ನುಡಿವರು. ಇಂತುಹೇಳಿದೆ:—

ಸವತಿಯ ಸುಕೃತಾಭ್ಯುದಯವ |
ನವಲೋಕಿಸಿ ಮಚ್ಚದಿಪ್ಪ ಸವತಿಯರೆಂತಂ ||
ತವನೀಶನೊಲ್ಮೆ ಪೆಱನೊಳ್ |
ನೆವನಿಸಿದೊಡೆ ಕಂಡು ಸೇವಕರ್ಕಳ್ ಸಹಿಸರ್ ||೨೬೭||

ಮತ್ತು ಗುಣವಂತರು ಸಮೀಪವರ್ತಿಗಳಾಗಿದ್ದರೆ ಗುಣಹೀನರಿಗೆ ಪ್ರಸಾದವುಂಟಾಗುವುದಿಲ್ಲ. ಇಂತುಹೇಳಿದೆ:—

ಕಿಱಿದುಗುಣವುಳ್ಳ ನಾಮಾ |
ನ್ಯರ ಗುಣಮೊಪ್ಪದು ಮಹಾಗುಣೋಜ್ಜ್ವಲರಿದಿರೊಳ್ ||

ಇರುಳಿನೊಳಲ್ಲದೆ ದೀವಿಗೆ |
ಯುರ್ಬಿವೆಳಗೊಪ್ಪುಗುಮೆ ಗಗನಮಣಿ ಮೂಡಲೊಡಂ ||೨೬೮||

ದಮನಕವೆಂದಿತು:—ಎಲೆ ಮಿತ್ರ! ಇಂತಾದರೆ ನಿನಗೆ ಭಯವಿಲ್ಲ. ಸ್ವಾಮಿಯು ದುರ್ಜನರಿಂದ ರೇಗಿಸಲ್ಪಟ್ಟಿದ್ದರೂ ನಿನ್ನ ವಾಕ್ಚಾತುರ್ಯದಿಂದ ಪ್ರಸನ್ನನಾಗುವನು.

ಅದೆಂದಿತು —ಎಲೆ! ನೀನಾಡಿದುದು ಯುಕ್ತವಲ್ಲ. ಅಲ್ಪರಾದ ದುರ್ಜನರ ನಡುವೆ ಇರುವುದಕ್ಕೂ ಆಗುವುದಿಲ್ಲ. ಅವರು ಮತ್ತಾವುದಾದರೂ ಉಪಾಯದಿಂದ ನಿಶ್ಚಯವಾಗಿ ನಿಪಾತಗೊಳಿಸುವರು. ಇಂತು ಹೇಳಿದೆ :—

ಲೋಕದೆ ನೀಚರ್ ಚದುರರ |
ನೇಕರ್ ಮಾಯೋಪಜೀವಿಗಳ್ ಬಗೆಂದೆ ಕಾ ||
ರ್ಯಾಕಾರ್ಯಮನೆಸಗಿದಪರ್ |
ಕಾಕಾದಿಗಳುಷ್ಟ್ರವಿಷಯದಲ್ಲೆಸಗಿದವೋಲ್ ||೨೬೯||

ದಮನಕವು ಇದೆಂತೆನಲು, ಅದೆಂದಿತು:—

ಕಥೆ ೧೦.

ಒಂದುಕಾಡಿನಲ್ಲಿ ಮದೋತ್ಕಟವೆಂಬ ಸಿಂಹವಿದ್ದಿತು. ಅದನ್ನು ಹುಲಿಕಾಗೆನರಿಗಳು ಅನುಸರಿಸಿಕೊಂಡಿದ್ದುವು. ಅವು ಒಂದುಕಾಲದಲ್ಲಿ ಅತ್ತಿತ್ತ ತಿರುಗುತ್ತಿರುವಾಗ ಗುಂಪಿನಿಂದ ತಪ್ಪಿಸಿಕೊಂಡ ಕ್ರಥನಕವೆಂಬ ಒಂಟೆ ಕಣ್ಣಿಗೆ ಬಿದ್ದಿತು. ಸಿಂಹವು—ಅಹಹ! ಈ ಜಂತು ಅಪೂರ್ವವಾಗಿದೆ. ಇದು ಅರಣ್ಯದದೋ? ಊರದೋ? ವಿಚಾರಿಸಿ—ಎನಲು, ಕಾಗೆ ಆವಾತಂ ಕೇಳಿ—ಎಲೈ ಸ್ವಾಮಿಯೆ! ಇದು ಊರದು; ಒಂಟೆಯೆಂಬ ಪ್ರಾಣಿ; ನಿನಗೆ ತಿನ್ನತಕ್ಕುದು. ಆದರಿಂದ ಕೊಲ್ಲು—ಎಂದಿತು.

ಸಿಂಹವಿಂತೆಂದಿತು:—ಮನೆಗೆ ಬಂದುದನ್ನು ನಾನು ಕೊಲ್ಲೆನು. ಇಂತುಹೇಳಿದೆ:—

ಒದವಿರೆ ನಂಬುಗೆಯುಳ್ಕಿದೆ |
ಸದನಕೆ ನಡೆತಂದ ಪಗೆಯನಾದೊಡಮಾವಂ ||
ಸಗೆದಪನಾತನ ಪಾತಕ |
ವದು ನೂರ್ಱುಂ ಬ್ರಹ್ಮಹತಿಯ ಪಾಪಕ್ಕೆ ಸಮಂ ||೨೭೦||

ಆದಕಾರಣ ಅಭಯವಿತ್ತು ಇದನ್ನು ನನ್ನ ಬಳಿಗೆ ಕರೆದುಕೊಂಡು ಬನ್ನಿ. ಇದು ಇಲ್ಲಿಗೆ ಬರಲು ಕಾರಣವೇನೆಂಬುದನ್ನು ನಾನು ಕೇಳುವೆನು.

ಬಳಿಕ ಎಲ್ಲಾ ಮೃಗಗಳೂ ಆ ವೊಂಟೆಯನ್ನು ನಂಬುಗೆಗೊಳಿಸಿ ಅಭಯವಿತ್ತು ಸಿಂಹದ ಬಳಿಗೆ ಕರೆದುಕೊಂಡು ಬಂದು ತನ್ನ ವೃತ್ತಾಂತವೆಲ್ಲವನ್ನೂ ತಿಳಿಯಿಸಿತು. ಬಳಿಕ ಸಿಂಹವೆಂದಿತು:—ಎಲೈ ಕ್ರಥನಕ ! ನೀನು ಮತ್ತೆ ಊರಿಗೆ ಹೋಗಿ ಭಾರವನ್ನು ಹೊತ್ತು ಕಷ್ಟಪಡಬೇಡ. ಈ ಕಾಡಿನಲ್ಲಿಯೇ ನಿರ್ಭಯನಾಗಿ ಮರಕತದಂತೆ ಕಂಗೊಳಸುವ ಗರಿಕೆಗಳನ್ನು ಮೇಯುತ್ತ ಯಾವಾಗಲೂ ನನ್ನೊಡನಿರು.

ಆವೊಂಟೆ ಅಂತಾಗಲೆಂದು ಒಪ್ಪಿ ಅವುಗಳ ನಡುವೆ ಸಂಚರಿಸುತ್ತ ಎಲ್ಲಿಯೂ ಭಯವಿಲ್ಲವೆಂದು ಸುಖದಿಂದಿದ್ದಿತು. ಮತ್ತೊಂದು ದಿವಸ ಆ ಸಿಂಹಕ್ಕೆ ಆರಣ್ಯಕವಾದ ದೊಡ್ಡಾನೆಯೊಡನೆ ಯುದ್ಧವುಂಟಾಯಿತು. ಆ ಯುದ್ಧದಲ್ಲಿ ಉಂಟಾದ ದಂತಪ್ರಹಾರಗಳಿಂದ ಆ ಸಿಂಹವು ಬಾಧೆಪಡುತಿದ್ದಿತು. ಆದರೆ ಪ್ರಾಣಾಪಾಯವಾಗಲಿಲ್ಲ. ದೇಹದಲ್ಲಿ ಉಂಟಾದ ಅಶಕ್ತಿಯಿಂದ ಎಲ್ಲಿಗೆ ಹಜ್ಜೆಯಿಡುವುದಕ್ಕೂ ಆಗದೆ ಇದ್ದಿತು. ಆ ಕಾಗೆ ಮುಂತಾದುವು ಆಹಾರವಂ ಸಂಪಾದಿಸಲಾರದೆ ಹಸಿವುಗೊಂಡು ಬಹುವಾಗಿ ದುಃಖಪಡುತ್ತಿದ್ದುವು. ಅವಂಕುರಿತು ಸಿಂಹವು—ಎಲೈ ! ಎಲ್ಲಿಯಾದರೂ ಹೋಗಿ ಯಾವುದನಾದರೂ ಒಂದು ಜಂತುವನ್ನು ಹುಡುಕಿ. ನಾನು ಈ ದಶೆಯಲ್ಲಿದ್ದರೂ ಅದನ್ನು ಕೊಂದು ನಿಮಗೆ ಆಹಾರವನೊದವಿಸುವೆನು.—ಎಂದಿತು. ಅವು ಅಲ್ಲಲ್ಲಿ ಸುತ್ತಿದುವು. ಎಲ್ಲಿಯೂ ಯಾವುದೊಂದನ್ನೂ ಕಾಣಲಿಲ್ಲ. ಕಾಗೆ

ಯೂ ನರಿಯೂ ಬೇರೆ ಪರಸ್ಪರವಾಗಿ ಆಲೋಚಿಸಿದುವು. ಅವುಗಳಲ್ಲಿ ನರಿ ಕಾಗೆಯಂ ಕುರಿತು—ಎಲೆ ಕಾಗೆ! ಹೆಚ್ಚಾದ ಅಲೆತದಿಂದೇನು? ನಮ್ಮ ಪ್ರಭುವಿನ ಸನ್ನಿಧಿಯಲ್ಲಿ ಈ ಕ್ರಥನಕವು ನಂಬುಗೆಗೊಂಡಿರುವುದು. ಇದನ್ನು ಕೊಂದು ಉದರಭರಣವಂ ಮಾಡೋಣ—ಎನಲು, ಕಾಗೆ—ನೀನು ಯುಕ್ತವಾದುದನಾಡಿದೆ. ಆದರೆ ಕೊಲ್ಲುವುದಿಲ್ಲವೆಂದು ಪ್ರಭು ಇದಕ್ಕೆ ಅಭಯವಂ ಕೊಟ್ಟಿರುವನು.—ಎಂದಿತು. ನರಿ—ಎಲೈ! ಸ್ವಾಮಿಯು ಇದಂ ಸಂಹರಿಸುವಂತೆ ನಾನು ಸ್ವಾಮಿಗೆ ಬಿನ್ನವಿಸುವೆನು. ನೀವು ಇಲ್ಲಿಯೇ ಇರಿ. ನಾನು ಬೇಡಿಗೆ ಹೋಗಿ ಪ್ರಭುವಿನ ಆಜ್ಞೆಯಂ ಪಡೆದು ಬರುವೆನು—ಎಂದು ಹೇಳಿ ಸಿಂಹದ ಬಳಿಯನ್ನೈದಿ ಸಿಂಹವಂ ಕುರಿತು ಇಂತೆಂದಿತು.—ಎಲೈ ಪ್ರಭುವೆ! ನಾವು ಎಲ್ಲಾ ವನಗಳನ್ನೂ ತಿರುಗಿ ಬಂದೆವು. ಯಾವ ಪ್ರಾಣಿಯೂ ಸಿಕ್ಕಲಿಲ್ಲ. ನಾವೇನ ಮಾಡೋಣ? ಈಗ ನಾವು ಹಸಿವಿನಿಂದ ಬಂದು ಹಜ್ಜೆಯಿಡುವುದಕ್ಕೂ ಶಕ್ತಿಯಿಲ್ಲದಿರುವೆವು. ಸ್ವಾಮಿಗೂ ಪಥ್ಯ ಆದಕಾರಣ ಸ್ವಾಮಿ ಅಪ್ಪಣೆಯಂ ಕೊಟ್ಟರೆ ಕ್ರಥನಕದ ಮಾಂಸದಿಂದ ಸ್ವಾಮಿಗೆ ಪಥ್ಯವನ್ನು ನೆರವೇರಿಸುವೆವು.

ಸಿಂಹವು ಕ್ರೂರವಾದ ಆ ನುಡಿಯಂ ಕೇಳಿ ಕೋಪಗೊಂಡು ಇಂತೆಂದಿತು:—ಛೀ ನೀಚ ಪಾಪಿ! ಮತ್ತೆ ಈ ಮಾತನಾಡಿದರೆ ನಿನ್ನನ್ನು ಈ ಕ್ಷಣದಲ್ಲಿಯೇ ಕೊಲ್ಲುವೆನು. ಏಕೆಂದರೆ, ನಾನು ಅದಕ್ಕೆ ಅಭಯವಂ ಕೊಟ್ಟಿರುವೆನು. ಅದನ್ನು ಕೊಲ್ಲುವುದೆಂತು? ಇಂತು ಹೇಳಿದ:—

ಆದಂ ಮುಖ್ಯಂಗಡಮೆ |
ಲ್ಲಾ ದಾನದೊಳಭಯದಾನಮೆಂಬವೊಲುಚಿತಂ ||
ಗೋದಾನಂ ಭೂದಾನಮು |
ನ್ನೋದನದಾನಂ ಪ್ರಮುಖ್ಯಮೆನ್ನರ್ ಜಗದೊಳ್ ||೨೧||

ನರಿ ಆಮಾತನಾಲಿಸಿ ಇಂತೆಂದಿತು:—ಒಡೆಯನೆ! ಅಭಯವಂ ಕೊಟ್ಟು ನೀನು ಕೊಲ್ಲುವುದರಿಂದ ದೋಷವುಂಟು ; ಆದರೆ ಸ್ವಾಮಿಪಾದದಲ್ಲಿ ಭಕ್ತಿಯಿಂದ ಅದೇ ತನ್ನ ಶರೀರವನ್ನು ಸಮರ್ಪಿಸುವುದು. ಇದರಿಂದ ದೋಷವಿಲ್ಲ. ತನ್ನನ್ನು ಕೊಲ್ಲಬೇಕೆಂದು ಅದೇ ತಾನಾಗಿ ಅಪೇಕ್ಷಿಸಿರುವುದರಿಂದ ಕೊಲ್ಲತಕ್ಕುದು ಅಂತಲ್ಲದಿದ್ದರೆ ನಮ್ಮಲ್ಲಿ ಯಾವನನ್ನಾದರೂ ಕೊಲ್ಲಬಹುದು. ಏಕೆಂದರೆ, ಸ್ವಾಮಿ ಪಥ್ಯದಲ್ಲಿರುವುದರಿಂದ ಹಸಿವನ್ನು ತಡೆದರೆ ದೇಹಸ್ಥಿತಿ ಬೇರೆರೀತಿಗೆ ತಿರುಗುವುದು. ಆಮೇಲೆ ಸ್ವಾಮಿಗೋಸ್ಕರ ವಿನಿಯೋಗಿಸದ ನಮ್ಮ ಈ ಪ್ರಾಣಗಳಿಂದ ಫಲವೇನು ? ಸ್ವಾಮಿಪಾದದಲ್ಲಿ ಸ್ವಲ್ಪ ಅಪಾಯವುಂಟಾದರೂ ಅನಂತರ ನಾವು ಅಗ್ನಿಪ್ರವೇಶವಂ ಮಾಡಬೇಕಾಗುವುದು. ಏಕೆಂದರೆ ಇಂತು ಹೇಳಿದೆ :—

ಕುಲದೊಳ್ ಪ್ರಧಾನನಾವಂ |
ಸಲೆ ಸಲಹಲ್ವೇೞ್ಕು ಮವನನೆಲ್ಲಂದದೊಳಂ ||
ಕುಲಸಾರನಾತನೞಿದೊಡೆ |
ಕುಲಮುೞಿಯದು ಗುಂಬಮೞಿಯೆ ನಿಲ್ಲವರಂಗಳ್ ||೨೭೨||

ಆಮಾತಂ ಕೇಳಿ ಸಿಂಹವು—ಆದರೆ ತೋರಿದಂತೆ ಮಾಡಿ—ಎನಲು, ಅದು ಆ ನುಡಿಯನಾಲಿಸಿ ಥಟ್ಟನೆ ಹೊರಟು ಆವುಗಳಂ ಕುರಿತು ಇಂತೆಂದಿತು :—

ಎಲೈ ! ಒಡೆಯನಿಗೆ ಮಹತ್ತಾದ ದುರವಸ್ಥೆಯುಂಟಾಗಿರುವುದು. ಬರಿಯ ಆಲೆತದಿಂದೇನು ? ಅವನು ಹೊರತು ನಮ್ಮನ್ನು ಕಾಪಾಡುವನಿನ್ನಾವನು ? ಆದಕಾರಣ ನಾವು ಹೋಗಿ, ಹಸಿವಿನಿಂದ ಸಾಯುತ್ತಿರುವ ಸ್ವಾಮಿಗೆ ನಮ್ಮ ಶರೀರವನ್ನು ಸಮರ್ಪಿಸೋಣ. ಇದರಿಂದ ನಮ್ಮಲ್ಲಿ ಸ್ವಾಮಿಗುಂಟಾಗಿದ್ದ ಒಲ್ಮೆಗೆ ಅನೃಣತೆಯನ್ನು ಪಡೆಯಬಹುದು. ಏಕೆಂದರೆ ಇಂತು ಹೇಳಿದೆ :—

ಸರಿಸದೆ ಭೃತ್ಯನದಾವಂ |
ನಿರಿಕಿಸುತಿರೆ ಯರಸನೆಡಱನೆಯ್ದುವನೋ ತಾಂ ||
ಹರಣದೆ ಕೂಡಿರ್ಪಾಗಳೆ |
ನರಕಕೆ ಪಕ್ಕಾಗುವಂ ಗಡಾ ಭೃತ್ಯನವಂ ||೨೭೩||

ಬಳಿಕ ಅವೆಲ್ಲವೂ ಕಣ್ಣೀರುತುಂಬಿ ಮದೋತ್ಕಟದ ಬಳಿಗೆ ಬಂದು ವಂದಿಸಿ ಕುಳಿತುಕೊಂಡುವು. ಮದೋತ್ಕಟವು ನೋಡಿ ಇಂತೆಂದಿತು :— ಎಲೈ ! ಯಾವುದಾದರೂ ಮೃಗವು ಸಿಕ್ಕಿತೇ ? ಅಥವಾ ಕಣ್ಣಿಗೆ ಬಿದ್ದಿತೇ ?

ಅವುಗಳ ನಡುವೆ ಕಾಗೆಯೆಂದಿತು :—ಪ್ರಭುವೇ ! ನಾವು ಎಲ್ಲಾ ಕಡೆಯುಲ್ಲಿಯೂ ಅಲೆದೆವು. ಆದರೆ ಯಾವುದೊಂದು ಮೃಗವೂ ಸಿಕ್ಕಲಿಲ್ಲ. ಕಣ್ಣಿಗೆ ಬೀಳಲೂ ಇಲ್ಲ ಆದುದರಿಂದ ನನ್ನನ್ನು ತಿಂದು ಜೀವವನ್ನು ಉಳಿಯಿಸಿಕೊಳ್ಳಬಹುದು. ಇದರಿಂದ ಸ್ವಾಮಿಗೆ ಸ್ವಲ್ಪ ಪ್ರಾಣ ಸಮಾಧಾನವಾಗುವುದು. ನನಗಾದರೋ ಸ್ವರ್ಗಪ್ರಾಪ್ತಿಯಾಗುವುದು. ಇಂತು ಹೇಳದೆ :—

ಅರಸನ ನಿಮಿತ್ತದಿಂದಸು |
ದೆಱುವನೊ ಘನಭಕ್ತಿಯುಳ್ಳ ಸೇವಕನಾವಂ ||
ಜರೆಯುಂ ಮರಣಮುಮಿಲ್ಲದ |
ಪರಮಂ ಪದಮಂ ಕೃತಾರ್ಥನಾತಂ ಪಡೆವಂ ||೨೭೪||

ಅದನಾಲಿಸಿ ನರಿಯೆಂದಿತು :—ಎಲೈ ! ನೀನು ಅಲ್ಪವಾದ ಶರೀರವುಳ್ಳವನು ; ನಿನ್ನನ್ನು ತಿನ್ನುವುದರಿಂದ ಸ್ವಾಮಿಗೆ ಉದರಭರಣವಾಗುವುದಿಲ್ಲ. ತೃಪ್ತಿಯಾಗದ ಆಹಾರದಿಂದೇನು ಪ್ರಯೋಜನ? ಹೇಳಿಯೂ ಇದೆ :—

ಗಣಿಸದ ಕಾಗೆಯಮಾಂಸಂ |
ಸೊಣಗಂ ತಿಂದಿಟ್ಟುದದುವು ಮಲ್ಪಮಸಾರಂ ||
ತಣಿವಣಮಾತ್ಮಕ್ಕದಱಿ |
ತ್ತಣಿನಾಗದು ಬಗೆವೊಡಂತದಂ ತಿಂದೊಡಮೇಂ ||೨೭೫||

ಆದರೆ ನೀನು ಸ್ವಾಮಿಭಕ್ತಿಯಂ ಪ್ರಕಾಶಿಸಿದಂತಾಯಿತು. ಸ್ವಾಮಿಯ ಅನ್ನವನ್ನು ತಿಂದುದಕ್ಕೆ ಅನೃಣನೆನಿಸಿಕೊಂಡೆ. ಇಹಪರವೆರಡರಲ್ಲಿಯೂ ಒಳ್ಳೆದನಾದೆ. ನೀನು ಒತ್ತು. ನಾನು ಸ್ವಾಮಿಗೆ ಬಿನ್ನವಿಸಿಕೊಳ್ಳುವೆನು.

ಹಾಗೆ ಒತ್ತಿ ಕುಳಿತುಕೊಳ್ಳಲು, ನರಿ ಮುಂದೆ ಬಂದು ಅಡ್ಡಬಿದ್ದು ಕುಳಿತುಕೊಂಡು—ಸ್ವಾಮಿಯೆ! ಈಗ ನೀನು ನನ್ನ ಪ್ರಾಣಗಳನ್ನು ಗ್ರಹಿಸಿ ಆತ್ಮರಕ್ಷಣೆಯಂ ಮಾಡಿಕೊಂಡು ನನಗೆ ಇಹಪರವೆರಡರಲ್ಲಿಯೂ ಗತಿಯನ್ನುಂಟುಮಾಡು. ಏಕೆಂದರೆ ಇಂತು ಹೇಳಿದೆ :—

ಆದಂ ಪೊರೆವೊಡೆಯನ ವಶ |
ಮಾದುವು ಪಣದಾರ್ಜಿಸಿರ್ಪ ಸೇವಕರಸುಗಳ್ ||
ಆದುದಱಿಂದೊಡೆಯಂ ಸಂ |
ಪಾದಿಸಿದವರಸುಗಳಂ ಕೊಳಲ್ ತಪ್ಪಿಲ್ಲಂ ||೨೭೬||

ಬಳಿಕ ಹುಲಿ ಅವನಾತಂ ಕೇಳಿ—ಎಲೈ! ನೀನು ತಕ್ಕುದನಾಡಿದೆ. ಆದರೆ ನೀನೂ ಅಲ್ಪಶರೀರವುಳ್ಳವನು; ಮತ್ತು ಸ್ವಾಮಿಯ ಜಾತಿಗೆ ಸೇರಿದವನು. ನಖಾಯುಧನಾದುದರಿಂದ ಭಕ್ಷಿಸಲು ಅಯೋಗ್ಯನಾದವನೇ ಸರಿ. ಇಂತು ಹೇಳಿದೆ :—

ಅಸು ಕೊರಲನೆಯ್ದೆಯುಂ ಭ |
ಕ್ಷಿಸಬಾರದಭಕ್ಷ್ಯವೆನಿಪುದಂ ಮತಿಯುಳ್ಳಂ ||
ನಸುಭಕ್ಷಿಸಿದೊಡಮದಱಿಂ |
ಮಸಗಿದಪಾಪಂ ಕಿಡಿಪ್ಪುದಿಹಮುಂ ಪರಮುಂ ||೨೭೭||

ಆದರೆ ನೀನು ನಿನ್ನ ಕುಲೀನತೆಯನ್ನು ತೋರಿದೆ. ಇದು ಯುಕ್ತವಾದ ಮಾತು :—

ಒದವುವ ಸಮಯಕ್ಕೆನುತುಂ |
ಪದೆದವನೀಶರ್ ಕುಲೀನರಂ ಸಂಗ್ರಹಿಪರ್ ||
ಅದಱಿನವಂ ಮೊದಲೊಳ್ ಮ |
ಧ್ಯದೊಳಂ ಕಡೆಯೊಳಗಮೆಡರ್ಗೆ ತಾವೆಡೆಯೆನಿಸರ್ ||೨೭೮||

ಆದಕಾರಣ ನೀನತ್ತಕಡೆ ಬತ್ತು, ನಾನು ಸ್ವಾಮಿಗೆ ಬಿನ್ನವಿಸಿ ಕೊಳ್ಳುವೆನು. ಸರಿ ಅತ್ತ ಕಡೆ ಬತ್ತಲು. ಕಾಲಿ ಅಡ್ಡಬಿದ್ದು ಮದೋತ್ಕಟವಂ ಕುರಿತು ಇಂತೆಂದಿತು :—ಸ್ವಾಮಿಯೆ ! ಈಗ ನನ್ನ ಪ್ರಾಣಗಳಿಂದ ನಿನ್ನ ಆತ್ಮವನ್ನು ರಕ್ಷಿಸು. ನನಗೆ ಸ್ವರ್ಗದಲ್ಲಿ ನಿತ್ಯವಾಸವನ್ನು ಅನುಗ್ರಹಿಸು. ಭೂಮಿಯಲ್ಲಿ ಮಹತ್ತಾದ ಕೀರ್ತಿಯನ್ನು ಹರಡು. ಈ ವಿಷಯದಲ್ಲಿ ವಿಕಲ್ಪವನ್ನು ಮಾಡಬಾರದು. ಇಂತುಹೇಳಿದೆ :—

ಒಡೆಯನ ಬೆಸಸಿದ ಕಜ್ಜದೆ |
ಮಡಿದನುವರ್ತಿಗಳೆನಿಪ್ಪ ಭೃತ್ಯರ್ಗೆಹದೊಳ್ ||
ಕಿಡದೊಳ್ಪ ಸಮುಳ್ಕುಂ ಸಂ |
ಗಡಿಕುಂ ಸ್ವರ್ಲೋಕದಲ್ಲಿ ನಿತ್ಯವಾಸಂ ||೨೭೯||

ಅದಂ ಕೇಳಿ ಕ್ರಥನಕವು ತನ್ನಲ್ಲಿ, ಇವರೆಲ್ಲರೂ ಪ್ರಿಯವಾದ ಮಾತುಗಳನಾಡಿದರು; ಆದರೆ ಸ್ವಾಮಿ ಯಾವನನ್ನೂ ನಾಶಮಾಡಲಿಲ್ಲ. ಆದರಿಂದ ಈಸಮಯದಲ್ಲಿ ನಾನೂ ಬಿನ್ನವಿಸುವೆನು. ನನ್ನ ಮಾತನ್ನು ಇವರು ಮೂವರೂ ಅದೇರೀತಿ ಸಂಭಾವಿಸುವರು-ಎಂದು ನಿಶ್ಚಯಿಸಿ ಇಂತೆಂದಿತು :— ಎಲೈ ! ನೀನು ಸತ್ಯವಾದ ಮಾತನಾಡಿದೆ. ಆದರೆ ನೀನೂ ನಖಾಯುಧನು. ಅದೆಂತು ಸ್ವಾಮಿ ಸ್ವಜಾತಿಗೆ ಸೇರಿದ ನಿನ್ನನ್ನು ಭಕ್ಷಿಸುವನು ? ಇಂತುಹೇಳಿದೆ :—

ಬಗೆಯಿಂದಮಾದೊಡಂ ಕೇ |
ಡುಗಳನದಾವಂ ಸ್ವಕೀಯಜನಕೆಣಿಸುವನೋ ||

ಬಗೆವೊಡವಂಗೆ ದಳಾ ಕೇ |
ಡುಗಳೇ ಪ್ರಾಪ್ತಂಗಳಕ್ಕುಮಿಹದೊಳ್ ಪರದೊಳ್ ||೨೮೦||

ಆದುದರಿಂದ ನೀನು ಅತ್ತನಡೆ. ನಾನು ಸ್ವಾಮಿಗೆ ವಿಜ್ಞಾಪಿಸಿಕೊಳ್ಳುವೆನು.

ಹುಲಿ ದೂರಸರಿಯಲು, ಕ್ರಥನಕವು ಮುಂದೆ ನಿಂದು ಅಭಿವಂದಿಸಿ ಇಂತೆಂದಿತು :—ಸ್ವಾಮಿ ! ನಿನಗೆ ಇವರು ಅಭಕ್ಷ್ಯರಾದವರು ನನ್ನ ಪ್ರಾಣಗಳಿಂದ ನಿನ್ನ ಹಸಿವಂ ನಿವಾರಿಸಿಕೊಳ್ಳುವುದು. ಇದರಿಂದ ನನಗೆ ಇಹವೂ ಪರವೂ ಉಂಟು. ಇಂತುಹೇಳಿದೆ :—

ರಾಗದಿ ನೊಡೆಯಂಗಸುವಂ |
ನೀಗಿದ ನಲ್ಲಾಳ್ಗಳಾಂಪರೆಂತಹಗತಿಯಂ ||
ಯೋಗಿಗಳುಂ ವಿಧಿಯಿಂದಂ |
ಯಾಗವನೆಸಗಿದರುಮೆಯ್ದರಂತಹ ಗತಿಯಂ ||೨೮೧||

ಎಂದು ಕ್ರಥನಕವು ಹೇಳಲು, ಒಡನೆಯೆ ನರಿಯೂ ಕಾಗೆಯೂ ಅದರ ಹೊಟ್ಟೆಯನ್ನು ಸೀಳಿದುವು. ಅದು ಪ್ರಾಣಗಳನ್ನು ಬಿಟ್ಟಿತು. ಬಳಿಕ ಚದುರತನವುಳ್ಳ ಕ್ಷುದ್ರವೂಯಾವಿಗಳೆಲ್ಲವೂ ಭಕ್ಷಿಸಿದುವು. ಇದರಿಂದ ನಾನು ಹೇಳುವೆನು :—" ಲೋಕದೆ ನೀಚರ್ ಚದುರರನೇಕರ್...... " ಎಂದು.

ನಿನ್ನ ಸ್ವಾಮಿಯ ಬಳಿಯಲ್ಲಿ ಕ್ಷುದ್ರಪರಿವಾರವು ಸೇರಿರುವುದು. ಇದನ್ನು ನಾನು ಚೆನ್ನಾಗಿಬಲ್ಲೆ. ಆತನು ಸಜ್ಜನರಿಗೆಸೇವ್ಯನೆನಿಸನು. ಇಂತುಹೇಳಿದೆ :—

ಮಲಿನಸ್ವಭಾವದಿಂ ಸಂ |
ಕಲಿಸಿದ ನರಪಾಲನಲ್ಲಿ ಜನನಿಕುರುಂಬಂ ||
ಖಲಗೃಧ್ರದಿಂದೆ ಕೂಡಿದ |
ಕಲಹಂಸದೊಳೆಂತುಟಂತುಟೊಲ್ಲದು ಜಗದೊಳ್ ||೨೮೨||

ಅಲ್ಲದೆ :—

ಅರಸಂ ಪರ್ದುವೊಲಿರೆಯುಂ |
ಪರಿಸೇವಿಪುದಂಜೆವೊಲ್ವ ಸಭ್ಯಕರ್ಗಳಿರಲ್ ||
ಅರಸಂಜೆವೊಲರಸಿರೆಯುಂ |
ತೊಱೆವುದು ಪರ್ದುಗಳ ವೊಲ್ವ ಸಭ್ಯಕರ್ಗಳಿರಲ್ ||೨೮೩||

ಅದರಿಂದ ನಿಶ್ಚಯವಾಗಿ ಯಾವನೋ ಒಬ್ಬ ದುರ್ಜನನು ಸ್ವಾಮಿಗೆ ನನ್ನ ವಿಷಯದಲ್ಲಿ ಕೋಪವುಂಟಾಗುವಂತೆ ಮಾಡಿರುವನು. ಅದರಿಂದಲೇ ಸ್ವಾಮಿ ಇಂತು ನುಡಿವನು. ಅಥವಾ ಇದುಂಟು. ಇಂತುಹೇಳಿದೆ :—

ಮಿದುವೆನಿಸಿದ ಜಲವಗೆವಜ |
ಳದ ಕಠಿನಸ್ಥಲಮುಮಂ ಹದಂಗೊಳಿಪುದೆನಲ್ ||
ಮಿದುಗೊಳಿಸವೆ ಮನುಜರ ಮೆ |
ಲ್ಲರ್ದೆಯಂ ಭೇದನಮನಱಿತ ಜನದ ಪಿಸುಣ್ಗಳ್ ||೨೮೪||

ಶ್ರವಣವಿಷದಿಂದೆ ಕೆಟ್ಟಂ |
ವಿವೇಕವಿಲ್ಲದವನೆಸಗನೇನೇನಂಬೌ ||
ದ್ಧವಿರಕ್ತನೆನಿಪ್ಪಂ ಮೇ |
ಣವಂ ವಲಂ ನರಕಪಾಲದೊಳ್ ಕಳ್ಗುಡಿವಂ ||೨೮೫||

ಇದು ಯುಕ್ತವಾದಮಾತು :—

ತುಱಿಯಲ್ಪಟ್ಟೊಡಮಂಘ್ರಿಯಿಂ ಲಗುಡದಿಂದಂ ಘಾತಿಸಲ್ಪಟ್ಟೊಡಂ |
ಮುಳಿಸಿಂ ಪಲ್ಗಲೊಳಾವನಂ ತುಡುಕುಗುಂ ಪಾವಾತನಂ ಕೊಲ್ಗುಗುಂ ||
ಇಳೆಯೊಳ್ ಬೇಱೆಯದೊಂದು ಪಾಂಗು ಪಿಸುಣಂಗಿರ್ಕ್ಕಂಗಡೇನೆಂಬೆನೀ |
ಖಳನೊಲ್ದೊರ್ವನ ಕರ್ಣಮಂ ತುಡುಕಿನೀಡುಂ ಕೊಲ್ಗುಮಿನ್ನೊರ್ವನಂ ||೨೮೬||

ಅಕ್ಕಟ ಖಳಸರ್ಪಂ ಕ್ಕೊಂ |
ದಿಕ್ಕುವ ಬಗೆಯಹಹ ಬೇಱೆಯೆಂದೆನಿಸಿರ್ಕ್ಕಂ ||

ನಿಕ್ಕುವವೊರ್ವನ ಕಿವಿಗೊಳೆ |
ಚೆಕ್ಕನೆ ಪೇಱನೊರ್ವ್ವ ನುಱದಪಂ ಜೀವಿತಮಂ ||೨೮೭||

ಇಂತಿದ್ದರೂ ಈಗ ಏನುಮಾಡಬಹುದೆಂದು ಸ್ನೇಹದಿಂದ ನಿನ್ನನ್ನು ಬೆಸಗೊಳ್ಳುವೆನು.

ದಮನಕವೆಂದಿತು :—ಇಂತಹ ನೀಚನಾದ ಸ್ವಾಮಿಯನ್ನು ಸೇವಿಸಿಕೊಂಡಿರುವುದಕ್ಕಿಂತಲೂ ದೇಶಾಂತರಕ್ಕೆ ಹೊರಟು ಹೋಗುವುದು ಮೇಲೆಂದು ನನಗೆ ತೋರುವುದು. ಇಂತುಹೇಳದೆ :—

ತರದಿಂ ಕಾರ್ಯಾಕಾರ್ಯಮ |
ನಱಯದನಂ ಗರ್ವಯುತನನುನ್ಮಾರ್ಗದೆ ನಿ ||
ರ್ಭರದಿಂ ನಡೆವವನಂ ನಿಜ |
ಗುರುವುಮನುಱವುದು ಜನಕ್ಕೆ ವಿಹಿತವೆನಿಕ್ಕುಂ ||೨೮೮||

ಸಂಜೀವಕವೆಂದಿತು :—ನಮ್ಮ ವಿಷಯದಲ್ಲಿ ಸ್ವಾಮಿ ಕೋಪಗೊಂಡಿರುವಾಗ ಹೊರಟುಹೋಗಲು ಶಕ್ಯವಲ್ಲ. ಮತ್ತೊಂದು ಎಡೆಯಲ್ಲಿ ಹೋಗಿದ್ದರೂ ನಿರಾಳವಿರುವುದಿಲ್ಲ. ಇಂತುಹೇಳದೆ :—

ಪಿರಿಯರ್ಗ್ಗೆ ಪೊಲ್ಲದೆಸಗಿದ |
ನರನಾಂ ದೂರಗತನೆಂದು ನಿಶ್ಚಿಂತತೆಯಿಂ ||
ದಿರಲಾಗದು ಮತಿಯುತರವ |
ರುರುಭುಜರಱುಗುಲಿಯ ನಿಱವರಂತಹಭುಜದಿಂ ||೨೮೯||

ಆದಕಾರಣ ಯುದ್ಧವನ್ನು ಬಿಟ್ಟು ಶ್ರೇಯಸ್ಕರವಾದುದು ಮತ್ತೊಂದಿಲ್ಲ. ಇಂತುಹೇಳದೆ :—

ಪದೆಪಿಂ ರಣದೊಳ್ ಮಡಿವವ |
ರದಾವುವಂ ಜಣದೆ ಗತಿಗಳಂ ಪಡೆವರವಂ ||
ತ್ರಿದಿವಸ್ಪೃಹರುಂ ವರತೀ |
ರ್ಥದೆ ದಾನದೆ ತಪದೆ ಮೇಣ್ ಸುವೃತ್ತದೆ ಪಡೆಯರ್ ||೨೯೦||

ಬವರದೆ ಮಡಿದೊಡೆ ಪಡೆವರ್ |
ದಿವಮಂ ಬರ್ದುಕಿದೊಡೆ ಜಸಮನಾಂಪರ್ ಬೀರರ್ ||
ಭುವನಕ್ಕಗ್ಗಳವೆಂದೆನಿ |
ಪಿವರೀಗುಣವೆರಡುಮಿತರದುರ್ಲಭವಲ್ತೇ ||೬೧||

ಬವರದೆ ಬೀರನ ನೊಸಲಿಂ |
ಸ್ರವಿಸುವ ಬಿಸುನೆತ್ತರಾವುದಾತನ ಬಾಯ್ಗ್ಗೆ ||
ದುವುದದು ಜನ್ನದೊಳೆಸಗಿದ |
ಸುವಿಧಾನದ ಸೋಮರಸದ ಪಾನಕ್ಕೆ ಸಮಂ ||೬೨||

ಅಂತಲ್ಲದೆ :—

ವರಹೋಮಂಗಳಿನುಕ್ತದಾನವಿಧಿಯಿಂ ವಿಪ್ರೇಂದ್ರಸಂಪೂಜೆಯಿಂ |
ಪಿರಿದುಂ ದಕ್ಷಿಣೆಯುಳ್ಳ ಸತ್ಕ್ರತುಗಳಿಂ ಸತ್ತೀರ್ಥಸಂಚಾರದಿಂ ||
ಪರಮಕ್ಷೇತ್ರನಿವಾಸದಿಂದೆ ಪಲವುಂಚಾಂದ್ರಾಯಣಾದ್ಯಂಗಳಿಂ |
ಪೆಱರೊಲ್ದಾರ್ಜಿಪ ಪುಣ್ಯಮಂ ರಣಹತರ್ ತಾಂಬೇಗದಿಂದೆಯ್ದುವರ್ ||೬೩||

ಆದಂಕೇಳ ದಮನಕವು ತನ್ನಲ್ಲಿ—ಈ ದುರಾತ್ಮನು ಯುದ್ಧವಂ ಮಾಡಲು ನಿಶ್ಚಯಿಸಿರುವಂತೆ ತೋರುವುದು. ಆದರೆ ಒಂದುವೇಳೆ ತೀಕ್ಷ್ಣಗಳಾದ ಕೋಡುಗಳಿಂದ ಸ್ವಾಮಿಯನ್ನು ತಿವಿದಿಟ್ಟರೆ ಮಹತ್ತಾದ ಅನರ್ಥವುಂಟಾದೀತು ; ಆದುದರಿಂದ ಮತ್ತೆ ನನ್ನ ಬುದ್ಧಿಯನ್ನು ಉಪಯೋಗಿಸಿ ಇವನು ದೇಶಾಂತರಕ್ಕೆ ಹೊರಟುಹೋಗುವಂತೆ ಮಾಡುವೆನು—ಎಂದು ಚಿಂತಿಸಿ ಇಂತೆಂದಿತು :—ಎಲೈ ! ನೀನು ಚೆನ್ನಾಗಿ ಹೇಳಿದೆ ; ಆದರೆ ಸ್ವಾಮಿ ಭೃತ್ಯರಿಗೆ ಯುದ್ಧವೆಂಬುದು ಸರಿಯಲ್ಲ. ಏಕೆಂದರೆ ಇಂತುಹೇಳಿದೆ :—

ಬಲವೊಂದಿದಪಗೆ ದಿಟ್ಟಿಗೆ |
ಪೊಲನೆನೆ ದುರ್ಬಲನಡಂಗಿ ತಾನಿರವೇಳ್ಕುಂ ||

ಬಲಶಾಲಿಗಳೆಂದೆನಿಪರ್ !
ಸಲೆ ಶಾರದಚಂದ್ರನಂತೆ ವೆಱ ಸುಳ್ವೇಱುಗುಂ ||೨೯೪||

ಪಗೆವನ ಬಲಮಂ ಬಗೆಯದೆ |
ನೆಗಱ್ಗಂ* ಬೇರಮನದಾವನವನೆಯ್ದುವ ನಾ ||
ಪಗೆಯತ್ತಣಿನೇಳಿದಪಂ |
ಮಿಗೆ ಟಿಟ್ಟಿಭದತ್ತಣಿಂದೆ ಕಡಲೆಯ್ದಿದವೋಲ್ ||೨೯೫||

ಸಂಜೀವಕವು ಇದೆಂತೆನಲು, ಅದೆಂದಿತು :—

ಕಥೆ ೧೧

ಅದೊಂದು ಸಮುದ್ರತೀರದ ಬಂದೆಡೆಯಲ್ಲಿ ಟಿಟ್ಟಿಭಪಕ್ಷಿದಂಪತಿಗಳು ವಾಸಮಾಡುತಿದ್ದುವು ಕೆಲವುಕಾಲ ಕಳೆಯಲು ಟಿಟ್ಟಿಭಿ ಗರ್ಭವನ್ನು ಧರಿಸಿತು. ಪ್ರಸವಕಾಲ ಆಸನ್ನವಾಗಲು ಟಿಟ್ಟಿಭವನ್ನು ಕುರಿತು—ಎಲೈ ವಲ್ಲಭ ! ನನಗೆ ಪ್ರಸವಕಾಲ, ಆದರಿಂದ ನಿರ್ಬಾಧವಾದ ಯಾವುದಾದರೂ ಬಂದು ಸ್ಥಳವನ್ನು ಆಲೋಚಿಸು ಅಲ್ಲಿ ನಾನು ಮೊಟ್ಟೆಗಳನಿಡುವೆನು—ಎನಲು, ಅದು—ಪ್ರಿಯೆ ! ಈ ಸಮುದ್ರಪ್ರದೇಶವು ರಮ್ಯವಾಗಿರುವುದು. ಆದರಿಂದ ಇಲ್ಲಿಯೇ ನೀನು ಪ್ರಸವಿಸಬಹುದು—ಎಂದಿತು.

ಟಿಟ್ಟಿಭಿಯೆಂದಿತು :—ಹುಣ್ಣಿಮೆಯದಿನ ಈ ಸಮುದ್ರದ ಕರೆಯಲ್ಲಿ ಅಲೆಯ ಹೊಡೆತ. ಮದಿಸಿದ ಆನೆಯನ್ನೂ ಎಳೆದಿಡುವುದು. ಅದಕಾರಣ ದೂರವಾದ ಮತ್ತೊಂದೆಡೆಯನ್ನು ಹುಡುಕು.

ಟಿಟ್ಟಿಭವು ಅದನಾಲಿಸಿ ನಕ್ಕು—ಪ್ರಿಯೆ ! ನೀನು ಬಳ್ಳೆಯ ಮಾತನಾಡಿದೆ. ನನ್ನ ಸಂತತಿಯನ್ನು ಹಾಳುಮಾಡಲು ಸಮುದ್ರಕ್ಕೆ ಎಷ್ಟರಶಕ್ತಿ? ಏನು ನೀನು ಕೇಳಿದುದಿಲ್ಲವೆ ?

ಬಾಂಬರಮಳುರುತ್ತುಂ ಪೋಗೆ |
ಗಿಂಬೆನಿಸದೆ ಬೆಗಡುಗೊಳಿಸಿ ಪಜ್ಜಳಿಸುವ ಕಿ ||

ಷ್ಟಂ ಬಗೆಯದೆ ಸಂಭ್ರಮದೆ ಕು |
ರುಂಬನದಾವಂ ಸಿಡೀಳ್ಗೆಯಿಂದಂ ಪುಗುವಂ ||೨೯೬||
    ಮದಗಜದ ಕುಂಭಮಂ ಸೀ |
ಳ್ದುದಱಿಂದೆ ಒಱಲ್ದು ಮಿೞ್ತುಗೆಣೆಯೆನಿಸಿ ಮಲಂ ||
ಗಿದ ಸಿಂಗಮನೆಬ್ಬಿರಿಸುವ |
ನದಾವನಂತಕನ ಪುರಮನೀಕ್ಷಿಪಬಗೆಯಿಂ ||೨೯೭||
    ಮನುಜನದಾವಂ ಜನರಾ |
ಯನ ಮನೆಯಂ ಭರದೆ ಪೊಕ್ಕು ಪೇೞದೆ ಮನದೊಳ್ ||
ನಿನಗಸಿತಾರ್ಪುಗಳೊಡೆ ಕೊ |
ಳ್ಳೆನತಸುಗಳನೆಂದವಂಗೆ ತಾಂ ನಿಯಮಿಸುವಂ ||೨೯೮||
    ತಳೆದೈಕಿಲ ಬಿಂದುಗಳಂ |
ಬೆಳಗಿನ ತಣ್ಗಾಳಿ ತಣ್ಣನೈತರುತಿರೆ ಶೀ ||
ತಳಜಳಸೇವನೆಯಿಂದಂ |
ಜಳಿಯಂ ಗುಣದೋಷವಱಿಯನಾವಂ ಕಳೆವೊಂ ||೨೯೯||

ಆದರಿಂದ ಶಂಕೆಯಂ ಬಿಟ್ಟು ಇಲ್ಲಿಯೇ ಪ್ರಸವಿಸು. ಇಂತು ಹೇಳದೆ:-

    ಮನದಂಜಿ ತಿರಸ್ಕಾರಕೆ |
ಮನುಜನದಾವಂ ತನತ್ತುತಾಣಮನುೞಿವಂ ||
ಜನನಿಯುವನಿಂದೆ ಪುತ್ರಿಣಿ |
ಯೆನಿಪೊಡೆ ಬಂಜೆಯನದೇಕಪುತ್ರಿಣಿಯೆಂಬರ್ ||೩೦೦||

ಅದನಾಲಿಸಿ ಸಮುದ್ರವು ತನ್ನಲ್ಲಿ—ಅಹಹ! ಅಲ್ಪವಾದ ಈ ಪಕ್ಷಿಯ ಬಿಂಕವು ಆಶ್ಚರ್ಯಕರವು. ಅಥವಾ ಆಶ್ಚರ್ಯವೇನು ? ಯುಕ್ತವಾದ ಈ ಮಾತು ಹೇಳಲ್ಪಟ್ಟಿರುವುದು :—

    ಕಾಲೆರಡಂ ಟಿಟ್ಟಿಭವುಂ |
ಮೇಲೆತ್ತಿರ್ದಪ್ಪುದು ಬಾನೆ ಭಂಗದ ಭಯದಿಂ ||

ಆಲೋಕಿಪೊಡಾವಂಗಿರ |
ದೀಲೋಕದೆ ಸು.*ದ್ದ ತನ್ನ ಮನದಭಿಮಾನಂ ||೩೦೧||

ಆದರಿಂದ ಇದರ ಶಕ್ತಿಯನ್ನು ನಾನು ಕುತೂಹಲದಿಂದ ತಿಳಿವೆನು. ಇದರ ಮೊಟ್ಟೆಗಳನ್ನು ನಾನು ಹಾಳುಮಾಡಿದರೆ ಇದು ನನಗೆ ಏನುಮಾಡ ಬಲ್ಲದು ?—ಎಂದು ಚಿಂತಿಸುತಿದ್ದಿತು.

ಬಳಿಕ ಪ್ರಸವವಾಯಿತು. ಟಿಟ್ಟಿಭಿ ಜೀವನಕ್ಕೋಸ್ಕರ ಹೊರಗೆ ಹೋಗಿರಲು, ಸಮುದ್ರವು ಅಲೆಗಳ ನೆವದಿಂದ ಮೊಟ್ಟೆಗಳನ್ನು ಅಪಹರಿಸಿತು. ಆಮೇಲೆ ಟಿಟ್ಟಿಭಿ ಬಂದು ಬರಿದಾದ ಪ್ರಸವಸ್ಥಾನವನ್ನು ನೋಡಿ ಪ್ರಲಪಿಸುತ್ತ ಟಿಟ್ಟಿಭವಂ ಕುರಿತು ಇಂತೆಂದಿತು:—ಎಲೆ ಮೂಢ ! ಸಮುದ್ರದ ಕರೆಯಲ್ಲಿ ಮೊಟ್ಟೆಗಳಿಗೆ ನಾಶವುಂಟಾಗುವುದು. ಆದರಿಂದ ದೂರ ಹೋಗೋಣ—ಎಂದು ನಾನು ನಿನಗೆ ಹೇಳಿದೆ. ಆದರೆ ನೀನು ಅಜ್ಞತೆಯಿಂದ ಬಿಂಕಗೊಂಡು ನನ್ನಮಾತನ್ನು ಲಕ್ಷಿಸಲಿಲ್ಲ.

ಇದು ಯುಕ್ತವಾದ ಮಾತು :—

ಹಿತಮಂ ಬಯಪ ನಿಜಸ್ನೇ |
ಹಿತರುಸಿರ್ವೊಳ್ಳಿತನಾವನೊಲ್ದಾಲಿಸನೋ ||
ಮತಿರಹಿತನೆನಿಪಪ್ಪಾತಂ |
ಧೃತಕಾಷ್ಠದೆ ಜಗುಳ್ದ ಕೂರ್ಮದಂತೆವೊಲಳಿಗುಂ ||೩೦೨||

ಟಿಟ್ಟಿಭವು ಇದು ಎಂತೆನಲು ಅದಿಂತೆಂದಿತು :—

ಕಥೆ ೧೨.

ಒಂದು ಸರೋವರದಲ್ಲಿ ಕಂಬುಗ್ರೀವನೆಂಬ ಒಂದು ಆಮೆಯಿದ್ದಿತು. ಸಂಕಟವಿಕಟಂಗಳೆಂಬ ಎರಡು ಹಂಸಪಕ್ಷಿಗಳು ಅದರಸಂಗಡ ಪರಮಸ್ನೇಹವಂ ಬಳೆಯಿಸಿ ನಿತ್ಯವೂ ಆ ಸರೋವರದ ತಡಿಗೆ ಬಂದು

ಆ ಆಮೆಯೊಡನೆ ಅನೇಕವಾದ ದೇವರ್ಷಿಗಳ ಮತ್ತು ಮಹರ್ಷಿಗಳ ಪುಣ್ಯ ಕಥೆಗಳನ್ನು ಪ್ರಸ್ತಾವಿಸುತಿದ್ದು ಸಂಜೆಯಾಗುವುದೂ ತಮ್ಮಗೂಡಿಗೆ ಹೊರಟುಹೋಗುತಿದ್ದುವು.

ಇಂತಿರಲು ಮಳೆಯಿಲ್ಲದುದರಿಂದ ಸರಸ್ಸು ಮೆಲ್ಲಮೆಲ್ಲನೆ ಬತ್ತಿತು. ಬಳಿಕ ಆ ಎರಡು ಹಂಸಗಳು ಆ ಆಮೆಯ ದುಃಖವನ್ನು ಕಂಡು ತಾವೂ ದುಃಖಿಸಿ ಇಂತೆಂದುವು :—ಎಲೆ ಮಿತ್ರ! ಈ ಸರೋವರದಲ್ಲಿ ಕೆಸರು ಮಾತ್ರ ಉಳದಿದೆ. ನೀನು ಏನಾಗುವೆಯೋ ಎಂದು ನಮ್ಮ ಮನಸದಲ್ಲಿ ವ್ಯಾಕುಲತೆಯುಂಟಾಗಿರುವುದು.

ಕಂಬುಗ್ರೀವವೆಂದಿತು :—ಈಗ ನೀರು ಇಲ್ಲದುದರಿಂದ ಬದುಕು ವುದಕ್ಕಾಗುವುದಿಲ್ಲ. ಆದರೂ ನೀವೇನಾದರೂ ಉಪಾಯವನ್ನು ಆಲೋ ಚಿಸಬೇಕು. ಇಂತು ಹೇಳದೆ :—

ಎಡಱೊಗೆದ ಕಾಲದೊಳಮೆರ್ದೆ |
ಗಿಡಬಾರದದೊರ್ಮೆ ಧೈರ್ಯದಿಂ ಲೇಸಾಂಪಂ ||
ಕಡಲೊಳ್ ಪಡಂಗು ಭಂಗಂ |
ಒಡೆದೊಡನೆಳಸನೆ ಪಡಂಗುವರದಂ ದಾಂಟಲ್ ||೩೦೩||

ಅಲ್ಲದೆ :—

ಸಂಕಟಮಡಸಿರ್ಪಂದಾ |
ಶಂಕಿಪ ಸುಹೃದಿಷ್ಟಬಂಧುಜನಮಂ ವಿಬುಧಂ ||
ಶಂಕಿಸದೆ ಸಂಕವಿಡಲೆಂ |
ದುಂ ಕಡುಯತ್ನಿಸುಪನೆಂಥಿದಂ ಮನುವೆಂಗುಂ ||೩೦೪||

ಆದಕಾರಣ ಎಲ್ಲಿಯಾದರೂ ಗಟ್ಟಿಯಾದ ಹಗ್ಗವನ್ನಾಗಲಿ, ಸಣ್ಣ ಕಡ್ಡಿಯನ್ನಾಗಲಿ ತೆಗೆದುಕೊಂಡುಬನ್ನಿ. ಹೆಚ್ಚಾದ ನೀರುಳ್ಳ ಸರೋವರ ವನ್ನು ಹುಡುಕಿ. ನಾನು ಕಡ್ಡಿಯ ಮಧ್ಯದೇಶವನ್ನು ಹಲ್ಲುಗಳಿಂದ

ಹಿಡಿದುಕೊಂಡರೆ ನೀವು ಅದರ ಕೊನೆಗಳನ್ನು ನನ್ನೊಡನೆ ಹಿಡಿದು ತೆಗೆದುಕೊಂಡು ಹೋಗಿ ಆ ಸರೋವರವನ್ನು ಸೇರಿಸಬಹುದು.

ಆವೆಂದುವು :—ಎಲೆ ಮಿತ್ರ ! ನೀನು ಹೇಳಿದಂತೆ ಮಾಡುವೆವು; ಆದರೆ ನೀನು ಮೌನವ್ರತದಿಂದಿರಬೇಕು. ಇರದಿದ್ದರೆ ನೀನು ಕಡ್ಡಿಯಿಂದ ಬಿದ್ದುಹೋಗುವೆ.

ಅಂತು ಕಡ್ಡಿಯಂ ಪಿಡಿದು ಹೋಗುತಿರುವಾಗ ಕಂಬುಗ್ರೀವವು ಕೆಳಗೆ ಇದ್ದ ಒಂದು ಪಟ್ಟಣವಂ ನೋಡಿತು. ಅಲ್ಲಿದ್ದ ಜನಗಳು ಅಂತು ಒಯ್ಯಲ್ಪಡುತಿರುವ ಆಮೆಯಂ ನೋಡಿ ಆಶ್ಚರ್ಯವಾಂತು—ಅಹಹ ! ಎರಡು ಪಕ್ಷಿಗಳು ಚಕ್ರಾಕಾರವಾದುದನಾವುದನೋ ಒಯ್ಯುತಿರುವುವು. ನೋಡಿ ನೋಡಿ—ಎನಲು, ಅವರ ಕೋಲಾಹಲವನ್ನು ಕೇಳಿ ಕಂಬುಗ್ರೀವವು—ಇದೇನು ಕೋಲಾಹಲ ?—ಎನ್ನುವಷ್ಟರಲ್ಲಿ ಕೆಳಗೆ ಬಿದ್ದು ಜನಗಳಿಂದ ಖಂಡಖಂಡವಾಗಿ ಮಾಡಲ್ಪಟ್ಟಿತು. ಇದರಿಂದ ನಾನು ಹೇಳುವೆನು—ಹಿತಮಂ ಬಯಸ ನಿಜಸ್ನೇ | ಹಿತರುಸಿರ್ದೊಳ್ಬ್ವಾತಂ......... || ಎಂದು.

ಅಂತಲ್ಲದೆ :—

· ಚೆನ್ನೆನೆಯಭಿವರ್ಧಿಸುಗುಂ |
ಸನ್ನಿಯನಾಗತವಿಧಾತೃವುಂ ತಾಂ ಪ್ರತ್ಯು ||
ತ್ಪನ್ನಮತಿಯುಮೇನೆಂಬೆಂ |
ಕೆನ್ನಂ ನಾಶಮನೆ ಯದ್ಭವಿಷ್ಯಂ ಪಡೆಗುಂ ||೩೦೫||

ಟಿಟ್ಟಿಭವು—ಇದೆಂತೆನಲು, ಟಿಟ್ಟಿಭಿ ಇಂತೆಂದಿತು :—

ಕಥೆ ೧೩.

ಒಂದು ಸರೋವರದಲ್ಲಿ “ ಅನಾಗತವಿಧಾತೃ ಪ್ರತ್ಯುತ್ಪನ್ನಮತಿ ಯದ್ಭವಿಷ್ಯ ” ಎಂಬ ಮೂರುಮತ್ಸ್ಯಗಳು ಇದ್ದುವು, ಬಳಿಕ ಒಂದು ಕಾಲದಲ್ಲಿ ಆಸರೊವರವಂ ನೋಡಿಕೊಂಡು ಹೋಗುತಿದ್ದ ಬೆಸ್ತರು ಇಂತೆಂ

ದರು :—ಅಹಹ ! ಈಮಡುವಿನಲ್ಲಿ ಅನೇಕಮತ್ಸ್ಯಗಳು ಇರುವುವು. ನಾವು ಯಾವಾಗಲೂ ಇಲ್ಲಿ ಹುಡುಕಿನೋಡಲಿಲ್ಲ. ಈಗನಮಗೆ ಜೀವನವು ಒದವಿರುವುದು; ಸಂಜೆಯೂ ಆಯಿತು; ಆದರಿಂದ ನಿಶ್ಚಯವಾಗಿ ಬೆಳಗಾದ ಮೇಲೆ ಇಲ್ಲಿಗೆ ಬರಬೇಕು.

ಬಳಿಕ ಸಿಡಿಲ ಹೊಡೆತಕ್ಕೆ ಸಮವಾದ ಆಬೆಸ್ತರ ಮಾತನ್ನು ಕೇಳಿ ಅನಾಗತವಿಧಾತೃ ಎಲ್ಲಾಮತ್ಸ್ಯಗಳನ್ನೂ ಕರೆದು ಇಂತೆಂದಿತು :—ಎಲೈ ! ಬೆಸ್ತರು ಆಡಿದ ಮಾತನ್ನು ನೀವು ಕೇಳಿದಿರಾ ? ಆದರಿಂದ ಈರಾತ್ರಿಯಲ್ಲಿಯೇ ಹತ್ತಿರಿರುವ ಇನ್ನೊಂದು ಸರಸ್ಸಿಗೆ ಹೋಗೋಣ. ಇಂತು ಹೇಳಿದೆ :—

ಅದಟಿಗನೆನಿಸಿದ ಪಗೆ ತನ |
ಗಿದಿರಾದೊಡೆಯುಬಲರೋಡವೇೞ್ವುದು ಮೇಣ್ತ ||
ೞ್ವದೆ ದುರ್ಗವನ್ನೈದಲ್ವೇ |
ೞ್ವುದು ಬಗೆವೊಡೆ ಬೇಱದೊಂದುಪಾಶ್ರಯವಿಲ್ಲಂ ||೩೦೭||

ಬೆಳಗಾಗುವುದೂ ನಿಶ್ಚಯವಾಗಿ ಬೆಸ್ತರು ಇಲ್ಲಿಗೆಬಂದು ನಮ್ಮೆಲ್ಲರನ್ನೂ ಧ್ವಂಸಮಾಡುವರು. ಇದು ನನ್ನ ಮನಸ್ಸಿನಲ್ಲಿರುವುದು; ಆದರಿಂದ ಈಗ ಒಂದು ಕ್ಷಣವೂ ಇಲ್ಲಿರಬಾರದು. ಇಂತುಹೇಳಿದೆ :—

ಪೆಱತೊಂದೆಡೆಯೊಳಗಂ ಸುಖ |
ಕರವೆನಿಪಾಶ್ರಯವದಾವಪುರುಷಗ್ಗಿರ್ಕ್ಕುಂ ||
ಉೞಿವುಳ್ಳರವಂದಿರ್ ಕಾ |
ಣರೊಡಲ್ಗಪ್ಪೆಡಱನಂತು ಕೊಳದವರೞಿವಂ ||೩೦೮||

ಅದಂಕೇಳಿ ಪ್ರತ್ಯುತ್ಪನ್ನಮತಿ ಇಂತೆಂದಿತು:— ಎಲೈ ! ನೀನಾಡಿದಮಾತು ದಿಟ. ನನಗೂ ಇದು ಇಷ್ಟವಾದುದು. ಆದರಿಂದ ಬೇರೆಡೆಗೆ ಹೊರಡಿ. ಇಂತು ಹೇಳಿದೆ:—

ಪರದೇಶವೆನೆ ಭಯಂಗೊಂ |
ದುರುಮಾಯೆಯನಾಂತ ಪಂದೆತನವೊಂದಿದ ಕಾ ||
ಪುರುಷರ್ ಕಾಗೆವಿಗಂಗಳ್ |
ಒಱಲೆ ಗಡಿದ್ದೆಡೆಯೊಳಿರ್ಪನೆಯ್ದುಗುವಿಳೆಯೊಳ್ ||೩೦೮||
ಪದೆಪಿಂದೆತ್ತು ಚರಿಪವ |
ಸದೇಶೆ ನಿಜದೇಶರಾಗದಿಂದಂ ಕಿಡುವಂ ||
ಇದು ನಮ್ಮ ತಂದೆ ತಾಂ ತೋ |
ಡಿದಬಾವಿ ಗಡೆಂಬನುಪ್ಪುನೀರನೆ ಕುಡಿವಂ ||೩೦೯||

ಬಳಿಕ ಆವಮಾತನಾಲಿಸಿ ಯದ್ಭವಿಷ್ಯವು ಗಟ್ಟಿಯಾಗಿ ನಕ್ಕು ಇಂತೆಂದಿತು:— ನೀವಿಬ್ಬರೂ ಆಲೋಚಿಸಿದ ರೀತಿ ಇದು ತರವಲ್ಲ. ಏಕೆಂದರೆ ಆವರ ಬರಿಯಮಾತಿಗೆ ತಾತ ಮುತ್ತಾತರಿಂದ ಬಂದ ಈ ಸರೋವರವನ್ನು ಬಿಟ್ಟುಹೋಗುವುದು ಯುಕ್ತವಲ್ಲ. ಆಯುಸ್ಸು ತೀರಿದ್ದರೆ ಮತ್ತೊಂದೆಡೆಗೆ ಹೋದರೂ ಮೃತಿಯುಂಟಾಗದಿರದು. ಇಂತು ಹೇಳಿದೆ:—

ಪೆಱರ್ಗಳ್ ರಕ್ಷಿಸದಿರ್ದೊಡೇಂ ಬಿಡದೊಱಲ್ದಾದೈವಮೇ ರಕ್ಷಿಕುಂ |
ಪೆಱರಿಂ ರಕ್ಷಿತನಾದೊಡಂ ಮಸುಳೆ ದೈವಾನುಗ್ರಹಂ ಕೆಟ್ಟಪಂ ||
ನೆಱೆ ಜೀವಿಪ್ಪನನಾಥನೆಂದೆನಿಪೊಡಂ ಕಾಂತಾರದೊಳ್ ಬಿಟ್ಟವಂ |
ಪಿರಿದುಂಯತ್ನದೊಳಿರ್ದೊಡಂ ಭವನದೊಳ್ ನಾಶಕ್ಕೆ ಪಕ್ಕಾದಪಂ ||೩೧೦||

ಅದರಿಂದ ನಾನು ಹೊರಡುವುದಿಲ್ಲ. ನಿಮ್ಮಿಬ್ಬರಿಗೂ ತೋರಿದಂತೆ ಮಾಡಬಹುದು.

ಬಳಿಕ ಅನಾಗತವಿಧಾತೃಪ್ರತ್ಯುತ್ಪನ್ನಮತಿಗಳೆರಡೂ ಆಯದ್ಭವಿಷ್ಯದ ನಿಶ್ಚಯವಂ ತಿಳಿದು ತಾವು ಪರಿಜನದೊಡನೆ ಹೊರಟು ಹೋದುವು. ಬೆಳಗಾಯಿತು. ಬೆಸ್ತರು ಆಸರೋವರದ ಬಳಿಗೆ ಬಂದು ಬಲೆಯುಂ ಬೀಸಿ ಯದ್ಭವಿಷ್ಯದೊಡನೆ ಎಲ್ಲಾ ಮತ್ಸ್ಯಗಳನ್ನೂ ಸಂಗ್ರಹಿಸಿ ಆಸರೋವರ

ದಲ್ಲಿ ಒಂದು ಮತ್ಸ್ಯವೂ ಇಲ್ಲದಂತೆ ಮಾಡಿದರು. ಇದರಿಂದ ನಾನು ಹೇಳುವೆನು:—

ಚೆನ್ನೆನೆಯಭಿವರ್ಧಿಸುಗುಂ | ಸನ್ನಿಯನಾಗತವಿಧಾತೃವುಂ ತಾಂ
ಪ್ರತ್ಯು|| ತ್ಪನ್ನಮತಿಯುಂ......|| ಎಂದು.

ಅದಂ ಕೇಳಿ ಟಿಟ್ಟಿಭವೆಂದಿತು:— ಪ್ರಿಯೆ! ನನ್ನನ್ನು ಯಧ್ಧವಿಷ್ಯನಿಗೆ ಸಮನೆಂದು ಎಣಿಸುವೆಯೋ? ನೋಡು ನನ್ನ ಬುದ್ಧಿಯ ಪ್ರಭಾವವನ್ನು. ಈ ದುಷ್ಟಸಮುದ್ರನಂ ನನ್ನ ಕೊಕ್ಕಿನಿಂದ ಶೋಷಿಸಿಬಿಡುವೆನು.

ಟಿಟ್ಟಿಭಿಯೆಂದಿತು:— ಅಹಹ! ಇದೇನು? ಸಮುದ್ರನೊಡನೆ ನಿನಗೆ ಹೋರಾಟವೆ? ಇವನ ಮೇಲೆ ನೀನು ಕೋಪಿಸಿಕೊಳ್ಳುವುದು ಯುಕ್ತವಲ್ಲ. ಇಂತುಹೇಳಿದೆ:—

ಧರೆಯೊಳ್ ಸಮರ್ಥರೆನಿಸದ |
ಪುರುಷರ್ ಮುಳಿದೊಡದು ಮಾೞ್ಕುಮವರ್ಗೆಯೆ ಕೇಡಂ ||
ಉರಿವುದುಱಿಬಿಬಿಪೇಱಿದ |
ಹುರಿಮಡಿಕೆ ಸಮಂತು ತನ್ನಪಕ್ಕಂಗಳನೇ ||೩೧೧||

ಅಲ್ಲದೆ—

ಬಗೆಯದೆ ತನ್ನಯ ಬಲಮಂ |
ಪಗೆಯದಟಂ ತಿಳಿಯದಾವನೆರ್ದೆಯುತ್ಸಾಹಂ ||
ಮಿಗೆಯಿದಿರ್ವೋದಪನಱಿವೆ |
ಯ್ದುಗುಮಗ್ನಿಯಮುಂದೆ ಪೋಪಶಲಭಂಬೊಲವಂ | ||೩೧೨||

ಟಿಟ್ಟಿಭವೆಂದಿತು:—ಪ್ರಿಯೆ! ಇಂತು ನುಡಿಯಬೇಡ. ಯಾರಿಗೆ ಉತ್ಸಾಹಶಕ್ತಿಯಿರುವುದೋ ಅವರು ದೊಡ್ಡವರೊಡನೆಯೂ ಹೋರಾಡುವರು.

ಇಂತು ಹೇಳಿಯೂ ಇದೆ:—

ಉಱೆ ನೆಣಸುವಾತನಲಸದೆ |
ಪಿರಿದುಂ ಪರಿಪೂರ್ಣನಾದ ಪಗೆಗಿದಿರಾಂಪಂ ||
ನೆಱತೆವೆಱಕೆಯ ಕಂಡು ಮಿಗೆ ಮ |
ಚ್ಚರಿಸುತೆ ಚಾಱೆಂದು ಮಿದಿರ್ಗೆ ಬಂದೊದವುವವೋಲ್ ||೩೧೩||
ಅಂಗದೆ ಪಿರಿದುಂ, ನೋಡೆಕ |
ಅಂಗಿದ ಮದವೊಸರ್ವಗಂಡಮುಳ್ಳುದುಮೆನಿಪ ||
ತ್ತುಂಗಗಜದುತ್ತಮಾಂಗದೆ |
ಸಿಂಗಂ ಪಿಂಗದೆ ತನತ್ತು ಚರಣಮನಿಡುಗುಂ ||೩೧೪||

ಅಂತಲ್ಲದೆ :—

ಎಳಬಿಸುಗದಿರನ ಪಾದಂ |
ಗಳಿಳಾಭೃತ್ಕುಲದ ಮೇಲೆಗಡ ಬೀಳ್ಗುಂ ಪ ||
ಜ್ವಳಿಸುವ ಸಾಜಂ ತೇಜಮ |
ನೊಳಕೊಂಡಿರ್ಪವರ್ಗೆ ಹರಯಮೇವುದೊ ಬಗೆಯಲ್ ||೩೧೫||
ಪಿರಿದಿಭವಂಕುಶಕ್ಕದು ವಶಂ ಪಿರಿದೇನಿಭದಂತೆಯಂಕುಶಂ |
ಪರಿವುದು ಮಬ್ಬು ದೀಪವಿರೆ ದೀವಿಗೆ ದೊಡ್ಡಿತೆ ಮಬ್ಬಿನಂತೆವೋಲ್ ||
ಉರುಳ್ವುದು ವಜ್ರದಿಂ ಗಿರಿಶತಂ ಪಿರಿದೇಂ ಗಿರಿಯಂತೆ ವಜ್ರಮಿಂ |
ತುರುತರತೇಜವುಳ್ಳನೆ ಪರಾಕ್ರಮಿ ಮೆಯ್ ಪಿರಿದಾದೊಡೇವುದೋ ||೩೧೬||

ಆದಕಾರಣ ಈ ಕೊಕ್ಕಿನಿಂದ ಈ ಸಮುದ್ರನ ನೀರೆಲ್ಲವನ್ನೂ ಶೋಷ ಗೊಳಸುವೆನು.

ಟಿಟ್ಟಿಭಿಯೆಂದಿತು :—ಎಲೆಪ್ರಿಯ ! ಗಂಗೆ ಒಂಬಯ್ನೂರು ನದಿಗಳನ್ನೂ ಸಿಂಧು ಒಂಬಯ್ನೂರು ನದಿಗಳನ್ನೂ ಒಳಕೊಂಡು ಸಂತತವಾಗಿ ಈ ಸಮುದ್ರನಲ್ಲಿ ಬಂದು ಸೇರುತ್ತಿರುವರು. ಇಂತು ಸಾಸಿರದೆಂಟುನೂರು ನದಿಗಳಿಂದ ತುಂಬಲ್ಪಡುತಿರುವ ಈ ಸಮುದ್ರನನ್ನು ಒಂದು ಹನಿಯಂಥರಿಸ

ಟಲ್ಲಕೊಕ್ಕಿನಿಂದ ನೀನು ಶೋಷಗೊಳಿಸುವುದೆಂತು ? ಆದಕಾರಣ ನಂಬಲಾಗದ ನಿನ್ನ ಮಾತಿನಿಂದೇನು ?

ಟಿಟ್ಟಿಭವೆಂದಿತು :—ಪ್ರಿಯೆ !

ಸಿರಿಗೆಡೆ ದುಃಖಿಸದಿರ್ಪ್ಪರ್ದು |
ಮೆಱೆವೆನ್ನಯ ಕೊಕ್ಕು ಲೋಹದಂತೆವೊಲಿರ್ಕುಂ ||
ಉಱೆನಿಡಿಯವು ದಿವಸಂಗಳ್ |
ಶರನಿಧಿಯೇಂ ಪಡೆಯದಿರ್ಕುಮೇ ಶೋಷಣಮಂ ||೩೧೭||

ನರನೆನ್ನೆವರಂ ಪೌರುಷ |
ಕರನೆನಿಸಂ ಪೆಂಪನಾಂಪುದರಿದನ್ನೆವರಂ ||
ತರಣಿಯುಮಡರ್ದ್ದ ತುಲೆಯಂ |
ನೆರೆದ ಮುಗಿಲ್ವಿಂಡನೆಲ್ಲಮಂ ಜಯಿಸಿದಪಂ ||೩೧೮||

ಟಿಟ್ಟಿಭಿಯೆಂದಿತು:—ನೀನು ಅವಶ್ಯವಾಗಿ ಸಮುದ್ರನೊಡನೆ ಹೋರಾಡಬೇಕೆಂದಿದ್ದರೆ ಇತರಗಳಾದ ಪಕ್ಷಿಗಳನ್ನೂ ಕರೆದು ಮಿತ್ರಜನದೊಡಗೂಡಿ ಕೆಲಸವನ್ನು ಮಾಡು. ಇಂತು ಹೇಳಿದೆ :—

ಬಲಶಾಲಿಗಳಲ್ಲದೊಡಂ |
ಪಲಬರ್ ಕೂಡಿದೊಡೆ ದುರ್ಜಯರ್ ತಾವೆನಿಪರ್ ||
ಪಲವು ತೃಣಂಗಳ್ ಸೇರ್ದೊಡೆ |
ಬಲವುಳ್ಳಾನೆಯನೆ ಬಿಗಿವರಜ್ಜುಗಡಕ್ಕುಂ ||೩೧೯||

ಅಲ್ಲದೆ :—

ಕಲವಿಂಕಿ ಕಾಷ್ಠಕೂಟಂ |
ಕಲನಾದದ ನೊಳನುಮಂತು ಕಪ್ಪೆಯುಮೆಂಬೀ ||
ಪಲವಱ ವಿರೋಧದಿಂದಂ |
ಮಿಲಯವನೊಂದಿತ್ತು ಮದಿಸಿದೊಂದುವನೇಭಂ ||೩೨೦||

ಟಿಟ್ಟಿಭವಿದೆಂತೆನಲು, ಟಿಟ್ಟಿಭಿಯಿಂತೆಂದಿತು :—

ಕಥೆ ೧೪.

ಒಂದು ಅಡವಿಯ ಪ್ರಾಂತದಲ್ಲಿ ಹೆಣ್ಣು ಗಂಡು ಗುಬ್ಬಚ್ಚಿಗಳೆರಡು ಹೊಂಗೆಮರದಲ್ಲಿ ವಾಸಮಾಡಿಕೊಂಡಿದ್ದುವು. ಕೆಲವುಕಾಲ ಕಳೆಯಲು, ಅವುಗಳಿಗೆ ಸಂತಾನವುಂಟಾಯಿತು. ಒಂದು ದಿವಸ ಮದಿಸಿದ ಅದೊಂದು ಕಾಡಾನೆ ಬಿಸಲಿಂದ ಬಳಲಿ ನೆಳಲಿಗೋಸ್ಕರ ಬಂದು ಆ ಹೊಂಗೆಮರವನ್ನು ಆಶ್ರಯಿಸಿತು. ಬಳಿಕ ಗುಬ್ಬಚ್ಚಿಗಳಿದ್ದ ಆ ಮರದ ಕೊಂಬೆಯನ್ನು ಮದಾತಿಶಯದಿಂದ ಸೊಂಡಿಲ ಕೊನೆಯಿಂದೆಳೆದು ಮುರಿಯಿತು. ಅದರಿಂದ ಗುಬ್ಬಚ್ಚಿಗಳ ಮೊಟ್ಟೆಗಳೆಲ್ಲವೂ ಹಾಳಾದುವು. ಆಯುಸ್ಸು ಇದ್ದುದರಿಂದ ಆ ಹೆಣ್ಣುಗಂಡು ಗುಬ್ಬಚ್ಚಿಗಳ ಪ್ರಾಣ ಹೋಗಲಿಲ್ಲ. ಬಳಿಕ ಹೆಣ್ಣುಗುಬ್ಬಚ್ಚಿ ತನ್ನ ಮೊಟ್ಟೆಗಳು ಹಾಳಾದುದರಿಂದ ಅವಮಾನಗೊಂಡು ಗೋಳಾಡುತ್ತ ಸ್ವಲ್ಪವೂ ನಿರಾಳವಿಲ್ಲದಿದ್ದಿತು. ಇಷ್ಟರಲ್ಲಿ ಅದರ ಪರಮಮಿತ್ರವೆನಿಸಿದ ಕಾಷ್ಠಕೂಟವೆಂಬ ಪಕ್ಷಿ ಅದರ ಗೋಳಾಟವನ್ನು ಕೇಳಿ ತಾನೂ ಗೋಳಾಡುತ್ತ ಹತ್ತಿರ ಬಂದು ಅದಂ ಕುರಿತು ಇಂತೆಂದಿತು :—ಎಲೆ ಆರ್ಯೆ ! ಸುಮ್ಮನೆ ಗೋಳಾಡುವುದರಿಂದೇನು ? ಇಂತುಹೇಳದೆ :—

ಗತವಾದುದರ್ಕೆ ನಷ್ಟಕೆ |
ಮೃತಿಗಂ ಪರಿತಪಿಸರಲ್ತೆ ಪಂಡಿತರೆನಿಸರ್ ||
ಕ್ಷಿತಿಯೊಳ್ ಗಾಂಪರ್ಗಂ ಪಂ |
ಡಿತರೆನಿಸಿಪರ್ಗಂ ವಿಶೇಷವಿದುವೆ ಗಡೆಂಗುಂ ||೩೨೧||

ಅಲ್ಲದೆ :—

ಆವಗಮಶೋಚ್ಯರಂ ಕುಱಿತು |
ತಾವಂ ಮಂದಮತಿ ಬಱಿದೆ ತಾಂ ಶೋಚಿಪನೋ ||
ತೀವಿದ ದುಗುಡದೆ ಪಿರಿದುಂ |
ನೋವಂ ತರುತವ ನನರ್ಥವೆರಡಂ ಪಡೆವಂ ||೩೨೨||

ಕುದಿದಿಷ್ಟರಿಟ್ಟುದಂ ಕ್ಲೇ |
ಶ್ಮದ ಕಣ್ಣೀರಂ ಪರೇತನೀಂಟುಗುಮವಶಂ ||
ಅದಱಿಂದೞಿಬಾರದುಗಡ |
ಪದೆಪಿಂದಾರ್ಪನಿತು ಕರ್ಮಮೆಸಗಲ್ವೇೞ್ಕುಂ ||೩೩||

ಆ ಗುಬ್ಬಚ್ಚಿಯೆಂದಿತು :—ಆಗಲಿ, ಆದರೆ ದುರುಳವಾದ ಆನೆ ಮದದಿಂದ ನನ್ನ ಸಂತತಿಯನ್ನು ಹಾಳುಮಾಡಿತು. ನೀನು ನನಗೆ ಸ್ನೇಹಿತನೆಂಬುದು ನಿಶ್ಚಯವಾಗಿದ್ದರೆ ಆ ದುಷ್ಟಜನವನ್ನು ಕೊಲ್ಲಲು ಏನಾದರೂ ಉಪಾಯವನ್ನು ಆಲೋಚಿಸು. ನನಗುಂಟಾದ ಸಂತಾನನಾಶದುಃಖವು ಅದರಿಂದ ಹೋಗುವುದು. ಹೇಳಿಯೂ ಇದೆ :—

ಎಡಱಿಲ್ಲಾವಂ ಪೊಲ್ಲದ |
ನೊಡರ್ಚಿದಂ ಕಷ್ಟದಶೆಯೊಳಾವಂ ನಕ್ಕಂ ||
ಬಿಡದವರಿರ್ವರ್ಗ್ಗಪಕೃತಿ |
ಯೊಡರಿಪನಂ ಮಗುೞ್ದು ಪುಟ್ಟಿದವನೆಂದಱಿವೆಂ ||೩೪||

ಕಾಷ್ಠಕೂಟವೆಂದಿತು :—ಆರ್ಯೆ ! ನೀನು ಹೇಳಿದುದು ಯಥಾರ್ಥ. ಇಂತು ಹೇಳಿದೆ :—

ಪುಟ್ಟಿದೊಡಮನ್ಯಜನದೊಳ್ |
ಕಟ್ಟಿಡೞೊಳ್ ಸುಖಿಸದಾವನವನೆ ಸಖಂ ದಲ್ ||
ಕಟ್ಟೈಸಿರಿಯಿಟ್ಟಣಿಸಿರೆ |
ತೊಟ್ಟನೆ ನೆರೆದಾರ್ಗ್ಗದಾರ್ ಸಖರ್ ತಾವೆನಿಸರ್ ||೩೫||

ಆವಂ ಕಷ್ಟದೞೊಳ್ ಸಹಾಯನೆನಿಪಂ ಮಿತ್ರಂಗಡಾತಂ ಸಮಂ |
ತಾವಂ ಭಕ್ತಿಯಭಾವದಿಂ ತೊಳಗುವಂ ಪುತ್ರಂಗಡಾತಂ ವಲಂ ||
ಆವಂ ನಮ್ರತೆಯಿಂದಮೋಲಗಿಸುತಿರ್ಪ್ಪಂ ಸೇವಕಂ ತಾನವಂ |
ತೀವಿರ್ಪ್ಪಂ ಸುಖಮೂವಳತ್ತಣಿನವಳ್ ತಾಂ ಭಾರ್ಯೆಯೆಂಗುಂಗಡಾ ||೩೬||

ಆದರಿಂದ ನನ್ನ ಬುದ್ಧಿಯ ಪ್ರಭಾವವಂ ನೋಡು. ನನಗೆ ಸ್ನೇಹಿತೆಯಾದ ವೀಣಾರವೆಯೆಂಬ ಮಕ್ಷಿಕೆಯಿರುವಳು. ಅವಳಂ ಕರೆದುಕೊಂಡ್ ಬರುವೆನು. ಅವಳಿಂದ ಆ ದುಷ್ಟಗಜವು ಕೊಲಲ್ಪಡುವುದು.

ಬಳಿಕ ಕಾಷ್ಠಕೂಟವು ಹೋಗಿ ಆ ವೇಣ್ನೊಣವಂ ಕರೆದುಕೊಂಡು ಗುಬ್ಬಚ್ಚಿಯ ಬಳಿಗೆ ಬಂದು ನೊಣವಂ ಕುರಿತು—ಎಲೆಭದ್ರೆ ! ಈ ಗುಬ್ಬಿ ನನಗೆ ಬೇಕಾದವಳು. ಒಂದು ದುಷ್ಟಗಜವು ಮೊಟ್ಟೆಗಳನ್ನು ಹಾಳುಮಾಡಿ ಇವಳಿಗೆ ಅಪಮಾನವಂ ಮಾಡಿರುವುದು. ಆದಕಾರಣ ಆ ಗಜವನ್ನು ಕೊಲ್ಲಬೇಕೆಂದಿರುವ ನನಗೆ ನೀನು ಸಾಹಾಯ್ಯವಂ ಮಾಡಬೇಕು.

ನೊಣವೆಂದಿತು :—ಎಲೆ ಭದ್ರ ! ಈ ವಿಷಯದಲ್ಲಿ ನುಡಿಯತಕ್ಕದೇನು ? ಇಂತುಹೇಳದೆ :—

ಇಳೆಯೊಳ್ ಪ್ರತ್ಯುಪಕಾರಕೆ |
ಕೆಳೆಯಂ ಕೆಳೆಯರ್ಗ್ಗೆ ಗೈವರುಪಕೃತಿಯಂ ಮೇಣ್ ||
ಕೆಳೆಯರ ಕೆಳೆಯರ ಕಾರ್ಯಂ |
ಗಳನೇಂ ಕೆಳೆಯರ್ಕ್ಕಳಚ್ಚಿಯಿಂ ಗೈಯರೆ ಪೇಳ್ ||೩೨||

ಇದು ನಿಶ್ಚಯ ; ಆದರೆ ಮೇಘನಾದನೆಂಬ ಕಪ್ಪೆ ನನಗೆ ಸ್ನೇಹಿತನಾಗಿರುವನು. ಅವನಂ ಕರೆದು ಆಲೋಚಿಸಿ ತಕ್ಕಂತೆ ಮಾಡೋಣ. ಇಂತು ಹೇಳದೆ :—

ಹಿತರಿಂ ಸುಶೀಲರಿಂ ಸು |
ಶ್ರುತರಿಂದತಿವಿಶದಬುದ್ಧಿಶಾಲಿಗಳಿಂ ಪಂ ||
ಡಿತರಿಂ ಸಮಂತು ಪರಿಚಿಂ |
ತಿತವೆನಿಸಿದ ನೀತಿ ಬೇಱಿಯಾಗದದೆಂತುಂ ||೩೮||

ಬಳಿಕ ಆ ಮೂರು ಪ್ರಾಣಿಗಳೂ ಹೋಗಿ ಮೇಘನಾದನೆಂಬ ಕಪ್ಪೆಯಮುಂದೆ ಎಲ್ಲಾ ಸಂಗತಿಗಳನ್ನೂ ತಿಳಿಯಿಸಿ ಕುಳಿತುಕೊಂಡುವು.

ಅದೆಂದಿತು:—ಕೋಪಗೊಂಡ ಬಹುಜನದ ಮುಂದೆ ಈ ನೀಚವಾದ ಆನೆ ಎಷ್ಟರದು? ಇದಕ್ಕೆ ನಾವು ಹೇಳುವ ಆಲೋಚನೆಯನ್ನು ಮಾಡಬೇಕು. ಎಲೆ ಮಕ್ಷಿಕೆ! ನೀನು ಹೋಗಿ ಮಧ್ಯಾಹ್ನಸಮಯದಲ್ಲಿ ಆ ಮದದಾನೆಯ ಕಿವಿಯಲ್ಲಿ ವೀಣಾನಾದದಂತೆ ಇಂಪಾಗಿ ಝುಂಕಾರವಂ ಮಾಡು. ಅದರಿಂದ ಅದು ಶ್ರವಣಸುಖದಲ್ಲಿ ಆಸಕ್ತವಾಗಿ ಕಣ್ಣು ಮುಚ್ಚಿಕೊಳ್ಳುವುದು. ಆಮೇಲೆ ಈ ಕಾಷ್ಠಕೂಟನು ಕೊಕ್ಕಿನಿಂದ ಕಣ್ಣುಗಳನ್ನು ಕುಕ್ಕಿಡಲಿ; ಬಳಿಕ ಅದು ಕುರುಡಾಗುವುದು ನಾನು ಒಂದು ದೊಡ್ಡ ಹಳ್ಳದಲ್ಲಿ ಗುಂಪು ಕೂಡಿ ಧ್ವನಿಮಾಡುತಿರುವೆನು. ನಮ್ಮ ಧ್ವನಿಯಂ ಕೇಳಿ ಇಲ್ಲಿ ಕೆರೆಯೆಂದು ತಿಳಿದು ಬಾಯಾರಿಕೆಯಿಂದ ಅಲ್ಲಿಗೆ ಬಂದು ಆ ಹಳ್ಳದಲ್ಲಿ ಬಿದ್ದು ಪ್ರಾಣವಂ ಬಿಡುವುದು. ಇಂತು ಎಲ್ಲರೂ ಸೇರಿ ಕೆಲಸಮಾಡಿದರೆ ವೈರಸಾಧನವಾಗುವುದು.

ಬಳಿಕ ಅದೇರೀತಿಮಾಡಲು, ಆ ಮದಗಜವು ಮಕ್ಷಿಕಾಗಾನಸುಖದಿಂದ ಕಣ್ಣುಮುಚ್ಚಿಕೊಂಡು ಕಾಷ್ಠಕೂಟದ ಕೊಕ್ಕಿನ ಹೊಡೆತದಿಂದ ಕಣ್ಣುಗಳನ್ನು ಕಳೆದುಕೊಂಡು ಮಧ್ಯಾಹ್ನಸಮಯದಲ್ಲಿ ಸುತ್ತುತ್ತ ಕಪ್ಪೆಯಧ್ವನಿಯನ್ನೇ ಹಿಡಿದು ಹೋಗಿ ದೊಡ್ಡಹಳ್ಳದಲ್ಲಿ ಬಿದ್ದು ಪ್ರಾಣವಂಬಿಟ್ಟಿತು.

ಇದರಿಂದ ನಾನುಹೇಳುವೆನು :—"ಕಲವಿಂಕಿ ಕಾಷ್ಠ ಕೂಟಂ!..." ಎಂದು. ಟಿಟ್ಟಿಭವು-ಪ್ರಿಯೆ! ಆಗಲಿ; ಮಿತ್ರರನೊಡಗೊಂಡು ಸಮುದ್ರನನ್ನು ಶೋಷಿಸುವೆನು—ಎಂದು ಹೇಳಿ ಮನದಲ್ಲಿ ನಿಶ್ಚಯಿಸಿ, ಬಕ ಸಾರಸ ನವಿಲು ಮುಂತಾದುವುಗಳನ್ನು ಕರೆದು ಇಂತೆಂದಿತು :—ಎಲೈ! ಸಮುದ್ರನು ನನ್ನ ಮೊಟ್ಟೆಗಳನ್ನು ನಾಶಿಸಿ ನನ್ನನ್ನು ಅಪಮಾನಗೊಳಿಸಿರುವನು. ಅದರಿಂದ ಇವನನ್ನು ಶೋಷಗೊಳಿಸುವ ಉಪಾಯವನ್ನು ಚಿಂತಿಸಿ.

ಅವು ಆಲೋಚಿಸಿ ಇಂತೆಂದುವು :—ಸಮುದ್ರನನ್ನು ಶೋಷಗೊಳಿಸುವ ವಿಷಯದಲ್ಲಿ ನಾವು ಅಶಕ್ತರು. ಆದಕಾರಣ ವ್ಯಥಾಪ್ರಯಾಸದಿಂದೇನು? ಇಂತುಹೇಳದೆ :—

ಬಲರಹಿತನಾವನಱಿಯದೆ |
ಚಲವಾಂತಗ್ಗಳನೆನಿಪ್ಪ ಪಗೆಯೊಡನುರ್ಕಿಂ ||
ಕಲಹಂಗೆಯ್ಯಲ್ ನಡೆವಂ |
ದಲವಂ ಪಲ್ಲುಡಿದಪಲ್ಲನುರಿವೊಲ್ ಮರ್ಲ್ವಂ ||೩೨೯||

ಅದರಿಂದ ಒಡೆಯನಾದ ಗರುಡನಿರುವನು. ಈ ಯಪಮಾನಸಂಗತಿಯೆಲ್ಲವನ್ನೂ ಆತನಲ್ಲಿ ತಿಳಯಿಸಬೇಕು. ಆತನು ಸ್ವಜಾತಿಯ ಅಪಮಾನದಿಂದ ಕೋಪಗೊಂಡು ಪ್ರತೀಕಾರವಂ ಮಾಡುವನು. ಅಥವಾ ಈ ವಿಷಯದಲ್ಲಿ ಆತನು ಬಿಂಕಗೊಂಡರೂ ಆತನಲ್ಲಿ ದುಃಖವನ್ನು ತಿಳಯಿಸುವುದರಿಂದ ನಮ್ಮ ಮನಸ್ಸಿಗೆ ಸಮಾಧಾನವುಂಟಾಗುವುದು. ಇಂತುಹೇಳಿದೆ :—

ಮನದೊಳ್ಕವಡಿಲ್ಲದ ಮಿ |
ತ್ರನೊಳಂ ಗುಣವಂತನಾದ ಭೃತ್ಯನೊಳಂ ನ ||
ಚ್ಚಿನ ಮಡದಿಯೊಳಂ ಒಲ್ಲೊಡೆ |
ಯನೊಳಂಜನವಱಿಪಿ ಸುಖಮಂ ಪಡೆಗುಂ ||೩೩೦||

ಆದಕಾರಣ ಗರುಡನ ಬಳಿಗೆ ಹೋಗೋಣ. ಆತನು ನಮಗೆ ಒಡೆಯನೆನಿಸಿರುವನು.

ಬಳಿಕ ಆ ಪಕ್ಷಿಗಳೆಲ್ಲವೂ ಅದೇರೀತಿ ಒಪ್ಪಿ ದುಃಖದಿಂದ ಮುಖದಲ್ಲಿ ಕಳೆಗುಂದಿ ಕಣ್ಣುಗಳಲ್ಲಿ ನೀರುತುಂಬಿ ಗರುಡನಬಳಿಗೆ ಹೋಗಿ ನಿಟ್ಟಿಸಿರ ಬಿಟ್ಟು ದೀನಸ್ವರದಿಂದ ಕೂಡಿ—ಎಲೈ ಸ್ವಾಮಿಯೆ ! ನಮಗೆ ಅಭಯವಂ ದಯಪಾಲಿಸಬೇಕು. ಈಗ ಒಡೆಯನಾದ ನೀನಿರುವಾಗ ಸುಚರಿತ್ರನೆನಿಸಿದ ಈ ಟಿಟ್ಟಿಭನ ಮೊಟ್ಟೆಗಳನ್ನು ಸಮುದ್ರನು ನಾಶಗೊಳಿಸಿದನು. ಅದರಿಂದ ಈಗ ಪಕ್ಷಿಕುಲವು ಹಾಳಾಯಿತು. ಸಮುದ್ರನಿಂದ ಇನ್ನುಳಿದವರೂ ಸ್ವೇಚ್ಛೆಯಿಂದ ನಾಶಗೊಳಿಸಲು ಪ್ರವರ್ತಿಸುವರು. ಇಂತುಹೇಳಿದೆ :—

ನರನೊರ್ವ್ವಂ ಮಾಡಿದುದಂ |
ನಿರಿಕಿಸಿ ಮಾಡಿದಪನನ್ಯನುಂ ನಿಂದಿತಮುಂ ||
ಪೆಱರಾಚರಿಸುವ ವೋಲಾ |
ಚರಿಕುಂ ಪರಮಾರ್ಥವುಳ್ಳುದಲ್ತೀಲೋಕಂ ||೩೩೧||

ಅಲ್ಲದೆ :—

ದುರುಳರ್ ಕಳ್ಳರ್ ಪಾಪಿಗ |
ರಿರದಿತರರುಮುಕಟ ಕವಡುಪುಸಿಮೋಸಗಳಿಂ ||
ಪರಿಪೀಡಿಸುತಿರಲಾರ |
ಯ್ದರಸಂ ಪ್ರಜೆಗಳನೊಱಲ್ದು ಪಾಲಿಸವೇೞ್ಕುಂ ||೩೩೨||

ಜನವೆಸಗಿದ ಧರ್ಮದೊಳಾ |
ಱನೆಯಂಶಂ ಪೊರೆವ ಭೂಮಿಪಾಲಂಗಳ್ಕುಂ ||
ಜನದಾ ಅಧರ್ಮದೊಳಮಾ |
ಱನೆಯಂಶಮೊಱಲ್ದು ಪೊರೆಯದಾತಂಗಳ್ಕುಂ ||೩೩೩||

ಪಿರಿದುಂ ಪ್ರಜೆಗಳ್ಗೆಸಗಿದ |
ಪರಿಪೀಡನತಾಪದಿಂದೆ ಪಜ್ಜಳಿಸಿದ ಕಿ ||
ಚ್ಚರಸನ ಸಿರಿಯಂ ಕುಲಮುಂ |
ಹರಣಂಗಳನೈದೆ ಸುಡದೆ ಪೋಗದದೆಂತುಂ ||೩೩೪||

ಅರಸಂ ನಂಟಂ ಗಡ ನಂ |
ಟರಿಲ್ಲದಗ್ಗರಸನಲ್ತೆ ಕಣ್ ಕಣ್ಣಿಲಿಗ ||
ಳ್ಗರಸಂ ನ್ಯಾಯದೆ ವರ್ತಿಪ |
ನರರ್ಗೆಲ್ಲಂ ತಾನೆ ತಂದೆ ತಾಯುಮೆನಿಪ್ಪಂ ||೩೩೫||

ಫಲವೆಳಪ ತೋಂಟಗಾಱಂ |
ಜಲದಿಂ ನೊಳೆಕೆಗಳನೈದೆ ಪಾಲಿಪತೆಱದಿಂ ||

ಫಲವೆಳಪರಸುಂ ಪ್ರಜೆಗಳ |
ನಲಸದೆ ಪಾಲಿಪುದು ದಾನಮಾನಾದಿಗಳಿಂ ||೩೩೬||
ಕಿರ್ದೆನಿಸಿದೊಡಂ ಬೀಜಾಂ |
ಕುರಮನದೆಂತಾನುಮೊಲ್ದು ರಕ್ಷಿಸಿದೊಡೆ ಬಿ ||
ತ್ತರಿಪುದು ಕಾಲದೆ ಫಲಮಂ |
ಸುರಕ್ಷಿತಪ್ರಜೆಗಳುಂ ನಲಂತೆನಸೇಬ್ಕಿಂ ||೩೩೭||
ಪೊನ್ನುಂ ದವಸಂ ಮಿಱುಗುವ |
ರನ್ನಂ ಬಗೆವಗೆಯವಾಹನಂ ಮುಂತೆನೆ ಮ||
ತ್ತಿನ್ನೇನೇಂ ಪ್ರಭುಗಿರ್ಕ್ಕುಂ |
ಕೆನ್ನಂ ಪ್ರಜೆಯತ್ತಣಿಂದೆ ಬಂದುದದೆಲ್ಲಂ ||೩೩೮||

ಬಳಿಕ ಗರುಡನು ಈ ಮಾತನ್ನು ಕೇಳಿ ಅವುಗಳಿಗುಂಟಾದ ದುಃಖ ಕ್ಕೋಸ್ಕರ ತಾನೂ ದುಃಖಿಸಿ ಕೋಪವನ್ನೂ ತಾಳಿ—ಅಹಹ! ಈ ಪಕ್ಷಿಗಳ ಮಾತು ಯಥಾರ್ಥ. ಈಗಲೇ ಹೋಗಿ ಆ ಸಮುದ್ರವನ್ನು ಶೋಷ ಗೊಳಿಸಬೇಕು—ಎಂದು ಆಲೋಚಿಸುತಿರುವ ಹೊತ್ತಿಗೆ ವಿಷ್ಣುದೂತನು ಬಂದು—ಎಲೆ ಗರುತ್ಮಂತನೆ ! ಸ್ವಾಮಿಯಾದ ಶ್ರೀಮನ್ನಾರಾಯಣನು ನನ್ನನ್ನು ನಿನ್ನ ಬಳಿಗೆ ಕಳುಹಿಸಿರುವನು. ದೇವತೆಗಳ ಕಾರ್ಯಕ್ಕೋಸ್ಕರ ಸ್ವಾಮಿ ಅಮರಾವತಿಗೆ ಹೊರಟಿರುವನು. ಅದರಿಂದ ನೀನು ಬೇಗ ಬರಬೇಕು—ಎಂದು ನುಡಿಯಲು, ಅದಕ್ಕೆ ಗರುಡನು ಬಿಂಕದಿಂದ ಕೂಡಿ ಇಂತೆಂದನು :—ಎಲೆ ದೂತನೆ ! ಅಲ್ಪನಾದ ಈ ಸೇವಕನಿಂದ ಸ್ವಾಮಿ ಏನಮಾಡುವನು ? ಆದಕಾರಣ ನೀನು ಹೋಗಿ, ಇನ್ನಾವ ಭೃತ್ಯನನ್ನಾದರೂ ವಾಹನಕ್ಕೋಸ್ಕರ ನನ್ನ ಸ್ಥಾನಕ್ಕೆ ಏರ್ಪಡಿಸಿಕೊಳ್ಳುವುದೆಂದು ಸ್ವಾಮಿಗೆ ಹೇಳು. ಮತ್ತು ನನ್ನ ನಮಸ್ಕಾರವನ್ನು ತಿಳಿಯಿಸು. ಏಕೆಂದರೆ ಇಂತು ಹೇಳಿದೆ :—

ಅಱಿಯನದಾವಂ ಗುಣಮಂ |
ಪಾಚರಿಸಲ್ಬಾರದಾತನಂ ಮತಿವಂತಂ ||

ಕರಮುಟ್ಟಿ ಬಿತ್ತಿದೂಷರ |
ಧರೆಯಿಂದೆಂತಂತಮಂಗೆ ಫಲಮಿಲ್ಲಮನಿಂ ||೩೩೯||

ದೂತನೆಂದನು :—ಎಲೆ ಗರುಡ ! ನೀನು ಯಾವಾಗಲೂ ಸ್ವಾಮಿಯಂ ಕುರಿತು ಇಂತಹ ಮಾತನಾಡಿದವನಲ್ಲ. ಅದೇನು ? ಹೇಳು. ಸ್ವಾಮಿ ನಿನಗೆ ಏನಪಮಾನವನ್ನು ಮಾಡಿದನು ?

ಗರುಡನೆಂದನು :—ಸ್ವಾಮಿಗೆ ಆಶ್ರಯನಾದ ಸಮುದ್ರನು ನಮ್ಮ ಟಿಟ್ಟಿಭನ ಮೊಟ್ಟೆಗಳನ್ನು ಅಪಹರಿಸಿದನು. ಸ್ವಾಮಿ ಅವನನ್ನು ನಿಗ್ರಹಿಸದಿದ್ದರೆ ನಾನು ಸ್ವಾಮಿಯ ಭೃತ್ಯನಲ್ಲ. ಇದೀಗ ನನ್ನ ನಿಶ್ಚಯ. ನೀನು ಈಗಲೇ ಹೋಗಿ ಇದನ್ನು ಸ್ವಾಮಿಗೆ ತಿಳಿಯಿಸು.

ಬಳಿಕ ಸ್ವಾಮಿ—ಗರುಡನು ಪ್ರಣಯಕೋಪವುಳ್ಳವನಾಗಿರುವನೆಂದು ದೂತನ ಮುಖದಿಂದ ತಿಳಿದು ಇಂತು ಚಿಂತಿಸಿದನು :—ಅಹಹ ! ಗರುಡನು ಕೋಪಿಸಿಕೊಂಡಿರುವುದು ಯುಕ್ತ. ಅದರಿಂದ ನಾನೇ ಹೋಗಿ ಅವನನ್ನು ಸಂಮಾನಿಸಿ ಕರೆದುಕೊಂಡು ಬರುವೆನು. ಇಂತು ಹೇಳದೆ :—

ಬಲಯುಕ್ತಂ ಭಕ್ತಂ ಮೇಣ್ |
ಕುಲೀನನೆಂದೆನಿಪ ತೊೞ್ತನಣುಗನನೆಂತಂ ||
ತೊಲಮಿಂ ಲಾಲಿಸವೇೞ್ಕುಂ |
ದಲೇಳಿಸಲ್ಬಾರದಲ್ತೆ ಸಿರಿವೇೞ್ಪರಸಂ ||೩೪೦||

ಅಲ್ಲದೆ :—

ಅರಸಂ ಹರಿಸಂಗೊಂಡೊಡೆ |
ಸರಿಸದ ತೊೞ್ತೆರ್ಗೆ ಬಱಿಯ ಪಣಮುಂ ಕುಡುಮಂ ||
ಪರಿತೋಷಿತರವರಾದೊಡೆ |
ಹರಣಂಗಳ ತೆಱತಮಂಗೊಱಲ್ದುಪಕರಿಪರ್ ||೩೪೧||

ಎಂದು ನಿಶ್ಚಯಿಸಿ ರುಕ್ಮಪುರಿಗೆ ಹೊರಟು ಥಟ್ಟನೆ ಗರುಡನ ಬಳಿಯಂ ಸೇರಿದನು. ಗರುಡನೂ ಮನೆಗೆ ಬಂದ ಸ್ವಾಮಿಯನ್ನು ನೋಡಿ

ಲಜ್ಜೆಯಿಂದ ತಲೆವಾಗಿ ಇಂತೆಂದನು ; ಸ್ವಾಮಿಯೆ ! ನಿನ್ನ ಆಶ್ರಯದಿಂದ ಕೊಬ್ಬಿದ ಸಮುದ್ರನು ನನ್ನ ಸೇವಕನ ಮೊಟ್ಟೆಗಳನ್ನು ಅಪಹರಿಸಿ ನನಗೆ ಅಪಮಾನವನ್ನುಂಟುಮಾಡಿರುವನು ; ಆದರೆ ಸ್ವಾಮಿಗೆ ಲಜ್ಜೆಯಂ ಮಾಡಿ ದಂತಾಗುವುದೆಂದು ನಾನು ತಡೆದಿರುವೆನು. ಇಲ್ಲದಿದ್ದರೆ ಇವನನ್ನು ನೆಲಸಮ ಮಾಡುತಿದ್ದೆ. ಒಡೆಯನ ಭಯದಿಂದ ಆತನ ನಾಯನ್ನೂ ಹೊಡೆಯಲಾಗು ವುದಿಲ್ಲ. ಏಕೆಂದರೆ ಇಂತು ಹೇಳಿದೆ :—

ಆವುದು ಲಾಘವಮಂ ಮೇಣ್ |
ಜೀವಸಮಂ ತನ್ನ ಪೊರೆವವಂಗೊಡರಿಸುಗುಂ ||
ಭಾವಿಪೊಡೆಸಗಲ್ಬಾರದ |
ದಾವಗಮಂತಪ್ಪ ಕಜ್ಜಮಂ ಕುಲಭೃತ್ಯಂ ||೩೪೩||

ಅದನಾಲಿಸಿ ಸ್ವಾಮಿಯಿಂತೆಂದನು :—ನೀನು ಯಥಾರ್ಥವಾದ ಮಾತ ನಾಡಿದೆ. ಇಂತು ಹೇಳಿದೆ :—

ಉಪಸೇವಿಪ್ಪಜನಂ ಗೈ |
ದಪರಾಧದಿನಾದ ಶಿಕ್ಷೆಯೊಡೆಯಂಗಕ್ಕುಂ ||
ತ್ರಪೆಯುಮವಂಗದಱಿಂದಾ |
ದಪುದಂತವು ಸೇವಕರ್ಗ್ಗೆ ಸಮನಿಸವಲ್ತೇ ||೩೪೪||

ಬಾ. ಸಮುದ್ರನಿಂದ ಮೊಟ್ಟೆಗಳನ್ನು ತರಿಸಿಕೊಟ್ಟು ನಿನ್ನ ಟಿಟ್ಟಿಭ ವನ್ನು ಸಂತೈಸೋಣ. ಆಮೇಲೆ ಅಮರಾವತಿಗೂ ಹೋಗೋಣ.

ಎಂದುಹೇಳಿ ಸ್ವಾಮಿ ಅಲ್ಲಿಂದ ಹೊರಟು ಆಗ್ನೇಯಾಸ್ತ್ರವನ್ನು ಸಂ ಧಾನಮಾಡಿ ಸಮುದ್ರನನ್ನು ಕುರಿತು—ಎಲೆ ದುರುಳ ! ಟಿಟ್ಟಿಭನ ಮೊಟ್ಟೆ ಗಳನ್ನು ಕೊಟ್ಟುಬಿಡು. ಇಲ್ಲದಿದ್ದರೆ ನಿನ್ನನ್ನು ನೆಲಸಮಮಾಡುವೆನು— ಎನಲು, ಸಮುದ್ರನು ಭಯಗೊಂಡು ಟಿಟ್ಟಿಭದ ಮೊಟ್ಟೆಗಳನ್ನು ಕೊಟ್ಟು ಬಿಟ್ಟನು. ಟಿಟ್ಟಿಭವೂ ಅವುಗಳನ್ನು ಮಡದಿಗೆ ಒಪ್ಪಿಸಿತು. ಇದರಿಂದ

ನಾನು ಹೇಳುವೆನು :—" ಪಗೆವನ ಬಲಮಂ ಬಗೆಯದೆ। ...." ಎಂದು.

ಆದಕಾರಣ ಪುರುಷನು ತಾನು ಮಾಡತಕ್ಕ ಪ್ರಯತ್ನವನ್ನು ಬಿಡಬಾರದು.

ಅದನಾಲಿಸಿ ಸಂಜೀವಕವು ಮತ್ತೆ ದಮನಕವನ್ನೇ ಕುರಿತು ಇಂತೆಂದಿತು :—ಎಲೆ ಮಿತ್ರ! ಇವನು ದುಷ್ಟಬುದ್ಧಿಯೆಂಬುದನ್ನು ನಾನು ತಿಳಿಯತಕ್ಕುದೆಂತು ? ಇದುವರೆಗೂ ಉತ್ತರೋತ್ತರಸ್ನೇಹದಿಂ ಕೂಡಿ ಪ್ರಸನ್ನನಾಗಿ ನನ್ನನ್ನು ನೋಡುತಿದ್ದನು. ಯಾವಾಗಲೂ ಅವನು ಬೇರೆರೀತಿಯಲ್ಲಿದ್ದುದನ್ನು ನಾನು ಕಾಣಲಿಲ್ಲ. ನಾನು ಆತ್ಮರಕ್ಷಣೆಗೋಸ್ಕರ ಅವನನ್ನು ಸಂಹರಿಸುವ ವಿಷಯದಲ್ಲಿ ಏನುಪ್ರಯತ್ನವನ್ನು ಮಾಡಬೇಕು ? ಅದನ್ನು ಹೇಳು.

ದಮನಕವೆಂದಿತು :—ಪ್ರಿಯನೆ ! ಈ ವಿಷಯದಲ್ಲಿ ತಿಳಿಯತಕ್ಕುದೇನು ? ನೀನು ಇದನ್ನು ನಂಬು. ಆ ದುಷ್ಟಬುದ್ಧಿ ನಿನ್ನನ್ನು ನೋಡುತ್ತಲೂ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಹುಬ್ಬುಗಂಟುಹಾಕಿಕೊಂಡು ಕಡೆವಾಯಿಗಳನ್ನು ನಾಲಗೆಯಿಂದ ಸವರುತ್ತ ಇರುವನು. ಇಂತಲ್ಲದೆ ಅವನು ಬೇರೆರೀತಿಯಲ್ಲಿದ್ದರೆ ಅತ್ಯಂತಪ್ರಸನ್ನನೆಂದು ತಿಳಿ. ಇನ್ನು ನನಗೆ ಅನುಜ್ಞೆಯಂ ಕೊಡು. ನನ್ನ ಬೀಡಿಗೆ ಹೋಗುವೆನು. ಈ ರಹಸ್ಯವು ಭೇದಿಸದಂತೆ ನೀನು ಕಾರ್ಯವಂ ಮಾಡಬೇಕು. ಈ ದಿನ ಸಾಯಂಕಾಲಕ್ಕೇ ಹೊರಟುಹೋಗಲು ಶಕ್ತಿಯಿದ್ದರೆ ನೀನು ದೇಶತ್ಯಾಗವನ್ನು ಮಾಡು. ಏಕೆಂದರೆ—

ಕುಲದೇಟಿಗೆ ತಾಸೊರ್ವನ ।
ನುಟಿಗುಟಿಗೂರೇಟಿಗೆ ಗಾತ್ರಕುಲಮುಮನೂರಂ ॥
ಉಟಿಗಂತುದೇಶದೇಟಿಗೆ ।
ಪೊಟಿಲನೆ ತನ್ನೇಟಿಗೆ ಗುಟಿಗೆ ದೇಶದ ಮಹಿಯುಂ ॥೩೪॥

ಅಪನ್ನಾಶಕೆ ಪಣಮಂ |
ಕಾಪಿಡುವುದು ಪಣದೆ ಸತಿಯ ಕಾಪಿಡುವುದು ಮೇಣ್ ||
ಎಪ್ಪೊೞ್ತುಂ ತನ್ನಂ ತಾಂ ||
ಕಾಪಿಡವೇೞ್ಕುಂ ಸಮಂತು ಪಣದಿಂ ಸತಿಯಿಂ ||೩೪೫||

ಪ್ರಬಲನಿಂದ ತಿರಸ್ಕೃತನಾದವನಿಗೆ ವಿದೇಶಗಮನವಾಗಲಿ ಮರೆಹೊಗುವುದಾಗಲಿ ನೀತಿ ; ಆದಕಾರಣ ದೇಶತ್ಯಾಗವನ್ನು ಮಾಡಿ ಪ್ರಾಣರಕ್ಷಣೆಯಂ ಮಾಡಿಕೊಳ್ಳಬೇಕು. ಹೇಳಿದೆ :—

ಅೞಿವುಳ್ಳಂ ಹರಣಂಗಳ |
ಪೊರೆವುದು ಸುತರಿಂದೆ ಪೆಂಡಿರಿಂದಾದೊಡಮಾ ||
ಹರಣಂಗಳ್ ನೆಲೆಗೊಂಡಿರೆ |
ನರಂಗೆ ತಾಂ ಮತ್ತದೆಲ್ಲಮುಂ ದೊರೆಕೊಳ್ಗುಂ ||೩೪೬||

ಅಲ್ಲದೆ :—

ನಲ್ಲದೞಿನೊ ಪೊಲ್ಲದೞಿನೊ |
ಮೆಲ್ಲನದೇನಾನುಮೊಂದುಪಾಯದೆ ಮನುಜಂ ||
ಪೊಲ್ಲಮೆಯಾಂತ ತನ್ನಂ |
ನಲ್ಲಿರವೊಂದಿಸಿ ಸಮರ್ಥನೆನಗುವುದಱಿನಂ ||೩೪೭||

ಹರಣಕ್ಕಪಾಯಮೊದವಿರೆ |
ಸಿರಿ ಮೊದಲಾದುದಱೊಳೆಗ್ಗರಾರ್ ಬೞಿದೆ ಮನಂ ||
ನಿೞಿಸಿ ಏಮೋಹಿಪರವರಸು |
ಏರದೞಿವುದುಮುೞಿಯುದೞಿಗುಮುದಱಿಂದನೆಲ್ಲಂ ||೩೪೮||

ಎಂದು ಹೇಳಿ ದಮನಕವು ಕರಟಕದ ಬಳಿಗೆ ಬಂದಿತು. ಕರಟಕವೂ ಬಂದ ಆ ದಮನಕವಂ ಕಂಡು—ಮಿತ್ರ! ನೀನು ಅಲ್ಲಿಗೆ ಹೋಗಿ ಏನಮಾಡಿದೆ ? ದಮನಕವೆಂದಿತು ;—ನಾನು ನೀತಿಬೀಜವನ್ನು ಬಿತ್ತಿರುವೆನು. ಫಲವು ದೈವಾಯತ್ತವು ; ಏಕೆಂದರೆ ಇಂತು ಹೇಳಿದೆ :—

ಬಿದಿ ತನಗೆ ಪರಾಙ್ಮುಖವೆನಿ |
ಸಿದೊಡಂ ಮತಿಶಾಲಿ ತನ್ನ ಕಪ್ಪಂಕಳೆಯಲ್ ||
ಹೃದಯಮನಾಶ್ವಾಸಿಸಲುಂ |
ಪದೆಪಿಂ ತಾಂಗೆಯ್ವಗೆಯ್ತಮಂ ಗೆಯವೇೞ್ಕುಂ ||೩೪೯||
ಎಸಗುವನಂ ಸಿರಿ ಪೊರ್ದುಗು |
*ಮುಸಿರ್ವರ್ ಬಿದಿಯಾಯವೇೞ್ಕುಮೆಂದು ಜಡರ್ ಭಂ ||
ಗಿಸಿ ಬಿದಿಯಂ ಶಕ್ತಿಯಿನೆಸ |
ಗೆಸಗಿದೊಡಂ ಫಲಿಸದಿರ್ದೊಡದಱೊಳ್ ತಪ್ಪೇಂ ||೩೫೦||

ಕರಟಕವೆಂದಿತು :—ನೀನು ಬಿತ್ತಿದ ಬೀಜವು ಎಂತಹುದು ಹೇಳು.

ದಮನಕವೆಂದಿತು :—ಮತ್ತೆ ಅವರಿಬ್ಬರೂ ಒಂದುಕಡೆ ಸೇರಿ ಆಲೋಚನೆಮಾಡುವುದನ್ನು ನೀನು ನೋಡದಂತೆ ನಾನು ಸುಳ್ಳುಮಾತುಗಳನ್ನಾಡಿ ಅವರಿಬ್ಬರಿಗೂ ಪರಸ್ಪರವಾಗಿ ಭೇದವನ್ನುಂಟುಮಾಡಿರುವೆನು.

ಕರಟಕವೆಂದಿತು :—ಎಲೈ! ನೀನು ಮಾಡಿದುದು ಸರಿಯಲ್ಲ. ಏಕೆಂದರೆ ಅವರಿಬ್ಬರೂ ಪರಸ್ಪರಸ್ನೇಹದಿಂದ ಅನುರಕ್ತರಾಗಿ ಸುಖದಿಂದಿದ್ದರು. ಅಂತವರನ್ನು ಕೆರಳಿಸಿದೆ. ಇಂತು ಹೇಳಿದೆ :—

ಪಗೆಯದ ಸುಖಿಯಂ ನೀಡುಂ |
ದುಗುಡದ ದಾಱಿಯೊಳದಾವನನುಗೊಳಿಸಿದಪಂ ||
ಮಿಗೆ ಮಱುಮೆಯ್ಗಳೊಳಾತಂ |
ದುಗುಡಮನನುಭವಿಪನಿರದು ಸಂದೆಗವದಱೊಳ್ ||೩೫೧||

ಅಲ್ಲದೆ ನೀನು ಅವರಿಗೆ ಭೇದವನುಂಟುಮಾಡಿದುದರಿಂದಲೇ ತೃಪ್ತಿಗೊಂಡಿರುವೆ. ಇದೂ ಸರಿಯಲ್ಲ. ಏಕೆಂದರೆ ಎಲ್ಲರೂ ಅಪಕಾರಮಾಡಬಲ್ಲರು; ಉಪಕಾರಮಾಡಲಾರರು. ಹೇಳಿದೆ :—

ದುರುಳಂ ಪರಕೃತಿಯಂ ಪರ |
ಹರಿಸಲೆ ಬಲ್ಲಂ ಸಮಂತು ಸಾಧಿಸಲಱಿಯಂ ||

ಭರದಿಂದುರುಳಿಸಲಾರ್ಪುದು |
ತರುವಂ ಮೇಲೆತ್ತಲಾಱದಲ್ತೆ ಸಮೀರಂ ||೩೫೨||

ದಮನಕವೆಂದಿತು :—ಎಲೈ ನೀನು ನೀತಿಶಾಸ್ತ್ರವನರಿಯೆ. ಆದರಿಂದ ಇಂತು ಮಾತನಾಡುವೆ. ಇಂತು ಹೇಳಿದೆ :—

ಪಗೆಯಂ ಮತ್ತಂ ಕುತ್ತಮು |
ನೊಗೆದೊಡನೆಯೆ ಶಾಂತಿಗೊಳಿಸದಾತಂ ಕಡುಬ ||
ಲ್ಮೆಗನಾದೊಡಮೇಂ ಬಳೆದಾ |
ಪಗೆಕುತ್ತಂಗಳಿನೆ ಶಾಂತಿಗೊಳಿಸಲ್ಪಡುಗುಂ ||೩೫೩||

ನಮ್ಮ ಮಂತ್ರಿಪದವನಪಹರಿಸಿರುವುದರಿಂದ ಅವನು ನಮಗೆ ಶತ್ರುವಾದವನು. ಇಂತು ಹೇಳಿದೆ :—

ಕುಲಜಕ್ರಮದಿಂದೊದವಿದ |
ನೆಲೆಯುನದಾವಂ ಗೆಲಲ್ಕೆ ಮನಮಂ ಮಾಳ್ಪಂ ||
ದಲವಂ ಸಹಜಂ ಪಗೆಗಡ |
ಮೊಲವಿಂಗೆಡೆಯೆನಿಪನಾದೊಡಂ ವಧ್ಯನವಂ ||೩೫೪||

ನಾನು ಉದಾಸೀನನಾಗಿ ಅಭಯವನ್ನಿತ್ತು ಅವನನ್ನು ಕರೆದುಕೊಂಡು ಬಂದು ಸೇರಿಸಿದೆ. ಈಗ ನನ್ನನ್ನೇ ಮಂತ್ರಿಪದದಿಂದ ಭ್ರಷ್ಟನನ್ನಾಗಿ ಮಾಡಿರುವನು. ಇದು ಯುಕ್ತವಾಗ ಮಾತು :—

ಘನಶೀಲಂ ತಾಂ ಪ್ರವೇಶಂಗುಡೆ ನಿಜಪದದೊಳ್ ದುರ್ಜನಂಗಕ್ಕಟಾ ಮೆ |
ಲ್ಲನಿವಂ ನಿಂದಾತಿಸುತ್ತಾ ಪದಮನೆ ಬೞಿಕಂ ನಾಶಿಸಲ್ಕಾತನಂ ಶ ||
ಕ್ತನೆನಿಪ್ಪಂ ಪ್ರಾಜ್ಞರಾರಯ್ವುದೞಿನೆಡೆಗುಡಲ್ಬಾರದೆಂತಪ್ಪವರ್ಗ್ಗೇ |
ಕೆನೆ ಜಾರಂ ಸಾರ್ದದೆಂತುಂ ಮನೆಯೊಡೆಯನೆ ತಾನಕ್ಕುಮೆಂಬುಕ್ತಿಯಿರ್ಕ್ಕುಂ ||

ಆದಕಾರಣ ನಾನು ಅವನ ವಿಷಯದಲ್ಲಿ ಈ ವಧೋಪಾಯವನ್ನು ಮಾಡಿರುವೆನು. ಇದರಿಂದ ಅವನು ದೇಶವನ್ನಾದರೂ ಬಿಟ್ಟು ಹೋಗುವನು.

ಈ ಸಂಗತಿಯನ್ನು ನೀನಲ್ಲದೆ ಮತ್ತಾವನೂ ತಿಳಿಯನು. ಸ್ವಾರ್ಥಕ್ಕೋಸ್ಕರ ಇಂತು ಮಾಡುವುದು ಯುಕ್ತವೇ ಸರಿ. ಏಕೆಂದರೆ ಇಂತು ಹೇಳಿದೆ:—

ಕಡಿದಾಗಿಸಿ ಮಾನಸಮಂ |
ನುಡಿಯಂ ಕರ್ವಿನ ರಸಕ್ಕೆ ಸರಿಯಾಗಿಸುತಂ ||
ಪಡೆಯದೆ ವಿಕಲ್ಪಮಂ ಬಿಡ |
ದಡಸಿ ಕೊಲಲ್ವೇಳ್ಕುಮಲ್ತೆ ಪೊಲ್ಲೆಸಗಿದನಂ ||೩೫೭||

ಇನ್ನೇನೆಂದರೆ ಅವನು ಮೃತನಾದರೂ ನಮಗೆ ಭೋಜ್ಯನೆನಿಸುವನು. ಇದೊಂದು ವೈರಸಾಧನವು. ಇನ್ನೊಂದು, ನಮಗೆ ಮಂತ್ರಿತ್ವವುಂಟಾಗುವುದು. ಮತ್ತೊಂದು ಮನಸ್ಸಿಗೆ ತೃಪ್ತಿ. ಇಂತು ಮೂರುಗುಣಗಳುಳ್ಳ ಈ ಕಾರ್ಯದ ವಿಷಯದಲ್ಲಿ ಏಕೆ ನನ್ನನ್ನು ಮೂಢತೆಯಿಂದ ದೂಷಿಸುವೆ? ಇಂತು ಹೇಳಿದೆ :—

ಅಡವಿಯ ಚತುರಕದಂತಿರೆ |
ಕಡುಚದುರಂ ಪರಜನಂಗಳಂ ಪೀಡಿಸುತುಂ ||
ಬಿಡದೆ ನಿಜೇಷ್ಟಮುಮಂ ತಾಂ |
ಪಡೆವಂ ಮೂಢಮತಿಯಂತದೇಂ ಪಡೆದಪನೇ ||೩೫೭||

ಕರಟಕವು ಇದೆಂತೆನಲು, ಅದೆಂದಿತು :—

ಕಥೆ ೧೫.

ಒಂದು ವನದ ಪ್ರಾಂತದಲ್ಲಿ ವಜ್ರದಂಷ್ಟ್ರವೆಂಬ ಸಿಂಹವಿದ್ದಿತು. ಚತುರಕವೆಂಬ ನರಿಯೂ ಕ್ರವ್ಯಮುಖವೆಂಬ ತೋಳವೂ ಆ ಸಿಂಹವನ್ನು ಸೇವಿಸುತ್ತ ಯಾವಾಗಲೂ ಹಿಂಬಾಲಿಸಿ ಅದೇ ವನದಲ್ಲಿ ವಾಸಮಾಡಿಕೊಂಡಿದ್ದುವು.

ಒಂದು ದಿವಸ ಆಸನ್ನಪ್ರಸವವಾದ ಒಂದು ಹೆಣ್ಣೊಂಟೆ ಪ್ರಸವ ವೇದನೆಯನ್ನು ಸಹಿಸದೆ ತನ್ನ ಗುಂಪಿನಿಂದ ತಪ್ಪಿಸಿಕೊಂಡು ಗಹನವಾದ ಒಂದು ವನದ ಭಾಗದಲ್ಲಿ ಕುಳಿತುಕೊಂಡಿದ್ದಿತು. ಆ ಸಿಂಹವು ಅದರ ಬಳಿಗೆ ಹೋಗಿ ಅದನ್ನು ಕೊಂದು ಹೊಟ್ಟೆಯನ್ನು ಭೇದಿಸುವಷ್ಟರಲ್ಲಿ ಜೀವವುಳ್ಳ ಒಂಟೆಮರಿಯೊಂದು ಈಚೆಗೆ ಬಂದಿತು. ಸಿಂಹವು ಆ ಹೆಣ್ಣೊಂಟೆಯ ಮಾಂಸ ದಿಂದ ಪರಿವಾರದೊಡನೆ ತೃಪ್ತಿ ಹೊಂದಿತು. ಆ ಮರಿಯನ್ನು ಮಾತ್ರ ತನ್ನ ಬೀಡಿಗೆ ಕರೆದುಕೊಂಡು ಬಂದು ಅದಂಕುರಿತು—ಮಗುವೆ! ನನ್ನಿಂದಾಗಲಿ, ಮತ್ತೊಬ್ಬನಿಂದಾಗಲಿ ಮೃತ್ಯುವಶನಾಗುವೆನೆಂದು ನೀನು ಭಯಪಡಬೇಕಾ ದುದಿಲ್ಲ. ಆದಕಾರಣ ಈವನದಲ್ಲಿ ಸ್ವೇಚ್ಛೆಯಿಂದ ತಿರುಗಿಕೊಂಡಿರು. ನಿನ್ನ ಕಿವಿಗಳು ಶಂಕುಗಳಂತಿರುವುದರಿಂದ ನಿನಗೆ ಶಂಕುಕರ್ಣನೆಂಬ ಹೆಸರುಂ ಟಾಗುವುದು—ಎಂದು ಹೇಳಿತು.

ಬಳಿಕ ನಾಲ್ಕು ಪ್ರಾಣಿಗಳೂ ಒಂದೇ ಕಡೆಯಲ್ಲಿ ವಿಹರಿಸುತ್ತ ಪರ ಸ್ಪರವಾಗಿ ಅನೇಕಕಥಾಪ್ರಸ್ತಾವಗಳನ್ನು ಮಾಡುತ್ತ ಗೋಷ್ಠೀಸುಖವನ್ನು ಅನುಭವಿಸುತಿದ್ದುವು.

ಶಂಕುಕರ್ಣವೂ ಪ್ರಾಯವಂ ಹೊಂದಿ ಸಿಂಹವನ್ನು ಒಂದು ಕ್ಷಣವಾ ದರೂ ಬಿಡದಿದ್ದಿತು.

ಇಂತಿರಲು, ಒಂದುದಿನ ವಜ್ರದಂಷ್ಟ್ರಕ್ಕೆ ಕಾಡಿನ ಒಂದು ಮದ ದಾನೆಯೊಡನೆ ಯುದ್ಧವೊದವಿತು. ಆ ಆನೆ ಮದಾತಿಶಯದಿಂದ ಆ ಸಿಂಹ ವನ್ನು ಲಕ್ಷಿಸದೆ ದಂತಪ್ರಹಾರಗಳಿಂದ ಪ್ರಹರಿಸಿ ಮೈಯೆಲ್ಲವನ್ನೂ ಗಾಯ ಗೊಳಿಸಿ ಅಲುಗಾಡುವುದಕ್ಕೂ ಆಗದಂತೆ ಮಾಡಿತು. ಆಗ ಸಿಂಹವು ಹಸಿ ವಿಂದ ಬಳಲಿ ಅವುಗಳಂಕುರಿತು—ಎಲೈ ಪ್ರಿಯರೆ! ಯಾವುದಾದರೂ ಒಂದು ಜಂತುವನ್ನು ಹುಡಿಕಿ. ನಾನು ಈ ದಶೆಯಲ್ಲಿದ್ದರೂ ಅದನ್ನು ಕೊಂದು ನನ್ನ ಮತ್ತು ನಿಮ್ಮ ಕ್ಷುತ್ತನ್ನು ನಿವಾರಣೆಗೊಳಿಸುವೆನು—ಎಂದಿತು.

ಅದನ್ನು ಕೇಳಿ ಅವು ಮೂರು ಪ್ರಾಣಿಗಳೂ ಕಾಡಿನಲ್ಲಿ ಸಾಯಂ ಕಾಲದವರೆಗೆ ಅಲೆದರೂ ಯಾವುದೊಂದು ಜಂತುವನ್ನೂ ಪಡೆಯಲಿಲ್ಲ.

ಬಳಿಕ ಚತುರಕವು ಇಂತು ಚಿಂತಿಸಿತು :—ಈ ಶಂಕುಕರ್ಣನನ್ನು ಕೊಂದರೆ ಎಲ್ಲರಿಗೂ ಕೆಲವುದಿನಗಳವರೆಗೆ ತೃಪ್ತಿಯುಂಟಾಗುವುದು. ಆದರೆ ಸ್ವಾಮಿ ಇವನನ್ನು ಸ್ನೇಹದಿಂದಲೂ ತನ್ನನ್ನು ಆಶ್ರಯಿಸಿರುವುದರಿಂದಲೂ ಕೊಲ್ಲನು. ಅಥವಾ ಇವನನ್ನು ಕೊಲ್ಲುವಂತೆ ನನ್ನ ಬುದ್ಧಿಯ ಪ್ರಭಾವ ದಿಂದ ಆತನಿಗೆ ಬೋಧನೆಯಂ ಮಾಡುವೆನು. ಇಂತು ಹೇಳಿದೆ :-

ವಿದಿತಬುಧರ್ಕಳ ಬುದ್ಧಿಗೆ |
ಸದೆಯಲಕ್ಕಗದುದುಮೆಯ್ದಲಾಗದುದುಂ ಲೋ ||
ಕದೆ ಗೆಯಲಾಗದುದುಮದಾ ||
ವುದುಮಿಲ್ಲದಱಿಂದದಂ ಪ್ರಯೋಗಿಸವೇೞ್ಕುಂ ||೩೫||

ಇಂತು ಚಿಂತಿಸಿ ಶಂಕುಕರ್ಣವಂ ಕುರಿತು—ಎಲೆ ಶಂಕುಕರ್ಣ! ಒಡೆಯನು ಪಥ್ಯವಿಲ್ಲದೆ ಹಸಿವಿನಿಂದ ಬಳಲಿ ಬೆಂಡಾಗುತಿರುವನು. ಒಡೆ ಯನಿಲ್ಲದಮೇಲೆ ನಿಶ್ಚಯವಾಗಿ ನಮಗೆಲ್ಲರಿಗೂ ವಿನಾಶವೇ ಸರಿ. ಆದುದ ರಿಂದ ಒಡೆಯನಿಗೋಸ್ಕರ ಒಂದು ಮಾತನ್ನು ಹೇಳುವೆನು; ಅದನ್ನು ಕೇಳು—ಎನಲು, ಶಂಕುಕರ್ಣವು—ಎಲೈ! ಬೇಗನೆ ಹೇಳು. ನಿನ್ನ ಮಾತನ್ನು ಬೇರೆ ಎಣಿಸದೆ ಅವಶ್ಯವಾಗಿ ನೆರವೇರಿಸುವೆನು. ಮತ್ತು ಒಡೆಯನಿಗೆ ಹಿತವನ್ನು ಮಾಡಿದರೆ ನೂರಾರು ಪುಣ್ಯಕಾರ್ಯಗಳನ್ನು ಮಾಡಿ ದಂತಾಗುವುದು—ಎಂದಿತು.

ಚತುರಕವೆಂದಿತು :—ಅಯ್ಯ! ಇಮ್ಮಡಿಯಾದ ಲಾಭವಂ ಪಡೆದು ನಿನ್ನ ಶರೀರವನ್ನು ಒಡೆಯನಿಗೆ ಒಪ್ಪಿಸು. ಇದರಿಂದ ನಿನಗೆ ಇಮ್ಮಡಿ ಯಾದ ಶರೀರವು ದೊರೆವುದು. ಒಡೆಯನಿಗೂ ತೃಪ್ತಿಯಾಗುವುದು.

ಅದನ್ನು ಕೇಳಿ ಶಂಕುಕರ್ಣವು—ಅಯ್ಯಾ! ಇಂತಾದರೆ, ಇದು ನನಗೆ ಪ್ರಯೋಜನಕರವಾದುದೇ ಸರಿ. ಸ್ವಾಮಿಗೆ ತಿಳಿಯಿಸು. ಇದರಿಂದ ಆತನಿಗೂ ಪ್ರಯೋಜನವಾಗಲಿ; ಆದರೆ ಈ ವಿಷಯದಲ್ಲಿ ಧರ್ಮವೇ ಹೊಣೆ—ಎಂದಿತು.

ಬಳಿಕ ಆ ಚತುರಕಕ್ರವ್ಯಮುಖಗಳು ಆಲೋಚಿಸಿ ಶಂಕುಕರ್ಣವನ್ನೂ ಕರೆದುಕೊಂಡು ಸಿಂಹದ ಬಳಿಗೆ ಬಂದುವು.

ಚತುರಕವೆಂದಿತು:—ಸ್ವಾಮಿಯೆ! ಯಾವ ಜಂತುವೂ ಸಿಕ್ಕಲಿಲ್ಲ. ಸೂರ್ಯನೂ ಅಸ್ತಂಗತನಾದನು ಸ್ವಾಮಿಯು ಇಮ್ಮಡಿಯಾದ ಶರೀರವನ್ನು ಕೊಡುವುದಾದರೆ ಎರಡರಷ್ಟು ಹೆಚ್ಚುವುದರಿಂದ ಶಂಕುಕರ್ಣನು ಧರ್ಮವನ್ನೆ ಹೊಣೆಯಾಗಿಟ್ಟುಕೊಂಡು ತನ್ನ ಶರೀರವನ್ನು ನಿನಗೆ ಅರ್ಪಿಸುವನು.

ಸಿಂಹವೆಂದಿತು:—ಎಲೈ! ಇಂತಾದರೆ ಲೇಸೆ ಆಯಿತು. ಈ ವ್ಯವಹಾರದ ವಿಷಯದಲ್ಲಿ ಧರ್ಮವೇ ಹೊಣೆಯಾಗಿರಲಿ.

ಇಂತು ಸಿಂಹವು ಹೇಳಿದ ಬಳಿಕ ತೋಳನರಿಗಳು ಶಂಕುಕರ್ಣದ ಹೊಟ್ಟೆಯಂ ಸೀಳಲು, ಅದು ಸತ್ತುಹೋಯಿತು.

ಬಳಿಕ ವಜ್ರದಂಷ್ಟ್ರವು ಚತುರಕವಂ ಕುರಿತು—ಎಲೆ ಚತುರಕ! ನಾನು ಹೊಳೆಗೆ ಹೋಗಿ ಮಿಂದು ದೇವರ ಪೂಜೆಯಂ ಮಾಡಿ ಬರುವೆನು. ಅದುವರೆಗೂ ನೀನು ಇಲ್ಲಿ ಜಾಗರೂಕನಾಗಿರಬೇಕು—ಎಂದು ಹೇಳಿ ಹೊಳೆಗೆ ಹೋಯಿತು. ಅದು ಹೊರಟುಹೋಗುತ್ತಲೂ ಚತುರಕವು—ಏನಮಾಡಿದರೆ ಈ ಒಂಟೆಯನ್ನು ನಾನು ಒಬ್ಬನೇ ತಿನ್ನಬಹುದು—ಎಂದು ಚಿಂತಿಸಿ ಕ್ರವ್ಯಮುಖವಂ ಕುರಿತು—ಎಲೆ ಕ್ರವ್ಯಮುಖ! ನೀನು ಬಲು ಹಸಿದಿರುವೆ; ಸ್ವಾಮಿ ಬಾರದಿರುವಷ್ಟರಲ್ಲಿ ನೀನು ಈ ಒಂಟೆಯ ಮಾಂಸವನ್ನು ತಿನ್ನು; ನಿನ್ನಲ್ಲಿ ತಪ್ಪಿಲ್ಲವೆಂಬುದನ್ನು ಸ್ವಾಮಿಯಲ್ಲಿ ಸಮರ್ಥಿಸುವೆನು—ಎಂದು ನುಡಿಯಿತು.

ಅದೂ ಆ ಮಾತಂಕೇಳಿ ಸ್ವಲ್ಪ ಮಾಂಸವನ್ನು ತಿನ್ನುವಷ್ಟರಲ್ಲಿ ಚತುರಕವು—ಎಲೆ ಕ್ರವ್ಯಮುಖ! ಒಡೆಯನು ಬರುತಿರುವನು. ಆದರಿಂದ ಇದನ್ನು ಬಿಟ್ಟು ದೂರವಾಗಿ ನಿಲ್ಲು; ಇಂತುಮಾಡಿದರೆ ನೀನು ತಿಂದಿರಬಹುದೆಂದು ಅವನಿಗೆ ವಿಕಲ್ಪ ತೋರುವುದಿಲ್ಲ—ಎನಲು, ಅದು ಅರೀತಿಯೇ ಮಾಡಿತು.

ಸಿಂಹವು ಬಂದು ಒಂಟೆಯಂ ನೋಡುವಷ್ಟರಲ್ಲಿ ಒಂಟೆಯ ಹೃದಯ ಭಾಗವು ಬರಿದಾಗಿದ್ದಿತು. ಸಿಂಹವು ಹುಬ್ಬು ಗಂಟುಹಾಕಿಕೊಂಡು ಬಹು ಕ್ರೌರ್ಯದಿಂದ—ಎಲವೊ! ಈ ಒಂಟೆಯನ್ನು ಎಂಜಲುಮಾಡಿಟ್ಟವನು ಯಾವನು? ಅವನನ್ನೂ ಕೊಲ್ಲುವೆನು—ಎಂದು ಗದರಿ ಗರ್ಜಿಸಲು, ಕ್ರವ್ಯ ಮುಖವೂ ಚತುರಕದ ಮುಖವನ್ನು ನೋಡಿ—ಅಯ್ಯಾ! ಏನಮಾಡಿದರೆ ನನ್ನ ವಿಷಯದಲ್ಲಿ ಸ್ವಾಮಿ ಉಪಶಾಂತನಾಗುವನು? ಹೇಳು—ಎಂದಿತು.

ಚತುರಕವು ನಕ್ಕು ಎಲವೊ ನನ್ನನ್ನು ಲಕ್ಷ್ಯಮಾಡದೆ ಮಾಂಸವನ್ನು ತಿಂದುಹಾಕಿ ಈಗ ನನ್ನ ಮುಖವನ್ನು ನೋಡುವೆಯಾ? ನೀನು ಮಾಡಿದ ಅಕಾರ್ಯಕ್ಕೆ ಪ್ರತಿಫಲವನ್ನು ಪಡೆ—ಎಂದಿತು.

ಕ್ರವ್ಯಮುಖವು ಆ ನುಡಿಯಂ ಕೇಳಿ, ಎಲ್ಲಿ ತನ್ನ ಪ್ರಾಣಕ್ಕೆ ಅಪಾಯವುಂಟಾಗುವುದೋ ಎಂದು ದೂರದೇಶಕ್ಕೆ ಹೊರಟುಹೋಯಿತು.

ಇಷ್ಟರೊಳಗೆ ಆ ದಾರಿಯಲ್ಲಿ ಭಾರವಾಹಿಗಳಾದ ಒಂಟೆಗಳ ಗುಂಪು ಬಂದಿತು ಅವುಗಳಲ್ಲಿ ಅಗ್ರೇಸರವಾದ ಒಂಟೆಯ ಕೊರಲಲ್ಲಿ ದೊಡ್ಡ ಘಂಟೆ ಕಟ್ಟದ್ದಿತು. ಸಿಂಹವು ಅದರ ಶಬ್ದವನ್ನು ದೂರದಿಂದಲೆ ಕೇಳಿ ನರಿಯಂ ಕುರಿತು—ಅಯ್ಯ! ಯಾವಾಗಲೂ ಕಿವಿಯಲ್ಲಿ ಕೇಳದ ರೌದ್ರಧ್ವನಿ ಕೇಳಬರುವುದು; ಇದೇನೆಂದು ತಿಳಿ—ಎನಲು, ಆ ನರಿಯು ಆ ಮಾತನಾಲಿಸಿ ಸ್ವಲ್ಪದೂರ ಹೋಗಿ ಥಟ್ಟನೆ ಹಿಂತಿರುಗಿ ಬಂದು—ಒಡೆಯನೆ! ಇಲ್ಲಿಂದ ಹೊರಟುಹೋಗುವುದಕ್ಕಾದರೆ ನೀನು ಹೋಗು ಹೋಗು—ಎಂದಿತು.

ಅದೂ—ಅಯ್ಯ! ಇದೇನು ಇಂತು ನನ್ನನ್ನು ತಲ್ಲಣಗೊಳಸುವೆ? ಅದೇನು ಸಂಗತಿ? ಹೇಳು—ಎನಲು, ಚತುರಕವು ಸ್ವಾಮಿಯೆ! ಇದೊ ಯಮಧರ್ಮರಾಜನು ನಿನ್ನಮೇಲೆ ಕೋಪಿಸಿಕೊಂಡು ಬಂದಿರುವನು. ಏಕೆಂದರೆ "ಅಕಾಲದಲ್ಲಿ ಇವನು ನನ್ನ ಒಂಟೆಯನ್ನು ಕೊಂದನು; ಅದಕ್ಕೆ ಇವನಿಂದ ಸಾಸಿರಭಾಗ ಹೆಚ್ಚಾಗಿ ತೆಗೆದುಕೊಳ್ಳುವೆನು—ಎಂದು ನಿಶ್ಚಯಿಸಿ ಮಹಾಕಾರವನ್ನು ವಹಿಸಿ ಅಗ್ರೇಸರವೆನಿಸಿದ ಒಂಟೆಯ ಕೊರಲಲ್ಲಿ ಗಂಟೆಯನ್ನು ಕಟ್ಟಿಸಿ ಮೃತವಾದ ಈ ಒಂಟೆಯಲ್ಲಿ ಮನಗೊಂಡ ಪಿತೃಪಿತಾಮಹಾದಿಗಳನ್ನು ಸಂಗಡ ಕರೆದುಕೊಂಡು ಹಗೆಯಂ ತೀರಿಸಿಕೊಳ್ಳಲು ನಿಶ್ಚಯವಾಗಿ ಬಂದಿರುವನು—ಎಂದಿತು.

ಸಿಂಹವೂ ಆ ಮಾತಂ ಕೇಳಿ ದೂರದಿಂದಲೇ ಸುತ್ತಲೂ ನೋಡಿ ಆ ಒಂಟೆಯನ್ನೂ ಬಿಟ್ಟು ಪ್ರಾಣಭಯದಿಂದ ತಲೆತಪ್ಪಿಸಿಕೊಂಡಿತು.

ಚತುರಕವು ಮೆಲ್ಲಮೆಲ್ಲನೆ ಆ ಒಂಟೆಯ ಮಾಂಸವನ್ನು ತಿಂದಿತು. ಇದರಿಂದ ನಾನು ಹೇಳುವೆನು. "ಅಡವಿಯ ಚತುರಕದಂತಿರೆ" ಎಂದು.

ಬಳಿಕ ದಮನಕವು ಹೊರಟುಹೋಗಲು, ಸಂಜೀವಕವು ಇಂತು ಚಿಂತಿಸಿತು;—ಅಹಹ! ಇದೇನು ನಾನು ಮಾಡಿದುದು? ಹುಲ್ಲು ತಿಂದುಕೊಂಡು ಜೀವಿಸುವ ನಾನು ಮಾಂಸಾಶಿಯಾದ ಆತನ ಸೇವಕನಾಗಬಹುದೇ? ಇದು ಯುಕ್ತವಾದಮಾತು;—

ಆವನಗಮ್ಯನ ನೆಯ್ದುವ |
ನಾವ ನಸೇವ್ಯರುಮನಿರದೆ ಸೇವಿಸುವನವಂ ||
ಏವೇಳ್ದಿಪೆನಟಿ ವಾಂಪಂ |
ಭಾವಿಸೆ ಬಸಿಱಿಕೊಂದಿದಶ್ವತರಿಯವೊಲೆಂತುಂ ||೩೫||

ಅದಕ್ಕೆ ಈಗ ಏನಮಾಡಲಿ? ಎಲ್ಲಿಗೆ ಹೋಗಲಿ? ಎಂತು ನನ್ನ ಮನಸ್ಸು ನಿರಾಳವಾಗುವುದು? ಅಥವಾ ಆ ಪಿಂಗಲಕನಲ್ಲಿಗೇ ಹೋಗಲೆ?

ಹೋದರೆ ಬಂದುವೇಳೆ ಶರಣಾಗತನಾದ ನನ್ನನ್ನು ಕೊಲ್ಲದೆ ರಕ್ಷಿಸಬಹುದು ಏಕೆಂದರೆ ಇಂತುಹೇಳದೆ :—

ಪದೆಪಿಂ ಧರ್ಮದೊಳುಜ್ಜುಗಿಪ್ಪವರ್ಗೆದೇನಾನುಂ ವಿಪತ್ತೊರ್ಮೆ ದೈ |
ವದಿನುಂಟಾದೊಡಮಂತನಂ ಕಳೆಯಲಾದಂ ತಕ್ಕುದಂ ಮಾಡವೇ ||
ಳ್ಪುದದೇಕೆಂಬೊಡೆ ಸುಟ್ಟುದರ್ಕ್ಕೆ ಜಳಮಂ ಸಿಂಪಿಪ್ಪುದುಂ ಮೇಲ್ಗಡೆಂ |
ಬುದುಲೋಕೋಕ್ತಿವಲಂ ನೆಗಳ್ತೆವಡೆದಿರ್ಕುಂ ಲೋಕದಲ್ಲೆತ್ತಲುಂ||೩೬೦||

ಅಲ್ಲದೆ :—

ಮೇದಿನಿಯೊಳ್ ಕರ್ಮಂಗಳ |
ಗೈದಗ್ಗಾರ್ತ್ಮೀಯಕರ್ಮಪರಿಪಕ್ವತೆಯಿಂ ||
ಆದಂ ಶುಭಮಶುಭವೊ ಫಲ |
ವಾದವುದಾಗಲ್ಕೆತಕ್ಕುದೇಕೆ ವಿಚಾರಂ ||೩೬೧||

ಬಂದುವೇಳೆ ನಾನು ಮತ್ತೊಂದೆಡೆಗೆ ಹೋದರೂ ಮಾಂಸಾಶಿಯಾದ ಯಾವುದಾದರೂ ಬಂದು ದುಷ್ಟಜಂತುವಿನದೆಸೆಯಿಂದ ನನಗೆ ಮೃತ್ಯುವುಂಟಾಗುವುದು. ಅದಕ್ಕಿಂತಲೂ ಈ ಮೃಗರಾಜನಿಂದ ಮೃತಿಯುಂಟಾಗುವುದು ಲೇಸು. ಇಂತುಹೇಳದೆ :—

ತಿರೆಯೊಳ್ ಮಹಾಂತರೊಡನುಱೆ |
ಪುರುಡಿಸುವಾತಂಗೆ ಬನ್ನಮುಂ ಮೇಲೆನಿಕುಂ ||
ಗಿರಿಯಂ ಭೇದಿಸುವೆಡೆಯೊಳ್ |
ಕರಿಗೊದವಿದ ದಂತಭಂಗಮದುವುಂ ಶ್ಲಾಘ್ಯಂ ||೩೬೨||

ಅಲ್ಲದೆ :—

ಸಿಂಧುರದ ಕರ್ಣದಿಂ ಹತಿ |
ಯೊಂದಿದ ದಾನಾರ್ಥಿಯಾದ ಮಧುಪಂಬೊಲಣಂ ||
ಕುಂದಂ ಮಹಾಂತನತ್ತಣಿ |
ನೊಂದಿದೊಡಂ ತಾಂ ಪೊಗಳ್ತೆವಡೆದಪನಲ್ಪಂ ||೩೬೩||

ಎಂದು ನಿಶ್ಚಯಿಸಿ ತಪ್ಪುಹೆಜ್ಜೆಹಾಕುತ್ತ ಮೆಲ್ಲಮೆಲ್ಲನೆ ಹೋಗಿ ಪಿಂಗಲಕದ ವಾಸಸ್ಥಾನವನ್ನು ಕಂಡು ಇಂತೆಂದಿತು:—ಅಹಹ! ಇದು ಯುಕ್ತವಾದಮಾತು :—

ಉರಗಮಡಂಗಿದಾಲಯಕೆ ಕೂರ್ಮಿಗವಿಂಡುಗಳುಳ್ಳಕಾನನಾಂ
ತರಕೆ ನೆಗಲ್ಗಳಿಂದಿಡಿದ ಚೆಲ್ವಿನ ಪದ್ಮಸರಕ್ಕೆ ಪೋಗುವಂ ||
ತಿರೆ ದುರುಳರ್ಕಳಿಂ ಪಿಸುಣರಿಂದತಿಕುತ್ಸಿತರಿಂದೆ ತಳ್ತಸಾ |
ಗರಸಮವಾದ ರಾಜಸದನಕ್ಕತಿಕಷ್ಟದೆ ಪೋಪರಬ್ಬಿಕತುಂ ||೩೬೪||

ಎಂದು ತನ್ನಲ್ಲಿ ನುಡಿದು ದಮನಕವು ಹೇಳಿದ್ದಂತೆ ಇದ್ದ ಪಿಂಗಳಕದ ಬಗೆಯುಂಕಂಡು ಬೆದರಿ ಆಕಾರವನ್ನು ಅಡಗಿಸಿಕೊಂಡು ನಮಸ್ಕಾರಮಾಡದೆ ದೂರವಾಗಿ ಕುಳಿತುಕೊಂಡಿತು.

ಪಿಂಗಲಕವೂ ಆರೀತಿಯಲ್ಲಿದ್ದ ಸಂಜೀವಕವಂ ಕಂಡು ದಮನಕದ ನುಡಿಯನ್ನು ನಂಬಿ ಕೋಪಗೊಂಡು ಅದರಮೇಲೆ ಬಿದ್ದ ತೀಕ್ಷ್ಣಗಳಾದ ಉಗುರುಗಳಿಂದ ಅದರ ಬೆನ್ನನ್ನು ವಿದಾರಿಸಲು, ಸಂಜೀವಕವು ಕೋಡುಗಳಿಂದ ಆ ಸಿಂಹದ ಹೃದಯವನ್ನು ತಿವಿದು ಮೆಲ್ಲನೆ ತಪ್ಪಿಸಿಕೊಂಡು ಕೋಡುಗಳಿಂದಲೇ ಕೊಲ್ಲಲು ಇಚ್ಛೆಸಿ ಕಾಳೆಗಕ್ಕೆ ಮುಂದೆ ನಿಂತಿತು.

ಬಳಿಕ ಹೂಬಿಟ್ಟ ಮುತ್ತುಗದ ಮರದಂತೆ ಕಾಣುತ್ತ ಒಂದನೊಂದು ಕೊಲ್ಲಬೇಕೆಂದು ಯತ್ನಿಸುತಿದ್ದ ಅವೆರಡರನ್ನೂ ಕರಟಕವು ಕಂಡು ದಮನಕವಂಕುರಿತು :—

ಎಲೆ ಮೂಢ! ನೀನು ಇವರಿಬ್ಬರಿಗೂ ವಿರೋಧವನ್ನು ತಂದಿಟ್ಟೆ. ನಿನ್ನಕಾರ್ಯವು ಸರಿಯಲ್ಲ. ನೀನು ನೀತಿಯನ್ನೂ ತಿಳಿದವನಲ್ಲ. ನೀತಿಜ್ಞರು ಇಂತು ಹೇಳುವರು:—

ನಯಶಾಸ್ತ್ರಜ್ಞತೆಯಿಂದನಲ್ಪಫಲಮಂ ದುಸ್ಸಾಧಮಂಕಾರ್ಯಸಂ |
ಚಯಮಂ ಸಾಮದೊಳೇ ಶಮಂಗೊಳಿಪವರ್ ಸನ್ಮಂತ್ರಿಗಳ್ ನ್ಯಾಯರೀ ||

ತಿಯುಬಿಟ್ಟಲ್ಪಫಲಾಕ್ಯಸಾರಕ್ಕೃತಿಯುಂ ದಂಡಂಗಳಿಂ ತೀರಿಸಲ್ |
ಬಯಸರ್ ತಕ್ಕಡಿಯೇಱಿಸರ್ಗಳ ನೃಪಶ್ರೀಯುಂ ಸ್ವದುರ್ನೀತಿಯಿಂ||೩೬೫||

ಒಂದು ವೇಳೆ ಸ್ವಾಮಿಗೆ ವಿಘಾತವುಂಟಾದರೆ ನೀನು ನಿನ್ನ ಮಂತ್ರ ಬುದ್ಧಿಯಿಂದ ಮಾಡುವುದೇನು ? ಸಂಜೀವಕನು ಹತನಾಗದಿದ್ದರೆ ಇದೂ ಒಳ್ಳೆತಲ್ಲ. ಏಕೆಂದರೆ ಇವನು ಬದುಕಿದರೆ ಪ್ರಾಣಾಪಾಯದಶೆಯಲ್ಲಿರುವ ಸ್ವಾಮಿಯ ವಧೆಯನ್ನು ಮಾಡದಿರನು ; ಅದರಿಂದ ಎಲವೋ ! ನೀನು ಮಂತ್ರಿಪದವಿಯನ್ನು ಎಂತು ಬಯಸುವೆ ? ಸಾಮೋಪಾಯದ ಸಿದ್ಧಿಯನ್ನು ನೀನು ಅರಿಯೆ. ದಂಡೋಪಾಯದಲ್ಲಿಯೇ ಅಭಿರುಚಿಯುಳ್ಳ ನಿನ್ನ ಮನೋರಥವು ವ್ಯರ್ಥವೇಸರಿ, ಇಂತು ಹೇಳಿದೆ :—

ತರದಿಂ ಸಾಮದೆ ದಂಡಂ |
ಬರವೊರೆದಂ ನೀತಿಯಂ ವಿಧಾತ್ರಂ ಜಗದೊಳ್ ||
ಉರುಪಾಪಿ ದಂಡಮವಱಿಂ |
ಪುರುಷನದಂ ಕಡೆಗೆ ತಾಂ ಪ್ರಯೋಗಿಸವೇೞ್ಕುಂ ||೩೬೬||

ಅಲ್ಲದೆ :—

ಅನುಕೂಲಿಸುವೊಡೆ ಸಾಮದೆ |
ವಿನಿಯೋಗಿಸಬಾರದಲ್ಲಿ ದಂಡಮನಱಿತರ್ |
ಜನಿಸಿದ ಪಿತ್ತಮಡಂಗುವೊ |
ಡಿನಿಸಕ್ಕರೆಯಿಂದೆ ಕೈಪೆನಡವಲದಿಂದೇಂ ||೩೬೭||

ಅಂತಲ್ಲದೆ :—

ಧೀಮಂತನಾದ ಪುರುಷಂ |
ಸಾಮಮನನುವಿಂ ಮೊದಲ್ ಪ್ರಯೋಗಿಸವೇೞ್ಕುಂ ||
ಸಾಮದಿನಪ್ಪೆಸಕಂಗಳ್ |
ತಾಮಾವೆಡೆಯಲ್ಲಿಯುಂ ಹದಂಗಿಡವಲ್ತೇ ||೩೬೮||

ಚಂದಿರನಿಂದೋಷಧಿಯುಂ |
ಕುಂದದು ಬಿಸುಗದಿರನಿಂದಮುಂ ಕಿರ್ಚಿನಿನುಂ ||
ಕುಂದುವುದು ಸಾಮದಿಂದಮೆ |
ಸಂದಣಿಸಿದ ಪಗೆಯಿನಾದ ಕಚ್ಚಿಲೆ ಜಗದೊಳ್ ||೩೬೯||

ಅಂತು ನೀನು ಮಂತ್ರಿತ್ವವನ್ನು ಅಪೇಕ್ಷಿಸುವುದೂ ಯುಕ್ತವಲ್ಲ. ಏಕೆಂದರೆ ನೀನು ಮಂತ್ರದ ಪರಿಯನ್ನು ತಿಳಿಯೆ; ಕೇಳು:— "ಕಾರ್ಯಗಳ ಆರಂಭೋಪಾಯ, ಪುರುಷದ್ರವ್ಯಸಂಪತ್ತು, ದೇಶಕಾಲವಿಭಾಗ, ವಿನಿಪಾತಪ್ರತೀಕಾರ, ಕಾರ್ಯಸಿದ್ಧಿ" ಎಂದು ಮಂತ್ರವು ಐದುತೆರವುಳ್ಳದು. ಆವಿನಿಪಾತವು ಈಗ ಸ್ವಾಮಿಮಂತ್ರಿಗಳಲ್ಲಿ ಒಬ್ಬನಿಗೋ ಅಥವಾ ಇಬ್ಬರಿಗೂ ಸಂಬಂಧಿಸಿ ಉಂಟಾಗುತಿರುವುದೋ? ನಿನಗಂತಹ ಶಕ್ತಿಯಿದ್ದರೆ ವಿನಿಪಾತಕ್ಕೆ ಏನು ಪ್ರತೀಕಾರವನ್ನು ಮಾಡಬೇಕೋ ಆಲೋಚಿಸು. ಭಿನ್ನತಂತ್ರವುಂಟಾಗಿರುವಾಗಲ್ಲವೆ ಮಂತ್ರಿಗಳ ಬುದ್ಧಿಪರೀಕ್ಷೆಯು. ಇಂತು ಹೇಳಿದೆ :—

ಒದವಿದ ಭೇದದೆ ಮಂತ್ರಿಯ |
ಚದುರುಂ ಸನ್ನಿಚರನುಡಿಸೆ ಬೆಜ್ಜನ ಜಾಣುಂ ||
ವಿದಿತಮೆನಿಕ್ಕುಂ ಬಗೆವೊಡೆ |
ಪದುಳದಿ ನಿರ್ಬಂದದಾವನೈ ಬುಧನೆನಿಸಂ || ||೩೭೦||

ಅಲ್ಲದೆ :—

ದುರುಳಂ ಪರಕೃತಿಯಂ ಪರ |
ಹರಿಸಲೆಬಲ್ಲಂ ಸಮಂತು ಸಾಧಿಸಲಱಿಯಂ ||
ನೆಱೆದಪುದನ್ನದ ಒಟ್ಟಿಲ |
ನುರುಳಿಸಲಿಲಿಯೆತ್ತಿಡಲ್ಕದೇಂ ನೆಱೆದಪುದೇ ||೩೭೧||

ಅಥವಾ ಇದು ನಿನ್ನ ತಪ್ಪಲ್ಲ. ನಿನ್ನ ಮಾತನ್ನು ನಂಬಿದ ಸ್ವಾಮಿಯ ತಪ್ಪು. ಇಂತು ಹೇಳಿದೆ :—

ತಗದರನೆಡೆಗೊಳ್ವರಸರ್ |
ಮಿಗೆ ಬುಧರಱಿಪಿದ ಸುಮಾರ್ಗದೊಳ್ ನಡೆಯದವರ್ ||
ಪುಗುವರ್ ಸಂಕಟಕರಮಂ |
ಮಗುೞ್ಕೆಡೆಗುಡದುದಂ ವಿಪತ್ಪಂಜರಮಂ ||೩೭೧||

ನೀನು ಇವನ ಮಂತ್ರಿಯಾದರೆ ಇನ್ನೊಬ್ಬ ಸಜ್ಜನನಾವನೂ ಇವನ ಹತ್ತಿರ ಸೇರುವುದಿಲ್ಲ. ಇಂತು ಹೇಳಿದೆ :—

ಖಳನಂ ಮಂತ್ರಿಯನೊಳಕೊಂ |
ಡಿಳೆಯಾಣ್ಮನಗಮ್ಯನಮಳಗುಣನಾಗಿರೆಯುಂ ||
ತಿಳಿಸವಿನೀರಿಂದೊಪ್ಪಿಯು |
ಮೊಳಗಡೆ ಕೊರ್ನೆಗೞಿನಾಂತ ಮಡುವಂತಿರೆವೋಲ್ ||೩೭೩||

ಅಂತು ಸಜ್ಜನರಹಿತನಾದ ಸ್ವಾಮಿಗೂ ಕೇಡುಂಟಾಗುವುದು. ಇಂತು ಹೇಳಿದೆ :—

ಬಿಸವಂದದ ಸವಿಗಳಿಗಳ |
ನುಸಿರುತೆ ಬಿಲ್ವಿಡಿಯದಿರ್ಪ ಸೇವಕರೊಡನಾರ್ ||
ವಸುಧೇಂದ್ರರ್ ಬಿನದಿಪರೋ |
ನಿಸದಂ ಬಿನದಿಸುವರವನ ಪಗೆಗಳ್ ಸಿರಿಯಿಂ ||೩೭೪||

ಆದರೆ ಮೂರ್ಖನಿಗೆ ಉಪದೇಶಮಾಡುವುದರಿಂದ ಕೇಡೇ ಹೊರತು ಗುಣವಿಲ್ಲ. ಇಂತು ಹೇಳಿದೆ :—

ಬಾಗಿಸಲಾಗದುದು ಮರಂ |
ಬಾಗದು ಮೇಣುಪಲದಲ್ಲಿ ಕೊರಸಿಯೆಸಕಂ ||
ಆಗದಶಿಷ್ಯಂಗಱಿವು |
ದಾಗದು ತಿಳಿಯಱಿಪಿಯುೞಿದ ಸೂಚೀಮುಖಮಂ ||೩೭೫||

ದಮನಕವ್ರ ಇದೆಂತೆನಲು ಅದಿಂತೆಂದಿತು :—

ಕಥೆ ೧೬.

ಒಂದು ಬೆಟ್ಟದ ತಪ್ಪಲಲ್ಲಿ ಕಪಿಗಳ ಗುಂಪು ಇದ್ದಿತು. ಅದು ಒಂದು ಕಾಲದಲ್ಲಿ ಪ್ರಾಪ್ತವಾದ ಹೇಮಂತಸಮಯದಲ್ಲಿ ದುಸ್ಸಹವಾದ ತಣ್ಣಾಳಿಯ ಸೋಂಕಿನಿಂದ ನಡುಗುತ್ತ ಮಂಜುಮಳೆಹನಿಗಳ ಹೊಡೆತದಿಂದ ಸಂಕಟಪಡುತ್ತ ಯಾವರೀತಿಯಿಂದಲೂ ಸ್ವಸ್ಥತೆಯಂ ಪಡೆಯದೆ ಇದ್ದಿತು. ಅದರಲ್ಲಿ ಕೆಲವು ಕಪಿಗಳು ಬೆಂಕಿಯ ಕಿಡಿಗಳಿಗೆ ಸಮಗಳಾದ ಗುರುಗುಂಜಿಗಳನ್ನು ಕಿತ್ತುಕೊಂಡು ಬಂದು ಬೆಂಕಿಯೆಂಬಾಸೆಯಿಂದ ಫೂತ್ಕರಿಸುತ್ತ ಸುತ್ತಲೂ ಕುಳಿತಿದ್ದುವು.

ಸೂಚೀಮುಖವೆಂಬ ಪಕ್ಷಿಯು ಅವುಗಳ ಆ ಬರಿಯಶ್ರಮವನ್ನು ನೋಡಿ ಇಂತೆಂದಿತು :—ಎಲೈ! ನೀವೆಲ್ಲರೂ ಮೂಢರು. ಇವು ಬೆಂಕಿಯ ಕಿಡಿಗಳಲ್ಲ; ಗುರುಗುಂಜಿಗಳು. ಸುಮ್ಮನೆ ಏಕೆ ಶ್ರಮಪಡುವಿರಿ? ಇದರಿಂದ ಚಳಿಹೋಗುವುದಿಲ್ಲ. ಗಾಳಿಯ ಹೊಡೆತವಿಲ್ಲದ ಯಾವುದಾದರೂ ಒಂದು ವನಪ್ರದೇಶವನ್ನಾಗಲಿ ಗುಹೆಯನ್ನಾಗಲಿ ಬೆಟ್ಟದ ದರಿಯನ್ನಾಗಲಿ ಹುಡುಕಿ. ಈಗಲೂ ಮೇಘಗಳು ಗರ್ಜಿಸುತ್ತಿರುವುವು.

ಆ ಕಪಿಗಳಲ್ಲಿ ಒಂದು ಮುದುಕಪಿ ಆ ಪಕ್ಷಿಯಂ ಕುರಿತು—ಎಲೆ ಮೂಢ! ಈ ಸಂಗತಿಯಿಂದ ನಿನಗೇನು? ಸುಮ್ಮನೆ ಹೋಗು. ಇಂತು ಹೇಳದೆ :—

ಅಡಿಗಡಿಗೆಸಕದೊಳೆಡಱಂ |
ಪಡೆದವನಂ ಜೂದುಗಾಱನಂ ಸೋಲ್ತವನಂ ||
ನುಡಿಯಿಸಬಾರದು ಕಾಂಕ್ಷಿಸು |
ವೊಡೆ ತನ್ನಯ ಕಾರ್ಯಸಿದ್ಧಿಯಂ ಮತಿಯುಳ್ಳಂ ||೩೭||

ಅಲ್ಲದೆ :—

ನರನಾನಂ ಬೇಂಟೆಗನಂ |
ಒಱದಾಯುಸನೊಂದುತಿರ್ಪನಂ ಮೂರ್ಖನುಮಂ ||
ಉರುದುಃಖನುಮಂ ನುಡಿಯಿಪ |
ನಱವಿಲ್ಲದವಂ ಪರಾಭವಕ್ಕೆಡೆಯಪ್ಪಂ ||೩೭೭||

ಆ ಪಕ್ಷಿಯೂ ಆ ಕಪಿಯನ್ನು ಲಕ್ಷಿಸದೆ ಮತ್ತೆ ಮತ್ತೆ ಕಪಿಗಳನ್ನು ಕುರಿತು—ಎಲೈ ! ವ್ಯರ್ಥಕ್ಲೇಶದಿಂದೇನು ?—ಎಂದು ಹೇಳುತ್ತ ಎಷ್ಟು ಹೊತ್ತಾದರೂ ಅಂತು ಹೇಳುವುದನ್ನು ಬಿಡದಿರಲು, ವ್ಯರ್ಥಶ್ರಮವುಳ್ಳದಾದುದರಿಂದ ಕೋಪಗೊಂಡ ಒಂದು ಕಪಿ ಅದರ ರೆಕ್ಕೆಗಳನ್ನು ಹಿಡಿದು ಕಲ್ಲಿನ ಮೇಲೆ ಬಡಿದು ಸಾಯಿಸಿತು. ಇದರಿಂದ ನಾನು ಹೇಳುವೆನು :—

ಬಾಗಿಸಲಾಗುದುದುಮರಂ | ಬಾಗದು ....ಎಂದು.

ಗಾವಿಲನಂ ಬೋಧಿಸಲದು |
ಗೈವುದು ರೋಷಮನವಂಗೆ ಗೈಯದುಶಮಮಂ ||
ಪಾವಿಂಗೆ ಪಾಲನೆಱೆವುದು |
ಕೇವಲವಿಷವರ್ಧನಂಗಡಾ ತಾನಕ್ಕುಂ ||೩೭೮||

ಅಂತಲ್ಲದೆ :—

ಅಪರಿಜ್ಞಾತಪ್ರಕೃತಿಯೊ |
ಳುಪದೇಶಮನಿರದೆ ಗೈಯಬಾರದು ನೋಡೈ ||
ಕಪಿಮೂರ್ಖಂ ಮುಱದಿಟ್ಟ |
ತ್ತುಪದೇಶಮನೊಲ್ದು ಗೈದ ಗುಬ್ಬಿಯ ಗೂಡಂ ||೩೭೯||

ದಮನಕವಿದೆಂತೆನಲು, ಅದೆಂದಿತು :—

ಕಥೆ ೧೩.

ಒಂದು ವನಪ್ರದೇಶದಲ್ಲಿ ಅದೊಂದು ಬನ್ನಿಯ ಮರವಿದ್ದಿತು. ಎರಡು ಹೆಣ್ಣುಗಂಡುಕಾಡುಗುಬ್ಬಿಗಳು ಅದರ ಜೋಲ್ಗೊಂಬೆಯಲ್ಲಿ

ವಾಸಮಾಡಿಕೊಂಡಿದ್ದುವು. ಅವು ಸುಖದಿಂದ ಇರುತಿರಲು, ಒಂದು ಕಾಲದಲ್ಲಿ ಹೇಮಂತಮೇಘವು ಮೆಲ್ಲಮೆಲ್ಲಗೆ ವರ್ಷಿಸಲು ತೊಡಗಿತು. ಇಷ್ಟರಲ್ಲಿ ಒಂದು ಕೋಡಗವು ಗಾಳಿಮಳೆಯು ಹೊಡೆತಕ್ಕೆ ಸಿಕ್ಕಿ ವೀಣೆಯನ್ನು ನುಡಿಯಿಸುವಂತೆ ಧ್ವನಿಗೊಂಡು ಮೈಯನ್ನು ನಡುಗಿಸುತ್ತ ಆ ಬನ್ನಿಯು ಮರದ ಬಳಿಗೆ ಬಂದು ಕುಳಿತುಕೊಂಡಿತು. ಅಂತಹ ಅವಸ್ಥೆಯಂ ಪಡೆದ ಕೋಡಗವಂ ಕುರಿತು ಆ ಹೆಣ್ಣುಗುಬ್ಬಿಯು ಇಂತೆಂದಿತು :—

ಅಯ್ಯ !

ಕರಚರಣದೆ ಕೂಡಿರುತುಂ |
ಪುರುಷಾಕೃತಿಯಾಗಿ ಕಾಣ್ಬೆ ನೀನೆಲೆಗಾಂಪಾ ||
ಪಿರಿದುಂ ಕೋಡಿಂ ನಡುಗುವೆ |
ಯಿರಲೊಂದಂ ಮನೆಯನೆಂತು ಮಾಡದೆ ಯಿರ್ಪೈ ||೩೮೦||

ಕೋಡಗವು ಈ ಮಾತನ್ನು ಕೇಳಿ ಕೋಪಗೊಂಡು ಇಂತೆಂದಿತು :—

ಎಲೆ ನೀಚೆ ! ಏಕೆ ನೀನು ಮೌನದಿಂದಿರುವುದಿಲ್ಲ ? (ತನ್ನಲ್ಲಿ) ಅಹಹ ! ಇವಳ ಧಾರ್ಷ್ಟ್ಯವೆಂತಹುದು ? ಈಗ ನನ್ನನ್ನು ಹಾಸ್ಯಮಾಡುವಳು.

ಒರೆವಳ್ ಏಮುಷಿಯತ್ತೆಱದಿಂ |
ದರರೆ ದುರಾಚಾರೆ ರಂಡೆ ಸೂಚೀಮುಖಿ ತಾಂ ||
ಉಱೆ ಜಱುಚುತೆ ಶಂಕಿಸಳಂ |
ತಱೆನೇತಕ್ಕಿರ್ಪಳ ಕೊಲ್ಲದಿರ್ದಪೆ ನೀಗಳ್ ||೩೮೧||

ಎಂದುಕೊಂಡು ಬಳಿಕ ಆಗುಬ್ಬಿಯಂ ಕುರಿತು—ಎಲೆ ಮೂಢೆ ! ನನ್ನ ಮೇಲಣ ಚಿಂತೆ ನಿನಗೇನು ? ಇಂತು ಹೇಳಿದೆ :—

ಒರೆಯಲ್ವೇಱ್ಕಿಂ ಸಡ್ಡೆಯಿ |
ನುಱೆ ಕೂಡಿದವಂಗವ್ಮೆದೆ ಬೆಸಗೊಳ್ವಂಗಂ ||

ಪಿರಿದುಂ ಶ್ರದ್ಧಾಹೀನಂ |
ಗೊರೆವುದು ತಾಂ ಕಾಡೊಳಚ್ಚಿದರ್ಕೆಣೆಯಕ್ಕುಂ ||೩೮೨||

ಏಕೆ ಸುಮ್ಮನೆ ಹೆಚ್ಚು ಮಾತನಾಡುವೆ?

ಗೂಡಿನೊಳಗಿದ್ದ ಗುಬ್ಬಿಯು ಮತ್ತೆ ನುಡಿಯಲು, ಆ ಕೋಡಗವು ಆ ಮರವನ್ನು ಹತ್ತಿ ಅದರ ಗೂಡನ್ನು ನೂರುಭಾಗವಾಗಿ ಛಿನ್ನಭಿನ್ನ ಮಾಡಿತು. ಇದರಿಂದ ನಾನು ಹೇಳುವೆನು:—ಅಪರಿಜ್ಞಾತಪ್ರಕೃತಿಯೊ | ಳುಪದೇಶಮನಿರದೆ ಗೆಯ್ಯಬಾರದು ....|| ಎಂದು ಆದರಿಂದ ಎಲೆ ಮೂಢ! ಶಿಕ್ಷೆಗೊಂಡವನಾದರೂ ನೀನು ಶಿಕ್ಷಿತನಲ್ಲ. ಅಥವಾ ನಿನ್ನ ತಪ್ಪಲ್ಲ. ಏಕೆಂದರೆ ಯೋಗ್ಯನಿಗೆ ವಿದ್ಯಾದಾನವನ್ನು ಮಾಡಿದರೆ ಅದರಿಂದ ಗುಣವುಂಟು. ಅಯೋಗ್ಯನಿಗೆ ವಿದ್ಯಾದಾನಮಾಡಿದುದರಿಂದ ಫಲವೇನು? ಹೇಳದೆ:—

ಕಡುಗಟ್ಟಿಲೆಯಿಂ ಸುತ್ತಲು |
ಮಿಡಿದಡಸಿದ ಘಟದೊಳಿಟ್ಟ ದೀಪಂಬೊಲ್ ಪೊ ||
ಲ್ಲಡೆಯೊಳ್ ಮಿಗೆ ಪಿಸಿಯೋಗಂ |
ಬಡಿಸಿದ ಪಾಂಡಿತ್ಯಮೇವುದೋ ವಸುಮತಿಯೊಳ್ ||೩೮೩||

ಆದಕಾರಣ ವ್ಯರ್ಥವಾದ ಶಿಕ್ಷೆಯುಳ್ಳ ನೀನು ನನ್ನ ಮಾತನ್ನು ಆಲಿಸದೆ ತನಗುಂಟಾಗುವ ಅನರ್ಥವನ್ನೂ ಅರಿಯೆ; ಅದರಿಂದ ನಿಶ್ಚಯ ವಾಗಿ ನೀನು ಅಪಜಾತನು. ಇಂತು ಹೇಳದೆ:—

ಜಾತನುಮನುಜಾತನುಪತಿ |
ಜಾತನುಮಾರಯ್ಯೆ ನೋಳ್ಪೊಡಪಜಾತನುಮೆಂ ||
ದೀತೆಱದೆ ಲೋಕದೊಳ್ ತನು |
ಜಾತರ್ ಶಾಸ್ತ್ರಜ್ಞರಿಂದೆ ತಿಳಿಯಲ್ಪಡುಗುಂ ||೩೮೪||

ಜಾತಂ ತಾಯಂತೆ ಗುಣೋ |
ಪೇತಂ ತಾತಂಗೆ ಸಾಟಿಯನುಜಾತಂ ಮೇಣ್ ||

ಕಾಶಂಗಗ್ಗಳನಾ ಅತಿ |
ಜಾತಂ ಮತ್ತಮುಪಜಾತನಧಮರೊಳಧಮಂ | ||೩೮೫||
ತನಗಱವಾಗುವೊಡಂ ದು |
ರ್ಜನನೆಣಿಸಂ ಪೆಱರ ಕೇಡಿನಿಂ ತೋಷಿಪವಂ ||
ಘನರಣರಂಗದೆ ತಲೆಯೊ |
ಯ್ಯನೆ ಕಡಿವಡೆದುರುಳಿ ಕುಣಿಗುಮಲ್ತೆ ಕಬಂಧಂ ||೩೮೬||

ಅಹಹ! ಇದು ವಿದಿತವಾದ ಮಾತು :—

ಸುಬಹುಖ್ಯಾತರ್ ಗಡ ಧ |
ರ್ಮಬುದ್ಧಿಮೇಣ್ ಪಾಪಬುದ್ಧಿಯೆಂಬಿವ್ವರ್ಗಳ್ ತ |
ನ್ನ ಬಱಿಯ ಚಾತುರ್ಯದೆ ಪಾ |
ಪಬುದ್ಧಿ ಪೊಗೆಯಿಡಿಸಿ ತಂದೆಯಂ ಸಾಯಿಸಿದಂ ||೩೮೭||

ದಮನಕವಿದೆಂತೆನಲು, ಅದಿಂತೆಂದಿತು :—

ಕಥೆ ೧೮.

ಒಂದು ಊರಲ್ಲಿ ಧರ್ಮಬುದ್ಧಿ ಪಾಪಬುದ್ಧಿಯೆಂಬ ಇಬ್ಬರು ಕೆಳೆಯರಿದ್ದರು. ಒಂದುದಿನ ಪಾಪಬುದ್ಧಿ ಮನದಲ್ಲಿ—ನಾನು ಮೂರ್ಖನು ಮತ್ತು ಬಡವನು. ಆದಕಾರಣ ಧರ್ಮಬುದ್ಧಿಯನ್ನು ಕರೆದುಕೊಂಡು ದೇಶಾಂತರಕ್ಕೆ ಹೋಗಿ ಇವನ ಆಶ್ರಯದಿಂದ ಹಣವನ್ನು ಸಂಪಾದಿಸಿ ಇವನಿಗೂ ಮೋಸವನ್ನು ಮಾಡಿ ನಾನು ಸುಖದಿಂದಿರಬೇಕು—ಎಂದು ಚಿಂತಿಸಿ ಮತ್ತೊಂದುದಿವಸ ಧರ್ಮಬುದ್ಧಿಯುಂ ಕುರಿತು ಎಲೆ ಕೆಳೆಯ! ಮುದುಕನಾದಮೇಲೆ ಸ್ವಚರಿತ್ರೆಯೇನನ್ನು ನೆನೆವೆ? ದೇಶಾಂತರಗಳನ್ನು ನೋಡದೆ ಮಕ್ಕಳಿಗೆ ಏನು ಸಮಾಚಾರವನ್ನು ಹೇಳುವೆ? ಇಂತು ಹೇಳದೆ :—

ಪರದೇಶದೊಳಿರುತಾವಂ |
ಪರಿಪರಿಯೊಳ್ನುಡುಗೆತುಡುಗೆಯಂ ನಡೆನುಡಿಯಂ ||

ಅಱಿಯನೊ ಧರಣೀತಲದ |
ಳ್ತಿರದೆ ತೊೞಲ್ವವನ ಪುಟ್ಟು ನಿಷ್ಫಲವೆನಿಕುಂ ||೩೮೮||

ಅಲ್ಲದೆ :—

ಪುರುಷಂ ದೇಶದೆ ದೇಶಾಂ |
ತರಮಂ ಕೞಿತೆಯ್ದಿರ್ದನೆನ್ನೆವರಂ ತಾಂ ||
ಧರಣಿಯೊಳನ್ನೆವರಂ ಸಲೆ |
ದೊರೆಕೊಳ್ಳವವಂಗೆ ಬಿಜ್ಜೆ ಪಣಮುಂ ಶಿಲ್ಪಂ ||೩೮೯||

ಧರ್ಮಬುದ್ಧಿ ಅವನ ಮಾತಂ ಕೇಳಿ ಸಂತೋಷಗೊಂಡು ಅವನನ್ನು ಕರೆದುಕೊಂಡು ಹಿರಿಯರ ಅನುಜ್ಞೆಯಂ ಪಡೆದು ಶುಭದಿನದಲ್ಲಿ ದೇಶಾಂತರಕ್ಕೆ ಹೊರಟನು.

ದೇಶಾಟನವನ್ನು ಮಾಡಿ ಪಾಪಬುದ್ಧಿ ಧರ್ಮಬುದ್ಧಿಯ ಪ್ರಭಾವದಿಂದ ಹೆಚ್ಚಾದ ಹಣವಂ ಸಂಪಾದಿಸಿದನು.

ಬಳಿಕ ಅವರಿಬ್ಬರೂ ಬಹುಧನಸಂಪಾದನೆಯಿಂದ ಸಂತೋಷಗೊಂಡು ಔತ್ಸುಕ್ಯದಿಂದ ತಮ್ಮ ಸ್ಥಳಕ್ಕೆ ಹಿಂದಿರುಗಿದರು. ಇದು ಯುಕ್ತ. ಇಂತು ಹೇಳಿದೆ :—

ಕಲೆಯಂ ಪಣಮಂ ಶಿಲ್ಪಮ |
ನಲಸದೆ ಪಡೆದು ಪೆಱನಾಡೊಳಿರ್ದ್ದವರಾತ್ಮ ||
ಸ್ಥಳಕಡಿಯಿಡೆ ಪರಿದಾರಿಯ |
ನೆಲನುಂ ನೂರ್ಗಾವುದಕ್ಕೆ ಸಮವರ್ಗ*ಕ್ಕುಂ ||೩೯೦||

ತಮ್ಮ ಊರ ಹತ್ತಿರ ಬರುತ್ತಲೂ ಪಾಪಬುದ್ಧಿ ಧರ್ಮಬುದ್ಧಿಯಂ ಕುರಿತು ಇಂತೆಂದನು :—

ಅಯ್ಯಾ ! ಇಷ್ಟು ಹಣವನ್ನು ಮನೆಗೆ ತೆಗೆದುಕೊಂಡು ಹೋಗುವುದು ಸರಿಯಲ್ಲ. ಏಕೆಂದರೆ ನಂಟರೂ ಇಷ್ಟರೂ ಕೇಳುವರು. ಆದಕಾ

ರಣ ಗಹನವಾದ ಈಯಡವಿಯಲ್ಲಿಯೇ ಒಂದು ಕಡೆ ನೆಲದಲ್ಲಿ ಹೂಳಟ್ಟು ಈಗ ಸ್ವಲ್ಪಮಾತ್ರವನ್ನು ತೆಗೆದುಕೊಂಡು ಮನೆಗೆ ಹೋಗೋಣ. ಮತ್ತೆ ಬೇಕಾದಾಗ ಇಬ್ಬರೂ ಬಂದು ಬೇಕಾದಷ್ಟನ್ನು ಇಲ್ಲಿಂದ ತೆಗೆದುಕೊಂಡು ಹೋಗೋಣ ಇಂತು ಹೇಳಿದೆ :—

ಧನವತಿಮಿತವಾಗಿರೆಯುಂ |
ಮನೀಷಿ ತಾಂ ತೋಱಲಾಗದದನಾರ್ಗಮದೇ ||
ಕನೆ ಮೇದಿನಿಯೊಳ್ ಮುನಿಯಾ |
ಮನಮುಂ ಚಲಿಸಿದಪುದದಱ ದರ್ಶನದಿಂದಂ ||೩೯೧||

ಅಲ್ಲದೆ :—

ಜಲದೊಳ್ ಮೀಂಗಳ್ ಮತ್ತಂ |
ನೆಲದೊಳ್ ಪುಲಿಮೊದಲೆನಿಪ್ಪ ದುಷ್ಟಮೃಗಂಗಳ್ ||
ಸಲೆ ಬಾನೊಳ್ ವಿಹಗಂಗಳ್ |
ಪಲಮಂ ತಿಂಬಂತೆ ಧನಿಯನೆತ್ತಂ ತಿಂಬರ್ ||೩೯೨||

ಅದನಾಲಿಸಿ ಧರ್ಮಬುದ್ಧಿ ಹೀಗೆಯೇ ಆಗಲೆಂದನು. ಇಬ್ಬರೂ ಅದೇ ರೀತಿಒಪ್ಪಿ ಹಣವನ್ನು ಹೂಳಟ್ಟು ತಮ್ಮ ಮನೆಯಂಸೇರಿ ಸುಖದಿಂದಿದ್ದರು. ಮತ್ತೊಂದುದಿವಸ ಪಾಪಬುದ್ಧಿ ಅರ್ಧರಾತ್ರಿಯಲ್ಲಿ ಆ ಅಡವಿಗೆಹೋಗಿ ಆ ಹಣವನೆಲ್ಲವನ್ನೂತೆಗೆದುಕೊಂಡು ಮಣ್ಣುತುಂಬಿ ಗುಂಡಿಯನ್ನು ಮುಚ್ಚಿ ತನ್ನ ಮನೆಗೆ ಬಂದನು.

ಮರುದಿವಸ ಧರ್ಮಬುದ್ಧಿಯ ಬಳಿಗೆ ಹೋಗಿ—ಕೆಳೆಯ ನಮ್ಮ ಸಂಸಾರವು ದೊಡ್ಡದು. ಧನವಿಲ್ಲದೆ ಕ್ಲೇಶಪಡುವೆವು. ಆದಕಾರಣ ಅಲ್ಲಿಗೆ ಹೋಗಿ ಸ್ವಲ್ಪಧನವನ್ನು ತೆಗೆದುಕೊಂಡು ಬರೋಣ—ಎನಲು, ಅದಕ್ಕೆ ಆತನೊಪ್ಪಿದನು.

ಬಳಿಕ ಇಬ್ಬರೂ ಹೋಗಿ ಆಸ್ಥಳವನ್ನು ಅಗೆದು ನೋಡುವಲ್ಲಿ ಬರಿಯ ಭಾಂಡವಿದ್ದಿತು. ಪಾಪಬುದ್ಧಿ ತಲೆಬಡಿದುಕೊಳ್ಳುತ್ತ ಇಂತೆಂದ

ನು :— ಎಲೆ ಧರ್ಮಬುದ್ಧಿ! ಈ ಹಣವನ್ನು ಅಪಹರಿಸಿದವನು ನೀನೆ ಹೊರತು ಮತ್ತಾರೂ ಅಲ್ಲ. ಏಕೆಂದರೆ, ಗುಂಡಿಯು ಮತ್ತೆ ಮುಚ್ಚಲ್ಪಟ್ಟಿದೆ. ಆದಕಾರಣ ಅದರಲ್ಲಿ ಅರ್ಧವನ್ನು ನನಗೆ ಕೊಡು ; ಇಲ್ಲದಿದ್ದರೆ ನಾನು ರಾಜಸ್ಥಾನದಲ್ಲಿ ತಿಳಿಯಿಸುವೆನು.

ಅವನೆಂದನು :—ಎಲೆ ದುರಾತ್ಮ! ಇಂತುನುಡಿಯಬೇಡ! ನಾನು ಧರ್ಮಬುದ್ಧಿಯೆನಿಸಿಕೊಂಡಿರುವೆನು. ಇಂತಹ ಕಳ್ಳತನವನ್ನು ನಾನು ಮಾಡುವನಲ್ಲ. ಇಂತುಹೇಳಿದೆ ; ಕೇಳು :—

ಪರಸತಿಯರ್ ತಾಯ್ವಿರವೋಲ್ |
ಪರರ ಧನಂ ಲೋಷ್ಟದಂತೆವೋಲ್ ಮೇಣ್ ತಮ್ಮಂ ||
ತಿರೆಯೆಲ್ಲಾ ಭೂತಂಗಳ್ |
ತಿರೆಯೊಳ್ ಧರ್ಮಾತ್ಮರಿಂದೆ ತಿಳಿಯಲ್ಪಡುಗುಂ ||೩೯೩||

ಇಂತು ಅವರಿಬ್ಬರೂ ಜಗಳವಾಡುತ್ತ ನ್ಯಾಯಾಧಿಪತಿಗಳ ಬಳಿಗೆ ಹೋಗಿ ಪರಸ್ಪರದೂಷಿಸುತ್ತ ದೂರುಹೇಳಿದರು. ನ್ಯಾಯಾಧಿಪತಿಗಳು ಪ್ರಮಾಣ ಮಾಡುವುದೆಂದು ಅಪ್ಪಣೆಮಾಡಲು, ಪಾಪಬುದ್ಧಿಯಿಂತೆಂದನು :— ಎಲೈ! ಈ ನ್ಯಾಯವು ತಕ್ಕುದಲ್ಲ ; ಇಂತು ಹೇಳಿದೆ :—

ಸಮಸಿಸಿರೆ ವಿವಾದಂ ಪ |
ಕ್ರಮಣಾರಯ್ದುಪರದಿಲ್ಲದಿರೆ ಸಕ್ಕಿಗಳಂ ||
ಪವಣೆಂದಾರಯ್ವರ್ ಮೇ |
ಣವಂದಿರಿಲ್ಲದಿರೆ ದಿವ್ಯಮಂ ಪವಣೆಂಬರ್ ||೩೯೪||

ಆದಕಾರಣ ಈ ವಿಷಯದಲ್ಲಿ ನನ್ನ ಕಡೆ ವೃಕ್ಷದೇವತೆಗಳು ಸಾಕ್ಷಿಗಳಾಗಿರುವವು. ಅವರು ನಮ್ಮಲ್ಲಿ ಒಬ್ಬನನ್ನು ಕಳ್ಳನೆಂದೋ ಕಳ್ಳನಲ್ಲವೆಂದೋ ದೃಢಪಡಿಸುವರು.

ಬಳಿಕ ಆ ನ್ಯಾಯಾಧಿಪತಿಗಳು ಇಂತೆಂದರು :—ಅಯ್ಯ! ನೀನು ಯುಕ್ತವಾದ ಮಾತನಾಡಿದೆ. ಏಕೆಂದರೆ.—

ಸವನಿಸಿದದಾವುದಾನುಂ |
ವಿವಾದದೊಳ್ ಸಾಕ್ಷಿಯಂತ್ಯಜಂ ತಾನಿರೆಯುಂ ||
ಪವಣೆನಿಪದಿವ್ಯವಿಲ್ಲನೆ |
ದಿವಿಜರ್ಕಳೆ ಸಾಕ್ಷಿಭೂತರಾಗಿರಲಿನ್ನೇಂ ||೩೯೬||

ನಮಗೂ ಈ ವಿಷಯದಲ್ಲಿ ಕುತೂಹಲವು ಹೆಚ್ಚಾಗಿರುವುದು. ನಾಳೆ ಬೆಳಗಿನ ಸಮಯದಲ್ಲಿ ನೀವಿಬ್ಬರೂ ನಮ್ಮೊಡನೆ ಅವನಡೆಗೆ ಬರಬೇಕು.

ಬಳಿಕ ಅಷ್ಟರಲ್ಲಿ ಪಾಪಬುದ್ಧಿ ತನ್ನ ಮನೆಗೆ ಹೋಗಿ ತನ್ನ ತಂದೆಯಂ ಕುರಿತು—ಅಪ್ಪಾ! ಧರ್ಮಬುದ್ಧಿಗೆ ಮೋಸಮಾಡಿ ನಾನು ಅತ್ಯಧಿಕವಾದ ಹಣವನ್ನು ಅಪಹರಿಸಿ ತಂದಿರುವೆನು. ಅವನು ನಿನ್ನ ಮಾತಿನಿಂದ ನಿಗ್ರಹಿಸಲ್ಪಡುವನು. ಇಲ್ಲದಿದ್ದರೆ ನಮ್ಮ ಪ್ರಾಣ ಹೋಗುವುದು—ಎನಲು, ಅವನು ಮಗು! ಅದೇನು? ಬೇಗ ಹೇಳು; ನಾನು ಯಾವ ಮಾತನಾಡಿದರೆ ಆಹಣವು ಸ್ಥಿರವಾಗಿ ನಿಲ್ಲುವುದು—ಎಂದನು.

ಪಾಪಬುದ್ಧಿಯಿಂತೆಂದನು :—ಅಪ್ಪಾ! ಅತ್ತಕಡೆ ಒಂದು ಬನ್ನಿಮರವಿದೆ. ಅದರಲ್ಲಿ ಒಂದು ದೊಡ್ಡ ಪೊಟ್ಟರೆಯುಂಟು. ನೀನು ಅದರೊಳಗೆ ಈಗಲೇ ಹೋಗಿರು. ಬೆಳಗೆ ನಾನು ಅಲ್ಲಿ ಬಂದು ಸತ್ಯೋದ್ಘೋಷವನ್ನು ಮಾಡಿದಾಗ ನೀನು „ ಧರ್ಮಬುದ್ಧಿಯೇ ಕಳ್ಳ ” ಎಂದು ಹೇಳಬೇಕು—ಎನಲು, ಅವನು ಅದಕ್ಕೆ ಒಪ್ಪಿದನು. ಬೆಳಗಾಯಿತು. ಪಾಪಬುದ್ಧಿ ಸ್ನಾನಮಾಡಿ ಧರ್ಮಬುದ್ಧಿಯನ್ನು ಮುಂದಿಟ್ಟುಕೊಂಡು ನ್ಯಾಯಾಧಿಪತಿಗಳೊಡನೆ ಆ ಬನ್ನಿಮರವನ್ನು ಸೇರಿ ಗಟ್ಟಿಯಾಗಿ ಇಂತೆಂದನು :—

ರವಿ ಶಶಿಯೆಲರನಲಂ ಖಂ |
ಅವನಿ ಜಳಂ ಹೃದಯಮುಂ ಜವಂ ಪಗಲಿರುಳುಂ ||
ಅವೆರಡುಸಂಜೆಗಳಿನುಂ |
ತವೆ ತಿಳಿಗುಂಮರ್ತ್ಯ ಚರಿತಮಂ ಮಾನಿಸನಾ ||೩೯೭||

ಎಲೆ ಪೂಜ್ಯೆಯಾದ ವನದೇವತೆ! ನಮ್ಮಿಬ್ಬರಲ್ಲಿ ಕಳ್ಳನಾವನೋ ಅವನನ್ನು ಹೇಳು.

ಬಳಿಕ ಆ ಪಾಪಬುದ್ಧಿಯ ತಂದೆ ಬನ್ನಿಮರದ ಪೊಟ್ಟರೆಯಲ್ಲಿ ಇದ್ದುಕೊಂಡು ಇಂತೆಂದನು :—ಎಲೆ ಜನಗಳಿರಾ ; ಕೇಳಿಕೇಳಿ; ಧರ್ಮಬುದ್ಧಿ ಈ ಹಣವೆಲ್ಲವನ್ನೂ ಕದ್ದಿರುವನು.

ಆ ಮಾತನಾಲಿಸಿ ನ್ಯಾಯಾಧಿಕಾರಿಗಳವರೆಲ್ಲರೂ ಆಶ್ಚರ್ಯಗೊಂಡು ಹಣವನ್ನು ಕದ್ದುದಕ್ಕೆ ಶಾಸ್ತ್ರದೃಷ್ಟಿಯಿಂದ ತಕ್ಕ ಶಿಕ್ಷೆಯನ್ನು ಧರ್ಮಬುದ್ಧಿಗೆ ಮಾಡಬೇಕೆಂದು ಪರ್ಯಾಲೋಚಿಸುತ್ತಿರುವಲ್ಲಿ ಧರ್ಮಬುದ್ಧಿ ಆ ಬನ್ನಿಮರದ ಪೊಟ್ಟರೆಗೆ ಸುತ್ತಲೂ ಕಸಕಡ್ಡಿಮುಂತಾದವುಗಳನ್ನು ತುಂಬಿ ಬೆಂಕಿಹೊತ್ತಿಸಿದನು. ಆ ಪೊಟ್ಟರೆಯು ಹೊತ್ತಿಕೊಂಡು ಉರಿಯುತ್ತಿರಲು, ಪಾಪಬುದ್ಧಿಯ ತಂದೆ ಅರ್ಧಶರೀರಬೆಂದು ಕಣ್ಣುಕೆಟ್ಟು ದೀನಧ್ವನಿಯಿಂದ ಗೋಳಿಡುತ್ತ ಈಚೆಗೆ ಬಂದನು.

ಬಳಿಕ ಅವರೆಲ್ಲರೂ ಎಲೈ! ಇದೇನು?—ಎಂದು ಬೆಸಗೊಳ್ಳಲು, ಅವನು ಪಾಪಬುದ್ಧಿಯ ಕೃತ್ಯವೆಲ್ಲವನ್ನೂ ತಿಳಿಯಿಸಿ ಸತ್ತುಹೋದನು.

ಬಳಿಕ ನ್ಯಾಯಾಧಿಕಾರಿಗಳು—ಪಾಪಬುದ್ಧಿಯನ್ನು ಬನ್ನಿಮರದ ಕೊಂಬೆಗೆ ತೂಗುಹಾಕಿಸಿ, ಧರ್ಮಬುದ್ಧಿಯನ್ನು ಹೊಗಳಿ ಇಂತೆಂದರು :—ಅಹಹ! ಇದು ಯುಕ್ತವಾದಮಾತು :—

ಪಿಂಗದೆ ಸದುಪಾಯಮುಮಂ |
ಪೊಂಗುವಪಾಯಮುಮನೈದೆ ಚಿಂತಿಸವೇಳ್ಕುಂ ||
ಮುಂಗುಸಿ ಭಂಗಿಸಿತಲ್ತೆ ಬ |
ಕಂಗಳನಹಿ ವಿಲ್ಲದೊಂದು ಬಕದಿದಿರೊಳೆ ತಾಂ ||೩೯||

ಧರ್ಮಬುದ್ಧಿ ಇದೆಂತೆನಲು, ಅವರಿಂತೆಂದರು :—

ಕಥೆ ೧೯

ಒಂದುವನಪ್ರಾಂತದಲ್ಲಿ ಅನೇಕಬಕಗಳಿಂದಕೂಡಿದ ಒಂದು ಆಲದ ಮರವಿದ್ದಿತು. ಅದರ ಪೊಟ್ಟರೆಯಲ್ಲಿ ಒಂದು ಕೃಷ್ಣಸರ್ಪವು ವಾಸಿಸುತಿದ್ದಿತು. ಅದು ಇನ್ನೂ ಗರಿಮೂಡದಿರುವ ಬಕಶಿಶುಗಳನ್ನು ಯಾವಾಗಲೂ ತಿನ್ನುತ್ತ ಕಾಲವಂಕಳೆಯುತಿದ್ದುದು.

ಬಳಿಕ ಒಂದು ಬಕವು, ಆಸರ್ಪವು ಮರಿಗಳಂ ತಿನ್ನುತಿದ್ದುದಂ ಕಂಡು ಮರಿಗಳವಿನಾಶದಿಂದ ವೈರಾಗ್ಯವಂತಾಳಿ ಸರೋವರದ ತಡಿಯಂ ಸೇರಿ ಕಣ್ಣೀರುತಂಬಿ ಮುಖವನ್ನು ಬಗ್ಗಿಸಿಕೊಂಡು ಕುಳಿತಿದ್ದಿತು. ಅಂತಹ ಅವಸ್ಥೆಯಲ್ಲಿದ್ದ ಆಬಕವಂ ನೋಡಿ ಒಂದುನಳ್ಳಿ—ಮಾವ ! ಇದೇಕೆ ಈಗ ನೀನು ಅಳುತ್ತಿರುವೆ ? ಎನಲು, ಅದು—ಅಪ್ಪಾ ! ಏನಮಾಡಲಿ ? ಮರದ ಪೊಟ್ಟರೆಯಲ್ಲಿ ವಾಸಿಸುತಿರುವ ಸರ್ಪವು ಮಂದಭಾಗ್ಯನಾದ ನನ್ನ ಮರಿಗಳನ್ನು ತಿಂದುಹಾಕಿತು. ಆವ್ಯಸನದಿಂದ ಆಕುಲನಾಗಿ ನಾನು ಅಳುತ್ತಿರುವೆನು. ಆಸರ್ಪವನ್ನು ನಾಶಮಾಡುವುದಕ್ಕೆ ಏನಾದರೂ ಉಪಾಯವಿದ್ದರೆ ಅದನ್ನು ನನಗೆ ಹೇಳು—ಎಂದಿತು.

ಆ ನಳ್ಳಿಯು ಆಮಾತಂಕೇಳಿ ತನ್ನಲ್ಲಿ-ಈಬಕವು ನಮ್ಮಜಾತಿಗೆ ಸಹಜಶತ್ರು; ಇತರಗಳಾದ ಎಲ್ಲಾಬಕಗಳೂ ನಾಶವೈದುವಂತೆ ದಿಟವೂ ಸುಳ್ಳೂ ಆದ ಬೋಧನೆಯಂ ಇವನಿಗೆ ಮಾಡುವೆನು. ಏಕೆಂದರೆ ಇಂತುಹೇಳಿದೆ :-

ಬೆಣ್ಣೆ ಸಮಮೆಂಬಿನೆಗಂ |
ಬಣ್ಣಿಸಿಮಾತಾಡುತಿರ್ದೆಯೊಳಾನುತೆ ಕೂರ್ಪಂ ||
ಸುಣ್ಣಗೆ ಪಗೆ ನಶಿಸುವ ಪೊಲ್ |
ಏಣ್ಣನೆ ಬೋಧನೆಯನವನೊಳಿಸಗಲ್ವೇಳ್ಕುಂ ||೩೯೮||

ಎಂದು ಚಿಂತಿಸಿ ಇಂತು ನುಡಿಯಿತು :—ಮಾವ ! ಇಂತಾದರೆ ಮತ್ಸ್ಯಮಾಂಸಖಂಡಗಳನ್ನು ಮುಂಗುಸಿಯ ಬಿಲದಿಂದ ಸರ್ಪದ ಪೊಟ್ಟರೆಯ

ವರೆಗೂ ಹಾಕು. ಮುಂಗುಸಿ ಆ ದಾರಿಯಿಂದ ಹೋಗಿ ಆ ದುಷ್ಟಸರ್ಪವನ್ನು ನಾಶಗೊಳಿಸುವುದು. ಅದು ಅಂತೆ ಮಾಡಲು, ಮುಂಗುಸಿಯು ಮತ್ಸ್ಯ ಮಾಂಸವನ್ನೇ ಅನುಸರಿಸುತ್ತ ಹೋಗಿ ಆ ಕೃಷ್ಣಸರ್ಪವನ್ನು ಕೊಂದು ಆ ಮರದಲ್ಲಿದ್ದ ಆ ಬಕಗಳೆಲ್ಲವನ್ನೂ ಮೆಲ್ಲಮೆಲ್ಲನೆ ತಿಂದಿತು. ಇದರಿಂದ ನಾವು ಹೇಳುವೆವು:—ಪಿಂಗದೆ ಸದುಪಾಯಮುಮಂ | ಪೊಂಗುವಪಾಯ ಮುಮನೈದೆ ಚಿಂತಿಸವೇಳ್ಕುಂ || .... ಎಂದು.

ಅಂತು ಈ ಪಾಪಬುದ್ಧಿ ಉಪಾಯವನ್ನು ಆಲೋಚಿಸಿದ ; ಬರತಕ್ಕ ಅಪಾಯವನ್ನು ಆಲೋಚಿಸಲಿಲ್ಲ. ಅದರಿಂದ ಅದಕ್ಕೆ ತಕ್ಕ ಫಲವನ್ನು ಅನುಭವಿಸಿದ. ಇದರಿಂದ ನಾನು ಹೇಳುವೆನು :—ಸುಬಹುಖ್ಯಾತರ್ಗಾಡ ಧ| ರ್ಮಬುದ್ಧಿಮೇಣ್ ಪಾಪಬುದ್ಧಿಯೆಂಬಿರ್ವರ್ ... || ಎಂದು.

ಎಲೆ ಮೂಢ! ನೀನೂ ಪಾಪ ಬುದ್ಧಿಯಾದುದರಿಂದ ಇಂತು ಉಪಾಯವನ್ನು ಆಲೋಚಿಸಿದೆ; ಅಪಾಯವನ್ನು ಆಲೋಚಿಸಲಿಲ್ಲ; ನೀನು ಸಜ್ಜನನಲ್ಲ, ಕೇವಲಪಾಪಬುದ್ಧಿಯಾಗಿರುವೆ. ಸ್ವಾಮಿಗೆ ನೀನು ಪ್ರಾಣಾಪಾಯವನ್ನು ತಂದಿಟ್ಟುದರಿಂದ ಪಾಪಬುದ್ಧಿಯೆಂಬುದನ್ನು ತೋರಿಸಿಕೊಂಡೆ. ಇದು ಯುಕ್ತವಾದ ಮಾತು. ಕೇಳು:—

ಜಲದದ ನಾದಮನಾಲಿಸಿ |
ನಲವಿಂ ನರ್ತನವನೆಸಗದಿರೆಯೆಗ್ಗನವಿಲ್ ||
ಸಲೆ ಯತ್ನಿಸಿದೊಡಮದರಾ |
ಮಲಮುಗುವೆಡೆ ಜನಕೆ ಕಾಣಲೇನಾದಪುದೇ ||೩೭೭||

ನೀನು ಸ್ವಾಮಿಗೇ ಈದಶೆಯನ್ನು ತಂದಿಟ್ಟಮೇಲೆ ಇನ್ನು ನಮ್ಮಂತವರನ್ನು ಸುಮ್ಮನೆಬಿಡುವೆಯಾ? ಆದಕಾರಣ ನೀನು ನಮ್ಮ ಹತ್ತಿರ ಇರಲಾಗದು. ಇಂತು ಹೇಳಿರುವುದುಂಟು :—

ಅಲಘುಭರವಾಂತ ಲೋಹದ |
ತುಲೆಯಂ ಬಿಡದಿಲಿಗಳಿಹಹ ಭಕ್ಷಿಪುವೆನೆ ಕೇ ||
ಳೆಲೆ ನೃಪ ಗಿಡುಗಂ ಮಗುವಂ |
ಬಲದಿಂದಪಹರಿಸಲಾಗದೇ ಸಂದೆಯಮೇಂ ||೪೦೦||

ದಮನಕ ವಿದೆಂತೆನಲು, ಕರಟಕವಿಂತೆಂದಿತು :—

ಕಥೆ. ೨೦

ಒಂದು ಊರಲ್ಲಿ ಜೀರ್ಣಧನನೆಂಬ ಒಬ್ಬ ವಣಿಜನ ಪುತ್ರನಿದ್ದನು ಐಶ್ವರ್ಯವೆಲ್ಲವೂ ಹೋದುದರಿಂದ ದೇಶಾಂತರಕ್ಕೆ ಹೋಗಲೆಳಸಿ ಇಂತು ಆಲೋಚಿಸಿದನು :—

ಭಾಸಿಪ ತನ್ನಯ ಶೌರ್ಯವಿ |
ಲಾಸದೆ ಭೋಗಿಸಿದ ನಾಡಿನೊಳ್ ಮೇಣ್ ಬೀಡೊಳ್ ||
ಐಸಿರಿಯು ಕಳೆದುಕೊಂಡು ನಿ |
ವಾಸಿಸುವಾತಂ ನರಾಧಮಂ ಗಡ ಜಗದೊಳ್ ||೪೦೧||

ಅಲ್ಲದೆ:—

ಚಿರಕಾಲವಲ್ಲಿ ಬಿಂಕದೆ |
ಪಿರಿದುಂ ವೈಖರಿಯುತ್ತುಮಿರ್ದನೋ ಮುನ್ನಾವಂ ||
ನರನವನಲ್ಲಿಯೆ ದೈನ್ಯದೆ |
ಪರರಂ ಬೇಡಿದೊಡೆ ಜನದ ಪೞಿಗೆಡೆಯಕ್ಕುಂ ||೪೦೨||

ಅವನ ಮನೆಯಲ್ಲಿ ಹಿರಿಯರು ಸಂಪಾದಿಸಿಟ್ಟ ಲೋಹಭಾರದಿಂ ಕೂಡಿದ ಒಂದು ತಕ್ಕಡಿಯಿದ್ದಿತು. ಅವನು ಆತಕ್ಕಡಿಯನ್ನು ಒಬ್ಬ ಸೆಟ್ಟಿಯ ಮನೆಯಲ್ಲಿ ಇಟ್ಟು ದೇಶಾಂತರಕ್ಕೆ ಹೊರಟನು. ಬಹುಕಾಲ ದೇಶಾಟನಮಾಡಿ ಮತ್ತೆ ತನ್ನೂರಿಗೆ ಬಂದು ಆಸೆಟ್ಟಿಯಂ ಕುರಿತು-ಎಲೆಸೆಟ್ಟಿ! ನಾನು ಇ

ಟ್ಟಿದ್ದ ತಕ್ಕಡಿಯನ್ನು ನನಗೆ ಕುಡು—ಎನಲು, ಅವನು—ಅಯ್ಯ ! ನಿನ್ನ ಆ ತಕ್ಕಡಿಯಿಲ್ಲ. ಇಲಿಗಳು ತಿಂದುಬಿಟ್ಟುವು—ಎಂದನು.

ಜೀರ್ಣಧನನು ಇಂತೆಂದನು :—ಎಲೆಸೆಟ್ಟಿ! ಇಲಿಗಳು ತಿಂದುವಾದರೆ ನಿನ್ನ ತಪ್ಪೇನು ? ಈ ಸಂಸಾರವಿಂತಹುದೇಸರಿ. ಯಾವದೊಂದೂ ಶಾಶ್ವತವಲ್ಲ; ಹೋಗಲಿ : ನಾನು ಸ್ನಾನಕ್ಕೆ ನದಿಗೆಹೋಗುವೆನು. ಧನದೇವನೆಂಬ ಈ ಕುಮಾರನನ್ನು ನನ್ನ ಸಂಗಡ ಕಳುಹಿಸಿಕೊಡು; ಕೈಯಲ್ಲಿ ಮಡಿಚೀಲವನ್ನು ತರಲಿ.

ಅವನು ತನ್ನ ಕಳ್ಳತನಕ್ಕೆ ಹೆದರಿಕೊಂಡು ತನ್ನ ಮಗನನ್ನು ಕರಿತು—ಮಗು ! ಇವನು ನಿನಗೆ ಚಿಕ್ಕಪ್ಪ; ಸ್ನಾನಕ್ಕೆ ಹೊಳೆಗೆ ಹೋಗುವನು. ಮಡಿಚೀಲವನ್ನು ತೆಗೆದುಕೊಂಡು ಇವನ ಸಂಗಡ ಹೋಗಿಬಾ—ಎಂದನು.

ಅಹಹ ! ಇದು ಯುಕ್ತವಾದಮಾತು :—

ಒದವಿದ ಭಯದಿಂದಂ ಮೇಣ್ |
ಪುದಿದಾಸೆಯಿನಂತುಕಾರ್ಯಕಾರಣದಿಂದ ||
ಲ್ಲದೆ ಭಕ್ತಿಯಿಂದಮೇ ಲೋ |
ಕದೊಳಾವಂಗಂ ದಲಾವನುಂ ಪ್ರಿಯುನೆಸಗಂ ||೪೦೩||

ಅಲ್ಲದೆ—

ಎಲ್ಲುಚಿತಕಾರ್ಯಕಾರಣ |
ವಿಲ್ಲದೆ ಕಟ್ಟೆಚ್ಚರಿಕೆಂಬುದುಂಟಾದಪುದೋ ||
ಅಲ್ಲಿ ವಿಶಂಕಿಸವೇಟ್ಕುಂ |
ಬಲ್ಲರ್ ಪರಿಣಾಮದಲ್ಲಿ ಸುಖಮುಂಟದರಿಂ ||೪೦೪||

ಬಳಿಕ ಸೆಟ್ಟಿಯ ಮಗನು ಮಡಿಚೀಲವನ್ನು ತೆಗೆದುಕೊಂಡು ಸಂತೋಷದಿಂದ ಅವನೊಡನೆ ಹೋದನು.

ಜೀರ್ಣಧನನು ಸ್ನಾನವಮಾಡಿ ಆಹುಡುಗನನ್ನು ನದಿಯಗುಹೆಯಲ್ಲಿ ಇರಿಸಿ ಅದರ ಬಾಗಿಲಿಗೆ ದೊಡ್ಡ ಕಲ್ಲನ್ನು ಮುಚ್ಚಿ ಥಟ್ಟನೆ ಮನೆಗೆಬಂದನು. ಸೆಟ್ಟಿ ಅವನನ್ನು ಕುರಿತು—ಅಯ್ಯ! ನಿನ್ನೊಡನೆ ನದಿಗೆಬಂದ ನನ್ನ ಕುಮಾರ ನೆಲ್ಲಿ?—ಎನಲು, ಅವನು—ಒಂದು ಗಿಡುಗ ಹೊಳೆದಡದಿಂದ ಬಂದು ನಿನ್ನ ಮಗನನ್ನು ಅಪಹರಿಸಿಕೊಂಡುಹೋಯಿತು— ಎಂದನು.

ಅದಕ್ಕೆ ಸೆಟ್ಟಿ:—ಎಲೆ ಸುಳ್ಳುಗಾರ! ಏನು? ಎಲ್ಲಾದರೂ ಗಿಡುಗ ಬಾಲಕನನ್ನು ಅಪಹರಿಸಿಕೊಂಡು ಹೋಗಲಾಪುದೇ? ಅದಿರಲಿ; ನನ್ನ ಮಗನನ್ನು ಕರೆತಂದೊಪ್ಪಿಸು. ಇಲ್ಲದಿದ್ದರೆ ರಾಜಸ್ಥಾನದಲ್ಲಿ ತಿಳಿಯಿಸುವೆನು— ಎಂದನು. ಜೀರ್ಣಧನನು—ಎಲೆ ಸತ್ಯವಾದಿಯೆ! ಗಿಡುಗವು ಬಾಲಕನನ್ನು ಎಂತು ಅಪಹರಿಸಿಕೊಂಡು ಹೋಗಲಾರದೋ ಅಂತು ಇಲಿಗಳೂ ಲೋಹ ಭಾರದ ತಕ್ಕಡಿಯನ್ನೂ ತಿನ್ನಲಾರವಲ್ಲವೆ. ಅದಕಾರಣ ನಿನ್ನ ಮಗನಿಂದ ನಿನಗೆ ಪ್ರಯೋಜನವಿದ್ದರೆ ನನ್ನ ತಕ್ಕಡಿಯನ್ನು ನನಗೆ ಕುಡು—ಎಂದನು.

ಇಂತು ಇವರಿಬ್ಬರೂ ಜಗಳವಾಡುತ್ತ ರಾಜಸ್ಥಾನಕ್ಕೆ ಹೋದರು. ಅಲ್ಲಿ ಸೆಟ್ಟಿ ಗಟ್ಟಿಯಾಗಿ ಇಂತೆಂದನು :—ಅಕಟಕಟಾ!! ಈ ಕಳ್ಳನು ನನ್ನ ಮಗನನ್ನು ಅಪಹರಿಸಿರುವನು.

ಬಳಿಕ ನ್ಯಾಯಾಧಿಪತಿ ಜೀರ್ಣಧನನಂ ಕುರಿತು—ಎಲೈ! ಇವನ ಮಗನನ್ನು ಇವನಿಗೆ ಒಪ್ಪಿಸು—ಎನಲು, ಅವನು—ಏನಮಾಡಲಿ? ನಾನು ನೋಡುತಿದ್ದಹಾಗೆಯೇ ಒಂದು ಗಿಡುಗವು ಬಂದು ಬಾಲಕನನ್ನು ಅಪಹರಿಸಿಕೊಂಡು ಹೋಯಿತು—ಎಂದನು. ಅವನು ಆ ಮಾತನ್ನು ಕೇಳಿ—ಅಯ್ಯಾ ನೀನು ಸತ್ಯವನ್ನಾಡಲಿಲ್ಲ. ಏನು? ಗಿಡುಗವು ಬಾಲಕನನ್ನು ಅಪಹರಿಸಿಕೊಂಡು ಹೋಗುವುದುಂಟೇ?—ಎನಲು, ಅವನು—ಎಲೆ ಪ್ರಭುವೆ! ನನ್ನ ಮಾತನ್ನು ಅವಧರಿಸಬೇಕು :—

ಅಲಘುಭರವಾಂತ ಲೋಹದ |
ತುಲೆಯಂ ಬಿಡದಲಿಗಳಹಹ ಭಕ್ಷಿಪುವೆನೆ ಕೇ ||
ಕೆಲವಿಭು ಗಿಡುಗಂ ಮಗುವಂ |
ಬಲದಿಂದಪಹರಿಸಲಾಗದೇ ಸಂದೆಯಮೇಂ ||೪೦೫||

ನ್ಯಾಯಾಧಿಪತಿ ಇದೆಂತೆನಲು, ವಣಿಜನು ಸಭಾಸದರಮುಂದೆ ಮೊದಲಿಂದ ಎಲ್ಲಾ ಸಮಾಚಾರವನ್ನೂ ತಿಳಿಯಿಸಿದನು. ಬಳಿಕ ನ್ಯಾಯಾಧಿಪತಿ ನಕ್ಕು ಅವರಿಬ್ಬರಿಗೂ ಹೇಳಿ ಸೆಟ್ಟಿಯಿಂದ ವಣಿಜನಿಗೆ ತಕ್ಕಡಿಯನ್ನೂ ವಣಿಜನಿಂದ ಸೆಟ್ಟಿಗೆ ಬಾಲಕನನ್ನೂ ಕೊಡಿಸಿ ಸಂತೋಷಗೊಳಿಸಿದನು. ಇದರಿಂದ ನಾನು ಹೇಳಿದೆನು :—ಅಲಘುಭರವಾಂತಲೋಹದ ! ತುಲೆಯಂ ...... ಎಂದು. ಆದಕಾರಣ ಎಲೆ ಮೂರ್ಖ ! ನೀನು ಸಂಜೀವಕನಿಗೆ ಉಂಟಾಗಿದ್ದ ಒಡೆಯನ ಒಲ್ಮೆಯನ್ನು ಸೈರಿಸದೆ ಈ ಕಾರ್ಯವನ್ನು ಮಾಡಿದೆ. ಅಹಹ ! ಇದು ಯುಕ್ತವಾದಮಾತು :—

ಪಿರಿದುಂ ಲೋಕದೆ ದುಷ್ಕುಲರ್ ಸುಕುಲನಂ ಸೌಭಾಗ್ಯಸಂಪನ್ನನಂ |
ದುರದೃಷ್ಟರ್ ಕೃಪಣರ್ ವದಾನ್ಯನ ನಕೌಟಿಲ್ಯಾತ್ಮನಂ ಕೊಂಕಿದರ್ ||
ಬಱುವರ್ ಶ್ರೀಯುತನಂ ಕುರೂಪರೆನಿಪರ್ ಸದ್ರೂಪನಂ ಪಾಪಿಗಳ್ |
ವರಧರ್ಮಿಷ್ಠನ ನೆಗ್ಗನುಂ ವಿವಿಧಶಾಸ್ತ್ರಜ್ಞನಂ ನಿಂದಿಪರ್ ||೪೦೬||

ಅಲ್ಲದೆ :—

ಪಗೆವರ್ ತಿಳಿದಗ್ಗಿಗರ್ |
ಪಗೆವರ್ ಬಡವರ್ಗ್ಗೆ ಜಗದೊಳ್ಸಿರಿಯುಳ್ಳರ್ ||
ಪಗೆವರ್ ವ್ರತಿಗಳ್ಗಱಿಕೆ ಪಾ |
ಪಿಗಳಕಟಾ ಪಗೆವರಸತಿಯರ್ ಸತಿಯರ್ಗ್ಗಂ ||೪೦೭||

ಎಲೆ ಮೂರ್ಖ ! ನೀನು ಹಿತಕಾರಿಯಾದರೂ ಅಹಿತನೇ ಸರಿ. ಕೇಳು ; ಇಂತು ಹೇಳಿದೆ :—

ಅರಿಯಾದೊಡಂ ಬುಧಂ ಮೇಲ್ |
ಪಿರಿದುಂ ಹಿತನಾದೊಡಂ ಜಡಂ ಮೇಲೆನಿಸಂ ||
ನರಪತಿಯಂ ಕೊಂದುದು ಕಪಿ |
ಧರಣಿಸುರರ್ ಕಳ್ಳನಿಂದೆ ರಕ್ಷಿತರಾದರ್ ||೪೦೮||

ದಮನಕವಿದೆಂತೆನಲು, ಕರಟಕವಿಂತೆಂದಿತು :—

ಕಥೆ ೨೧.

ಒಬ್ಬ ರಾಜನಿಗೆ ಒಂದು ಕೋಡಗವು ನಿತ್ಯವೂ ಅತ್ಯಂತಭಕ್ತಿಯಿಂದ ಅಂಗಸೇವೆಯಂ ಮಾಡುತ್ತ ಅಂತಃಪುರದಲ್ಲಿಯೂ ತಡೆಯಿಲ್ಲದೆ ತಿರುಗಾಡುತ್ತ ಹೆಚ್ಚಾದ ನಂಬುಗೆಗೆ ಎಡೆಯಾಗಿದ್ದಿತು. ಒಂದುದಿವಸ ನಿದ್ರೆಯಲ್ಲಿದ್ದ ರಾಜನಿಗೆ ಆ ಕೋಡಗವು ಬೀಸಣಿಗೆಯಿಂದ ಬೀಸುತಿದ್ದಾಗ ರಾಜನ ಎದೆಯಮೇಲೆ ಒಂದು ನೊಣವು ಕುಳಿತುಕೊಂಡಿತು. ಅಡಿಗಡಿಗೆ ಬೀಸಣಿಗೆಯಿಂದ ಹೊಡೆದರೂ ಮತ್ತೆಮತ್ತೆ ಅಲ್ಲಿಯೆ ಬಂದು ಕುಳಿತುಕೊಳ್ಳುತ್ತಿದ್ದಿತು. ಬಳಿಕ ಸ್ವಭಾವಚಪಲತೆಯುಳ್ಳ ಮೂರ್ಖವಾದ ಆ ಕೋಡಗವು ಕೋಪಿಸಿಕೊಂಡು ಹರಿತವುಳ್ಳ ಕತ್ತಿಯನ್ನು ತೆಗೆದುಕೊಂಡು ಆ ನೊಣವನ್ನು ಹೊಡೆಯಿತು. ಆ ನೊಣವು ಹಾರಿಹೋಯಿತು. ಮೊನೆಯುಳ್ಳ ಆ ಕತ್ತಿಯ ಹೊಡೆತದಿಂದ ರಾಜನ ಎದೆಯು ಭಿನ್ನವಾಯಿತು. ರಾಜನು ಮೃತನಾದನು. ಆದಕಾರಣ ಬಹುಕಾಲ ಬದುಕಬೇಕೆಂದು ಅಪೇಕ್ಷಿಸುವ ರಾಜನು ಮೂರ್ಖನಾದ ಸೇವಕನನ್ನು ರಕ್ಷಿಸಬಾರದು. ಮತ್ತೊಂದು ವಿಚಾರ :—

ಒಂದುಊರಿನಲ್ಲಿ ಘನವಿದ್ವಾಂಸನಾದ ಒಬ್ಬ ಬ್ರಾಹ್ಮಣನು ಜನ್ಮಾಂತರಕರ್ಮಪರಿಪಾಕದಿಂದ ಕಳ್ಳನಾಗಿದ್ದನು. ದೇಶಾಂತರದಿಂದ ಆವೂರಿಗೆ ಬಂದು ಅನೇಕವಸ್ತುಗಳನ್ನು ಮಾರುತಿದ್ದ ನಾಲ್ವರು ಬ್ರಾಹ್ಮಣರನ್ನು ಕಂಡು—ಅಹಹ ! ಯಾವ ಉಪಾಯದಿಂದ ಇವರ ಧನವನ್ನು ನಾನು ಅಪಹರಿಸಲಿ ?—ಎಂದು ಚಿಂತಿಸಿ, ಅವರ ಮುಂದೆ ಅನೇಕವಾದ ಶಾಸ್ತ್ರೋಕ್ತ

ಸುಭಾಷಿತಗಳನ್ನೂ ಅತ್ಯಂತಪ್ರಿಯಂಗಳಾದ ಸವಿನುಡಿಗಳನ್ನೂ ಹೇಳುತ್ತ ಅವರ ಮನಸ್ಸಿನಲ್ಲಿ ನಂಬುಗೆಯನುಂಟುಮಾಡಿ ಸೇವೆಮಾಡಿಕೊಂಡಿದ್ದನು. ಇದು ಯುಕ್ತವಾದ ಮಾತು :—

ಜಾರೆ ವಲಂ ನಾಣ್ಚಿದಪಳ್ |
ಕ್ಷಾರಂ ನೀರಂ ಸುಶೀತವೆನಿಕುಂ ದಂಭಾ ||
ಚಾರಂ ವಿವೇಕಿಯಂತಿರೆ |
ಕೋಱುವ ನಿನಿವಾತನೊರೆಯುತಿರ್ಪಂ ದುರುಳಂ ||೪೯||

ಆ ಬ್ರಾಹ್ಮಣರು ತಮ್ಮಲ್ಲಿದ್ದ ವಸ್ತುಗಳೆಲ್ಲವನ್ನೂ ಮಾರಿ ಬಹು ಮೂಲ್ಯಗಳಾದ ರತ್ನಗಳನ್ನು ಕೊಂಡುಕೊಂಡರು. ಆ ರತ್ನಗಳನ್ನು ಅವನೆ ದುರಿಗೆ ಮೊಣಕಾಲ ನಡುವೆ ಕಟ್ಟಿಕೊಂಡು ತಮ್ಮ ಊರಿಗೆ ಹೊರಟರು. ಬಳಿಕ ಆ ಚೋರಬ್ರಾಹ್ಮಣನು ಅವರು ಹೊರಟುದನ್ನು ಕಂಡು ಚಿಂತೆ ಯಿಂದ ಮನದಲ್ಲಿ ವ್ಯಾಕುಲತೆಗೊಂಡನು. ಅಹಹ! ಇವರ ಧನವೇನೂ ನನಗೆ ಸಿಕ್ಕಲಿಲ್ಲ. ಇನ್ನಿವರೊಡನೆಯೇ ಹೊರಡುವೆನು. ದಾರಿಯಲ್ಲಿ ಎಲ್ಲಿಯಾದರೂ ವಿಷಹಾಕಿ ಇವರನ್ನು ಕೊಂದು ಎಲ್ಲಾ ರತ್ನಗಳನ್ನೂ ತೆಗೆ ದುಕೊಳ್ಳುವೆನು—ಎಂದು ಆಲೋಚಿಸಿ ಅವರ ಮುಂದೆ ದೀನನಾಗಿ ಗೋಳಿ ಡುತ್ತ ಇಂತೆಂದನು :—ಎಲೆ ಕೆಳೆಯರಿರಾ! ನೀವು ಒಬ್ಬಂಟಿಗನಾದ ನನ್ನನ್ನು ಬಿಟ್ಟು ನೀವು ಹೊರಟಿರುವಿರಿ. ನಿಮ್ಮ ಸ್ನೇಹಪಾಶದಿಂದ ಬದ್ಧವಾದ ನನ್ನ ಮನಸ್ಸು ನಿಮ್ಮ ಅಗಲಿಕೆಯುಂಟಾಗುವುದೆಂದ ಮಾತ್ರಕ್ಕೆ ತಲ್ಲಣಿಸುತ್ತಿರು ವುದು. ಸ್ವಲ್ಪವೂ ಧೈರ್ಯವನ್ನು ತಾಳದು. ನೀವು ನನ್ನಲ್ಲಿ ಅನುಗ್ರಹವಂ ಮಾಡಿ ನಿಮಗೆ ಸಹಾಯನಾದ ನನ್ನನ್ನು ಸಂಗಡ ಕರೆದುಕೊಂಡು ಹೋಗಿ.

ಅವರು ಅವನ ಆ ಮಾತನಾಲಿಸಿ ದಯಾರ್ದ್ರಹೃದಯರಾಗಿ ಅವನನ್ನು ಸಂಗಡ ಕರೆದುಕೊಂಡು ಹೊರಟರು. ಬಳಿಕ ಅವರೈವರೂ ಪಲ್ಲೀಪುರದ ನಡುವೆ ಹೋಗುತಿರುವಾಗ ದಾರಿಯಲ್ಲಿ—ಎಲೆಎಲೆ ಕಿರಾತಧಿರ! ಓಡಿಓಡಿ.

ಸಪಾದಲಕ್ಷಧನವುಳ್ಳವರು ಹೋಗುತ್ತಿರುವರು; ಇವರನ್ನು ಕೊಂದು ಧನವನ್ನು ಪಡೆಯಿರಿ— ಎಂದು ಕಾಗೆಗಳು ಕೂಗಿಕೊಂಡುವು.

ಬಳಿಕ ಕಿರಾತರು ಕಾಗೆಗಳ ಮಾತನ್ನು ಕೇಳಿ ಥಟ್ಟನೆ ಹೋಗಿ ಆ ಬ್ರಾಹ್ಮಣರನ್ನು ದಂಡಪ್ರಹಾರಗಳಿಂದ ಜಜ್ಜುಗುಜ್ಜುಮಾಡಿ ಬಟ್ಟೆಗಳನ್ನು ಬಿಚ್ಚಿಸಿ ಶೋಧನೆಮಾಡಿದರು. ಆದರೆ ಧನವೇನೂ ದೊರೆಯಲಿಲ್ಲ. ಆಗ ಕಿರಾತರು ಅವರನ್ನು ಕುರಿತು—ಎಲೆ ದಾರಿಗರಿರಾ! ಹಿಂದೆ ಯಾವಾಗಲೂ ಕಾಗೆಮಾತು ಸುಳ್ಳಾಗಲಿಲ್ಲ. ಆದಕಾರಣ ನಿಮ್ಮ ಹತ್ತಿರ ಎಲ್ಲಿಯೋ ಹಣವಿದೆ, ಅದನ್ನು ಒಪ್ಪಿಸಿ ; ಇಲ್ಲದಿದ್ದರೆ ಎಲ್ಲರನ್ನೂ ಕೊಂದು ಮೈದೊವಲನ್ನು ಸೀಳಿ ಪ್ರತಿಯೊಂದವಯವವನ್ನೂ ಶೋಧಿಸಿ ಹಣವನ್ನು ತೆಗೆದುಕೊಂಡು ಹೋಗುವೆವು—ಎಂದರು.

ಕಳ್ಳನಾದ ಬ್ರಾಹ್ಮಣನು ಆಗ ಅವರ ಆ ಮಾತಂ ಕೇಳಿ ತನ್ನ ಮನದಲ್ಲಿ —ಇವರು ಈ ಬ್ರಾಹ್ಮಣರನ್ನು ಕೊಂದು ಅಂಗಶೋಧನೆಯಂ ಮಾಡಿ ರತ್ನಗಳನ್ನು ತೆಗೆದುಕೊಂಡು ಹೋಗುವಸಂದರ್ಭದಲ್ಲಿ ನನ್ನನ್ನೂ ಬಿಡದೆ ಕೊಲ್ಲುವರು. ಆದರಿಂದ ರತ್ನವಿಲ್ಲದ ನನ್ನ ಶರೀರವನ್ನು ನಾನು ಮೊದಲು ಒಪ್ಪಿಸಿ ಇವರನ್ನು ಬಿಡಿಸುವೆನು. ಇಂತುಹೇಳಿದೆ:—

ಕಂದಾ ಮಿೞ್ತುಗೆ ನೀಂ ಭಯ |
ಮೊಂದುವೆಯೋ ಬಿಡದುಗಡದು ಭಯಮೊಂದಿದನಂ ||
ಇಂದೋ ನೂರ್ವರಿಸಂ ಕಳಿ |
ದಂದೋ ಮೃತಿ ಜಂತುಗಳ್ಗೆ ತಪ್ಪದೆ ಬರ್ಕ್ಕುಂ ||೪೧೦||

ಅಲ್ಲದೆ :—

ಕುಱುಗಳುಮಂ ಪಾರ್ವರುಮಂ |
ಪರಿಪಾಲಿಸಲೊಲ್ದು ಹರಣಮಂ ತೆಱುವಾತಂ ||
ತರಣಿಯ ಮಂಡಲಮಂ ನಿ |
ರ್ಭರದಿಂ ಭೇದಿಸುತೆ ಪರಮಪದಮಂ ಪಡೆವಂ ||೪೧೧||

ಎಂದು ನಿಶ್ಚಯಿಸಿ ತಾನು ಇಂತೆಂದನು :—ಎಲೆ ಕಿರಾತರಿರಾ! ಇಂತಾದರೆ ಮೊದಲು ನನ್ನನ್ನುಕೊಂದು ಶೋಧನೆಮಾಡಿ.

ಆ ಕಿರಾತರು ಅದೇರೀತಿ ಒಪ್ಪಿ ಅವನನ್ನು ಶೋಧಿಸಿ ಅವನಲ್ಲಿ ಧನವಿಲ್ಲದುದನ್ನುತಿಳಿದು ಇತರರಾದ ಆ ನಾಲ್ವರನ್ನೂ ಬಿಟ್ಟುಬಿಟ್ಟರು. ಇದರಿಂದ ನಾನು ಹೇಳುವೆನು :—ಅರಿಯಾದೊಡಂಬುಧಂಮೇಲ್!......ಎಂದು.

ಇಂತು ಆ ಕರಟಕದಮನಕಂಗಳು ಸಂವಾದಮಾಡುತಿರಲು, ಸಂಜೀವಕವು ಬಂದುಕ್ಷಣ ಪಿಂಗಲಕದೊಡನೆ ಕಾಳಗಮಾಡಿ ಅದರ ಕೂರುಗುರುಗಳಿಂದ ಭೇದಿಸಲ್ಪಟ್ಟು ಸತ್ತು ನೆಲದಮೇಲೆ ಬಿದ್ದಿತು.

ಬಳಿಕ ಪಿಂಗಲಕವು ಸತ್ತುಬಿದ್ದ ಸಂಜೀವಕವಂ ನೋಡಿ ಅದರ ಗುಣಂಗಳಂ ನೆನೆದು ಕನಿಕರಗೊಂಡು ಇಂತೆಂದಿತು :—ಪಾಪಿಯಾದ ನಾನು ಸಂಜೀವಕನನ್ನು ಕೊಂದುದರಿಂದ ಅಕಾರ್ಯವನ್ನುಮಾಡಿದೆ ಏಕೆಂದರೆ, ವಿಶ್ವಾಸಘಾತಕತ್ವಕಿಂತಲೂ ಮತ್ತೊಂದು ಪಾಪಕಾರ್ಯವಿಲ್ಲ. ಇಂತುಹೇಳಿವೆ :—

ಆವಂ ಮಿತ್ರದ್ರೋಹಿಯು |
ದಾವಂ ವಿಶ್ವಾಸಹಂ ಕೃತಘ್ನನದಾವಂ ||
ಮೂವರವಂದಿರ್ ನರಕದೊ ||
ಳಾವಸಿಪರ್ ಸೂರ್ಯಚಂದ್ರರಿರ್ಪನ್ನೆವರಂ ||೪೨||

ಧರೆ ಕಿಡೆ ಮೇಣ್ ಚದುರಾಳ್ ಕಿಡೆ |
ನರಪತಿ ಕಿಡುವಂ ದಲಾದೊಡಾಳುಂ ಧರೆಯುಂ ||
ಸರಿಸಮವೆಂಬುದಯುಕ್ತಂ |
ಧರೆ ಕೆಟ್ಟೊಡೆ ಮತ್ತೆ ದೊರೆಗುಮಾಳ್ಗಳ್ ದೊರೆಯರ್ ||೪೧||

ನಾನು ಇವನನ್ನು ಸಭಾಸದರ ಮಧ್ಯದಲ್ಲಿ ಬಹುವಾಗಿ ಪ್ರಶಂಸಿಸಿದೆನು. ಅವರ ಮುಂದೆ ಈಗ ನಾನು ಏನ ನುಡಿಯಲಿ? ಇಂತುಹೇಳಿದೆ :—

ಮುನ್ನಾವನನೋಲಗದೊಳ್ |
ಸನ್ನುತಗುಣಶಾಲಿಯೆಂದು ಪೊಗೞ್ದರ್ಪನೊ ತಾಂ ||
ಇನ್ನವನ ತೆಗೞಲಾಗದು |
ತನ್ನುಕ್ತಿಗೆ ಬನ್ನಮಕ್ಕುಮೆಂದಂಜುವವಂ ||೪೧೪||

ಎಂದು ಹಲವು ತೆರದಲ್ಲಿ ಹಂಬಲಿಸುತ್ತಿರಲು, ದಮನಕವು ಒಳಗೆ ಬಂದು ಸಂತೋಷದಿಂದ ಇಂತೆಂದಿತು :—ಒಡೆಯನೆ! ನಿನ್ನ ಈ ರೀತಿಯು ಅತ್ಯಂತಕಾತರವೆನಿಸುವುದು. ಏಕೆಂದರೆ, ದ್ರೋಹಕಾರಿಯಾದ ಪಶುವನ್ನು ಕೊಂದು ಇಂತು ಶೋಚಿಸುವೆಯಲ್ಲಾ! ರಾಜರಿಗೆ ಇದು ತಕ್ಕುದಲ್ಲ. ಇಂತುಹೇಳಿದೆ :—

ಜನಕನೊ ಒಡವುಟ್ಟಿದನೋ |
ತನುಜನೊ ಮೇಣ್ ತನ್ನ ಮಡದಿಯೋ ಕೆಳೆಯನೊ ಮೇಣ್ ||
ಅನುಗೊಳಿಪೊಡಸುದ್ರೋಹಮ |
ನೆನಸುಂ ಕೊಲವೇೞ್ಕುಮವರ ನಘವಿಲ್ಲದಱಿಂ ||೪೧೫||

ಅಲ್ಲದೆ :—

ಸಮುಚಿತದಯೆಯಿರದರಸೆ |
ಲ್ಲಮುಮಂ ಭಕ್ಷಿಸುವ ಭೂಸುರಂ ನಾಣಿಲಿವೆಣ್ ||
ಕುಮತಿ ನೆರಂ ಮಾರ್ನುಡಿವಾಳ್ |
ಪ್ರಮತ್ತನಧಿಕಾರಿ ಮೇಣ್ ಕೃತಘ್ನಂ ತ್ಯಾಜ್ಯರ್ ||೪೧೬||

ಅಂತಲ್ಲದೆ :—

ದಿಟಮುಂ ಪುಸಿಯುಂ ಪ್ರಿಯಮುಂ |
ಕಟುವುಂ ಕ್ರೂರಂ ದಯಾಳು ಲೋಭಿ ವದಾನ್ಯಂ ||
ಜಟಿಲಧನಾಯವ್ಯಯಮುಂ |
ವಿಟೀಜನಂಬೋಲನೇಕವಿಧಮಧಿಪನಯಂ ||೪೧೭||

ಅಂತಲ್ಲದೆ :—

ಜನಕುಪಟಳಮೆಸಗದವಂ ।
ಘನತೆಯ ಪಡೆದಿರ್ದುಮಹಹ ಪೂಜಿತನೆನಿಸಂ ॥
ಮನುಜರ್ ಪೂಜಿಪರಹಿಗಳ ।
ನನುವಿಂ ಖಗಪತಿಯನಂತದೇಂ ಪೂಜಿಪರೇ ॥೪೧೮॥

ಅಂತಲ್ಲದೆ :—

ಎಲೆ ನೀನಶೋಚ್ಯರಂ ಕುಱಿತ್ ।
ತೊಲವಿಂ ಶೋಚಿಸುವೆ ನುಡಿವೆ ಜಾಣ್ನುಡಿಗಳುಮಂ ॥
ಸಲೆ ತಿಳಿದವರೞಿದರ್ಗ್ಗಂ ।
ನೆಲದಲ್ಲಿರ್ಪರ್ಗ್ಗಮಹಹ ಶೋಚಿಸರಲ್ತೇ ॥೪೧೯॥

ಎಂದು ದಮನಕದಿಂದ ಬೋಧಿಸಲ್ಪಟ್ಟ ಪಿಂಗಲಕವು ಸಂಜೀವಕ ವ್ಯಸನವನ್ನು ಬಿಟ್ಟು ದಮನಕವನ್ನೇ ಮಂತ್ರಿಯನ್ನಾಗಿ ಮಾಡಿಕೊಂಡು ರಾಜ್ಯವಾಳುತಿದ್ದಿತು.

ಇಂತು ಮಹಿಶೂರಪುರೀ ಸೀತಾರಾಮಕವಿಯಿಂ ವಿರಚಿತಮಾದ
ಕರ್ಣಾಟಪಂಚತಂತ್ರದಲ್ಲಿ ಮಿತ್ರಭೇದವೆಂಬ
ಪ್ರಥಮತಂತ್ರಂ ಸಂಪೂರ್ಣಂ.

ಸ್ವಸ್ತಿ

ಟಿಪ್ಪಣಿ.

೧. ಚತುರಾನನಮುಖರ್—ಬ್ರಹ್ಮಾದಿಗಳು; ಕೃತಿಗಳ—ಕಾರ್ಯಗಳ; ॥ ವಾಗೀಶಾದ್ಯಾಸ್ಸುಮನಸಸ್ಸರ್ವಾರ್ಥಾನಾಮುಪಕ್ರಮೆ । ಯಂನತ್ವಾಕೃತಕೃತ್ಯಾಸ್ಸ್ಯುಸ್ತಂ ನಮಾಮಿ ಗಜಾನನಮ್ ॥ ಎಂದು ಗ್ರಂಥಗಳ ಆರಂಭದಲ್ಲಿ ಪ್ರಸಿದ್ಧವಾದ ಸಂಸ್ಕೃತ ಶ್ಲೋಕದ ಪರಿವರ್ತನವಿದು.

೨. ಬಿದಿ—ಬ್ರಹ್ಮ, ವಿಧಿ (ಸಂಸ್ಕೃತ) ಬಿದು—ಚಂದ್ರ, ವಿಧು (ಸಂ) ದಸ್ರರ್ ಅಶ್ವಿನೀದೇವತೆಗಳು.

೩. ಕವಿಗಂ—ಶುಕ್ರಾಚಾರ್ಯರಿಗೂ; "ಉಶನಾ ಭಾರ್ಗವಃಕವಿಃ" ಎಂದು ಕೋಶವು; ಅವನಣುಗಂಗಂ—ಆ ಪರಾಶರರ ಪುತ್ರರಾದ ವ್ಯಾಸರಿಗೂ; ನಯಶಾಸ್ತ್ರ—ನೀತಿಶಾಸ್ತ್ರ.

೪. ನೆಗಳ್ದ—ಪ್ರಸಿದ್ಧವಾದ; ಬಗೆವುಗೆ—ಮನಸ್ಸಿಗಂಟುವಂತೆ, ಬಗೆಯಂ+ಪುಗೆ. ನೆಗಳ್ಚಂ—ಮಾಡಿದನು.

೫. ಜನಿಸದಂ—ಹುಟ್ಟಿದವನು, ಅಱಿದಂ—ಸತ್ತವನು. ಗಾಂಪಂ—ಮೂಢನು, ಅೞಲ್—ದುಃಖ, ಇನಿಸು—ಸ್ವಲ್ಪ.

೬. ಬಸಿರೞಿವುದು—ಗರ್ಭಸ್ರಾವ, ಮೇಲ್—ಉತ್ತಮ, ತಾಯ್ಗಬ್ಬದಿಂ—ಮಾತೃಗರ್ಭದಿಂದ, ಉದಯಂಬೆತ್ತಾಗಳೇ—ಹುಟ್ಟಿದಾಗಲೆ, ವದು—ವಧು (ಸಂ) ಬಂಜೆ—ವಂಧ್ಯಾ (ಸಂ) ಅದಟಿಂ—ಪರಾಕ್ರಮದಿಂದ, ರೂಪಿಂ—ರೂಪದಿಂದ ರೂಪ (ಸಂ).

೭. ಈನದ—"ಈನ್ ತಿರ್ಯಕ್ಪ್ರಸವೆ" ಎಂದು ಧಾತ್ವರ್ಥ; ಕಲ್ಲದ—ಅಭ್ಯಾಸಮಾಡದ; ಕಲ್ ಧಾತುವಿಗೆ ನಿಷೇಧಾರ್ಥಕವಾದ 'ಅದ' ಎಂಬ ಪ್ರತ್ಯಯಪರವಾಗಿ ಲಕಾರಕ್ಕೆ ನಿತ್ಯವಾದ ದ್ವಿತ್ವ ಬಂದಿದೆ; ಶಬ್ದಮಣಿದರ್ಪಣಸೂತ್ರ ೭೧.

೮. ತನುಭವಂ—ಮಗ, ಘನಕುಲಜಂಗೆ—ಸತ್ಕುಲಪ್ರಸೂತನಿಗೆ, ಎಗ್ಗಂ—ಮೂಢ, ನಾಣ್ಚಿ—ನಾಚಿಕೆಪಟ್ಟು.

೯. ಗಣಿಪೆಡೆಯೊಳ್—ಎಣಿಸುವಸಂದರ್ಭದಲ್ಲಿ, ಲೆಕ್ಕಿಣಿ—ಲೇಖಿನೀ (ಸಂ) ಧಾರಿಣಿಯೊಳ್—ಭೂಮಿಯಲ್ಲಿ, ಪುತ್ರಿಣಿ—ಮಗನುಳ್ಳವಳು, ಗುಣವಂತರ

ನಡುವೆ ಗಣನೆಗೆ ಬಾರದ ಮಗನನ್ನು ಪಡೆದವಳಿಗೂ ಬಂಜೆಗೂ ವ್ಯತ್ಯಾಸವೇನೂ ಇಲ್ಲ. ನಿಷ್ಫಲನಾದ ಅಂತಹ ಮಗನನ್ನು ಹಡೆದರೂ ಹಡೆದವಳಲ್ಲವೆಂದೇ ಹೇಳಬೇಕೆಂಬುದು ಭಾವವು.

೧೦. ಕೊನೆಯಿಲ್ಲ ಶಾಸ್ತ್ರಕೆ—ಶಾಸಗಳು ಅಪಾರವಾಗಿರುವುವೆಂದರ್ಥ, ಆಯುಂ—ಆಯುಸ್ಸೂ, ದರ್ಪಣಕಾರನು 'ಆಯ್—ವಿರಲವಸ್ತ್ವಾತ್ಕರ್ಷಣೆ ಆಯುಷ್ಯೇಚ' ಎಂದು ಹೇಳಿರುವಂತೆ ಆಯುಷ್ಯಾರ್ಥಕವಾದ 'ಆಯ್' ಎಂಬ ನಾಮವಾಚಕದಮೇಲೆ 'ಉಂ' ಎಂಬ ಸಮುಚ್ಚಯ ಬಂದಿದೆ; ಅಂತಲ್ಲದಿದ್ದರೆ 'ಆಯುಸ್ಸು' ಎಂಬುದರ ರೂಪಾಂತರವಾದ 'ಆಯು' ಎಂಬುದರಮೇಲೆ ಉಂ ಸೇರಿದರೆ 'ಆಯುವುಂ' ಎಂದಾಗಬೇಕು. ಅಥವಾ ಆಯುಸ್ಸು ಎಂಬುದಕ್ಕೆ ಆಯ್ ಎಂಬ ಮತ್ತೊಂದು ರೂಪವೂ ಉಂಟೆಂದುಹೇಳಬೇಕು. ಪ್ರಯೋಗ:—ನಿಮಗಕ್ಕೆಮ ಅಬ್ಜಗರ್ಭನಾಯುಂ ಶ್ರೀಯುಂ. ಎಡರ್-ವಿಘ್ನ "ಎಡರ್ಗೇಡಿ" ಎಂದು ವಿಘ್ನೇಶ್ವರನಿಗೆ ಹೆಸರು. ಅಂಚೆ—ಹಂಸ (ಸಂ) ಅನುವಿಂ—ತಕ್ಕರೀತಿಯಿಂದ.

೧೧. ಸಂದ—ಪ್ರಸಿದ್ಧವಾದ, ಒಲಿಲ್ದು—ಪ್ರೀತಿಸಿ, 'ಒಲಿಲ್ ಸ್ನೇಹೆ' ಎಂದು ಧಾತ್ವರ್ಥ, ಅರ್ಥಾಂತರ ಕೂಗು, ಒರಲ್—(ನಾಮವಾಚಕ) ಒರಳುಕಲ್ಲು. ಮೇಣ್—ಮತ್ತು, ಅರ್ಥಾಂತರ ಅಥವಾ, ಇಂದಿರ—ಇಂದ್ರ (ಸಂ) ಪರಿಭವ—ತಿರಸ್ಕಾರ.

೧೨. ಎಸೆವಿನೆಗಂ—ಒಪ್ಪುವಂತೆ; ಸಿಂಗಕ್ಕಂ—ಸಿಂಹ (ಸಂ) ಬಸವಂಗಂ—ವೃಷಭ (ಸಂ) ಸ್ನೇಹ ಪ್ರಸರಂ—ಸ್ನೇಹಾತಿಶಯ, ಪಿಸುಣಂ—ಚಾಡಿಕೋರ, ಪಿಶುನಂ (ಸಂ).

೧೩. ಅದುಕಾರಣದಿಂದೆ—ಆ ಕಾರಣದಿಂದ, ಅದು, ಕಾರಣದಿಂದ—ಎಂದು ಎರಡುಪದಗಳು, ವಿಶೇಷಣವಾದ 'ಅದು' ಎಂಬ ಪ್ರಥಮಾವಿಭಕ್ತಿ 'ಕಾರಣದಿಂದೆ' ಎಂಬ ತೃತೀಯೆಯಲ್ಲಿ ಅನ್ವಯಿಸುವುದು; ಶ. ದ. ಸೂ ೧೪೦, ಬುದ್ಧಿಮಂತಂ= ಬುದ್ಧಿಮಂತಃ ಎಂಬ ಸಂಸ್ಕೃತಪ್ರಥಮಾಬಹುವಚನದ ವಿಸರ್ಗಕ್ಕೆ ಲೋಪವಾಗಿ 'ಬುದ್ಧಿಮಂತ' ಎಂದು ಕನ್ನಡಕ್ಕೆ ಲಿಂಗವಾಗಿರುವುದು. ಅಂತಲ್ಲದೆ ಕನ್ನಡದ 'ವಂತ ಎಂಬ ತದ್ಧಿತಪ್ರತ್ಯಯವು ಸೇರಿದರೆ 'ಬುದ್ಧಿವಂತಂ' ಎಂದಾಗಬೇಕು ಅದೆಂತಾನುಂ—ಅದೆಂತಾದರೂ, ಅದು ಎಂಬುದು ಎಂತು ಎಲ್ಲಿ ಏನ್ ಮುಂತಾದುವುಗಳ ಹಿಂದೆ ಸೊಗಸಿಗೋಸ್ಕರ ಸೇರಿಸಲ್ಪಡುವ ಪದ್ಧತಿಯುಂಟು. ಇರದೆ—ಸುಮ್ಮನಿರದೆ.

೧೫. ಬಿಜ್ಜ—ವಿದ್ಯಾ (ಸಂ) ಚಾಗ—ತ್ಯಾಗ (ಸಂ) ಎರೆವರ್—ಯಾಚಕರು, ಯಾಚಕರು ಪಾಡಿ ಪೊಗಳುವ ಧನಿಕಜನದ ವಿದ್ಯಾದಾರ್ಯಾದಿಗುಣಗಳೆ ಗುಣಗಳು, ಧನಿಕನಲ್ಲದವನಲ್ಲಿ ಗುಣಗಳೇನಿದ್ದರೂ ಅವು ಶೋಭಿಸವೆಂದು ತಾತ್ಪರ್ಯ.

೧೬. ಅರಯ್ಪೊಡೆ—ವಿಚಾರಮಾಡಿದರೆ, ನಿಚ್ಚಲುಂ—ನಿತ್ಯವೂ, ನಿತ್ಯಾರ್ಥಕವಾದ 'ನಿಚ್ಚಲ'' ಎಂಬ ಶಬ್ದದಮೇಲೆ ಸಮುಚ್ಚಯ ಬಂದಿದೆ.

೧೭. ಪಿರಿದೆಂಬಿನಂ—ವಿಶೇಷವಾಗಿ, ತೊಱೆಗಳ—ನದಿಗಳು, ಬೆಟ್ಟಗಳಿಂದ ನದಿಗಳು ಹರಿಯುವಂತೆ ಹಣಗಳಿಂದ ಕಾರ್ಯಗಳು ಅಗುವುವು. ಹಣವಿಲ್ಲದೆ ಯಾವ ಕಾರ್ಯವೂ ನಡೆಯುದೆಂದು ಭಾವವು.

೧೮. ಆಶ್ರಯಾವರ್ಹನುಂ—ಆಶ್ರಯಿಸಲಯೋಗ್ಯನಾದವನೂ, ಧನಲಾಭಕ್ಕೋಸ್ಕರ ಎಂತವರನಾದರೂ ಓಲೈಸದೆ ತೀರದೆಂದಭಿಪ್ರಾಯವು. ಅಖಿಳೇಂದ್ರಿಯಂಗಳು—ಶ್ರೋತ್ರಾದಿಸಕಲೇಂದ್ರಿಯ ವ್ಯಾಪಾರಗಳೆಂದರ್ಥ.

೧೯. ಉಣಸಿಂದೆ—ಆಹಾರದಿಂದ, ಎಂಗುಂ—ಹೇಳುವರು.

೨೦ ಮಸಣಮುಮಂ—ಶ್ಮಶಾನವನ್ನೂ, ಅಣಿಯರಂ—ಅಧಿಕವಾಗಿ.

೨೧. ಮುದುಪರ್—ಮುದುಕರು, ತರುಣತೆವಡೆದು—ಪ್ರಾಯವನ್ನು ಹೊಂದಿ.

೨೨, ಭಿಕ್ಷಿಪರ್—ಭಿಕ್ಷಬೇಡುವರು, ಆಢ್ಯಂ—ಧನಿಕನು, ಪಾಡು—ಕಷ್ಟ, ಬೇಸಾಯಮುಂ—ವ್ಯವಸಾಯ (ಸಂ) ಕಲ್ವುದು—ಅಭ್ಯಾಸಮಾಡುವುದು. ಓಜಂ-ಉಪಾಧ್ಯಾಯನು, ಒಸೆವಂತೆ—ಪ್ರಸನ್ನನಾಗುವಹಾಗೆ ಓಲೈಸವೇಳ್ಪಂತಜುಂ—ಸೇವಿಸಬೇಕಾದುದರಿಂದ, ಸಲೆ—ಸಲ್ಲುವಂತೆ. ದಾರಿದ್ರ್ಯದಂ—ಬಡತನವನುಂಟುಮಾಡುವುದು; ಬಡ್ಡಿವಾೞ್—ಬಡ್ಡಿಯಜೀವನ, ಪರದಿನಿಂ—ವ್ಯಾಪಾರಕ್ಕಿಂತಲೂ.

೨೪. ಅಮಮ:—ಶ್ಲಾಘಾವಾಚಕನಾದ ಅವ್ಯಯ. ಏವುದೋ—ಏತಕ್ಕೆ ಬಂದುದೋ.

೨೫. ಇಷ್ಟಂಸಲಿಪೆಂ —ಬೇಕಾದುದನ್ನು ಸಮರ್ಪಿಸುವೆನು.

೨೬. ತೀವಿದ—ತುಂಬಿದ, ಪರದಂ—ವ್ಯಾಪಾರಗಾರ, ಬೀಗುವಂ—ಉಬ್ಬುವನು.

೨೭. ಬಲ್ಲಂ—ಪರಿಚಿತನಾದ, ಕೊಳ್ವಂ -ಕೊಂಡುಕೊಳ್ಳುವವನು. ಪಡೆಪಿನಿಂ—ಪ್ರಾಪ್ತಿಯಿಂದ, ಪ್ರಯೋಗ:—ನುಡಿದಂ ಕನಕದ ಪೂಜೆಯ ಪಡೆಪಾದವುದು, ಅದಿಪುರಾಣ ಆಶ್ವಾಸ ೫. ಪದ್ಯ ೬.

೨೭. ನೆಱೆದುದು ನೆಱೆಯದು—ತುಂಬಿತು ತುಂಬಲಿಲ್ಲ. ಉಱೆ—ಹೆಚ್ಚಾಗಿ, ಓಸರಿಸುತೆ—ಕಡೆಗಣಿಸುತ್ತ, ಕಿರಾತರು—ಕಿರಾತಸದೃಶರು ನೈಜಂ—ಸ್ವಕೀಯ.

೨೮. ಇರ್ಮಡಿಯುಂ ಅಲ್ಲದಿರೆ ಮೂವಡಿಯುಂ—ಎರಡರಷ್ಟು ಅಥವಾ ಮೂರರಷ್ಟು ಹೆಚ್ಚಾದುದನ್ನು

೩೦. ಪಿರಿದಂ—ಹೆಚ್ಚಾದುದನ್ನು, ಓವುವುದೆ—ಕಾಪಾಡಿಕೊಳ್ಳುವುದೇ, ಚದುರ್—ಜಾಣತನ.

೩೧. ಮುಸುಳೆ—ಕೆಡಲು, ಕಾಂತಾರದೊಳ್—ಕಾಡಿನಲ್ಲಿ, ಪಕ್ಕಾದಪಂ—ಗುರಿಯಾಗುವನು.

೩೨. ಪದದಲ್ಲಿ—ಸಂದರ್ಭದಲ್ಲಿ, ಎಸಕಮಂ—ಕಾರ್ಯವನ್ನು, ಕೀಲಮಂ—ಗೂಟವನ್ನು, ಉತ್ಪಾಟಿಸಿದ—ಕಿತ್ತುಹಾಕಿದ, ಕೋಡಗ—ಕಪಿ.

೩೩. ಉಪಕೃತಿಗೆಯ್ಯಲುಂ—ಉಪಕಾರಮಾಡುವುದಕ್ಕೂ, ಅಪಕೃತಿಗೆಯ್ಯಲುಂ—ಅಪಕಾರಮಾಡುವುದಕ್ಕೂ, ಗೆಯ್‌ಧಾತುವಿಗೆ ಅಲ್‌ಪರವಾದಾಗ ಯಕಾರಕ್ಕೆ ದ್ವಿತ್ವವಿಕಲ್ಪ; ಅಱಲಿಪ—ದುಃಖಪಡಿಸುವ, ತನತ್ತು—ತನ್ನದು, ಪೊಡೆಯಂ—ಹೊಟ್ಟೆಯನ್ನು.

೩೪. ಅಱಿವುಂ—ಜ್ಞಾನವೂ, ಅದೊರ್ಚ್ಚಣಂ—ಅದೊಂದುಕ್ಷಣ, ಚಿರಂ—ಬಹುಕಾಲ.

೩೫. ಬಲಿದಿನುತೆ—ಬಲಿಯನ್ನು ತಿನ್ನುತ್ತ.

೩೬. ಕಿಱುದೊಱೆ—ಕಿಱಿದು+ತೊಱೆ, ಅರರೇ—ಅಹಹ, ಮೂಷಿಕದೆ—ಇಲಿಯು, ಎನಸುಂ—ಅಧಿಕವಾಗಿ, ಅಱಿವಾನಿಸನುಂ—ಅಲ್ಪಮನುಷ್ಯನೂ, ದಲ್—ನಿಶ್ಚಯ.

೩೭. ಜನಿಸಿದಂ—ಹುಟ್ಟಿದವನು, ವಂಶದ—ಕುಲದ ಮತ್ತು ಬಿದಿರಿನ, ದಂಡದ, ಪಳಿಯಿಗೆವೋಲ್—ಧ್ವಜದಂತೆ, ಜೌವನಮಂ—ಯೌವನ(ಸಂ) ಜಗುಳಿಸಿದ—ಹೋಗಲಾಡಿಸಿದ, ವ್ಯರ್ಥವಾಗಿ ತಾನು ಹುಟ್ಟಿ ತನ್ನ ತಾಯಿಗೆ ಕ್ಲೇಶವನುಂಟುಮಾಡಿದುದರಿಂದೇನು? ಧ್ವಜಪಟವು ದಂಡದಮೇಲ್ಗಡೆ ಶೋಭಿಸುವಂತೆ ಹುಟ್ಟಿದುದಕ್ಕೆ ತನ್ನ ವಂಶಕ್ಕೆ ಮೇಲಾಗಿಗಬೇಕು—ಎಂದು ತಾತ್ಪರ್ಯ.

೩೮. ಪರಿವರ್ತಿಪ—ಸುತ್ತುತ್ತಿರುವ—'ಪುನರಪಿಜನನಂ ಪುನರಪಿಮರಣಂ ಪುನರಪಿಜನನೀಜಠರೇಶಯನಂ ॥ ಜಾತಸ್ಯಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತ

ಸ್ಯಚ, ಎಂಬಂತೆ ಸತ್ತವನು ಹುಟ್ಟಲೆಬೇಕು ಸುಮ್ಮನೆ ಹಾಗೆ ಹುಟ್ಟಿದಮಾತ್ರಕ್ಕೆ ಪ್ರಯೋಜನವೇನು? ಗುಣಸಂಪತ್ತಿಯಿಂದ ಎಲ್ಲರಿಗೂ ಮೇಲಾಗಿದ್ದರೆ ಅವನು ಹುಟ್ಟಿದುದಕ್ಕೆ ಫಲವೆಂದಭಿಪ್ರಾಯ.

೪೦. ಸಂದಣಿಗೊಂಡು—ಒಟ್ಟಾಗಿ, ಭಯಂಮಿಗೆ—ಭಯಹೆಚ್ಚಲು, ಆಕುಲಿಪ—ವ್ಯಥೆಪಡುವ.

೪೧. ಪರಿಯಂ—ಇರಬೇಕಾದ ರೀತಿಯನ್ನು, ಬೇಗೆಯಂ—ಸಂತಾಪವನ್ನು, ಮುಗಿಲ್ಗಳವೋಲ್—ಮೇಘಗಳಂತೆ.

೪೨. ಪಿರಿಯರ್ಗ್ಗಂ ಗುರುವೆನಿಪನಂ—ದೊಡ್ಡವರಿಗೂ ದೊಡ್ಡವನೆನಿಸುವನನ್ನು, ಎಂದರೆ ಮಹಾಗೌರವವುಳ್ಳವನನ್ನು; ತಾನು ಗೌರವವುಳ್ಳವನಾದರೆ ತನ್ನನ್ನು ಪಡೆದ ತಾಯಿಗೂ ಕೇವಲಗೌರವವೆಂದಭಿಪ್ರಾಯ.

೪೩. ಅದಟಗಂ—ಪರಾಕ್ರಮಶಾಲಿ, ಮೆಱೆಯದೊಡೆ—ತೋರಿಸದಿದ್ದರೆ, ತಿರಸ್ಕೃತಂ—ತಿರಸ್ಕರಿಸಲ್ಪಟ್ಟವನು, ಅನಲಂ—ಅಗ್ನಿ.

೪೪. ಮೆಚ್ಚಂ—ಬಹುಮಾನವನ್ನು, ವಲಂ—ಅಧಿಕವಾಗಿ,

೪೫. ಕಡುರಾಗಂ—ಬಹುಪ್ರೀತಿ ಮತ್ತು ಕೆಂಪುಬಣ್ಣ.

೪೬. ಕ್ಷಮೆಯಾಣ್ಮನಂ—ಅರಸನನ್ನು, ಇಲ್ಲಿ ಕ್ಷಮೆಯೆಂದರೆ ಭೂಮಿ; ಓಲಗಿಸುವಂ—ಸೇವಿಸುವವನು.

೪೭. ಕೆಲದನನೇ—ಹತ್ತಿರವಿರುವವನನ್ನೇ, ಅಕುಲಿಯನೊ—ಕುಲಹೀನನನ್ನೋ, ವ್ರಾತ್ಯನನೋ—ಭ್ರಷ್ಟನನ್ನೋ, ಪಿರಿದುಂ—ವಿಶೇಷವಾಗಿ, ಪಕ್ಕದದಂ—ಹತ್ತಿರವಿರುವುದನ್ನು, ಸುತ್ತುಂಗೊಳ್ಗುಂ—ಸುತ್ತುಗೊಳ್ಳುವುದು. ಲತೆಗಳ್ ಪಕ್ಕದದಂ ಸುತ್ತುಗೊಳ್ವುವು, ಅರಸರ್ ಪೆಣ್ಗಳ್ ಪಕ್ಕದವನಂ ಸುತ್ತುಗೊಳ್ವರ್—ಎಂದು ಲಿಂಗವಿಪರಿಣಾಮದಿಂದ ಅನ್ವಯಿಸಿಕೊಳ್ಳಬೇಕು.

೪೮. ಒಡರಿಕುಂ—ಉಂಟುಮಾಡುವುದು, ಹಸಾದಂಗೊಳಿಪ್ಪುದು—ಪ್ರಸಾದಗೊಳಿಸುವುದು. ಅರಯ್ವ—ವಿಚಾರಮಾಡುವ, ಎಡೆಯಾಳ್ಗಳ್—ಹತ್ತಿರವಿರುವಸೇವಕರು, ತರದೆ—ಕ್ರಮದಿಂದ, ಬಸಂಬಡಿಪರ್—ಅಧೀನಮಾಡಿಕೊಳ್ಳುವರು, ಮಾಮಸಕವಾಂತ—ಕೋಪೋದ್ರೇಕವುಳ್ಳ, ಮಹಾರಾಜನುಮಂ—ಮಹಾರಾಜನನ್ನೂ.

೪೯. ಪರಿಚರ್ಯೆಯ—ಸೇವೆಯನ್ನು.

೫೦. ಮೇದಿನಿಯೊಳ್—ಭೂಮಿಯಲ್ಲಿ, ಪ್ರಾಯಶ್ಚಿತ್ತಂ—ತಕ್ಕ ಪರಿಹಾರ, ಭಿಕ್ಷೆ—ಭಿಕ್ಷಾಟನ, ಸಾವ—ಸಾಯುವ.

೫೧. ದಿಡದಿಂ—ದೃಢ (ಸಂ) ನೆಗಳ್ತೆವಡೆಪರ್—ಪ್ರಸಿದ್ಧಿಗೊಳಿಸುವರು, ಪ್ರಮಾದಮಂ—ಅಜಾಗರೂಕತೆಯನ್ನು, ತಮತಂ—ತಮ್ಮದಾದ

೫೨. ಬಸಂಬಡಿಸಿದ—ವಶವಾಡಲ್ಪಟ್ಟ, ಅಪ್ರಮತ್ತರ್—ಜಾಗರೂಕರು, ಎನಿತಱವಂ—ಎಷ್ಟರವನು.

೫೩. ಒಂದುವಂ—ಹೊಂದುವವನು, ಬೆಳಸಂ—ಬೆಳೆಯನ್ನು

೫೪. ಬೆಳ್ಗೊಡೆಗಳ್—ಶ್ವೇತಚ್ಛತ್ರಿಗಳು,ಮದಕರಿಗಳ್—ಮದಿಸಿದಾನೆಗಳು.

೫೫. ಒರೆದುದಂ—ಹೇಳಿದುದನ್ನು, ಪೊಱುಗುಂ—ಹೊರುವುವು. ಇಂಗಿತ-ಅಭಿಪ್ರಾಯ.

೫೬. ಚೇಷ್ಟೆಯಿಂ—ಮಾಡುವ ಕೆಲಸದಿಂದ, ವ್ಯಾಹಾರದೆ—ಮಾತಿನಿಂದ.

೫೭. ಮಿಸುನಿ—ಚಿನ್ನ, ಮಿಸುಗುವ—ಪ್ರಕಾಶಿಸುವ, ಅಳುಂಬಂ—ಅಧಿಕವಾಗಿ.

೫೮. ಕೊಳ್ವುದು—ಗ್ರಹಿಸಬೇಕು, ಒಳ್ಮಾತುಗಳಿಂ—ಒಳ್ಳೆಯಮಾತುಗಳಿಂದ, ಗೈವುದು—ಮಾಡಬೇಕು, (ವಿಧ್ಯರ್ಥದಲ್ಲಿ ಉದು ಬಂದಿದೆ.) ಉಱೆಯಲೊಡಂ-ಬಿಡಲು

೫೯. ಪರಿಚರಿಸಲಾಪ್ಪರದು—ಸೇವಿಸಬಾರದು, ಕರಂ—ಅಧಿಕವಾಗಿ (ಅವ್ಯಯ) ಊಷರಧರೆಯಿಂ—ಬೆಳೆಯಾಗದ ಭೂಮಿಯಿಂದ.

೬೦. ಜೀವಿಸುವನ್ನೆಗಮೆ ಸಾಲ್ವಫಲಂ—ಬದುಕಿರುವವರಗೆ ಸಾಕಾಗುವಷ್ಟು ಫಲವೇ.

೬೧ ಬಸವಱದು—ಸ್ವಾಧೀನತಪ್ಪಿ, ಅಸದಾತ್ಮಕನತ್ತಣಿಂದೆ—ಅಯೋಗ್ಯ ನಡೆಸೆಯಿಂದ, ಜೀವನಾರ್ಥಮಂ—ಜೀವನಕ್ಕೋಸ್ಕರ ಆಗಬೇಕಾದ ಫಲವನ್ನು.

೬೨. ಅಲ್ಪವಾತೊರೆವನಂ—ತುಚ್ಛವಾದ ಮಾತನಾಡುವ, ಅಯೋಗ್ಯನನ್ನು ಸೇವಿಸುವ ಸೇವಕನು "ಇವನುಲೋಭಿ, ತುಚ್ಛವಾಗಿ ಮಾತನಾಡುವನು" ಎಂದು ಅವನನ್ನು ದ್ವೇಷಿಸುವುದೇಕೆ? ಇದು ಸರಿಯಲ್ಲ; ಅಂತವನನ್ನು "ಸೇವಿಸಬಹುದು ಸೇವಿಸಬಾರದು" ಎಂದು ತಿಳಿವಳಿಕೆಯಿಲ್ಲದೆಹೋದ ತನ್ನನ್ನು ದ್ವೇಷಿಸಬೇಕ

ಲ್ಲವೆ? ಎಂದರೆ ಮನುಷ್ಯನು ವಿವೇಕವಂ ತಂದುಕೊಂಡು ಅಯೋಗ್ಯನ ಸೇವೆಮಾಡಬಾರದೆಂದಭಿಪ್ರಾಯವು.

೬೩. ತ್ಯಜಿಸುವುದು—ಬಿಡಬೇಕು, ಎರ್ಕೆ—ಎಕ್ಕದಗಿಡವು, ಪುಷ್ಪಫಲಾವಹಂ—ಹೂಕಾಯಿಗಳನ್ನು ಕೊಡುವುದು, ಅಣಂ—ಅತ್ಯಂತವಾಗಿ.

೬೪. ಅರಸನ ತಾಯೊಳಮರಸಿಯೊಳರ‍್ಗುವರನೊಳಂ—ಎಂಬಲ್ಲಿ ಅರಸಿಯೊಳ್ ಎಂಬುದನ್ನು ಅರಸಿಯೊಳಂ ಎಂದು ಸಮುಚ್ಚಯದೊಡನೆ ಅನ್ವಯಿಸಿಕೊಳ್ಳುವುದು. ಮುಂದೆಯೂ ಸಮುಚ್ಚಯವಿಲ್ಲದ ಪದಗಳನ್ನು ಇಂತೆ ಅನ್ವಯಿಸಿಕೊಳ್ಳಬೇಕು. ಶ. ದ. ಸೂ ೧೪೫. ಪ್ರಯೋಗ:—ಅಯ್ಯುಂ ಸಿರಿ ತಾಯ್ಯುಂ ತಂದೆ ಕಣ್ಣುಂ ಗತಿಯೆನಿಸಿದಪಂ. ಅರಗುವರನೊಳ್ಳಂ —ರಾಜಕುಮಾರನಲ್ಲಿಯೂ, ಅರಸು +ಕುವರ, ಅರಸು+ಮನೆ=ಅರಮನೆ ಎಂಬಂತೆ. ಸು ಎಂಬುದಕ್ಕೆ ಲೋಪ; ಪಡಿಯರನೊಳಂ—ದ್ವಾರಪಾಲಕನಲ್ಲಿಯೂ, ಪ್ರತಿಹಾರ (ಸಂ).

೬೫. ಒಲಿಪೊಡೆ—ಒಲಿಸಿಕೊಳ್ಳಬೇಕಾದರೆ, ಚಕ್ರಮಂ—(ಪರಿಜನದ) ಗುಂಪನ್ನು, ಅಂಪುದು—ಹೊಂದುವುದು. ಚಕ್ರಮಹಿಮೆಯಿಂ —ಚಕ್ರ=ಗುಂಪು ಮತ್ತು ಕುಂಬಾರನ ಚಕ್ರ, ಪಾತ್ರತೆಯಂ—ಯೋಗ್ಯತೆಯನ್ನು ಮತ್ತು ಪಾತ್ರೆಯ ಭಾವವನ್ನು; ಅಲ್ಪವಾದ ಮಣ್ಣುಂಡೆಯೂ ಚಕ್ರದ ಪ್ರಭಾವದಿಂದ ಪಾತ್ರವೆನಿಸುವಕಾರಣ ಪ್ರಭುವನ್ನು ಒಲಿಸಿಕೊಳ್ಳಬೇಕಾದರೆ ಆತನ ಹತ್ತಿರಿರುವ ಚಕ್ರವನ್ನು ಎಂದರೆ ಪರಿಜನದ ಗುಂಪನ್ನು ಮೊದಲು ಒಲಿವಂತೆ ಮಾಡಿಕೊಳ್ಳಬೇಕು; ಚಕ್ರವೊಲಿದರೆ ಪ್ರಭುವೂ ಒಲಿವನೆಂದು ತಾತ್ಪರ್ಯ.

೬೬. ಮಿಗೆ—ಹೆಚ್ಚಾಗಿ, ಸಂದೆಗ—ಸಂದೇಹ (ಸಂ) ಕಜ್ಜ—ಕಾರ್ಯ (ಸಂ).

೬೭. ಹಸಾದ—ಪ್ರಸಾದ (ಸಂ).

೬೮. ಅಂತವುರ—ಅಂತಃಪುರ (ಸಂ).

೬೯. ಜೂದು—ದ್ಯೂತ (ಸಂ, ಜವದೂದನ—ಯಮದೂತನ, ಕಳ್ಳುಮಂ—ಮದ್ಯವನ್ನೂ, ಬಿಸಂಬೊಲ್—ವಿಷದಂತೆ, ಪೆಣ್ರೂಪಮಂ—ಹೆಂಗಸರ ರೂಪವನ್ನು.

೭೦. ಬವರದೊಳ್—ಯುದ್ಧದಲ್ಲಿ, ಮುಂಗೊಂಡು—ಮುಂದೆನಿಂತು, ಪಿಂಗೊಂಡು—ಹಿಂಬಾಲಿಸಿ, ಪೊಜಲೊಳ್ ಪಟ್ಟಣದಲ್ಲಿ, ಅವಗಂ—ಯಾವಾಗಲೂ, ಒಲ್ಮೆ—ಪ್ರೀತಿ.

೭೨. ಪಗೆವವರೊಳ್‌—ಶತ್ರುಗಳಲ್ಲಿ, ಒಲ್ದರೊಳ್‌—ಇಷ್ಟರಾದವರಲ್ಲಿ, ಅನುಗೊಳಿಸುತ—ಮಾಡುತ್ತ.

೭೩. ಪಡಿನುಡಿಯಂ—ಪ್ರತ್ಯುತ್ತರವನ್ನು' ಸರಿಸ—ಸಮೀಪ.

೭೪. ಸಮರ—ಯುದ್ಧ.

೭೫. ಪೞಿಯಂ—ದೂಷಣೆಯನ್ನು, ನರನಾತಂ—ನರಂ+ಆತಂ.

೭೬. ಇದಿರೊಳ್‌—ಎದುರಿನಲ್ಲಿ, ಉತ್ತರದಿಂ ಉತ್ತರಂ—ಒಂದುತ್ತರವಾಗುತ್ತಲೂ ಇನ್ನೊಂದು ಉತ್ತರ, ಇನ್ನೊಂದಾಗುತ್ತಲೂ ಮತ್ತೊಂದು; ಈರೀತಿ. ಹದವೞೆ—ಹದವಾದ ಮಳೆ, ಪೆಱತು - ಮತ್ತೊಂದು.

೭೭. ನಯಗುಣಕೆ—ನೀತಿಗುಣಕ್ಕೆ ಬುಧಚಯಂ—ವಿದ್ವಾಂಸರ ಸಮೂಹವು, ಒಗೆವ—ಉಂಟಾಗುವ, ಉಪಾಯಂಗೆಯಲೊಡಂ—ಉಪಾಯವನ್ನು ಮಾಡಲು, ನಿರವಿಸುಗುಂ—ನಿರೂಪಿಸುವುದು.

೭೮. ಬಗೆಯಲ್ಲಿ—ಮನಸ್ಸಿನಲ್ಲಿ. ಇರ್ದ್ದಪರಿಂ = ಇರ್ದ್ದಪರ್‌+ಇಂ, ಇಂ—ಇನ್ನು, ಉಣ್ಮುಗುಂ—ಪ್ರಕಟವಾಗುವುವು.

೭೯. ಅಮರಗುರು—ಬೃಹಸ್ಪತಿ, ಪದದೆ—ಸಂದರ್ಭದಲ್ಲಿ, ಏಳಿದಕ್ಕೆ—ತಿರಸ್ಕಾರಕ್ಕೆ.

೮೦. ಅತಿವಿಷಮಂ, ಬಹುಕಠಿನಂ, ವ್ಯಾಳಕುಲಯುಕ್ತಂ—ಎಂಬುವು ಧರಣೀಪತಿಜನಕ್ಕೂ ಗಿರಿಗೂ ವಿಶೇಷಣಗಳು, ಅತಿವಿಷಮಂ—ರಾಜನು ಅಧಿಕಾರಕೊಡುವುದು ಮುಂತಾದ ವಿಷಯದಲ್ಲಿ ಬಹುವೈಷಮ್ಯವುಳ್ಳವನು ಎಂದರೆ ಒಂದೇಸಮವಾಗಿ ವರ್ತಿಸದವನು, ಬೆಟ್ಟವು ನಿಮ್ನೋನ್ನತಗಳಿಂದ ಸಮವಲ್ಲದುದು; ಬಹುಕಠಿನಂ—ರಾಜನು ಅತಿಕಾಠಿನ್ಯವುಳ್ಳವನು, ಬೆಟ್ಟವೂ ಅತಿಕಠಿನವಾದುದು, ವ್ಯಾಳಕುಲಯುಕ್ತಂ—ರಾಜನು ದುಷ್ಟರ ಗುಂಪಿನಿಂದ ಕೂಡಿದವನು, ಬೆಟ್ಟವು ಸರ್ಪಗಳ ಅಥವಾ ದುಷ್ಟಗಜಗಳ ಗುಂಪಿನಿಂದ ಕೂಡಿದುದು, ಶ್ಲಿಷ್ಟೋಪಮಾಲಂಕಾರ.

೮೧. ಇದರಲ್ಲಿಯೂ ಎರಡರ್ಥಗಳು:—ಭೋಗ—ಸುಖ, ಹೆಡೆ; ಕಂಚುಕ—ಕವಚ, ಪೊರೆ; ಕೌಟಿಲ್ಯ—ಕಪಟ, ವಕ್ರಭಾವ; ಮಂತ್ರ—ಆಲೋಚನೆ, ವೇದಾಕ್ಷರ; ನೆಲದಾಣ್ಮರ—ರಾಜರ, ನೆರವಿ—ಗುಂಪು, ಭುಜಗತತಿಗೆ—ಹಾವಿನಗುಂಪಿಗೆ, ಇಲ್ಲಿ ಕ್ರೂರರಾದ ರಾಜರನ್ನು ಸರ್ಪಗಳಿಗೆ ಹೋಲಿಸಿದೆ.

೮೩. ಪದಂ—ಪದವಿ, ಪೊಲ್ಲದಂ—ಪಾಪಕಾರ್ಯವನ್ನು, ಮಾಳ್ಪೊಡೆಯುಂ—ಮಾಡುವುದಾದರೂ,

೮೪. ಐಸಿರಿ—ಐಶ್ವರ್ಯ, ಒಂದಲ್—ಹೊಂದಲು, ಐದೆ—ಚೆನ್ನಾಗಿ.

೮೫. ಪದೆದು—ಇಚ್ಛಿಸಿ, ಬಗೆವೊಕ್ಕುಂ—ಮನಸ್ಸನ್ನು ಹಿಡಿದು, ತೊಟ್ಟನೆ ಬೇಗನೆ, ಮೇಧಾವಿಗಳ್—ಬುದ್ಧಿಶಾಲಿಗಳು.

೮೬. ತೊೞ್ತುರ್ಗೆ—ಸೇವಕರಿಗೆ, ನಡೆವಳಿ—ನಡತೆ, ಕಡುರಕ್ಕಸರುಂ—ಬಲಾಢ್ಯರಾದರಾಕ್ಷಸರೂ, ಛಂದಾನುವರ್ತಿ—ಅಭಿಪ್ರಾಯಾನುಸಾರವಾಗಿ ನಡೆವುದು.

೮೭. ಕನಲ್ದೊಡೆ—ಕೋಪಿಸಿಕೊಂಡರೆ, ರಾಗಿಸುವುದು—ಪ್ರೀತಿಸುವುದು, ಪಗೆವುದು—ದ್ವೇಷಿಸುವುದು, ಅಮಂತ್ರತಂತ್ರಂವಶ್ಯಂ—ಮಂತ್ರತಂತ್ರಗಳಿಲ್ಲದವಶೀಕರಣವು.

೮೮. ಕೊಡಂಕೆಗಳ್—ಕಿವಿಗಳನ್ನು, ಸಂದಪುದು—ಸಲ್ಲುವುದು, ಸಲ್ ಎಂಬ ಧಾತುವಿಗೆ ವರ್ತಮಾನಾರ್ಥಕವಾದ ದಪಪ್ರತ್ಯಯಪರವಾಗಿ ಅಲಕಾರಕ್ಕೆ ನಕಾರ ಬಂದು ಅದು ಅನುಸ್ವಾರವಾಗಿದೆ. ಇದರಂತೆ ನಿಲ್ ಕೊಲ್ ಎಂಬ ಧಾತುಗಳಿಗೂ ದದಪಪ್ರತ್ಯಯಗಳು ಪರವಾದಾಗ ಅಲಕಾರಕ್ಕೆ ನಕಾರಾದೇಶವು; ಆದರೆ ನಿಲ್ ಧಾತುವಿಗೆ ಮಾತ್ರ ನಕಾರಾದೇಶವು ವಿಕಲ್ಪ; ನಿಂದಂ ನಿಲ್ತಂ, ನಿಂದಪಂ ನಿಲ್ತಪಂ—ಎಂದು ಎರಡುರೂಪಗಳು; ಶ. ದ. ಸೂ. ೨೩೭; ಸೂತ್ರಾಂತರದಿಂದ ದಕಾರಕ್ಕೆ ತಕಾರಾದೇಶವು. ಪುಲ್ಲಕಡ್ಡಿಯುಂ ಒಂದು—ಒಂದುಹುಲ್ಲುಕಡ್ಡಿಯೂ.

೮೯. ತೊಡಂಗಳುಮಂ—ಒಡವೆಗಳನ್ನೂ, ರನ್ನ—ರತ್ನ (ಸಂ) ಇಡಂಗಡ—ಇಡುವುದಿಲ್ಲವಷ್ಟೆ. ಅರ್ಪೆಂ—ಶಕ್ತನಾಗಿರುವೆನು.

೯೦. ಅರಸುಗೈವವಂ—ರಾಜ್ಯವಾಳುವವನು, ಅರಸು ಎಂಬುದಕ್ಕೆ ಅರಸನೆಂದೂ ಅರಸತನವೆಂದೂ ಅರ್ಥವುಂಟು. ಸುಗುಣಾಂಶಮಂ—ಸ್ವಲ್ಪವಾದ ಸುಗುಣವನ್ನೂ.

೯೧. ಇರಿಪುದು—ಸೇರಿಸುವುದು, ಮಚ್ಚಂ—ಬಹುಮಾನವನ್ನು, ಪುರಸ್ಕರಿಸದುದು—ಪುರಸ್ಕಾರಮಾಡದಿರುವುದು, ಅಸವಸದಿಂ—ಬೇಗನೆ.

೯೨. ಸೇರಿಸೆ—ಸೇರಿಸಲ್ಪಡಲು, ದನಿ—ಧ್ವನಿ (ಸಂ) ಮತ್ತಂ—ಮತ್ತು, ಮಿಸುಗದು—ಶೋಭಿಸುವುದಿಲ್ಲ.

೯೩. ಗಡಂ— ಅಲ್ಲವೆ, ಗಡಂ ಗಡ ಗಡಾ—ಎಂದು ಮೂರುರೂಪವುಂಟು. (ಅವ್ಯಯ) ತರತಮಕೆ—ತಾರತಮ್ಯ, ಒಳ್ಪಿದಂ—ಒಳ್ಳೆಯವನು, ಗತಿಯುಳ್ಳವಂ—ಆಶ್ರಯಾಂತರವುಳ್ಳವನು, ಚಣಂ—ಕ್ಷಣ (ಸಂ) ಮನಂಗೊಂಡು—ಮನಸ್ಸುಳ್ಳವನಾಗಿ.

೯೪. ಗಾಜು— ಕಾಚ (ಸಂ) ವಿಕಲ್ಪದೆ—ವ್ಯತ್ಯಾಸದಿಂದ, ಬಗೆಗುಂ—ಗುಂಕುಂ ಎಂಬುವು ಎಲ್ಲಾ ಲಿಂಗವಚನಕಾಲಗಳಲ್ಲಿಯೂ ಸಮವಾಗಿ ವರ್ತಿಸುವುವು. ಶ. ದ. ಸೂ ೨೨೭. ಸೇವಕನೆನಿಪ್ಪ ಪೆಸರವನುಂ—ಸೇವಕನೆಂದು ಹೆಸರಿಟ್ಟುಕೊಂಡಿರುವವನೂ.

೯೫. ಮಾರನ್ನಂ—ಮಹಾರತ್ನವು, ಪರಿಕಿಪರ್— ಪರೀಕ್ಷಿಸುವವರು, ಗೋವಳ—ಗೋಪಾಲ (ಸಂ) ಇಂದುಕಾಂತ—ಚಂದ್ರಕಾಂತ, ಮೂಗವಡೆಗೆ—ಮೂರು ಕವಡೆಗಳಿಗೆ.

೯೬. ಮಾಮಾಣಿಕಕಂ—ಮಹತ್ತಾದ ಮಾಣಿಕ್ಯಕ್ಕೂ.

೯೭. ಕೃತಿದಕ್ಷರ—ಕೆಲಸದಲ್ಲಿ ಸಮರ್ಥರಾದವರ.

೯೮. ಪರಸ್ಪರಾನುಗತಂ—ಒಂದನ್ನೊಂದು ಹತ್ತಿಕೊಂಡಿರುವುದು.

೯೯. ತಪನನುಂ—ಸೂರ್ಯನೂ, ಇಲ್ಲಿ ಉತ್ತಮರಾದ ಸೇವಕರಿಗೂ ಸೂರ್ಯಕಿರಣಗಳಿಗೂ; ರಾಜನಿಗೂ ಸೂರ್ಯನಿಗೂ ಹೋಲಿಕೆ. ಪ್ರಕಾಶದಿಂದ ಲೋಕವೆಲ್ಲವನ್ನೂ ಅನುಗ್ರಹಿಸುವ ಸೂರ್ಯಕಿರಣಗಳಿಗೆ ಸಮರೆನಿಸಿದ ಲೋಕೋಪಕಾರಕರಾದ ಉತ್ತಮಸೇವಕರು ಹತ್ತಿರಿಲ್ಲದೆ ರಾಜನು ಶೋಭಿಸನೆಂದು ತಾತ್ಪರ್ಯ.

೧೦೦. ಅರಂಗಳಿಂ—ಅರೆಕಾಲುಗಳಿಂದ ಇಂತುಟು—ಹೀಗೆ, ಕುಂಬಿಣಿಯೊಳ್—ಭೂಮಿಯಲ್ಲಿ, ಕುಂಭಿನೀ (ಸಂ) ವೃತ್ತಿಚಕ್ರಂ—ಚಕ್ರಸಮವಾದಸ್ಥಿತಿ.

೧೦೧. ಸಿರದೊಳ್—ತಲೆಯಲ್ಲಿ, ಸ್ನೇಹದಿನೆ—ಸ್ನೇಹದಿಂದಲೆ, ಸ್ನೇಹಶಬ್ಧಕ್ಕೆ ಜಿಡ್ಡು ಮತ್ತು ಪ್ರೀತಿಯೆಂದರ್ಥ, ಪೊರೆದ—ಪೋಷಿಸಲ್ಪಟ್ಟ, ಕುರುಳುಂ—ತಲೆಗೂದಲೂ,

೧೦೨. ಪರಿತೋಷಿತರ್—ಸಂತೋಷಪಡಿಸಲ್ಪಟ್ಟವರು, ಹರಣಂಗಳ—ಪ್ರಾಣಗಳನ್ನು;

೧೦೩. ಚದುರರ್—ಜಾಣರು, ಕುಲೀನರ್—ಸತ್ಕುಲಪ್ರಸೂತರು, ಅದಟರ್—ಪರಾಕ್ರಮಶಾಲಿಗಳು, ಅರ್ಪರ್—ಶಕ್ತಿಯುಳ್ಳವರು. ಒಲವಾಂತವರ್—ಪ್ರೀತಿಯುಳ್ಳವರು.

೧೦೪. ಪರಮಮಂ—ಉತ್ತಮ, ಹಿತಂ—ಹಿತಕರ, ದುಷ್ಕರಂ—ಮಾಡಲಸಾಧ್ಯವಾದ, ಎಸಕಮಂ—ಕಾರ್ಯವನ್ನು, ಒಡರ್ಚಿ—ಮಾಡಿ, ಅದೇನುಮಂ—ಏನನ್ನೂ, ನೆರವುಳ್ಳಂ—ಸಾಹಾಯ್ಯವುಳ್ಳವನು. ಅಂತಹ ಸೇವಕನೇ ರಾಜನಿಗೆ ಸಹಾಯವಾದವನೆಂದರ್ಥ.

೧೦೫. ಮನಃಪ್ರೇಯಸಿ—ಮನೋವಲ್ಲಭೆ.

೧೦೬. ಕರೆಯದೊಡಂ—ಬಾರೆಂದು ಕರೆಯಲ್ಪಡದಿದ್ದರೂ; ಸುರಿಯುವುದೆಂಬರ್ಥವಾದಾಗಲೂ ಕಳಂಕವೆಂದು ನಾಮವಾಚಕವಾದಾಗಲೂ ಕಜೆ. ಪಡಿಯೊಳ್—ಬಾಗಿಲಲ್ಲಿ, ಬೆಸನಾಂತ—ಅಪ್ಪಣೆಪಡೆದ.

೧೦೭. ಬೆಸಂಬಡೆಯದೊಡಂ—ಅಪ್ಪಣೆಪಡೆಯದಿದ್ದರೂ, ಪಿಂಗಿಸಲ್—ನಿವಾರಿಸಲು.

೧೦೮. ತೊನೆಯದೆ—ತೂಗಾಡದೆ, ಕುದಿಯದೆ—ತಪಿಸದೆ, ಅಡಂಗಿರ್ಪಂ—ಅಡಗಿಕೊಂಡಿರುವನು.

೧೦೯. ಅಱಸುಡಿ—ತುಚ್ಛವಾದ ಮಾತು, ಕನಲ್ದು—ಕೋಪಿಸಿಕೊಂಡು, ಪೊಲ್ಲೆಣಿಸನೊ—ಕೆಟ್ಟುದನ್ನು ಚಿಂತಿಸನೊ.

೧೧೦. ಬಸನಾಗದೆ—ವಶನಾಗದೆ, ಆವಗಂ—ಯಾವಾಗಲೂ.

೧೧೧. ಸಂಗರಸಂರಂಭ—ಯುದ್ಧದ ಸಡಗರ, ಭರದಿಂ—ಅತಿಶಯದಿಂದ.

೧೧೨. ಎಸಕಂಗಳೊಳ್—ಕಾರ್ಯಗಳಲ್ಲಿ, ಸೀಮೆ—ರಾಷ್ಟ್ರ, ಸಸಿವೊಲ್—ಚಂದ್ರನಂತೆ.

೧೧೩. ಪಾವಕನಲ್ಲಿ—ಅಗ್ನಿಯಲ್ಲಿ, ತೊವಲ್—ಚಕ್ಕಳ, ಕೃಶಭಾವಮಂ—ಕೃಶತ್ವವನ್ನು, ರಾಜ್ಯಕಾಮಿ—ರಾಜ್ಯವಿರಬೇಕೆಂದು ಅಪೇಕ್ಷಿಸುವವನು.

೧೧೪. ಪಟ್ಟೆ—ರೇಷ್ಮೆ, ದೂರ್ವೆ ತಾಂ ಗೋವರೊಮದೆ—(ಗೋವಿನ ರೋಮವು ಬಿದ್ದೆಡೆಯಲ್ಲಿ ಗರಿಕೆ ಹುಟ್ಟುವುದೆಂದು ಹೇಳುವರು) ಸುಧಾಂಶು—ಚಂದ್ರ, ಇಂದೀವರಂ—ಕನ್ನೈದಿಲೆ, ಕಾಷ್ಠದಿಂ—ಕಟ್ಟಿಗೆಯಿಂದ, ಪಿತ್ತದೆ—ಪಿತ್ತಕೋಶದಿಂದ.

೧೧೫. ಬೇಡಿದಪರ್—ಅಪೇಕ್ಷಿಸುವರು. ಒಳ್ಪಂ—ಒಳ್ಳೆಯದನ್ನು.

೧೧೬. ನೆರಪಿದ—ಕೂಡಿಸಿಟ್ಟ, ಎರ್ಕೆ—ಎಕ್ಕ.

೧೧೭. ದೇವ—ಒಡೆಯನೆ, ಓಸರಿಸದಿರೆ—ತಿರಸ್ಕರಿಸದಿರು.

೧೧೮. ಏನಾನುಂ—ಯಾವುದಾದರೂ, ಸಭಾಂತರದಲ್ಲಿ—ಸಭಾಮಧ್ಯದಲ್ಲಿ, ದೇವಗುರು—ಬೃಹಸ್ಪತಿ.

೧೧೯. ಆಱುಗಿವಿವೊಕ್ಕ—ಆರುಕಿವಿಗಳಿಗೆ ಬಿದ್ದ, ಆಲೋಚನೆ; ಮೂವರು ಸೇರಿ ಆಲೋಚಿಸಿದುದು. ಪಱಿಗುಂ—ಹಾಳಾಗುವುದು. ನಾಲ್ಗಿವಿಗೆ ಬಿಱ್ದುದು—ಇಬ್ಬರು ಸೇರಿ ಆಲೋಚಿಸಿದುದು. ಆಱುಗಿವಿಯಂ ಪುಗಿಸಬಾರದು—ಆಲೋಚನೆ ಇಬ್ಬರಲ್ಲಿಯೇ ಇರಬೇಕೆಂದರ್ಥ.

೧೨೦. ತನೂಜರೊಳ್—ಮಕ್ಕಳಲ್ಲಿ, ಗುಪ್ತಂಗೆಯವೇೞ್ಕುಂ—ಮುಚ್ಚಬೇಕು, ನೀಡುಂ—ಹೆಚ್ಚಾಗಿ, ನಯಂಗೊಂಡು—ವಿನಯವನ್ನು ಹೊಂದಿ, ಬೇಡಲೊಡಂ—ಬೇಡಲು, ಸತಿಸಪ್ತಮ್ಯರ್ಥದಲ್ಲಿ ಅಲೊಡಂ ಎಂದು ಸೇರಿದೆ "ಚಿಂತಿಸಿ ತಕ್ಕುದಂ ತಗದುದಂ ಪೇೞಲ್ಕೆ ವೇೞ್ಕುಂಗಡಾ" ಎಂಬಲ್ಲಿ ತಕ್ಕುದಂ ತಗದುದಂ ಚಿಂತಿಸಿ ಪೇೞಲ್ಕೆ ವೇೞ್ಕುಂಗಡಾ—ಎಂದನ್ವಯ. ತಗದುದಂ—(ಹೇಳಲು) ಯೋಗ್ಯವಲ್ಲದುದನ್ನು, "ಇದು ಹೇಳತಕ್ಕುದು, ಹೇಳಬಾರದುದು" ಎಂಬುದನ್ನು ಪರ್ಯಾಲೋಚಿಸಿ ಹೇಳಬಹುದಾದುದನ್ನು ಹೇಳಬೇಕೆಂದು ತಾತ್ಪರ್ಯ.

೧೨೧, ಕವಡು—ಕಪಟ (ಸಂ) ನಚ್ಚನ—ನಂಬುಗೆಯು, ಅಥವಾ ಪ್ರೀತಿಯು; ನಲ್ಲೊಡೆಯನೊಳಂ—ಉತ್ತಮನಾದಸ್ವಾಮಿಯಲ್ಲಿಯೂ, ಅಱಲಂ—ದುಃಖವನ್ನು.

೧೨೨ ಓವದಕತದಿಂ—ರಕ್ಷಿಸದ ಕಾರಣದಿಂದ, ಕಿಡುಗುಂ—ಕೆಡುವುದು, ಘುೞಿಲನೆ—ಥಟ್ಟನೆ, ಪಿಸುಣಿಂ—ಚಾಡಿಯಿಂದ, ಪಿಶುನನ ಭಾವ ಪಿಸುಣ್; ಕೆಳೆತನಂ—ಕೆಳೆಯನಭಾವ, ಸ್ನೇಹ; ಕೆಳೆ—ಎಂಬುದಕ್ಕೆ ಸ್ನೇಹಿತ ಸ್ನೇಹಿತನಭಾವ ಎಂದು ಎರಡರ್ಥಗಳೂ ಉಂಟು.

೧೨೩. ಸಂಗರದೆ—ಯುದ್ಧದಲ್ಲಿ, ನಾನಾರ್ಥಃ—ಪ್ರತಿಜ್ಞೆ, ಯುದ್ಧ, ಜ್ಞಾನ; ವಿಪತ್ತು. ಒದವಲೊಡಂ—ಪ್ರಾಪ್ತನಾಗಲು, "ಒದವು—ಪ್ರಾಪ್ತೌ" ಎಂದು ಧಾತ್ವರ್ಥ; ಪಿಂಗದು—ತೊಲಗುವುದಿಲ್ಲವೊ, ಪಿಂಗು—ಅಪಸರಣೆ, ಎಂದು ಧಾತ್ವರ್ಥ; ಲೋಗರ—ಜನಗಳ; ಎನಿಸಂ ಗಡ = ಎಂದು ಅನ್ವಯವು.

೧೨೪. ಬಿದಿ—ದೈವವು; ನಿದಾಘಂ—ಗ್ರೀಷ್ಮವು; ಆದಮೆ—ವಿಶೇಷವಾಗಿಯೆ; ಉರ್ಕಿನೊಳ್—ಉದ್ಧತಭಾವದಿಂದ; ತೃತೀಯಾರ್ಥದಲ್ಲಿ ಸಪ್ತಮಿ ಬಂದಿದೆ.

೧೨೫. ಎಡರೊಳ್—ಕಷ್ಟದಲ್ಲಿ, ಕಡಂಗದಂ—ಹಿಗ್ಗದವನು, ಅಂಜದ—ಹೆದರದವನು, ತೊಡಮುಂ—ಅಲಂಕಾರವೂ, ಆರಯ್ಯೆ—ವಿಚಾರಮಾಡಲು, ವಿರಲಂ—ಅಪೂರ್ವ.

೧೨೬. ಅನತಿಗೆಯ್ಯುತೆ—ಬಗ್ಗುತ್ತ, ಶಕ್ತಿವಿಹೀನತೆಯಿಂ—ಶಕ್ತಿಯಿಲ್ಲದುದರಿಂದ, ಶಕ್ತಿವಿಹೀನತೆಯಿಂ ಅನತಿಗೆಯ್ಯುತೆ = ಎಂದನ್ವಯವು; ಅಸಾರದಿಂದೆ—ಸ್ಥಿರಾಂಶವಿಲ್ಲದುದರಿಂದ, ಲಘು—ಅಲ್ಪನು ಮತ್ತು ಹಗುರನಾದುದು, ಮಾನಂ—ಚಿತ್ತಸಮುನ್ನತಿ = ಎಂದರೆ ಮನಸ್ಸು ದೊಡ್ಡತೆರದಲ್ಲಿರುವುದು, ಮತ್ತು ತೂಕ, ಒರ್ತೆರಂ—ಒಂದೇರೀತಿಯುಳ್ಳವನು ಮತ್ತು ಒಂದೇರೀತಿಯುಳ್ಳುದು ; ಅಶಕ್ತನಾದುದರಿಂದ ಎಲ್ಲರಿಗೂ ನಮಿಸುತ್ತ ಅಸಾರನಾದುದರಿಂದ ಅಲ್ಪನೆನಿಸಿ ಮಾನವಿಲ್ಲದೆ ಇರುವ ಮನುಷ್ಯನು, ಶಕ್ತಿಯಿಲ್ಲದೆ ಬಗ್ಗುತ್ತ ಒಳಗೆ ಜೀವಾಳವೇನೂ ಇಲ್ಲದೆ ಹಗುರವಾಗಿ ತೂಕಕ್ಕೆಬಾರದ ಹುಲ್ಲಿಗೆ ಸಮನಾದವನೆಂದಭಿಪ್ರಾಯವು.

೧೨೭. ಪ್ರತಾಪಂ—ಪರಾಕ್ರಮ ಮತ್ತು ಹೆಚ್ಚಾದ ಸುಡುವಿಕೆ, ದೃಢಭಾವಂ—ಧೈರ್ಯ ಮತ್ತು ಗಟ್ಟಿಯಾಗಿರುವಿಕೆ, ಪಚ್ಚಕೆ—ಒಡವೆಗೆ, ದೊರೆಯೆನಿಪನ—ಸಮನೆನಿಸುವನ, ಅರಗಿನ ಒಡವೆ ನೋಡಲು ಸೊಗಸಾಗಿದ್ದರೂ ಬಿಸಿ ತಗಲಿದ ಮಾತ್ರಕ್ಕೆ ಕರಗಿಹೋಗುವಂತೆ ಪುರುಷನು ಸ್ಫುರದ್ರೂಪಿಯಾಗಿದ್ದರೂ ಪರಪ್ರತಾಪಕ್ಕೆ ಹೆದರಿ ಥಟ್ಟನೆ ಧೈರ್ಯಗೆಡುವುದಾದರೆ ಅಂತವನ ಬರಿಯರೂಪಿನಿಂದೇನು ಫಲವೆಂದಭಿಪ್ರಾಯ.

೧೨೮. ಮೇದೋಮಾಂಸದಿಂದೆ—ಕೊಬ್ಬಿನಿಂ ಕೂಡಿದ ಮಾಂಸದಿಂದ, ತೊವಲುಂ—ಚರ್ಮವೂ.

೧೨೯. ಆರಯ್ದುಪನೋ—ವಿಮರ್ಶಿಸುವನೋ, ತುರಿಪದಿಂ—ವೇಗದಿಂದ, ಅದವಟಲ್ಗೆ—ದುಃಖಕ್ಕೆ.

೧೩೦. ತುರಗಂ—ಕುದುರೆ, ಕೈದುಂ—ಆಯುಧವೂ, ಸರಸತಿ—ಸರಸ್ವತಿ (ಸಂ) ಮಾನಿಸಂ—ಮನುಷ್ಯ, ಮಾನುಷ (ಸಂ) ತಕ್ಕರ್—ಯೋಗ್ಯರು, ತಗದರುಂ—ಅಯೋಗ್ಯರೂ, ಕುದುರೆ ಆಯುಧ ಮುಂತಾದುವು ಯೋಗ್ಯನ ಕೈಗೆ ಸಿಕ್ಕಿದರೆ ಯೋಗ್ಯವೆನಿಸುವುವು. ಅಯೋಗ್ಯನ ಕೈಗೆ ಸಿಕ್ಕಿದರೆ ಅಯೋಗ್ಯವೆನಿಸುವುವು.

೧೩೧. ಸುಗುಣಿಗೆ—ಗುಣಾಢ್ಯನಾದ, ತೊಟ್ಟಿಂಗೆ—ಸೇವಕನಿಗೆ, ಶಂಕೆ—ಭಯ, ಪುಗಲಾರ್ಪಂ—ಪ್ರವೇಶಿಸಬಲ್ಲನು, ಪೆರ್ವಾವಿನ—ಮಹಾಸರ್ಪದ = ಪಿರಿದು + ಪಾವು; ಮೊಗ—ಮುಖ (ಸಂ) ಆರ್ಪಂ—ಶಕ್ತನೆನಿಸುವನು.

೧೩೨. ಸುಕರಂ—ಸುಖವಾಗಿ ಮಾಡಬಹುದಾದುದು, ದುಷ್ಕರಂ—ಕಷ್ಟಪಟ್ಟು ಮಾಡಬೇಕಾದುದು, ಸಿರಿಬಯಸ—ಸಂಪತ್ತನ್ನು ಬಯಸುವ, ಕೆಲದೊಳ್—ಸಮೀಪದಲ್ಲಿ.

೧೩೩. ನೆಱೆ—ಚೆನ್ನಾಗಿ, ಅವರ್—ಅರಸಿನಿಂದ ಮೊದಲು ಬಹುಮಾನಿತರಾಗಿ ಬಳಿಕ ಅವಮಾನಿಸಲ್ಪಟ್ಟವರು, ಇರದೆ—ಸುಮ್ಮನಿರದೆ.

೧೩೪. ಅದಟಗರ್—ಪರಾಕ್ರಮಶಾಲಿಗಳು, ನಂಬದವರ್—ಇತರರನ್ನು ನಂಬದೆ ಇರುವವರು, ಅವಧ್ಯರ್—ವಧಿಸಲ್ಪಡಲು ಅಗದವರು, ವಲಂ—ನಿಶ್ಚಯ.

೧೩೫. ಏೞ್ಗೆಯುಂ—ಅಭ್ಯುದಯವೂ, ಆಯುಂ—ಆಯುಸ್ಸೂ (ಹತ್ತನೆಯ ಪದ್ಯದ ಟಿಪ್ಪಣಿವನ್ನು ನೋಡಿ) ಸೊಗ—ಸುಖ (ಸಂ) ಸಮನಿಸುಗೆ—ಪ್ರಾಪ್ತವಾಗಲಿ, ನೆಗೞ್ದ—ಪ್ರಸಿದ್ಧನಾದ.

೧೩೬. ನೆಗೞ್ದಂ—ಮಾಡಿದನು, ವೃತ್ರವಧಮಂ—ವೃತ್ರಾಸುರನವಧೆಯನ್ನು. ಎಂಗುಂ—ಹೇಳುವರು.

೧೩೭. ಬಸಂ—ಅಧೀನನು, ಬಗೆಗೊಳಿಸುತೆ—ಮನಸ್ಸಿನಲ್ಲಿ ಉಂಟುಮಾಡುತ್ತ, ಸಗ್ಗಿಗರೊಡೆಯುಂ—ದೇವೇಂದ್ರನು, ಗಬ್ಬ—ಗರ್ಭ (ಸಂ).

೧೩೮. ಕಡುನೇಹಿಗರ್—ಬಹು ಸ್ನೇಹವುಳ್ಳವರು, ಎಡೆಗೊಳುತುಂ—ಅನುವರ್ತಿಸುತ್ತ, ಸಮಂತು—ಚೆನ್ನಾಗಿ, (ಅವ್ಯಯ) ಸಮನಿಪ—ಪ್ರಾಪ್ತವಾಗುವ.

೧೩೯. ಎಡೆವಿಡದ—ಸಂತತನಾದ, ಭೋಗ್ಯಂ—ಭೋಗಿಸಲ್ಪಡಲು ತಕ್ಕವನು, ಅದಱನೆ—ಅದುದರಿಂದಲೆ, ಎಳಸುವರಲ್ತೇ—ಅಪೇಕ್ಷಿಸುವರಲ್ಲವೆ.

೧೪೦. ಪೂರುಷಂ—ಪುರುಷನು, ಆರ್ಪ—ಶಕ್ತನಾದ, ಬೆಜ್ಜಂ—ವೈದ್ಯ (ಸಂ) ಆರಯಲ್—ವಿಚಾರಮಾಡಿ ನೋಡಲು, ಭೂರಮಣನುಂ—ಅರಸನೂ.

೧೪೧. ಸನಿಹದೊಳ್—ಸಮೀಪದಲ್ಲಿ, ಎಳ್ಳನಿತಂ—ಎಳ್ಳಷ್ಟನ್ನು, ಅನೃತಮಂ—ಸುಳ್ಳನ್ನು, ಋತ ಎಂದರೆ ಸತ್ಯ, ಅದಲ್ಲದುದು ಅನೃತ (ಅಸತ್ಯ) ಒಯ್ಯನೆ—ಬೇಗನೆ, ಕಿಡುವಂ—ಹಾಳಾಗುವನು, ಪೆರ್ಮೆಯೊಡೆಯಂ—ಪೆರ್ಮೆಯುಳ್ಳವನು, ಉಂಟು ಎಂಬರ್ಥದಲ್ಲಿ ಒಡೆಯ ಎಂಬ ತದ್ಧಿತಪ್ರತ್ಯಯ ಹತ್ತಿರುವುದು, ಶ. ದ. ಸೂ ೫೦೬.

೧೪೨. ನರಪಂ—ರಾಜನು, ಅಱವುದು—ತಿಳಿಯಬೇಕು, ಕೊಂಕಿಂದೆ—ಕುಟಿಲಭಾವದಿಂದ.

೧೪೩. ಚೆಚ್ಚರಂ—ಬೇಗನೆ, ಈಗುಂ—ಕುಡುವನು, ಅನ್ಯಜನ್ಮದೊಳ್—ಮತ್ತೊಂದು ಜನ್ಮದಲ್ಲಿ.

೧೪೪. ಎಱಗಿದ—ಬಗ್ಗಿದ, ಮೆಲ್ವುಲ್ಗಳಂ—ಗರಿಕೆಗಳನ್ನು = ಮೆಲ್ಲಿತು + ಪುಲ್, ಅಳವಿಂ—ಶಕ್ತಿಯಿಂದ, ಬಿಱುಗಾಳಿ = ಬೆಟ್ಟಿತು + ಗಾಳಿ, ಘನಚಿತ್ತರ್ಕಳ—ಮಹಾಶಯರ (ಆರುವಿನಮೇಲೆ ಕಳಾಗಮಬಂದಿದೆ) ಮೆಱೆವಂ—ತೋರಿಸುವನು.

೧೪೫. ಬಸರ್ವ—ಸುರಿವ, ಕಟ—ಕಪೋಲ, ಎಱಪ—ಎಱಗುವ, ಅರಡಿಗಳ—ತುಂಬಿಗಳ, ಹತಿವಡೆದುಂ = ಹತಿಯುಂ + ಪಡೆದುಂ, ಹತಿ—ಹೊಡೆತ, ಮದಕರಿ—ಮದಿಸಿದಾನೆ, ಕನಲದು—ಕೋಪಗೊಳ್ಳದು, ಬಲ್ಸು—ಬಲ, ಬಲಿ—ಬಲಿಷ್ಠನು, ಕನಲ್ದಪಂ—ಕೋಪಗೊಳ್ಳುವನು, (ವರ್ತಮಾನಾರ್ಥದಲ್ಲಿ ದಪಪ್ರತ್ಯಯ ಸೇರಿದೆ)

೧೪೬. ಸೊಗಯಿಪ—ಒಪ್ಪುವ, ಕಜ್ಜಂ—ಕಾರ್ಯ (ಸಂ) ಪೇರಾನೆ = ಪಿರಿದು + ಆನೆ.

೧೪೭. ಶಿಖರಿಯ—ಬೆಟ್ಟದ, ಪರಿಯಂತಮಂ—ಮೂಲವನ್ನು, ಪರ್ಯಂತ (ಸಂ) ಅಂತರಮಂ—ಒಳಭಾಗವನ್ನು, ಎಂತುಂ—ಎಷ್ಟು ಪ್ರಯತ್ನಮಾಡಿದರೂ.

೧೪೮. ಸಾರಮನೊಳಕೊಂಡುದುಂ ಅವಕ್ರಂ ಅಚ್ಛಿದ್ರಂ ಉಱೆಪರೀಕ್ಷಿತಂ = ಎಂಬುವು ಮಂತ್ರಿಕುಲದೆ ಎಂಬುದಕ್ಕೂ ನಲ್ಗಂಬಸಾಲಿಂ ಎಂಬುದಕ್ಕೂ ವಿಶೇಷಣಗಳೆನಿಸಿರುವುವು. ತವೆ—ಚೆನ್ನಾಗಿ (ಅವ್ಯಯ) ಸಾರಮನೊಳಕೊಂಡುದು—ಸಾರಗುಣವುಳ್ಳುದು ಮತ್ತು ಒಳಗೆ ಚೇಗುಳ್ಳುದು; ಅವಕ್ರಂ—ಋಜುಸ್ವಭಾವವುಳ್ಳುದು ಮತ್ತು ನೆಟ್ಟಗಿರುವುದು; ಅಚ್ಛಿದ್ರಂ—ಕುಂದುಗಳಿಲ್ಲದುದು ಮತ್ತು ರಂಧ್ರಗಳಿಲ್ಲದುದು; ಉಱೆ—ಬಹುವಾಗಿ, ಪರೀಕ್ಷಿತಂ—ಪರೀಕ್ಷಿಸಲ್ಪಟ್ಟುದು, ನಲ್ಗಂಬಸಾಲಿಂ—ಉತ್ತಮವಾದ ಕಂಬಗಳಸಾಲಿನಿಂದ; ಗಟ್ಟಿಯಾಗಿ ನೆಟ್ಟಗೆ ನೇರವಾಗಿ ಒಳಗೆ ರಂಧ್ರಗಳೇನೂ ಇಲ್ಲದೆ ತಿಳಿದವರಿಂದ ಚೆನ್ನಾಗಿ ಪರೀಕ್ಷಿಸಲ್ಪಟ್ಟು ಕಂಗೊಳಿಸುವ ಉತ್ತಮವಾದ ಕಂಬಗಳಿಂದ ಮನೆಯು ಹೇಗೆ ಸ್ಥಿರವಾಗಿ ನಿಂತಿರುವುದೋ ಹಾಗೆ ಸಾರಗುಣಾಢ್ಯರೂ ಋಜುಸ್ವಭಾವರೂ ಕುಂದುಗಳೇನೂ ಇಲ್ಲದವರೂ ಚೆನ್ನಾಗಿ ಪರೀಕ್ಷಿಸಲ್ಪಟ್ಟವರೂ ಆದ ಮಂತ್ರಿಗಳಿಂದ ರಾಜ್ಯವು ಸ್ಥಿರವಾಗಿ ನಿಂತಿರುವುದೆಂದು ತಾತ್ಪರ್ಯ.

೧೪೯. ಭೇದದೆ—ಭೇದೋಪಾಯದಲ್ಲಿ, ಚದುರಂ—ಚಾತುರ್ಯವೂ, (ಚದುರನ ಭಾವ) ಸನ್ನಿಜರಂ—ಸನ್ನಿಪಾತಜ್ವರ, ಜಾಣಂ—ಜಾಣತನವೂ, ಪದುಳದಿಂ—ಕ್ಷೇಮದಿಂದ.

೧೫೦. ಪಾವಕನುಂ—ಅಗ್ನಿಯೂ, ಹಿಮಸಮಯದೆ—ಹಿಮಕಾಲದಲ್ಲಿ, ಆಲೋಕಂ—ದರ್ಶನವು, ಕ್ಷಮೆಯಾಣ್ಮನ—ರಾಜನ (ಕ್ಷಮೆ—ಭೂಮಿ) ಅಮೃತಂ—ಅಮೃತದಂತೆ ಆನಂದಪ್ರದವಾದುದು ; ಇನಿವಾಲೂಟಂ—ಇನಿದು+ಪಾಲ್, ಆದರ ಊಟವು.

೧೫೧. ಬೇಂಟೆ—ಬೇಟೆ ಪೆಱಂ—ಇತರನು, ಮಿಗ—ಮೃಗ (ಸಂ) ಗೆಯ್ಯಲ್—ಮಾಡಲು, ಗೆಯ್ಯಲ್ ಗೆಯಲ್ ಎಂದು ಆರಯ್ ಧಾತುವಿನಂತೆ ಗೆಯ್ ಧಾತುವಿಗೂ ಯಕಾರದ್ವಿತ್ವವನ್ನು ವಿಕಲ್ಪವಾಗಿ ಹೇಳಬಹುದು. ಅರ್ಥಮಂ—ಧನವನ್ನು.

೧೫೨. ಉರ್ಕಿನಿಂದೆ—ಉದ್ಧತಭಾವದಿಂದ, ಭೂಭೋತ್ತಮನೊಲವಿಂ—ಮಹಾರಾಜನಪ್ರೀತಿಯಿಂದ, ಮಾನ್ಯತೆವೆತ್ತು—ಮಾನ್ಯತೆಯಂ+ಪೆತ್ತು=ಬಹುಮಾನವನ್ನು ಹೊಂದಿ, ದಂತಿಲಂಬೊಲ್—ದಂತಿಲನಂತೆ, ಅಕಾರಾಂತವಾದ ಶಬ್ದಕ್ಕೆ ವೋಲ್ ಪರವಾದಾಗ ಬಿಂದುವೂ ವಕಾರಕ್ಕೆ ಬಕಾರವೂ ಬರುವುದು.

೧೫೩. ಒಳ್ಳಿತಂ—ಒಳ್ಳೆಯದನ್ನು, ಜನತತಿಗೆ—ಜನಸಮುದಾಯಕ್ಕೆ, ವೆಗ್ಗಳಂ—ಅಧಿಕ, ಸುದುರ್ಲಭಂ—ಅತ್ಯಂತದುರ್ಲಭನು.

೧೫೪. ಒಡರಿಸಲಾಱದವಂ—ಮಾಡಲು ಶಕ್ತಿಯಿಲ್ಲದವನು, ಕಡು—ಹೆಚ್ಚಾಗಿ=(ಇದು ಅವ್ಯಯ, ಕಡಿದು ಎಂಬುದಕ್ಕೆ ಉತ್ವ ಬರುವ ಸಮಾಸಪದವಲ್ಲ) ಹುರಿವೋಡಂ—ಹುರಿಯುವ ಓಡನ್ನು.

೧೫೫. ಪಗಲಿನೊಳ್=ಪಗಲ್ ಇರುಳ್ ಎಂಬ ಶಬ್ದಗಳಿಗೆ ಇನಾಗಮ ವಿಕಲ್ಪ, ಏನಂ ಎಂಬುದು ಬಯಸುವನೊ ನೋೞ್ಪನೋ ವಿರಚಿಪನೋ ಎಂಬ ಮೂರು ಕ್ರಿಯೆಗಳಲ್ಲಿಯೂ ಕರ್ಮವಾಗಿ ಅನ್ವಯಿಸುವುದು. ಅವಱ—ಅವುಗಳ.

೧೫೬. ಎನಸುಂ—ಅಧಿಕವಾಗಿ, ನಲ್ಲದೊ—ಒಳ್ಳೆಯದೊ, ಪೊಲ್ಲದೊ—ಕೆಟ್ಟದೊ, ಭಾವಂ—ಅಭಿಪ್ರಾಯ, ಸೊರ್ಕಿನಿಂದೆ—ಮತ್ತತೆಯಿಂದ, ಬೈತಿರೆಯುಂ—ಬಚ್ಚಿಡಲ್ಪಟ್ಟರೂ.

೧೫೭. ಶಂಬರ ನಮುಚಿ ಬಲಿ ಕುಂಭೀನಸಿಯೆಂಬವರು ಮಾಯಾಪ್ರಯೋಗದಲ್ಲಿ ಪ್ರಸಿದ್ಧಿಗೊಂಡವರು, ಐದೆ—ಚೆನ್ನಾಗಿ.

೧೫೮. ಅಳ್ವರ್—ಆಳುವರು, ಮೃಗನೇತ್ರಿಯರ್—ಸ್ತ್ರೀಯರು

೧೫೯. ಕವಿ—ಶುಕ್ರಾಚಾರ್ಯ, ಅಮರಾಚಾರ್ಯಂ—ಬೃಹಸ್ಪತಿ.

೧೬೦. ಒರೆದಪರೋ—ಹೇಳುವರೊ, ವಸುಮತಿಯೊಳ್—ಭೂಮಿಯಲ್ಲಿ, ಓವುವುದು—ರಕ್ಷಿಸುವುದು.

೧೬೧. ಸೊರ್ಕಿಸುವರ್—ಮದಗೊಳಿಸುವರು, ತರ್ಜಿಸುವರ್—ಹೆದರಿಸುವರು, ಅಱಲಿಪರ್—ದುಃಖಪಡಿಸುವರು, ಆಡಿಪರ್—ಕ್ರೀಡೆಗೊಳಿಸುವರು, ಮೆಲ್ಪಿನ—ಮೃದುಭಾವದ.

೧೬೨. ನಂಜಿನ-ವಿಷದ, ಅತಿಮಂಜುಲವಿಭ್ರಮದೆ—ಅತ್ಯಂತಮನೋಹರವಾದ ವಿಲಾಸದಿಂದ, ಗುಂಜಾಫಲ—ಗುರುಗುಂಜಿ.

೧೬೩. ಮದಿಸಂ—ಮದಿಸದೆ ಇರುವನು, ಶ್ರೀವಡೆದ—ಶ್ರೀಯಂ+ಪಡೆದ=ಸಂಪತ್ತನ್ನು ಹೊಂದಿದ, ವಿಷಯಾಸಕ್ತಂಗೆ—ಸ್ರಕ್ಚಂದನವನಿತಾದಿವಿಷಯಸುಖದಲ್ಲಿ ಆಸಕ್ತನಾದ, ಹೃತವಲ್ತು—ಅಪಹರಿಸಲ್ಪಟ್ಟುದಲ್ಲ. ಅಕ್ಷಿಗೆ ಆಸ್ಪದಂ—ಕಣ್ಣಿಗೆ ಗೋಚರ, ಎರೆವಂಗೆ—ಯಾಚಿಸುವ, ಪೆಂಪು—ಪಿರಿಯನಭಾವ (ಗೌರವ) ಒಳ್ಪಂ—ಒಳ್ಳಿದನಭಾವವನ್ನು (ಒಳ್ಳೆಯತನ) ಖಳಸಂಗಮೆಂಬ ಬಲೆಯೊಳ್ ಬಿದ್ದಂ ಆವಂ ಒಳ್ಪಂ ಐದಿದಂ—ಎಂದನ್ವಯ.

೧೬೪. ಜೂದುಗನೊಳ್—ಜೂಜುಗಾರನಲ್ಲಿ, ಉರಗನೊಳ್—ಸರ್ಪದಲ್ಲಿ, ಹರಿಣ ಮುಂತಾದ ಶಬ್ದಗಳಿಗೆ ಬರುವಂತೆ ಇದಕ್ಕೂ ನಕಾರಾಗಮಬಂದಿದೆ. ಧೃತಿ—ಧೈರ್ಯ, ಕಾತರನೊಳ್—ಅಂಜುಕುಳಿಯಲ್ಲಿ, ಅಱಿವು—ಜ್ಞಾನ, ದೃಢಮೈತ್ರಿ—ಸ್ಥಿರವಾದ ಸ್ನೇಹ, ಕಂಡು ಕೇಳ್ದುದುಂ—ಕಂಡುದೂ ಕೇಳಿದುದೂ ಎಂದರ್ಥ. ಎಂತೆಂದರೆ—ಶಬ್ದಮಣಿದರ್ಪಣದಲ್ಲಿ=ಬರೆಪಂಬೊಕ್ಕುಚ್ಚರಿಸಲ್‌ಬಾರದುವು—ಎಂಬಲ್ಲಿ ಬರೆಯುಲುಮುಚ್ಚರಿಸಲುಂ ಬಾರದುವೆಂದರ್ಥಗ್ರಹಣವುಂಟು.

೧೬೫. ಗಾವಿಲಂ—ಗ್ರಾಮೀಣ (ಸಂ) ಹಳ್ಳಿಯವನು (ಮೂಢ) ಮಾನ್ಯಂ—ಬಹುಮಾನಿಸಲು ತಕ್ಕವನು.

೧೬೬. ಕಾಪುರುಷಂ—ಕುತ್ಸಿತಪುರುಷನು, ನೀಚ; ಪಂದೆ—ಹೇಡಿ, ಏಳಿದಮಂ—ತಿರಸ್ಕಾರವನ್ನು.

೧೬೭. ದುರಾತ್ಮನ—ಕೆಟ್ಟಸ್ವಭಾವವುಳ್ಳವನ, ನಡೆವಳಿ—ನಡೆತೆ, ನಾಡೆ—ಚೆನ್ನಾಗಿ, ಸರಿಸಮಂ=ಸರಿ ಸಮಂ ಎಂದು ಎರಡು ಪದಗಳು, ಅಲ್ಲದಿದ್ದರೆ ಅರಿಸ

ಮಾಸವಾಗುವುದು; ಸರಿಯೂ ಸಮವೂ ಆದುದು ಎಂದರೆ ಸರಿಯಾದ ಹೋಲಿಕೆಯುಳ್ಳುದೆಂದರ್ಥ. ಇಲ್ಲಿ ತಕ್ಕಡಿಯ ಕೋಲಿಗೂ ನೀಚನಿಗೂ ಹೋಲಿಕೆ; ಸ್ವಲ್ಪ ಹೆಚ್ಚಾದರೆ ತಕ್ಕಡಿಯ ಕೋಲು ಮೇಲಕ್ಕೆ ಹೋಗುವುದು, ಸ್ವಲ್ಪ ಕಡಿಮೆಯಾದರೆ ಕೆಳಕ್ಕೆ ಇಳಿಯುವುದು. ನೀಚನೂ—ಸ್ವಲ್ಪವೇನಾದರೂ ಲಾಭವಾದರೆ ನಾನು ಮೇಲಾಗಿರುವೆನೆಂದು ಬಿಂಕಗೊಳ್ಳುವನು; ಸ್ವಲ್ಪ ಕೊರತೆಯಾದರೆ ವ್ಯಸನಗೊಂಡು ಥಟ್ಟನೆ ಇಳಿದುಹೋಗುವನು

೧೬೮. ಒಮ್ಮೆಗೆ—ಒಂದಾವೃತ್ತಿ, ಕುಂದಂ—ಕೊರತೆಯನ್ನು, ಅನದೆ—ಹೊಂದದೆ.

೧೬೯. ಕುಲೀನಂ—ಸತ್ಕುಲಪ್ರಸೂತನು, ಘನಂ—ಗೌರವವುಳ್ಳವನು, ಪೆರ್ಮರ—ಪಿರಿದು+ಮರ, ಹಿಂಡು—ಗುಂಪು

೧೭೦. ಅಮಲಕುಲರ್—ಪರಿಶುದ್ಧವಾದ ವಂಶವುಳ್ಳವರು, ಸಂಭಾವಿತರ್—ಬಹುಮಾನಿಸಲ್ಪಟ್ಟವರು, ಉರು—ಮಹತ್ತಾದ, ಭೂವಲ್ಲಭನಂ—ರಾಜನನ್ನು ದಲ್—ನಿಶ್ಚಯವಾಗಿ (ಅವ್ಯಯ) ಒಯ್ಯನೆ—ಬೇಗನೆ, ಒಯ್ಯನೆ ಎಂಬುದು ಮೆಲ್ಲಗೆ ಬೇಗನೆ ಎಂಬ ಎರಡರ್ಥಗಳಲ್ಲಿಯೂ ಉಂಟು. ಪ್ರಯೋಗಃ—ಮೃದುಪಲ್ಲವಮನ ಗ್ರಹಸ್ತದೆ ಕೊಂಡೊಯ್ಯನೆ ಬೀಸೆ, ಆದಿಪುರಾಣ ಆಶ್ವಾಸ ೭. ಪದ್ಯ ೭೧. ಅತ್ಯಂತಪ್ರವರ್ಧಮಾನವಿಜಯೋದ್ಯೋಗದಿಂ ವಿಜಯಾರ್ಧಾಚಳೋಪಾಂತಮನೊಯ್ಯನೊಯ್ಯನೆಯ್ದೆವರ್ಪಾಗಳ್ ॥ ಆದಿಪುರಾಣ ಆಶ್ವಾಸ ೧೩.

೧೭೧. ಭರ್ತ್ಸನೆಯುಂ—ಧಿಕ್ಕಾರವನ್ನು, ತಾಳ್ದಿದೊಡಂ—ಹೊಂದಿದರೂ, (ತಾಳ್ದ್ಧಾತುವಿದು; ತಾಳ್‌ಧಾತುವಲ್ಲ).

೧೭೨. ನಾಡಿಗರಂ—ಪ್ರಜೆಗಳನ್ನು (ನಾಡಿನಲ್ಲಿರುವವರು) ಚಿಕಿತ್ಸಕಜನಂ—ವೈದ್ಯರು, ಪರದರ್—ವರ್ತಕರು, ಕೊಳ್ವರಂ—ಕೊಂಡುಕೊಳ್ಳುವವರನ್ನು, ಪ್ರಮತ್ತರ್ಕಳಂ—ಅಜಾಗರೂಕರನ್ನು, ತಿರಿವರ್—ಯಾಚಕರು, ಗಣಿಕೆಯರ್—ಸೂಳೆಯರು, ಒಳ್ನುಡಿನೇಣ್ಗಳಿಂ—ಒಳ್ಳೆಯಮಾತುಗಳೆಂಬ ಪಾಶಗಳಿಂದ, ಅಂತು—ಹಿಡಿದು, ಪಾರ್ದು—ಸಮಯಹುಡುಕಿ, ಆರ್ಪಿನಿಂ—ಶಕ್ತಿಯಿಂದ, ಜೀವಿಕುಂ—ಜೀವಿಸುವರು, ೯೪ನೆಯ ಪದ್ಯದ ಟಿಪ್ಪಣವನ್ನು ನೋಡಿ.

೧೭೩. ತುರಿಪದೆ—ತ್ವರೆಯಿಂದ, ಅಭ್ಯಂತರದ—ಹೃದಯದ, ಪಿರಿದುಂ—ಪ್ರಾಯಶಃ.

೧೬೪. ಭುಜಗಂ—ಸರ್ಪ, ಗುಹನ—ಕುಮಾರಸ್ವಾಮಿಯು, ಭುಜಂಗವಂ—ಸರ್ಪವನ್ನು, ಸರ್ಪಾರ್ಥದಲ್ಲಿ ಭುಜಗ ಭುಜಂಗ ಭುಜಂಗಮ—ಎಂದು ಮೂರುರೂಪಗಳುಂಟು. ಇದರಂತೆಯೆ ತುರಗ ತುರಂಗ ತುರಂಗಮ (ಕುದುರೆ) ವಿಹಗ ವಿಹಂಗ ವಿಹಂಗಮ (ಪಕ್ಷಿ) ಕೇಸರಿ—ಸಿಂಹ, ತುತ್ತಲ್—ತಿನ್ನಲು, ಆಟಿಕುಂ—ಅಪೇಕ್ಷಿಸುವುದು, ಸಂಸೃತಿಯ—ಸಂಸಾರದ, ಮಾಳ್ಕೆ—ರೀತಿ.

೧೬೫. ಅಲಸದೆ—ಆಲಸ್ಯಪಡದೆ, ಕೇಳದೊಡಂ—ಬೆಸಗೊಳ್ಳಪಡದಿದ್ದರೂ, ಮಾಣದೆ ಬಿಡದೆ.

೧೬೬. ಮಹಾಮಾತ್ರರ್—ಪ್ರಧಾನರು ಮತ್ತು ಮಾವಟಿಗರು (ಎರಡರ್ಥ) ಪೊದಳ್ದ—ಹೆಚ್ಚಾದ, ಭಾಜನಂ—ಪಾತ್ರಭೂತರು, ಇಲ್ಲಿ ಮಹಾಮಾತ್ರರ್ ಎಂಬ ಕರ್ತೃಪದವು ಪುಲ್ಲಿಂಗಬಹುವಚನವಾಗಿದ್ದರೂ ಅದಕ್ಕೆ ಭಾಜನಂ ಎಂಬುದು ನಿಯತಲಿಂಗವಾದುದರಿಂದ ನಪುಂಸಕೈಕವಚನವಾಗಿಯೇ ಉತ್ತರವಿಶೇಷಣವಾಗಿರುವುದು.

೧೬೭ ಪರಿತಂದ—ಬಂದ, ಅರರೇ—ಅಹಹ, ಇರ್ವರ್—ಇಬ್ಬರು, ಆತ್ಮಕೃತದೋಷದಿಂದೆ—ಸ್ವಯಂಕೃತಾಪರಾಧದಿಂದ.

೧೬೮. ಗಳಿಪುದು—ಗಳಿಸುವುದು, ಕಾಪಿಡುವುದು—ಕಾಪಾಡುವುದು, ವ್ಯಯಿಸಿದೊಡೆ—ವೆಚ್ಚಮಾಡಲ್ಪಟ್ಟರೆ.

೧೬೯. ನಿಸ್ಪೃಹಂ—ಆಸೆಯಿಲ್ಲದವನು, ಮಂಡನಮಂ—ಅಲಂಕಾರವನ್ನು, ಒಲ್ವಂ—ಪ್ರೀತಿಸುವವನು, ಅಕಾಮಂ—ಕಾಮಿಯಲ್ಲದವನು, ಅಸೂರಿ—ವಿದ್ವಾಂಸನಲ್ಲದವನು, ವಲಂ—ನಿಶ್ಚಯವಾಗಿ, ತಥ್ಯವಾದಿ—ಸತ್ಯಹೇಳುವವನು.

೧೭೦. ತಡೆದು—ನಿರೋಧಿಸಿ, ಎಳವರಯದೊಳ್—ಎಳಪ್ರಾಯದಲ್ಲಿ, ಶಮಮಂ—ಉಪಶಾಂತಿಯನ್ನು, ತೀವಿದ—ತುಂಬಿದ, ಧಾತುಗಳ್—ರಸರಕ್ತಾದಿಗಳು. ಉಡುಗುತ್ತಿರೆ—ಕಡಿಮೆಯಾಗುತ್ತಿರಲು.

೧೭೧. ಪುದಿಗುಂ—ವ್ಯಾಪಿಸುವುದು, ನೆಱೆ—ಚೆನ್ನಾಗಿ.

೧೭೨. ಉತ್ತಮಾಂಗದೊಳ್—ಶಿರಸ್ಸಿನಲ್ಲಿ, ನಱುಪೂವಂ—ಸುವಾಸನೆಯುಳ್ಳಹೂವನ್ನು, ಮಗುಳ್ದಂ—ಮತ್ತೂ.

೧೭೩. ದುರ್ಮಂತ್ರದಿಂ—ದುರಾಲೋಚನೆಯಿಂದ, ಕುವರಂ—ಕುಮಾರ(ನು) ಅನಧ್ಯಾಯಿತೆಯಿಂ—ಅಧ್ಯಯನಮಾಡದಿರುವುದರಿಂದ, ಅಪ್ರೀತತೆಯಿಂ—ಅಪ್ರೀತಿಯಿಂದ, ನಂಟು—ನಂಟತನ, ಕೆಳೆ—ಸ್ನೇಹ, ವಿದೇಶಿತ್ವದಿಂ—ಪರದೇಶ

ವಾಸದಿಂದ, ಕ್ಷತಿಯಕ್ಕುಂ—ಕೆಡುವುದು. ಈ ಕ್ರಿಯೆಯನ್ನು—ಕ್ಷಿತಿಪಂದುರ್ಮಂತ್ರದಿಂ ಕ್ಷತಿಯಕ್ಕುಂ, ಯತಿ ಸಂಗದೆ ಕ್ಷತಿಯಕ್ಕುಂ—ಎಂದು ಎಲ್ಲದರಲ್ಲಿಯೂ ಅನ್ವಯಿಸಿಕೊಳ್ಳಬೇಕು. ಅನಾಲೋಕದೆ—ನೋಡದಿರುವುದರಿಂದ, ದಾನಪ್ರಮಾದಂಗಳಿಂ—ಕುಡುತಿರುವುದು ಅಜಾಗರೂಕನಾಗಿರುವುದು ಎಂಬಿವುಗಳಿಂದ.

೧೮೫. ಎಚ್ಚ—ಹೊಡೆದ, ಕಣೆ—ಬಾಣ, ಅದಂ—ವಿಶೇಷವಾಗಿ.

೧೮೬. ಎರ್ದೆಗಿಡಬಾರದು—ಧೈರ್ಯಗುಂದಬಾರದು, ಲೇಸಾಂಪಂ—ಒಳ್ಳೆಯದನ್ನು ಪಡೆಯುವನು, ಪಡಗು—ಹಡಗು, ಒಡರ್ಚಿ—ಉದ್ಯೋಗಿಸಿ, ಸಿರಿವಡೆಯನೇ—ಸಿರಿಯಂ+ಪಡೆಯನೇ.

೧೮೭. ಎಸಗುವನಂ—ಉದ್ಯೋಗಿಸುವವನನ್ನು, ಎಸಗು—ಉದ್ಯೋಗೆ= ಎಂದು ಧಾತ್ವರ್ಥ. ಪೊರ್ದುಗುಂ—ಸೇರುವಳು, ಭಂಗಿಸಿ—ನಿಗ್ರಹಿಸಿ, ಎಸಗು—ಉದ್ಯೋಗಿಸು (ಪ್ರಯತ್ನಿಸು) ಇದಱೊಳ್—ಈ ಪ್ರಯತ್ನದಲ್ಲಿ, ಪ್ರಯತ್ನಿಸಿದರೂ ಫಲಿಸದಿದ್ದರೆ ಆ ಪ್ರಯತ್ನದಲ್ಲಿ ಏನೋ ದೋಷವುಂಟೆಂದು ಹೇಳಬೇಕು; ತಕ್ಕ ಪ್ರಯತ್ನವನ್ನು ಮಾಡಿದರೆ ಎಂದಿಗೂ ಫಲಿಸದಿರದು—ಎಂದು ತಾತ್ಪರ್ಯ. ಇಲ್ಲಿ ಸ್ವಲ್ಪ ವಿಚಾರವುಂಟು:—ಇದು—ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀರ್ದೈವೇನ ದೇಯಮಿತಿ ಕಾಪುರುಷಾ ವದನ್ತಿ ॥ ದೈವಂ ನಿಹತ್ಯ ಕುರು ಪೌರುಷಮಾತ್ಮಶಕ್ತ್ಯಾ ಯತ್ನೇ ಕೃತೇ ಯದಿ ನ ಸಿಧ್ಯತಿ ಕೋತ್ರದೋಷಃ ॥ ಎಂದು ಪ್ರಸಿದ್ಧವಾದ ಸಂಸ್ಕೃತಶ್ಲೋಕದ ಪರಿವರ್ತನವು. ಇದರ ಮೊದಲ ಮೂರುಪಾದಗಳಲ್ಲಿ—ಕೆಲಸಮಾಡುವವನಿಗೆ ಸಂಪತ್ತು ಲಭಿಸುವುದು; ಅದೃಷ್ಟದಿಂದ ಸಂಪಲ್ಲಾಭವಾಗುವುದೆಂದು ಅವಿವೇಕಿಗಳು ಹೇಳುವರು; ಇದು ಸರಿಯಲ್ಲ; ಅದೃಷ್ಟವೆಂಬುದನ್ನು ಧಿಕ್ಕರಿಸಿ ಮಾಡಬಹುದಾದಷ್ಟು ಪ್ರಯತ್ನವನ್ನು ಮಾಡು. ಕಾರ್ಯಸಿದ್ಧಿಯಾಗುವುದು—ಎಂದು ಹೇಳಿದೆ. ನಾಲ್ಕನೆಯ ಪಾದದಲ್ಲಿ—ಪ್ರಯತ್ನಮಾಡಿಯೂ ಫಲಿಸದಿದ್ದರೆ, ಸರಿಯಾಗಿ ಪ್ರಯತ್ನಮಾಡಲಿಲ್ಲ. ನಿನ್ನ ಪ್ರಯತ್ನದಲ್ಲಿ ಏನೋ ಕೊರತೆಯುಂಟೆಂದು ಹೇಳಿದರೆ, ಮೇಲಣ ಮೂರು ಪಾದಗಳಲ್ಲಿ ಹೇಳಿದ ಅರ್ಥವನ್ನು ದೃಢಪಡಿಸಿದಂತಾಗುವುದು. ಇಂತು ಅರ್ಥವು ದೃಢಪಡಬೇಕಾದರೆ ಕಡೆಯಲ್ಲಿರುವ "ಕೋತ್ರದೋಷಃ" ಎಂಬಲ್ಲಿ ಕೋಪ್ಯತ್ರದೋಷಃ—ಎಂದು ಅಪಿಶಬ್ದವನ್ನು ಗಮ್ಯವಾಗಿಟ್ಟುಕೊಂಡು ಅತ್ರ—ಈ ನಿನ್ನ ಪ್ರಯತ್ನದಲ್ಲಿ, ಕೋಪಿದೋಷಃ ಅಸ್ತಿ—ಏನೋ ಒಂದು ದೋಷವುಂಟು—ಎಂದು ಅರ್ಥವನ್ನು ಹೇಳಬೇಕು. ಇದರಿಂದ

ಅದೃಷ್ಟಕ್ಕಿಂತಲೂ ಪೌರುಷಕ್ಕೆ ಪ್ರಾಶಸ್ತ್ಯವನ್ನು ಹೇಳಿದಂತಾಗುವುದು. ಈ ಅರ್ಥವು ಪ್ರಕೃತಸಂದರ್ಭಕ್ಕೂ ಸರಿಹೋಗುವುದು. ಮುಂದೆ ಈ ತಂತ್ರದ ೩೫೦ ನೆಯ ಪದ್ಯವೂ ಇದೇ ಆಗಿದೆ; ಅಲ್ಲಿ—ಪ್ರಯತ್ನ ಮಾಡಬೇಕು. ಇಷ್ಟರಮೇಲೆ ಫಲವು ದೈವಾಯತ್ತವು—ಎಂದು ಪೌರುಷಕ್ಕಿಂತಲೂ ಅದೃಷ್ಟಕ್ಕೆ ಪ್ರಾಶಸ್ತ್ಯವನ್ನು ಹೇಳಿದೆ; ಅದಕ್ಕೆ ತಕ್ಕಂತೆ "ಯತ್ನೇಕೃತೇ ಯದಿನಸಿದ್ಧ್ಯತಿ ಕೋತ್ರದೋಷಃ" ಎಂಬುದಕ್ಕೆ, ಪ್ರಯತ್ನಮಾಡಿಯೂ ಸಿದ್ಧಿಸದಿದ್ದರೆ ಈ ವಿಷಯದಲ್ಲಿ ತಪ್ಪೇನೆಂದು ಹಲವರು ಹೇಳುವ ಸಾಮಾನ್ಯವಾದ ಅರ್ಥವನ್ನು ಅನುಸರಿಸಿ "ಎಸಗಿದೊಡಂ ಫಲಿಸದಿರ್ದೊಡಿದಱೊಳ್ ತಪ್ಪೇಂ" ಎಂದು ಪರಿವರ್ತಿಸಿದೆ.

೧೮೮. ಸಾಧಿಸಲಪ್ಪುದು—ಸಾಧ್ಯವಾದುದು, ಕಾಂಚನಸೂತ್ರದೆ—ಚಿನ್ನದ ದಾರದಿಂದ, ಸಡೆದುದು—ಕೊಂದಿತು, ಕಾಳೋರಗನಂ—ಕೃಷ್ಣಸರ್ಪವನ್ನು.

೧೮೯. ಪರಾನುರಾಗಿಣಿ—ಪರಪುರುಷರಲ್ಲಿ ಅನುರಾಗವುಳ್ಳವಳು.

೧೯೦. ಅಸುಗೆ—ಪ್ರಾಣಕ್ಕೆ, ಸಂದೆಗಂ—ಸಂದೇಹ, ಮಿಱ್ತು—ಮೃತ್ಯು, ನಿಕ್ಕುವಂ—ನಿಶ್ಚಯವಾಗಿ.

೧೯೧. ಎಂತಪ್ಪುದು—ಎಂತಹುದು, (ಎಂಥಾದ್ದು) ಸದುಪಾಯಜ್ಞಂ—ಒಳ್ಳೆಯ ಉಪಾಯವನ್ನು ತಿಳಿದವನು.

೧೯೨. ಎನಸುಂ—ಹೆಚ್ಚಾಗಿ, ಚಿತ್ತಸ್ಪೃಹೆಯಿಂ—ಮನದ ಆಸೆಯಿಂದ

೧೯೩. ಬಿಸುಗದಿರನ ಸುತಂ—ಸೂರ್ಯನ ಪುತ್ರನಾದ ಶನಿ, ಬೆಚ್ಚನೆ ಕದಿರ್ಗಳ್ (ಕಿರಣಗಳು) ಆವಂಗೆ ಉಂಟೊ ಅವಂ ಬಿಸುಗದಿರಂ, ಬಹುವ್ರೀಹಿಸಮಾಸ. ರೋಹಿಣಿಯ ಶಕಟಮಂ—ಶಕಟಾಕಾರವಾದ ರೋಹಿಣೀನಕ್ಷತ್ರಮಂಡಲವನ್ನು, ಅಂದು ಮೊದಲ್—ಅಂದಿನಿಂದಲೂ, ಮೞೆಯೆಸಗಂ—ಮಳೆಗರೆಯುವುದಿಲ್ಲ; ಬರಿಸದನ್ನೆಗಂ—ವರ್ಷದವರೆಗೂ.

೧೯೪. ನಿರ್ಭಿನ್ನಂ—ಭೇದಿಸಲ್ಪಟ್ಟದ್ದು, ಮಹಿ—ಭೂಮಿ, ಭೂಮಿಯಲ್ಲಿರುವ ಜನಗಳೆಂದು ಲಕ್ಷಣಾರ್ಥ; ಕಲಿತಭಸ್ಮಾಸ್ಥಿಗಳಿಂ—ಧರಿಸಲ್ಪಟ್ಟ ಬೂದಿಯಿಂದಲೂ ಮೂಳೆಗಳಿಂದಲೂ, ಕಾಪಾಲಿಕವ್ರತಸ್ಥೆವೊಲ್—ಕಾಪಾಲಿಕವ್ರತದಲ್ಲಿ ಇರುವವಳಂತೆ; ಕಾಪಾಲಿಕರು ಮೈಗೆಲ್ಲ ಬೂದಿಯನ್ನು ಬಳಿದುಕೊಂಡು, ಮೂಳೆಗಳಿಂದ ಅಲಂಕಾರಮಾಡಿಕೊಂಡು, ಕಪಾಲವನ್ನು ಹಿಡಿದು ತಿರುಗುವರು. ಜನಗಳೆಲ್ಲರೂ ಅನಾವೃಷ್ಟಿಯಿಂದ ಹೊಟ್ಟೆಗಿಲ್ಲದೆ ಅವರಂತೆ ಅಲೆಯುತ್ತಿರುವರೆಂದು ತಾತ್ಪರ್ಯ.

೧೯೫. ಮಂದಂ—ಶನಿ, ಭೌಮಂ—ಅಂಗಾರಕ, ಚಂದಂ—ಚಂದ್ರ, ಕ್ಷಯಮೊಂದುಗುಂ—ನಾಶಹೊಂದುವರು, ಅನಿಷ್ಟವೆಂಬ ಅಂಬುಧಿಯೊಳ್—ಕೇಡುಗಳೆಂಬ ಸಮುದ್ರದಲ್ಲಿ, ಆಗ ಜನಗಳು ಸಮುದ್ರದಂತೆ ಅಪಾರವಾದ ಕೇಡುಗಳಿಗೆ ಗುರಿಯಾಗಿ ನಾಶಹೊಂದುವರೆಂದು ತಾತ್ಪರ್ಯ.

೧೯೬. ಬಿದು—ಚಂದ್ರ, ಬೋಕುಂ—ಹೋಗುವರು, ಶರಣ್—ರಕ್ಷಕರು, ಅಟ್ಟು—ಬೇಯಿಸಿಕೊಂಡು, ಉಣುತೆ—ಭೋಜನಮಾಡುತ್ತ, ನೀರುಮಂ—ನೀರನ್ನೂ, ಆಗ ಜನಗಳು ಆಹಾರವಿಲ್ಲದೆ ಮಕ್ಕಳನ್ನೆ ಬೇಯಿಸಿಕೊಂಡು ತಿನ್ನುತ್ತಲೂ, ಸೂರ್ಯಕಿರಣಗಳಿಂದ ಬಿಸಿಬಿಸಿಯಾದ ನೀರನ್ನು ಕುಡಿಯುತ್ತಲೂ ಹೊಟ್ಟೆಹೊರೆಯುವರೆಂದು ತಾತ್ಪರ್ಯ.

೧೯೭. ಹತಿವಡೆದತ್ತು—ಹತಿಯಂ+ಪಡೆದತ್ತು=ನಾಶವನ್ನು ಹೊಂದಿತು; ಬುದ್ಧಿಯ ಬಲವೇ ಬಲವೆಂದು ಭಾವವು.

೧೯೮. ಅನುವಿಂ—ತಕ್ಕ ರೀತಿಯಿಂದ, ರಸಾಯನಮಂ—ಲೇಹ್ಯವನ್ನು, ಇನಿತಿನಿತು—ಸ್ವಲ್ಪಸ್ವಲ್ಪ.

೧೯೯. ವರಮಂತ್ರ—ಶ್ರೇಷ್ಠವಾದ ವೇದಾಕ್ಷರ ಮತ್ತು ಆಲೋಚನೆ, ವಿಧಿಯಿಂ—ವಿಧಾನದಿಂದ, ಅರಣಿ—ಕಡೆತದಿಂದ ಅಗ್ನಿಯುದ್ಭವಿಸುವ ಮರ, ಹುತಾಶನನಂ—ಅಗ್ನಿಯನ್ನು, ವೇದೋಕ್ತವಾದ ವಿಧಾನದಿಂದ ಚೆನ್ನಾಗಿ ಮಥಿಸಿದರೆ ಕಠಿನವಾದ ಅರಣಿಯಲ್ಲಿ ಪರಿಶುದ್ಧವಾದ ಅಗ್ನಿಯುಂಟಾಗುವಂತೆ, ಉತ್ತಮವಾದ ಆಲೋಚನೆಗಳಿಂದ ಕಾರ್ಯಗಳನ್ನು ಮಾಡಿದರೆ ನೆಲದಲ್ಲಿಯೂ ಉತ್ತಮವಾದ ಫಲವುಂಟಾಗುವುದೆಂದು ತಾತ್ಪರ್ಯ.

೨೦೦. ಪುಣ್ಯಕೋಶಮಂ—ಪುಣ್ಯವೆಂಬಬೊಕ್ಕಸವನ್ನು, ಧರ್ಮನಾಶಿ—ಧರ್ಮವನ್ನು ನಾಶಗೊಳಿಸುವುದು, ಅಱಿಜಸಮಂ—ಅಱಿದು+ಜಸ, ದುಷ್ಕೀರ್ತಿಯನ್ನು, ಅಘಮುಮಂ—ಪಾಪವನ್ನೂ.

೨೦೧. ಗೋಪಾಲಂ—ಅರಸು ಮತ್ತು ಹಸುವನ್ನು ರಕ್ಷಿಸುವವನು, ಗೋಶಬ್ದಕ್ಕೆ ಇಲ್ಲಿ ಭೂಮಿ,ಧೇನು ಎಂದು ಎರಡರ್ಥಗಳು. ಒಲ್ದು—ಪ್ರೀತಿಸಿ, ನ್ಯಾಯಮಂ ಅಲಂಬಿಸಿ—ನ್ಯಾಯವನ್ನು ಹಿಡಿದು, ಪಣವಾಲಂ—ಹಣವೆಂಬ ಹಾಲನ್ನು, ಕಱೆಯಲ್ಕೆ ವೇೞ್ಕುಂ—ಕರೆಯಬೇಕು; ಗೋಪಾಲಕನು ಗೋವನ್ನು ಪ್ರೀತಿಯಿಂದ ಪಾಲಿಸಿ ಪೋಷಿಸಿ ಯೋಗ್ಯವಾದಷ್ಟು ಹಾಲನ್ನು ಕರೆದುಕೊಳ್ಳುವಂತೆ, ಭೂಪಾಲ

ಕನು ಪ್ರಜೆಗಳನ್ನು ಪ್ರೀತಿಯಿಂದ ಪಾಲಿಸುತ್ತಲೂ ಪೋಷಿಸುತ್ತಲೂ ಇರುತ್ತ ಅವರಿಗೆ ಬಾಧೆಯುಂಟಾಗದಂತೆ ಯೋಗ್ಯವಾದಷ್ಟು ಧನವನ್ನು ಅವರಿಂದ ತೆಗೆದುಕೊಳ್ಳಬೇಕೆಂದು ತಾತ್ಪರ್ಯ.

೨೦೨. ಅನಿತೊಂದಱನೇ—ಅಷ್ಟುಮಾತ್ರದಿಂದಲೇ, ತಣಿಪು—ತೃಪ್ತಿ.

೨೦೩. ಫಲವೇಳಪ—ಫಲವನ್ನು ಬಯಸುವ, ತೋಂಟಗಾಱಂ—ತೋಟಮಾಡುವನು, ದಾನಮಾನಾದಿಗಳಿಂ—ಕುಡುವುದು ಸನ್ಮಾನಿಸುವುದು ಮುಂತಾದವುಗಳಿಂದ.

೨೦೪. ಸುಗುಣಂಗಳಿಂದೆ—ಉತ್ತಮವಾದ ದಯಾದಾಕ್ಷಿಣ್ಯಾದಿಗುಣಗಳಿಂದ, ಮತ್ತು ಒಳ್ಳೆಯ ಎಳೆಗಳಿಂದ, ಒಳಗೆ ಶುಭ್ರವಾದ ಬತ್ತಿಯಿರುವುದರಿಂದ ದೀಪವು ಎಣ್ಣೆಯನ್ನು ಎಳೆಯುತ್ತಿದ್ದರೂ ಅದು ಯಾರಿಗೂ ಗೊತ್ತಾಗುವುದಿಲ್ಲ; ಅದರಂತೆ ರಾಜನು ಪ್ರಜೆಗಳಿಂದ ಧನವನ್ನು ಆಕರ್ಷಿಸುತ್ತಿದ್ದರೂ ಅದು ಅವನ ಉತ್ತಮವಾದ ಗುಣಗಳಿಂದ ಪ್ರಕಟವಾಗುವುದಿಲ್ಲ. ಎಣ್ಣೆಯನ್ನು ಎಳೆಯಲು ದೀಪಕ್ಕೆ ಬತ್ತಿಯೆಂತು ಆವಶ್ಯಕವೋ ಅಂತು ಧನವನಾಕರ್ಷಿಸಲು ರಾಜನಿಗೆ ಸದ್ಗುಣಂಗಳಾವಶ್ಯಕವೆಂದು ತಾತ್ಪರ್ಯ.

೨೦೫. ತುಱುವಂ—ಧೇನುವನ್ನು, ನಱುವೂದಿಱುವವೊಲುಂ—ಸುವಾಸನೆಯುಳ್ಳ ಹೂವನ್ನು ಕೊಯ್ಯುವಂತೆಯೂ, ಭೂವರಂ—ರಾಜನು, ಓವಿ—ಪಾಲಿಸಿ, ಪಣಮಂ ಕೊಳ್ವುದು—ಹಣವನ್ನು ತೆಗೆದುಕೊಳ್ಳಬೇಕು.

೨೦೬. ಎನವೇಱ್ಕುಂ—ಹೇಳಬೇಕು, ಸಣ್ಣ ಮೊಳೆಕೆಯನ್ನು ಎಂತಾದರೂ ಕಷ್ಟಪಟ್ಟು ಪ್ರೀತಿಯಿಂದ ರಕ್ಷಿಸಿದರೆ ಅದು ದೊಡ್ಡದಾಗಿ ಕಾಲದಲ್ಲಿ ಬೇಕಾದಷ್ಟು ಫಲವನ್ನು ಕುಡುವುದು; ಅದರಂತೆ ಪ್ರಜೆಗಳನ್ನೂ ಪ್ರೀತಿಯಿಂದ ಚೆನ್ನಾಗಿ ರಕ್ಷಿಸಿದರೆ ಪ್ರವರ್ಧಿತರಾದ ಅವರಿಂದ ಕಾಲದಲ್ಲಿ ವಿಶೇಷವಾಗಿ ಫಲಪ್ರಾಪ್ತಿಯಾಗುವುದೆಂದು ತಾತ್ಪರ್ಯ.

೨೦೭. ಕೆನ್ನಂ—ಪ್ರಾಯಶಃ,

೨೦೮. ಪದುಳಂಗೈವ—ಕ್ಷೇಮವನುಂಟುಮಾಡುವ, ಅವಿರತಂ—ಯಾವಾಗಲೂ, ಉಪಟಳಮಂ—ಉಪದ್ರವವನ್ನು, ಕುಂದುವರ್—ಕ್ಷೀಣರಾಗುವರು

೨೧೦. ವಲಂ—ಅಧಿಕವಾಗಿ, ಆಜಿಯುಂ—ಯುದ್ಧವನ್ನು.

೨೧೧. ಘುರಂ—ಯುದ್ಧ, ದುರ್ಗದೆ—ದುರ್ಗದಿಂದ, ಸಾಸಿರಂ—ಸಾವಿರ, ಲಕ್ಕಗುದುರೆಗಳ್—ಲಕ್ಷಕುದುರೆಗಳು; ಇರೆಯುಂ—ಇದ್ದರೂ.

೨೧೨. ಬರೆಯುಂ ಬಂದರೂ, ಎಚ್ಚ್ಬಪಂ—ಹೊಡೆಯುವವನು, ಇಸುಧಾತುವಿನಮೇಲೆ ವರ್ತಮಾನಾರ್ಥದಲ್ಲಿ ದಪಪ್ರತ್ಯಯಬಂದಿದೆ.

೨೧೩. ಗುರುವಿನ—ಬೃಹಸ್ಪತಿಯ, ನಿಯೋಗದಿಂದಂ—ಅಪ್ಪಣೆಯಿಂದ, ಮುಂ—ಪೂರ್ವದಲ್ಲಿ.

೨೧೪. ಪಲ್ಲಿಲಿಪಾವುಂ—ಹಲ್ಲಿಲ್ಲದ ಹಾವೂ, ಮಾತಂಗಮುಂ—ಆನೆಯೂ, ಧರಿತ್ರೀ—ಭೂಮಿ, ಪೊಡಱ್ದ—ವಿಸ್ತಾರವುಳ್ಳ.

೨೧೫. ಕುತ್ತಮುಂ—ರೋಗವನ್ನು, ಒಗೆದೊಡನೆಯು—ಹುಟ್ಟಿದಾಗಲೆ, ಕಡುಬಲ್ಮೆಗಂ—ಬಹುಬಲಾಢ್ಯನು, ಆ ಹಗೆಕುತ್ತಂಗಳಿನೆ—ಆ ಶತ್ರುವಿನಿಂದಲೇ ಮತ್ತು ಆ ರೋಗದಿಂದಲೆ.

೨೧೬. ಅಭಿವೃದ್ಧಿಯಾಂಪ—ವೃದ್ಧಿಹೊಂದುತ್ತಿರುವ, ಶುಭಮಭಿಲಷಿಸುವಂ—ತನಗೊಳ್ಳೆಯದಾಗಬೇಕೆಂಬವನು, ಅಭಿಯಾತಿಯುಮಂ—ಶತ್ರುವನ್ನೂ.

೨೧೭. ಬಲ್ಲಿದಂ—ಬಲಿಷ್ಠನು, ಬಿಯದಿವೊಲ್—ವ್ಯಾಧಿಯಂತೆ, ವ್ಯಾಧಿ (ಸಂ).

೨೧೮. ಅದಟಂ—ಪರಾಕ್ರಮವನ್ನು, ತವೆ—ಚೆನ್ನಾಗಿ, ಭಾರ್ಗವಂ—ಪರಶುರಾಮನು, ಪಲರಂ—ಅನೇಕರನ್ನು.

೨೨೦. ಎರ್ದೆಯುತ್ಸಾಹಂಮಿಗೆ—ಮನದುತ್ಸಾಹವು ಹೆಚ್ಚುತಿರಲು, ಇದಿರ್ಪೋದಪಂ—ಎದುರಿಗೆ ಹೋಗುವನೋ, ಅೞಿವೊೞ್ದಿಗುಂ—ನಾಶಹೊಂದುವನು ಶಲಭಂಬೊಲ್—ಮಿಡಿತೆಯಂತೆ.

೨೨೧. ಅಗ್ಗಳಂ—ಅಧಿಕನು, ಪಲ್ಲಮುಱಿವೋಲ್—ಆನೆಯಂತೆ, ಮರಲ್ವಂ—ಹಿಂದಿರುಗುವನು.

೨೨೨. ಆವಗಂ—ಯಾವಾಗಲೂ, ಅಭಿಭವಂ—ತಿರಸ್ಕಾರ, ಬೆಸಂಬಡೆಯದೊಡಂ—ಅಪ್ಪಣೆಪಡೆಯದಿದ್ದರೂ.

೨೨೩, ನಿಱಿಸಲ್—ಸ್ಥಾಪಿಸಲು, ಸಂಮೋಹದಿಂ—ಮನೋವೈಕಲ್ಯದಿಂದ, ಅಣಂ—ಅಧಿಕವಾಗಿ, ಬೇಸಱುವಂ—ಬೇಸರಗೊಳ್ಳುವನು, ಆಟಿಪ್ಪಂ—ಅಪೇಕ್ಷಿಸುವನು.

೨೨೫ ದೋಷಂಗಳ್ಗೆಡೆಯೆನಿಪುದುಮಂ ತನ್ನತನುವಂ—ದೋಷಾಸ್ಪದವಾದ ತನ್ನಶರೀರವನ್ನೂ, ಅನಿಶಮುಂ—ಯಾವಾಗಲೂ, ಅನುಗೊಳಿಪೊಡಂ—ಮಾಡುವುದಾದರೂ.

೨೨೬. ಮಿಗೆ—ಹೆಚ್ಚಾಗಿ, ಅಳ್ಕೆ—ಅಗಲಿ, ನೆಲೆ—ಆಶ್ರಯ.

೨೨೭. ಓಲಗದೊಳ್—ಸಭೆಯಲ್ಲಿ ತೆಗಳಲಾಗದು—ದೂಷಿಸಬಾರದು ಬನ್ನಂ—ಭಂಗ.

೨೨೮ ವರ್ಧಿಸಿ—ವೃದ್ಧಿಹೊಂದಿ, ಬಿಸಮರನಂ—ವಿಷವೃಕ್ಷವನ್ನು.

೨೨೯. ನಾಣ್ಚಿಪ್ಪುದು—ನಾಚಿಕೆಗೊಳಿಸುವುದು, ಮೇಲಣ್ಗೆ—ಮೇಲಕ್ಕೆ, ಶಂಕೆಯೆ—ಭಯವೇ.

೨೩೦. ಎಸಪನೊಳ್—ಮಾಡುವವನಲ್ಲಿ, ಒಡರಿಸುವನೊಳ್—ಮಾಡುವವನಲ್ಲಿ, ತನಗುಪಕಾರಿಯಾದವನ ವಿಷಯದಲ್ಲಿ ಒಳ್ಳೆಯವನಾಗಿರುವುದೇನು ವಿಶೇಷ ? ತನಗಪಕಾರಿಯಾದವನು ಯಾವನೋ ಅವನ ವಿಷಯದಲ್ಲಿ ಒಳ್ಳೆಯವನಾಗಿದ್ದರೆ ಅದು ಶ್ಲಾಘ್ಯವಾದುದು; ಅಂತವನನ್ನು ಒಳ್ಳೆಯವನೆಂದು ಹೇಳಬೇಕು—ಎಂದು ತಾತ್ಪರ್ಯ.

೨೩೧ ಅರ್ಥಮುಂ—ದ್ರವ್ಯವೂ, ಅರ್ಪುಂ—ಶಕ್ತಿಯೂ, ಮರ್ಮಜ್ಞಂ—ಗುಟ್ಟುತಿಳಿದವನು, ರಾಜ್ಯಾರ್ಧಮಂ—ಅರ್ಧರಾಜ್ಯವನ್ನು, ಹತರ್—ಕೊಲ್ಲಲ್ಪಟ್ಟವರು.

೨೩೩ ಕಾಯ್ದ—ಕಾದ, ಆಯಸದೊಳ್—ಕಬ್ಬಿಣದಲ್ಲಿ, ಇದು ತದ್ಭವವಾದಾಗ ಆಯಾಸವೆಂದರ್ಥ; ನೆರೆಯೆ—ಸೇರಲು, ನೀಡುಂ—ಅತ್ಯಂತವಾಗಿ, ಪತ್ರದಲ್ಲಿ—ಎಲೆಯಲ್ಲಿ, ಅದುವೆ—ಅನೀರೆ, ನಲ್ಮುತ್ತಂತೆ—ಒಳ್ಳೆಯಮುತ್ತಿನಹಾಗೆ, ರಾರಾಜಿಕುಂ—ಚೆನ್ನಾಗಿ ಪ್ರಕಾಶಿಸುವುದು, ಸ್ವಾತಿಯ—ಸ್ವಾತಿನಕ್ಷತ್ರದ, ಸಿಪ್ಪಿಳ್—ಚಿಪ್ಪಿನಲ್ಲಿ, ಪರಿಕೀರ್ತ್ಯ—ಉದ್ಘೋಷಿಸಲ್ಪಡುವ, ಬರ್ಕುಂಡಾ—ಬರುವುದಿಲ್ಲವೆ

೨೩೪. ಅಂಗುಂ—ಹೊಂದುವರು, ಗಾಂಗೇಯಂ—ಭೀಷ್ಮನು, ಬೇರೆಡೆಯಲ್ಲಿ ಅರ್ಥಾಂತರ ಚಿನ್ನ.

೨೩೫. ಬಂದಂಗೆ—ಬಂದ, ಅವಿದಿತ—ತಿಳಿಯಲ್ಪಡದ, ಹರ್ಮಂದವಿಸರ್ಪಿಣಿಯೆಂಬುದು—ಮಂದವಿಸರ್ಪಿಣಿಯೆಂಬ ಹೇನು, ಪೊಂದಿತ್ತು—ಸತ್ತುಹೋಯಿತು.

೨೩೬. ನಡೆತಾರ—ಬಾ, ಕುಳ್ಳಿರು—ಕುಳಿತುಕೊಳ್, ಪಡೆವಾತು—ಸುದ್ದಿ, ಮೋದಂಬಡುವೇಂ—ಸಂತೋಷಪಡುವೆನು, ಉತ್ತಮಪುರುಷೈಕವಚನವಾದ ಎನ್ ಎಂಬುದಕ್ಕೆ ದೀರ್ಘವನ್ನೂ ಹೇಳುವುದುಂಟು, ಪ್ರಯೋಗ:—ನಿನಗೀವೇನಂಚೆ ಕಂಪಂನಿನಗೊಸಯಿಸುವೆಂ ॥ ಕಬ್ಬಿಗರಕಾವ.

ಕೂರ್ತು—ಸ್ನೇಹಗೊಂಡು, ಕೂರ್—ಸ್ನೇಹೆ ಎಂದು ಧಾತ್ವರ್ಥ; ಹರ್ಷಂ ಬಡಿಸಲ್ವೇೞ್ಕುಂ—ಸಂತೋಷಗೊಳಿಸಬೇಕು.

೨೩೭. ಒರ್ತೆಱಂ—ಒಂದುರೀತಿಯುಳ್ಳದು, ಅನಿತೆಗಡ—ಅಷ್ಟೆಅಲ್ಲವೆ

೨೩೮. ಅಣಂ—ಸ್ವಲ್ಪವೂ, ತುಷ್ಟಿಯುಂ—ಸಂತೋಷವನ್ನು, ಎಸಕಂ—ಕಾರ್ಯವು, ಆವನುಮಂ—ಯಾವನನ್ನೂ,

೨೩೯. ಪುಸಿವಾತಂ—ಪುಸಿ+ಮಾತು ತಗದರುಮಂ—ಅಯೋಗ್ಯರನ್ನೂ

೨೪೦. ಪದೆದು—ಇಚ್ಛೆಗೊಂಡು, ಪದೆ—ಈಪ್ಸಾಯಾಂ ಎಂದು ಧಾತ್ವರ್ಥ. ಪ್ರಕೃತಿ—ಸ್ವಭಾವ.

೨೪೧. ಜ್ವಳನಂ—ಅಗ್ನಿ, ಕುಳಿರ್ವೊರ್ಡಂ—ತಣ್ಣಗಾದರೂ, ಕುಳಿರ್ಗದಿರಂ—ಚಂದ್ರನು.

೨೪೨. ಇರವಂ—ಸ್ಥಿತಿಯನ್ನು, ಅೞಿವಂ—ನಾಶವನ್ನು.

೨೪೩. ವಜ್ರಲೇಪಂ—ವಜ್ರಗಾರೆ, ನೀಲಿವಣ್ಣಮುಂ—ನೀಲಿಯಬಣ್ಣವೂ, ಕಳ್ಗಡಿವವನುಂ—ಹೆಂಡಕುಡಿಯುವವನೂ, ಪಟ್ಟು—ಹಿಡಿತ

೩೪೪. ನಡೆವಳಿಯುಂ—ನಡತೆಯೂ, ಸಂಗಳಿಸುಗೆ—ಉಂಟಾಗಲಿ.

೨೪೫ ತವಕಿಸುತ—ತ್ವರೆಪಡುತ್ತ, ಅವಂದಿರೆ—ಅವರೇ, ಸಭ್ಯರ್—ಸಭೆಗೆ ಯೋಗ್ಯರು.

೨೪೬. ಐದೆ—ಚೆನ್ನಾಗಿ, ಪರತಂತ್ರಂಗಳ್—ಪರಾಧೀನಗಳು, ಬರ್ದುಕಿನಲ್ಲಿಯುಂ—ಬದುಕುವುದರಲ್ಲಿಯೂ, ದಿಡಂ—ದೃಢ (ಸಂ).

೨೪೭. ಗಾವಿಲರವರ್ಗಳ್—ಆ ಮೂಢರು, ಕಳೆದರ್—ಕಳೆದುಕೊಂಡರು.

೨೪೮. ಕಡುದುಗುಡಂ—ಬಹುದುಃಖಕರ, ನಿಚ್ಚದ—ನಿತ್ಯದ, ಬಗೆಪೂಡೆ—ಪರ್ಯಾಲೋಚಿಸಲು, ಒಟ್ಟಜೆ—ಪರಂಪರೆ.

೨೪೯. ನರಲ್ವಂ—ವ್ಯಥೆಪಡುವವನು, ನರಲ್—ವ್ಯಥಾಯಾಂ ಎಂದು ಧಾತ್ವರ್ಥ. ಓಲೈಪಂ—ಸೇವಿಸುವವನು, ಪ್ರವಾಸಿ—ಪರಸ್ಥಲ ತಿರುಗುವವನು, ಕೇಳ್ಗಂ—ಕೇಳಲ್ಪಡುವುದು.

೨೫೦. ಮನವೊಲ್ವವೊಲ್'—ಮನಸ್ಸು ಒಲಿಯುವಂತೆ, (ತನಗೆ ಬೇಕಾದ ಹಾಗೆ) ಆರೊಗಿಸಂ—ಊಟಮಾಡನು, ಆರೋಗಿಸು ಆರೊಗಿಸು ಎಂದು ಎರಡು ರೂಪವೂ ಉಂಟು, ಶ. ದ. ಸೂ ೧೧೮.

೨೫೧. ಬುವಿಯೊಳ್'—ಭೂಮಿ (ಸಂ) ಶ್ವಾನಂ—ನಾಯಿ, ತನ್ನೊಲ್ದವೊಲ್' —ತಾನು ಇಷ್ಟಪಟ್ಟಂತೆ, ತಾನು ಎಂಬ ಪ್ರಥಮಾರ್ಥದಲ್ಲಿ ತನ್ನ ಎಂದು ಷಷ್ಠಿ ಬಂದಿದೆ. ಸೇವಾಶ್ವವೃತ್ತಿಯೆಂದೊರೆದರ'—ಸೇವೆ ಎಂಬುದಕ್ಕೆ ಶ್ವವೃತ್ತಿಯೆಂಬ ಮತ್ತೊಂದು ಹೆಸರುಂಟು. "ಸೇವಾ ಶ್ವವೃತ್ತಿಃ" ಎಂದಮರಕೋಶವು. ಶ್ವವೃತ್ತಿಃ ಎಂದರೆ ನಾಯಿಯ ಜೀವನಕ್ಕೆ ಸಮಾನವಾದ ಜೀವನವೆಂದು ಅವಯವಾರ್ಥ. ಪರಸೇವೆಯೂ ನಾಯಿಯ ಜೀವನವೂ ಸಮಾನವೆಂದು ಭಾವವು. ಸೇವೆ ಶ್ವವೃತ್ತಿ ಯೆಂಬೆರಡೂ ಸಮಾನವೆಂದು ಯಾರುಹೇಳಿದರೋ ಅವರನ್ನು ಸುಳ್ಳು ಹೇಳಿದವರೆಂ ದು ತಿಳಿಯಬೇಕು. ಏಕೆಂದರೆಃ—ಸೇವೆಗಿಂತಲೂ ಶ್ವವೃತ್ತಿಯೇ ಉತ್ತಮ; ಶ್ವಾನವು ತನ್ನ ಮನಸ್ಸಿಗೆ ಬಂದಹಾಗಿರಬಹುದು. ಅದಕ್ಕೆ ನಿರ್ಬಂಧವಿಲ್ಲ; ಸೇವಕನು ಹಾಗಿ ರುವುದಕ್ಕಿಲ್ಲ. ಪರರು ಹೇಳಿದಂತೆ ನಡೆಯಬೇಕು.

೨೫೨. ತೆಳ್ಪು—(ತೆಳ್ಳದನಭಾವ) ಕೃಶತ್ವವು, ಉಣಿಸು—ಆಹಾರ, ಆಳ್ಗಂ— ಸೇವಕನಿಗೂ, ಅಘದಿಂ—ಪಾಪದಿಂದ, ಭೂಶಯನ, ಬ್ರಹ್ಮಚರ್ಯವ್ರತ, ಕೃಶತ್ವ ಅಲ್ಪಾಹಾರವೆಂಬುವು ಸಂನ್ಯಾಸಿಗೂ ಸೇವಕನಿಗೂ ಸಮಾನವಾದುದೇ ಸರಿ; ಆದರೆ ಸಂನ್ಯಾಸಿಗೆ ಅದೆಲ್ಲವೂ ಧರ್ಮಪ್ರಾಪ್ತವಾದುದು; ಅದರಿಂದ ಅವನಿಗೇನೂ ಕೊರತೆ ಯಿಲ್ಲ. ಸೇವಕನಿಗೆ ಅ ಸ್ಥಿತಿ ಜನ್ಮಾಂತರಪಾಪದಿಂದ ಉಂಟಾದುದು, ಅದರಿಂದ ಶೋಚನೀಯವೆಂದು ತಾತ್ಪರ್ಯ.

೨೫೩. ವಸುವಂ—ಧನವನ್ನು, ವಸುಶಬ್ದಕ್ಕೆ ರತ್ನ ಧನ ಅಷ್ಟವಸುಗಳು, ಕಿರ ಣಮುತಾಂದ ನಾನಾರ್ಥಗಳುಂಟು, ಸಮನಿಪ—ಸಂಭವಿಸುವ, ಸೇವಕನು ಧನಕ್ಕೋ ಸ್ಕರ ಚಳಿ ಗಾಳಿ ಮಳೆ ಬಿಸಿಲು ಮುಂತಾದವುಗಳಿಂದ ಎಷ್ಟೋ ಕ್ಲೇಶವನ್ನು ಹೊಂದಿ ದರೂ ತನ್ನ ಧರ್ಮಕ್ಕೆ ಹಾನಿಯುಂಟಾಗದಂತೆ ನಡೆದುಕೊಂಡರೆ ಆಕ್ಲೇಶವೆಲ್ಲವೂ ಅವನಿಗೆ ಅಲ್ಪವಾದುದೇಸರಿ ಎಂದರೆ ಅಂತಹ ಕ್ಲೇಶದಲ್ಲಿಯೂ ಸ್ವಧರ್ಮನಿರತನಾಗಿ ರುವುದು. ಪರಮಪ್ರಯೋಜನವು; ಧರ್ಮಕ್ಕೆ ಭಂಗವನ್ನು ತಂದುಕೊಂಡು ಸುಖ ಪಟ್ಟರೂ ಅದು ಸುಖವೆನಿಸದು; ಧರ್ಮವನ್ನು ರಕ್ಷಿಸಿಕೊಂಡು ಕ್ಲೇಶಪಟ್ಟರೂ ಅದು ಕ್ಲೇಶವಾಗಿ ತೋರುವುದಿಲ್ಲವೆಂದು ತಾತ್ಪರ್ಯ.

೨೫೪. ಸಮುಚ್ಚಯಸಹಿತವಾದ ಸ್ವಾದುವುಂ ಆಮೋದಕಮುಂ ಎಂಬ ಪದಗಳ ನಡುವೆ ಇರುವ ಬಳ್ಳಿತು ಮುಂತಾದವುಗಳಿಗೂ ಸಮುಚ್ಚಯವನ್ನು ಅಧ್ಯಾಹಾರ ಮಾಡಿಕೊಂಡು "ಬಳ್ಳಿತುಂ ಮೆಲ್ಲಿತ್ತುಂ ಬಟ್ಟಿತ್ತುಂ ತೆಳ್ಳಿತುಂ,, ಎಂದು ಹೇಳಿಕೊಳ್ಳಬೇಕು. ಶ ದ. ಸೂ ೧೪೫. ತುಕಾರಾಂತವಾದ ಗುಣವಾಚಿಗಳಿಗೆ ವಿಕಲ್ಪದಿಂದ ದ್ವಿತ್ವಬರುವುದೆಂಬ ೨೬ ನೆಯ ಶ ದ. ಸೂತ್ರದ ಪ್ರಕಾರ ದ್ವಿತ್ವಬಂದು ಮೆಲ್ಲಿತ್ತು ಬಟ್ಟಿತ್ತು ಎಂದು ರೂಪವಾಗಿದೆ. ಸ್ವಾದುವುಂ—ರುಚಿಕರವೂ,ಬಳ್ಳಿತುಂ—ಉತ್ತಮವೂ ಮೆಲ್ಲಿತ್ತುಂ—ಮೃದುವೂ, ಬಟ್ಟಿತ್ತುಂ—ಗುಂಡಗಿರುವುದೂ, ತೆಳ್ಳಿತುಂ—ತೆಳ್ಳಗಿರುವುದೂ, ಆಮೋದಕಮುಂ—ಸಂತೋಷಕರವೂ, ಆ ಮೋದಕಂ—ಆ ಕಡುಬು, ಏವುದೊ —ಏನು ಪ್ರಯೋಜನಕ್ಕೆ ಬರುವುದೊ, ಕ್ಲೇಶದಿಂದ ಸಂಪಾದಿಸಿದುದು ಅತ್ಯುತ್ತಮವಾದ ಪದಾರ್ಥವಾದರೂ ಮನಸ್ಸಿಗೆ ಸಂತೋಷವನ್ನುಂಟುಮಾಡದು; ಕ್ಲೇಶವಿಲ್ಲದೆ ಪ್ರಾಪ್ತವಾದುದು ಅಲ್ಪವಾದುದಾದರೂ ಮನಸ್ಸಿಗೆ ಮಹತ್ತರವಾದ ಸಂತೋಷವನ್ನುಂಟುಮಾಡುವುದೆಂದು ಭಾವವು.

೨೫೫ ದ್ರೋಹಿಯನ್ನೋ -ಹೊಂದುವನೊ, ಯಾವನನ್ನು ನಂಬಿ ರಾಜನು ನಾಶಹೊಂದುವನೋ ಅವನೇ ಆ ರಾಜನನ್ನು ಕೊಂದವನೆಂದು ಮನುವೂ ಹೇಳಿರುವನು; ಆದುದರಿಂದ ವಿಶ್ವಾಸದ್ರೋಹವು ಮಹಾಪಾಪಕರವೆಂದು ತಾತ್ಪರ್ಯ.

೨೫೬. ನಿಷ್ಕೃತಿ—ಪ್ರಾಯಶ್ಚಿತ್ತ, ವಿಶುದ್ಧತೆವಡೆಯರ್—ಶುದ್ಧಿಹೊಂದರು.

೨೫೭. ಸುತೆಯಂ—ಮಗಳನ್ನು, ಆಪ್ತತೆಯಿಂ—ಆಪ್ತಭಾವದಿಂದ, ಎಯ್ದದು—ಪ್ರಾಪ್ತವಾಗದು.

೨೫೮. ಅನುವರದೊಳ್—ಯುದ್ಧದಲ್ಲಿ, ಸಂಗಡಿಸಿದ—ಸೇರಿದ, ಕಾರ್ಯಮಂ—ಮಾಡಬಹುದಾದುದನ್ನು, ಅಕಾರ್ಯಮಂ—ಮಾಡಬಾರದುದನ್ನು, ಕಿಮ್ಮನೆ—ಸುಮ್ಮನೆ, ನಡೆದಿಡನೇ—ಕೊಲ್ಲಲಿಲ್ಲವೆ.

೨೫೯. ಒಲ್ವರ್—ಪ್ರೀತಿಸುವರು, ವಲಂ—ಪ್ರಾಯಶಃ, ನೆಲಕಲನಂ—ಲೋಭಿಯನ್ನು, ನಲೆ—ಚೆನ್ನಾಗಿ, ಮುಗಿಲುಂ—ಮೇಘವೂ,

೨೬೦. ಆಂ—ನಾನು, ಅಭಿಮತಂ—ಇಷ್ಟನು, ಕೋಡುಗಳಿರದ—ಕೊಂಬುಗಳಿಲ್ಲದ; ಎಟ್ಟು—ಎತ್ತು.

೨೬೧. ಮೇಲ್ — ಉತ್ತಮ, ಭಿಕ್ಷಾಟನೆ — ಭಿಕ್ಷೆಗೋಸ್ಕರ ಅಲೆಯುವುದು, ಕುತ್ತಂ — ರೋಗ, ಆರ್ಜಿಪ — ಸಂಪಾದಿಸಲ್ಪಡುವ

೨೬೨. ವೈಭವದೊಳ್ — ಸಂಪತ್ತಿನಲ್ಲಿ, ಅವರ್ಗೆಯೆ — ಅವರಿಗೇ, ಕೊಳ್ಕುಡೆ — ತೆಗೆದುಕೊಳ್ಳುವುದು, ಮತ್ತು ಕುಡುವುದು; ಸವನಿಸಲ್ — ಪ್ರಾಪ್ತವಾಗಲು, ಸಮನಿಸು = ಸವನಿಸು, ಎಮಗೆ = ಎವಗೆ, ತಾಮರೆ = ತಾವರೆ — ಎಂದು ಕನ್ನಡದಲ್ಲಿ ಮಕಾರಕ್ಕೆ ವಕಾರವೂ ಉಂಟು. ಶ. ದ. ಸೂ ೧೦೪.

೨೬೩. ನೆರೆಗುಂ — ಸೇರುವುದು, ಈ ಕ್ರಿಯೆ ಎಲ್ಲಾ ಕರ್ತೃಪದಗಳಿಗೂ ಆಯಾ ಲಿಂಗವನ್ನು ಅನುಸರಿಸಿ ಅನ್ವಯಿಸುವುದು, ಮಿಗ — ಮೃಗ (ಸಂ) ತುಱು — ಧೇನು, ಸಮಶೀಲದುಃಖರೊಳ್ — ಸಮಾನವಾದ ನಡೆತೆಯೂ ಸಮಾನವಾದ ದುಃಖವೂ ಉಳ್ಳವರಲ್ಲಿ, ನೇಹಂ — ಸ್ನೇಹ (ಸಂ)

೨೬೪. ನಿಮಿತ್ತಂ — ಕಾರಣ, ಮುನಿದನೊ — ಕೋಪಿಸಿಕೊಳ್ಳುವನೊ, ತಿಳಿವಂ — ಪ್ರಸನ್ನನಾಗುವನು, ಪಗೆವವನಂ — ದ್ವೇಷಿಸುವನನ್ನು, ಒಲಿಪಂ — ಪ್ರೀತಿಪಡಿಸುವನು.

೨೬೫. ಅನುರಕ್ತರ್ — ಅನುರಾಗವುಳ್ಳವರು, ವ್ಯಾಪೃತರ್ — ಆಸಕ್ತರು, ಅಱಿವರ್ — ತಿಳಿದವರು, ಅದ್ರೋಹಪ್ರವೃತ್ತಾತ್ಮಕರ್ — ದ್ರೋಹದಲ್ಲಿ ಪ್ರವರ್ತಿಸದವರು, ನಸು — ಸ್ವಲ್ಪ, ಕ್ಲಿಪ್ತಂ — ಗೊತ್ತಾದುದು, ಅಬ್ಧಿಸೇವನೆಯವೋಲ್ — ಸಮುದ್ರದ ಸೇವೆಯಂತೆ, ಶಂಕಿತಂ — ಭಯವುಳ್ಳುದು. ರಾಜನನ್ನಾಗಲಿ ಸಮುದ್ರನನ್ನಾಗಲಿ ನಿಶ್ಶಂಕನಾಗಿ ಸೇವಿಸಲಾಗುವುದಿಲ್ಲ; ಏಕೆಂದರೆ, ರಾಜನನ್ನು ಸೇವಿಸುವಾಗ ಎಲ್ಲಿ ಕೋಪಿಸಿಕೊಂಡು ಏನಮಾಡುವನೋ ಎಂದೂ, ಸಮುದ್ರದ ಹತ್ತಿರಿರುವಾಗ ಎಲ್ಲಿ ದೊಡ್ಡ ಅಲೆಗಳು ಬಂದು ಹೊಡೆದುಕೊಂಡು ಹೋಗುವುವೋ ಎಂದೂ ಭಯವಿರುವುದು; ಅದಕಾರಣ ಸಮುದ್ರನಂತೆ ಅಧೃಷ್ಯನಾದ ರಾಜನು ಗುಣಾಢ್ಯರಾದ ಸೇವಕರಿಗೂ ಯಾವಾಗಲೂ ಭಯೋತ್ಪಾದಕನಾಗಿರುವನೆಂದು ತಾತ್ಪರ್ಯ.

೨೬೬. ಕಡುರಾಗಂದಾಳುತುಂ — ಹೆಚ್ಚಾದ ಪ್ರೀತಿಯನ್ನು ಹೊಂದುತ್ತ, ಕಡುರಾಗ ಮುಂತಾದ ಕೆಲವು ಶಬ್ದಗಳಿಗೆ ಅರಿಸಮಾಸದೋಷವಿಲ್ಲವೆಂದು ಅವು ಪರಿಗ್ರಹಿಸಲ್ಪಟ್ಟವೆ. ಪೊಲ್ಲರ್ — ಕೆಟ್ಟವರು, ನಲ್ಲರ್ — ಒಳ್ಳೆಯವರು, ಛಡ — ಛೀಃ (ತಿರಸ್ಕಾರಾರ್ಥಕವಾದ ಅವ್ಯಯ) ಅರಯ್ವೊಡೆ — ವಿಚಾರಮಾಡಿ ನೋಡಿದರೆ, ಕಡಿದು — ಕಠಿನ, ದುರ್ಗಮಂ — ಗಮಿಸಲಸಾಧ್ಯವಾದುದು.

೨೬೭. ಸವತಿಯ—ಸಪತ್ನೀ (ಸಂ) ಸುಕೃತಾಭ್ಯುದಯವಂ—ಶ್ರೇಣ್ಯಾದೇಳಿಗೆಯನ್ನು, ಮೆಚ್ಚರಿಪ್ಪ—ಮತ್ಸರಿಸುವ.

೨೬೮. ಸಾಮಾನ್ಯರ—ಸಾಧಾರಣಜನಗಳ, ಮಹಾಗುಣೋಜ್ಜ್ವಲರ—ಶ್ರೇಷ್ಠವಾದ ಗುಣಗಳಿಂದ ಕಂಗೊಳಿಸುವವರ, ದೀವಿಗೆಯ—ದೀಪದ, ದೀಪಿಕಾ (ಸಂ) ಉರಿವೆಳಗು—ಉರಿಯ+ಬೆಳಗು (ದೀಪಜ್ವಾಲೆಯ ಬೆಳಕು) ಗಗನಮಣಿ—ಸೂರ್ಯನು, ಮೂಡಲೊಡಂ—ಉದಯಿಸಲು.

೨೬೯. ಚದುರರ್—ಚಾತುರ್ಯವುಳ್ಳವರು, ಮಾಯೋಪಜೀವಿಗಳ್—ವಂಚನೆಯಿಂದ ಜೀವಿಸುವವರು, ಕಾಕಾದಿಗಳ್—ಕಾಗೆ ಮುಂತಾದವುಗಳು, ಉಷ್ಟ್ರ—ಒಂಟೆ.

೨೭೦. ಅಳ್ಕದೆ—ಶಂಕಿಸದೆ, ಸದೆದಪಂ—ಕೊಲ್ಲುವನೊ, ಬ್ರಹ್ಮಹತಿಯ—ಬ್ರಹ್ಮಹತ್ಯೆಯ.

೨೭೧. ಎಂಬವೋಲ್—ಹೇಳುವಂತೆ, ಓದನದಾನಂ— ಅನ್ನದಾನವು, ಎನ್ನರ್—ಹೇಳರು.

೨೭೨. ಎಲ್ಲಂದದೊಳಂ—ಸರ್ವಪ್ರಕಾರದಿಂದಲೂ ಕುಲಸಾರಂ—ಕುಲದಲ್ಲಿ ಮುಖ್ಯನೂ ಉತ್ತಮನೂ ಆದ, ಗುಂಬಂ—ಚಕ್ರದ ಮಧ್ಯದಲ್ಲಿ ಅರೆಕಾಲುಗಳಿಗೆ ಆಶ್ರಯವಾದ ಗುಂಡಾದ ಮರ, ಅರಂಗಳ್—ಅರೆಕಾಲುಗಳು.

೨೭೩. ಸಿರಿಸದೆ—ಸಮೀಪದಲ್ಲಿ, ನಿರುಕಿಸುತಿರೆ—ನೋಡುತಿರುವಾಗ, ಹರಣದೆ—ಪ್ರಾಣದಿಂದ, ಪಕ್ಕಾಗುವಂ—ಗುರಿಯಾಗುವನು.

೨೭೪, ಅಸುದೆಱುವನೊ—ಅಸುವಂ+ತೆಱುವನೊ, ಜರೆಯುಂ—ಮುಪ್ಪು, ಪರಮಂ—ಶ್ರೇಷ್ಠವಾದ, ಪದಮುಂ—ಸ್ಥಾನವನ್ನು, (ಮುಕ್ತಿಯನ್ನು) ಕೃತಾರ್ಥಂ—ಧನ್ಯನಾದ.

೨೭೫. ಗಣಿಸದ—ಗಣನೆಗೆ ಬಾರದ, ಸೊಣಗಂ—ನಾಯಿ, ಶುನಕ (ಸಂ) ತಣಿವು—ತೃಪ್ತಿ, ಅಣಂ—ಸ್ವಲ್ಪವೂ.

೧೭೬. ಪೊರೆವ—ಪೋಷಿಸುವ, ಪಣದಾರ್ಜಿಸಿರ್ಪ+ಪಣದೆ+ಆರ್ಜಿಸಿರ್ಪ, ಸೇವಕರ ಪ್ರಾಣಗಳು ಅವರಧೀನವಲ್ಲ, ಪೋಷಕನಾದ ಸ್ವಾಮಿಯ ಅಧೀನಗಳು, ಸ್ವಾಮಿ ಅಪೇಕ್ಷಿಸಿದರೆ ಸೇವಕರು ತಮ್ಮ ಪ್ರಾಣಗಳನ್ನು ಆತನಿಗೆ ಒಪ್ಪಿಸಲೇಬೇಕು. ಹಣವನ್ನು ತೆತ್ತು ಸ್ವಾಧೀನಮಾಡಿಕೊಂಡಿರುವ ಸೇವಕರ ಪ್ರಾಣಗಳನ್ನು

ಸ್ವಾಮಿ ಬೇಕಾದಾಗ ಉಪಯೋಗಿಸಿಕೊಳ್ಳುವ ವಿಷಯದಲ್ಲಿ ದೋಷವೇನೂ ಇಲ್ಲ ವೆಂದು ತಾತ್ಪರ್ಯ.

೨೬೭. ಎಯ್ದೆಯುಂ—ಸೇರಿದರೂ, ಅಭಕ್ಷ್ಯಂ—ತಿನ್ನಬಾರದುದು, ಮಸಗಿದ—ವ್ಯಾಪಿಸಿದ, ಇಹಮುಂ ಪರಮುಂ—ಐಹಿಕಾಮುಷ್ಮಿಕಗಳನ್ನು, ಕಿಡಿಪ್ಪುದು—ನಾಶಮಾಡುವುದು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಕೇಡನ್ನುಂಟುಮಾಡುವುದೆಂದು ತಾತ್ಪರ್ಯ.

೨೬೮. ಎಡೆ—ಆಶ್ರಯ, ಸಮಯಕ್ಕೆ ಬೇಕಾಗುವರೆಂದು ಸತ್ಕುಲಪ್ರಸೂತರಾದ ಜನರನ್ನು ರಾಜರು ಸಂಗ್ರಹಿಸಿ ಇಟ್ಟುಕೊಂಡಿರುವರು, ಇದರಿಂದಲೇ ಅವರಿಗೆ ಯಾವಾಗಲೂ ಅಪಾಯವಿಲ್ಲವೆಂದು ತಾತ್ಪರ್ಯ.

೨೬೯. ಒಡೆಯನ ಬೆಸಸಿದ—ಒಡೆಯನು ಅಪ್ಪಣೆಮಾಡಿದ, ಪ್ರಥಮಾರ್ಥದಲ್ಲಿ ಷಷ್ಠಿ ಬಂದಿದೆ. ಅನುವರ್ತಿಗಳ್—ಆಶ್ರಯಿಸಿಕೊಂಡಿರುವರು, ಕಿಡದ—ನಾಶಹೊಂದದ, ಅಕ್ಷಯವಾದ; ಕಿಡು—ವಿನಾಶೆ ಎಂದು ಧಾತ್ವರ್ಥ. ಒಳ್ಜಸಂ—ಒಳ್ಳಿತು+ಜಸಂ, ಯಶಸ್ (ಸಂ) ಸತ್ಕೀರ್ತಿ. ನಿತ್ಯನಿವಾಸಂ—ಯಾವಾಗಲೂ ಇರುವಿಕೆ.

೨೭೦. ಬಗೆಯಿಂದಮಾದೊಡಂ—ಮನಸ್ಸಿನಿಂದಾದರೂ, ಆ ಕೇಡುಗಳೆ—ತನ್ನ ಜನಕ್ಕೆ ಉಂಟಾಗಲೆಂದು ತನ್ನ ಮನಸ್ಸಿನಲ್ಲಿ ಬಗೆದ ಕೇಡುಗಳೆ, ಇಹದೊಳ್ ಪರದೊಳ್—ಇಲ್ಲಿಯೂ ಪರಲೋಕದಲ್ಲಿಯೂ.

೨೭೧. ನೀಗಿದ—ಬಿಟ್ಟ, ನಲ್ಲಾಳ್ಗಳ್—ಉತ್ತಮರಾದ ಸೇವಕರು, ಅಂಪರ್—ಹೊಂದುವರೊ, ವಿಧಿಯಿಂದಂಯಾಗಮನೆಸಗಿದರುಂ—ವಿಧ್ಯುಕ್ತವಾಗಿ ಯಜ್ಞಮಾಡಿದವರೂ, ಈ ಯರ್ಥದಲ್ಲಿ ಸಂಸ್ಕೃತದ ಬಂದೇ ಪದ=ಯಜ್ವಾ.

೨೭೨. ಸಂಕಲಿಸಿದ--ಕೂಡಿದ, ಜನನಿಕುರುಂಬಂ—ಜನಸಮೂಹವು, ಖಲಗೃಧ್ರದಿಂದೆ—ದುಷ್ಟವಾದ ಹದ್ದಿನಿಂದ, ಕಲಹಂಸದೊಳ್—ರಾಜಹಂಸದಲ್ಲಿ, ಕಲ ಎಂದರೆ ಅವ್ಯಕ್ತಮಧುರವಾಗಿ ಧ್ವನಿಮಾಡುವಂತಹುದೆಂದರ್ಥ ಎಂತುಟು—ಹೇಂಗೊ, ಅಂತುಟು—ಹಾಗೆ, ಒಲ್ಲದು—ಪ್ರೀತಿಸುವುದಿಲ್ಲ. ದುಸ್ಸಹವಾಸದಿಂದ ಆದರವುಂಟಾಗುವುದಿಲ್ಲವೆಂದು ಅಭಿಪ್ರಾಯ.

೨೭೩. ಪರ್ದುವೊಲ್—ಹದ್ದಿನಂತೆ, ಪರಿಸೇವಿಪ್ಪುದು—ಸೇವಿಸಬೇಕು, ಅಂಚೆವೋಲ್ವ—ಅಂಚೆಯುಂ+ಪೋಲ್ವ, ಅಂಚೆ—ಹಂಸ (ಸಂ) ಅರಸಂಚೆವೋಲ್—

ರಾಜಹಂಸದಂತೆ, ತೊಱೆವುದು—ಬಿಡಬೇಕು. ರಾಜನು ಹದ್ದಿನಂತೆ ದುರುಳನಾಗಿದ್ದರೂ ಅವನ ಹತ್ತಿರಿರುವ ಜನಗಳು ಹಂಸಪಕ್ಷಿಗಳಂತೆ ಸಭ್ಯರಾಗಿದ್ದರೆ ಅಂತಹ ರಾಜನನ್ನು ಸೇವಿಸುವುದರಲ್ಲಿ ಅಪಾಯವೇನೂ ಇಲ್ಲ. ಏಕೆಂದರೆ ಅಂತಹ ದುರುಳನಾದ ರಾಜನೂ ಸಜ್ಜನರ ಸಂಗದಿಂದ ಅನುಕೂಲನಾಗುವನು. ರಾಜನು ರಾಜಹಂಸದಂತೆ ಮಾನ್ಯನಾಗಿದ್ದರೂ ಹತ್ತಿರಿರುವ ಜನಗಳು ಹದ್ದುಗಳಂತೆ ದುರುಳರಾಗಿದ್ದರೆ ಅಂತಹ ರಾಜನನ್ನು ಸೇವಿಸಬಾರದು. ಅವನಿಂದ ಅಪಾಯವುಂಟು; ಮುಖ್ಯವಾಗಿ ಸಹವಾಸವೆಂತಹುದೋ ಅದಕ್ಕೆ ತಕ್ಕಂತೆ ಮನುಷ್ಯನು ನಡೆವನೆಂದು ತಾತ್ಪರ್ಯ.

೨೮೪. ಮಿದು—ಮೃದು (ಸಂ) ಅಗೆವ—ಅಗೆಯಲ್ಪಡುವ, ಅಚಳದ—ಬಿಟ್ಟದ, ಹದಂಗೊಳಿಪುದು—ಮೆತ್ತಗೆಮಾಡುವುದು, ಮಿದುಗೊಳಿಸವೆ—ಮೆತ್ತಗೆಮಾಡಲಾರವೆ, ಮೆಲ್ಲೆರ್ದೆಯಂ—ಮೆಲ್ಲಿತು+ಎರ್ದೆ, ಮೃದುವಾದಮನಸ್ಸನ್ನು; ಪಿಸುಣ್ಗಿಳ್'—ಚಾಡಿಗಳು, ಪಿಸುಣನಭಾವ ಪಿಸುಣ'.

೨೮೫. ಶ್ರವಣವಿಷದಿಂದೆ—ಕೇಳುವಿಕೆಯೆಂಬ ವಿಷದಿಂದ, ಕೆಟ್ಟಂ—ಕೆಟ್ಟುಹೋದ, ಬೌದ್ಧವಿರಕ್ತಂ—ಬೌದ್ಧಸಂನ್ಯಾಸಿ, ನರಕಪಾಲದೊಳ್'—ಮನುಷ್ಯನ ತಲೆಬುರುಡೆಯಲ್ಲಿ, ಕಳ್ಗುಡಿವಂ—ಮದ್ಯವನ್ನು ಕುಡಿಯುವನು. ವಿಷದಂತೆ ಕ್ರೂರವೂ ಅಪಾಯಕರವೂ ಆದ ದುರ್ಜನರ ಮಾತಿಗೆ ಕಿವಿಗುಡುವವನು ಅವಿವೇಕದಿಂದ ಎಂತಹ ಅಕಾರ್ಯವನ್ನಾದರೂ ಮಾಡಿ ಕೆಟ್ಟುಹೋಗುವನೆಂದು ತಾತ್ಪರ್ಯ

೨೮೬ ಲಗುಡದಿಂ -ದಂಡದಿಂದ, ಮುಳಿಸಿಂ—ಕೋಪದಿಂದ, ತುಡುಕುಗುಂ—ಥಟ್ಟನೆ ಹಿಡಿಯುವುದೋ, ತುಡುಕು ತುಡುಂಕು—ಸತ್ವರಗ್ರಹಣೆ ಎಂದು ಧಾತ್ವರ್ಥ; ಕೊಲ್ಗುಗುಂ -ಕೊಲ್ಲುವುದು, ಇಲ್ಲಿ ಕೊಲ್'ಧಾತುವಿನಮೇಲೆ ಗುಂ ಎಂಬುದಕ್ಕೆ ಬದಲಾಗಿ ಶಬ್ದಾನುಶಾಸನದ ೪೬೪ ನೆಯ ಸೂತ್ರದ ಪ್ರಕಾರ ಗುಗುಂ ಎಂದು ಸೇರಿದೆ; ಇದರಿಂದ ಕೊಲ್ಗುಂ ಕೊಲ್ಗುಗುಂ ಎಂದು ಎರಡುರೂಪಗಳು, ಪಾಂಗು—ರೀತಿ, ಹಾವು ಯಾವನನ್ನು ಹಲ್ಲಿನಿಂದ ಹಿಡಿಯುವುದೊ ಅವನ ಪ್ರಾಣವು ಹೋಗುವುದು, ದುಷ್ಟನಾದ ಚಾಡಿಕೋರನು ಒಬ್ಬನಕಿವಿಯನ್ನು ಆಕರ್ಷಿಸಲು, ಇನ್ನೊಬ್ಬನ ಪ್ರಾಣವು ಹೋಗುವುದು, ಎಂದರೆ ಒಬ್ಬನಲ್ಲಿ ಚಾಡಿಯನ್ನು ಹೇಳಿ ಮತ್ತೊಬ್ಬನನ್ನು ಕೊಲ್ಲಿಸುವನೆಂದರ್ಥ; ಹಾವಿಗಿಂತಲೂ ಚಾಡಿಕೋರನು ವಿಲಕ್ಷಣವಾದ ಕ್ರೂರಸ್ವಭಾವವುಳ್ಳವನೆಂದು ತಾತ್ಪರ್ಯ

೨೮೭. ಖಳಸರ್ಪಂ—ದುಷ್ಟನೆಂಬ ಹಾವು, ಬಗೆ—ರೀತಿ, ನಿಕ್ಕುವಂ—ನಿಶ್ಚಯ, ಕಿವಿಗೊಳೆ—ಕಿವಿಯುಂ+ಕೊಳೆ, ಚೆಕ್ಕನೆ—ಥಟ್ಟನೆ, ಮೇಲಣ ಪದ್ಯದ ಅಭಿಪ್ರಾಯವೆ ಇದರಲ್ಲಿಯೂ ಇರುವುದು.

೨೮೮. ತರದಿಂ—ಕ್ರಮದಿಂದ, ಉನ್ಮಾರ್ಗದೆ—ಲೋಕದ ನಡತೆಯನ್ನು ಅತಿಕ್ರಮಿಸಿದ ಮಾರ್ಗದಲ್ಲಿ, ನಿರ್ಭರದಿಂ—ಅತಿಶಯದಿಂದ, ನಿಜಗುರುವುಮಂ—ತನ್ನ ತಂದೆಯನ್ನಾದರೂ, ವಿಹಿತಂ—ಯೋಗ್ಯವು.

೨೮೯. ಪೊಲ್ಲದೆಸಗಿದ—ಕೆಡಕನ್ನುಂಟುಮಾಡಿದ, ಮತಿಯುತರ್ ಅವರ್—ಆ ಬುದ್ಧಿಶಾಲಿಗಳು, ಉರುಭುಜರು—ದೊಡ್ಡ ತೋಳುಳ್ಳವರು, ಅಱುಗುಲಿಯಂ—ಹಿಂಸಕನನ್ನು, ಇಱಿವರ್—ಘಾತಿಸುವರು. ದೊಡ್ಡವರಿಗೆ ಕೆಡಕನ್ನುಂಟುಮಾಡಿದವನು ಎಲ್ಲಿಯೋ ತಲೆತಪ್ಪಿಸಿಕೊಂಡು ಹೋಗಿ "ನಾನು ಇಲ್ಲಿ ದೂರದಲ್ಲಿದೇನೆ, ಅವರ ಕೈಗೆ ಸಿಕ್ಕೆನು; ಅವರು ನನಗೆ ಏನನೂ ಮಾಡಲಾರರು" ಎಂದು ನಿಶ್ಚಿಂತನಾಗಿ ಇರಲಾಗದು, ಅವರು ಬುದ್ಧಿಶಾಲಿಗಳು; ಎಲ್ಲಿದ್ದರೂ ಬಿಡದೆ ಕೇಡಿಗನನ್ನು ಹಿಡಿದು ಧ್ವಂಸಮಾಡುವರು. ಅವರಿಗೆ ಬುದ್ಧಿಯೇ ದೊಡ್ಡತೋಳು, ಅದರಿಂದ ದೂರದಲ್ಲಿದ್ದವರನ್ನೂ ಎಳೆದುಕೊಳ್ಳಬಹುದು—ಎಂದು ತಾತ್ಪರ್ಯ.

೨೯೦. ಅದಾವುವಂ ಗತಿಗಳಂ—ಯಾವ ಗತಿಗಳನ್ನು, ಅವಂ—ಅವುಗಳನ್ನು, ತ್ರಿದಿವಸ್ಪೃಹರುಂ—ಸ್ವರ್ಗಕಾಮಿಗಳೂ, ಸುವೃತ್ತದೆ—ಉತ್ತಮವಾದ ನಡತೆಯಿಂದ.

೨೯೧. ಬವರದೆ—ಯುದ್ಧದಲ್ಲಿ, ದಿವಮುಂ—ಸ್ವರ್ಗವನ್ನು, ಬೀರರ್—ವೀರ (ಸಂ) ಭುವನಕ್ಕೆ ಲೋಕಕ್ಕೆ, ಅಗ್ಗಳಂ—ಅತಿಶಯ.

೨೯೨. ನೊಸಲಿಂ—ಹಣೆಯಿಂದ, ಬಿಸುನೆತ್ತರ್—ಬಿಸಿದಾದ ರಕ್ತ, ಜನ್ನದೊಳ್—ಯಜ್ಞ (ಸಂ) ಸುವಿಧಾನದ—ಒಳ್ಳೆಯ ವಿಧಿಯುಳ್ಳ, ಸೋಮರಸದ—ಸೋಮವೆಂಬ ಲತೆಯ ರಸದ. ಯಜ್ಞದಲ್ಲಿ ವಿಧ್ಯುಕ್ತವಾಗಿ ಸೋಮವೆಂಬ ಲತೆಯನ್ನು ಕುಟ್ಟಿ ಅದರ ರಸವನ್ನು ಯಜಮಾನನೂ ಋತ್ವಿಜರೂ ಪಾನಮಾಡುವರು; ಅದು ಬಹುಪಾವನವಾದುದು.

೨೯೩. ಉಕ್ತ—ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟ, ವಿಪ್ರೇಂದ್ರ—ಬ್ರಾಹ್ಮಣೋತ್ತಮರ, ಚಾಂದ್ರಾಯಣಾದ್ಯಂಗಳಿಂ—ಚಾಂದ್ರಾಯಣ ಕೃಛ್ರ ಸಾಂತಪನ ಮುಂ

ತಾದ ಪ್ರಾಯಶಿತ್ತಗಳಿಂದ. ಪಾಪಪರಿಹಾರಕ್ಕೋಸ್ಕರವೂ ಪುಣ್ಯಪ್ರಾಪ್ತಿಗೋಸ್ಕರವೂ ಧರ್ಮಶಾಸ್ತ್ರಗಳಲ್ಲಿ ಉಕ್ತವಾದ ಪ್ರಾಯಶ್ಚಿತ್ತಗಳಲ್ಲಿ ಚಾಂದ್ರಾಯಣವೆಂಬುದೂ ಒಂದು. ಇದರ ಲಕ್ಷಣವೇನೆಂದರೆ—ತಿಂಗಳ ಕೃಷ್ಣಪಕ್ಷದ ಪಾಡ್ಯಮಿಯಲ್ಲಿ, ಹೇಳಿರುವ ಪ್ರಮಾಣದಷ್ಟು ೧೪ ಕಬಳಗಳನ್ನು ಆಹಾರಮಾಡಿ ಮರುದಿವಸ ೧೩ ಅದರ ಮರುದಿವಸ ೧೨ ಹೀಗೆ ಒಂದೊಂದು ದಿವಸಕ್ಕೆ ಒಂದೊಂದು ಕಬಳವನ್ನು ಕಡಿಮೆಮಾಡಿ ಆಹಾರಮಾಡುತ್ತ ಅಮಾವಾಸ್ಯೆಯ ದಿನ ಆಹಾರವಿಲ್ಲದೆಯೆ ಇದ್ದು ಶುಕ್ಲಪಕ್ಷದ ಪಾಡ್ಯಮಿಯಲ್ಲಿ ಒಂದು ಕಬಳವನ್ನು ಪ್ರಾರಂಭಿಸಿ ಮರುದಿವಸ ೨ ಅದರ ಮರುದಿವಸ ೩ ಹೀಗೆ ಒಂದೊಂದು ಕಬಳವನ್ನು ಹೆಚ್ಚಿ ಸಿ ಪೂರ್ಣಿಮೆಯ ದಿವಸ ಆಗುವ ೧೫ ಕಬಳಗಳನ್ನು ಆಹಾರಮಾಡಬೇಕು. ಅದಕ್ಕೆ ಸೇರಿದಂತೆ ಮಾಡಬೇಕಾದ ಸ್ನಾನದಾನಬ್ರಾಹ್ಮಣಸಂತರ್ಪಣಗಳನ್ನೂ ನಡೆಯಿಸಬೇಕು. ಹೀಗೆಯೇ ಉಳಿದ ಪ್ರಾಯಶ್ಚಿತ್ತಗಳ ಲಕ್ಷಣವೂ ಬೇರೆಬೇರೆಯಾಗಿರುವುದು.

೨೯೪. ಹಗೆ—ಶತ್ರು, ಶತ್ರುತ್ವವೆಂದೂ ಅರ್ಥವಾಗುವುದುಂಟು, ದಿಟ್ಟಿಗೆ—ದೃಷ್ಟಿ (ಸಂ) ಪೊಲಂ—ಆಶ್ರಯ, (ದೃಗ್ಗೋಚರ) ಶಾರದ—ಶರತ್ಕಾಲದಲ್ಲಿರುವ, ಮೆಱೆಯಲ್ವೇಳ್ಕುಂ—ಪ್ರಕಾಶಿಸಬೇಕು.

೨೯೫. ಬೇರಮಂ—ವೈರ (ಸಂ) ಕಡಲ್ ಟಿಟ್ಟಭದತ್ತಣಿಂ ಮಿಗೆ ಏಳಿದಮಂ ಎಯ್ದಿದವೊಲ್ ಎಂದನ್ವಯ.

೨೯೬. ಬಾಂಬರಂ—ಬಾನ್+ವರಂ, ಆಕಾಶದವರೆಗೂ, ಅಳುರುತ್ತುಂ—ಆವರಿಸುತ್ತ, ಇಂಬು—ಆಶ್ರಯ, ಬೆಗಡು—ಭಯ, ಪಜ್ವಳಿಸುವ—ಪ್ರಜ್ವಲಿಸುವ, ಸಂಭ್ರಮದೆ—ಸಡಗರದಿಂದ, ಕುರುಂಬಂ—ಕುರುಬನು.

೨೯೭. ಕುಂಬಮಂ—ಕುಂಭ (ಸಂ) ಸಿಂಹವೇ ಮಹಾಕ್ರೂರವಾದುದು, ಅದು—ಮದದಾನೆಯ ಕುಂಭಸ್ಥಲವನ್ನು ಸೀಳಿ ಆಯಾಸಪಟ್ಟಿರುವಾಗ ಅದನ್ನು ಯಾರುತಾನೇ ಎಚ್ಚರಗೊಳಿಸಲಾದೀತು? ಒಂದುವೇಳೆ ಹಾಗೆಮಾಡುವವನು ನಾಶಹೊಂದದೆ ಇರನೆಂದು ತಾತ್ಪರ್ಯ.

೨೯೮. ಜವರಾಯ—ಯಮರಾಜ (ಸಂ) ಪೆಳಱದೆ—ಹೆದರದೆ. ಅನಿತಾರ್ಪು—ಅಷ್ಟುಶಕ್ತಿ, ಎನತು—ನನ್ನದು.

೨೯೯. ಐಕಿಲ—ಮಂಜಿನ, ತಣ್ಗಾಳಿ—ತಣ್ಣಿತು+ಗಾಳಿ, ಕಳೆವೊಂ—ಕಡೆಯ ಅಕಾರಕ್ಕೆ ವೈಕಲ್ಪಿಕವಾದ ಒತ್ವ ಬಂದಿದೆ. ಶ. ದ. ಸೂ ೧೫೭.

೩೦೦. ತನತ್ತು—ತನ್ನದು, ಠಾಣ—ಸ್ಥಾನ (ಸಂ) ಪುತ್ರಿಣಿ—ಪುತ್ರನುಳ್ಳವಳು, ಅಪುತ್ರಿಣಿ—ಪುತ್ರನಿಲ್ಲದವಳು, ಅವಮಾನಕ್ಕೆ ಹೆದರಿ ತನ್ನ ಸ್ಥಳವನ್ನು ಬಿಟ್ಟುಹೋಗುವನು ಅವಿವೇಕಿ, ಅಂತಹ ಮಗನನ್ನು ಪಡೆದವಳಿಗೂ ಮಕ್ಕಳನ್ನೇ ಪಡೆಯದವಳಿಗೂ ಏನುವ್ಯತ್ಯಾಸ ? ಅಂತಹ ಮಗನು ಇದ್ದರೂ ಏನೂ ಫಲವಿಲ್ಲವೆಂದು ತಾತ್ಪರ್ಯ. ಅವಮಾನವಾದರೂ ಸೈರಿಸಿ ಕಾರ್ಯಸಾಧನದಿಂದ ಸುಖಹೊಂದಬೇಕೆಂಬುದು ಭಾವವು.

೩೦೧. ಬಾನ—ಆಕಾಶದ, ಬಾನಭಂಗದ ಭಯದಿಂ—ಆಕಾಶವುರಿದು ಎಲ್ಲಿ ಬೀಳುವುದೋ ಎಂಬ ಭಯದಿಂದ.

೩೦೨. ಬಯಪ—ಬಯಸುವ, ಒಳ್ವಾತಂ—ಒಳ್ಳಿತು+ಮಾತು, ಧೃತಕಾಷ್ಠದೆ—ಹಿಡಿದ ಕಡ್ಡಿಯಿಂದ.

೩೦೩. ಪಡಂಗು—ಹಡಗು, ಪಡಂಗುವರದಂ—ಹಡಗಿನ ವ್ಯಾಪಾರಿ, ಸಂಸ್ಕೃತದಲ್ಲಿ " ಸಾಂಯಾತ್ರಿಕ " ಎಂದು ಹೆಸರು.

೩೦೪. ಆತಂಕಿಪ—ದುಃಖಪಡುವ, ಎಂದುಂ—ಯಾವಾಗಲೂ, ಕಡು—ಹೆಚ್ಚಾಗಿ, ಎಂದುಂ—ಹೇಳಿರುವನು.

೩೦೫. ಚೆನ್ನನೆ—ಚೆನ್ನಾಗಿ, ನನ್ನಿ—ನಿಶ್ಚಯ. ಕೆನ್ನಂ—ವಿಶೇಷವಾಗಿ,

೩೦೬. ಅದಟಿಗಂ—ಅದಟುಳ್ಳವನು, ಪರಾಕ್ರಮಶಾಲಿ, ಓಡವೇಳ್ಪುದು—ಓಡಿಹೋಗಬೇಕು ; ಮೇಣ್—ಅಥವಾ, ತಳ್ವದೆ—ವಿಲಂಬಿಸದೆ, ಐದಲ್ವೇಳ್ಪುದು-ಸೇರಬೇಕು.

೩೦೭. ಮಾಯೆ—ವಂಚನೆ ಅಥವಾ ಕಪಟ, ಪಂದೆತನ—ಹೇಡಿತನ, ಕಾಪುರುಷರ್—ನೀಚಮನುಷ್ಯರು, ಕುತ್ಸಿತ ಎಂಬುದಕ್ಕೆ ಕಾ ಎಂದಾದೇಶವುಂಟಾಗಿದೆ.

೩೦೮. ಎತ್ತಂ—ಎಲ್ಲೆಲ್ಲಿಯೂ, ಬಾವಿ—ವಾಪಿ (ಸಂ) ಎಂಬಂ—ಎಂದು ಹೇಳುವವನು.

೩೧೦. (೩೦ನೆಯ ಪದ್ಯದ ಟಿಪ್ಪಣವನ್ನು ನೋಡಿ)

೩೧೧. ಅವರ್ಗೆಯೆ—ಅವರಿಗೇನೇ, ಉರಿಪುವುದು—ಸುಡುವುದು, ಬಿಸುಪೇಱಿದ—ಬಿಸಿಹೊಂದಿದ, ಸಮಂತು—ಚೆನ್ನಾಗಿ:

೩೧೨. ಎರ್ದೆಯುತ್ಸಾಹಂ—ಹೃದಯದಾಸಕ್ತಿ, ಮಿಗೆ—ಹೆಚ್ಚಾಗಿರಲು, ಇದಿರ್ಪೋದಪಂ—ಎದುರಾಗಿ ಹೋಗುವನು, ತಲಭಂಬೊಲ್—ಮಿಡಿತೆಯಂತೆ.

೩೧೩. ಸೆಣಸುವಾತಂ—ಹೋರಾಡುವನು, ಅಲಸದೆ—ಅಲಸ್ಯಪಡದೆ, ಪರಿಪೂರ್ಣನಾದ—ಶಕ್ತಿಸಂಪನ್ನನಾದ, ನೆಱೆವೆಱೆಯ—ಪೂರ್ಣಚಂದ್ರನನ್ನು ಚಾಟ್-ರಾಹು, ಇಂದುಂ—ಈಗಲೂ, ಇದಿರ್ಗೆ—ಎದುರಿಗೆ.

೩೧೪. ಅಂಗದೆ—ಅವಯವದಲ್ಲಿ ಪಿರಿದುಂ—ದೊಡ್ಡದೂ, ಕಱಂಗಿದ—ಕಪ್ಪಗಿರುವ, ಮದಂ—ಮದೋದಕವು, ಒಸರ್ವ—ಸುರಿಯುವ, ಗಂಡಂ—ಕಪೋಲ, ಉತ್ತುಂಗ—ಎತ್ತರವಾದ, ಉತ್ತಮಾಂಗದೆ—ತಲೆಯಲ್ಲಿ, ಸಿಂಗಂ—ಸಿಂಹ (ಸಂ) ಪಿಂಗದೆ—ಪಿಂಜರಿಯದೆ, ಪಿಂಗು ಅಪಸರಣೆ ಎಂದುಧಾತ್ವರ್ಥ.

೩೧೫. ಎಳಬಿಸುಗದಿರನ—ಬಾಲಸೂರ್ಯನ, ಬೆಚ್ಚನೆ ಕದಿರ್ಗಳಾವಂಗುಂಟೊ ಅವಂಬಿಸುಗದಿರಂ (ಉಷ್ಣರಶ್ಮಿ) ಪಾದಂಗಳ್—ಕಿರಣಗಳು ಮತ್ತು ಕಾಲ್ಗಳು, ಇಳಾಭೃತ್ಕುಲದ = ಇಳಾಭೃತ್—ಪರ್ವತ ಮತ್ತು ರಾಜ; ಸಾಜಂ—ಸಹಜವಾದ, ಹರಯಂ—ಪ್ರಾಯ (ವಯಸ್ಸು) ಏವುದೊ—ಏತಕ್ಕೆ ಬಂದುದೊ

೩೧೬. ಇಭಂ—ಆನೆ, ಅಂಕುಶಕ್ಕೆ—ಭರ್ಜಿಗೆ, ಪರಿವುದು—ನಾಶಹೊಂದುವುದು, ಮರ್ಬು—ಕತ್ತಲೆ, ದೀವಿಗೆ—ದೀಪಿಕಾ (ಸಂ) ದೊಡ್ಡಿತೆ—ದೊಡ್ಡದೆ, ವಜ್ರದಿಂ—ವಜ್ರಾಯುಧದಿಂದ, ಉರುತರ—ಅತಿಮಹತ್ತಾದ,

೩೧೭. ಎಡೆ—ಆಶ್ರಯ, ಉಱೆನಿಡಿಯವು—ಬಹುದೀರ್ಘವಾದುವು, ಕಾಲವು ಮುಂದೆ ಎಷ್ಟೋ ಇದೆ ಎಂದರ್ಥ; ಶರನಿಧಿ—ಸಮುದ್ರ, ಶೋಷಣ—ಬತ್ತುವಿಕೆ.

೩೧೮. ಎನ್ನೆವರಂ—ಎಂದಿನವರೆಗೆ, ಪೌರುಷಕರಂ—ಪ್ರಯತ್ನಮಾಡುವವನು, ಪೆಂಪಂ—ಗೌರವವನ್ನು ಅಂಪುದು—ಹೊಂದುವುದು, ಅರಿದು—ಅಶಕ್ಯ, ಅನ್ನೆವರಂ—ಅಂದಿನವರೆಗೆ, ತರಣಿಯುಂ—ಸೂರ್ಯನೂ, ತುಲೆಯಂ—ತುಲಾರಾಶಿಯನ್ನು, ನೆರೆದ—ಸೇರಿದ, ಮುಗಿಲ್ವಿಂಡಂ—ಮೇಘಸಮೂಹವನ್ನು.

೩೧೯. ದುರ್ಜಯರ್—ಜಯಿಸಲಸಾಧ್ಯರು, ರಜ್ಜು—ಹಗ್ಗ.

೩೨೦. ಕಲವಿಂಕಿ—ಹೆಣ್ಣುಗುಬ್ಬಿ. ಕಲನಾದ—ಅವ್ಯಕ್ತಮಧುರವಾದ ಧ್ವನಿ, ನೊಳನುಂ—ನೊಣವೂ, ವಿಲಯಮಂ—ನಾಶವನ್ನು, ಬಂದಿತ್ತು—ಹೊಂದಿತು, ವನೇಭಂ—ಕಾಡಾನೆ,

೩೨೧. ಆವಗಂ—ಯಾವಾಗಲೂ, ಅಶೋಚ್ಯರಂ—ಯಾರವಿಷಯದಲ್ಲಿ ಶೋಕಿಸಬಾರದೋ ಅಂತವರನ್ನು, ತೀವಿದ—ತುಂಬಿದ, ದುಗುಡದೆ—ದುಃಖದಿಂದ, ನೋವಂ—ನೋ ವ್ಯಥಾಯಾಂ ಎಂಬ ಧಾತುವಿನ ಭಾವನಾಮವು; ವ್ರತಾಚರಣಾರ್ಥಕವಾದ ನೋನ್ ಎಂಬ ಒಂದು ಧಾತುವುಂಟು; ಅದರ ಭಾವನಾಮ ನೋಂಪಿ, ಇಲ್ಲಿ ಎರಡನರ್ಥಗಳೆಂದರೆ ತಾನು ದುಃಖಪಡುವುದು ಒಂದು; ಆ ದುಃಖದಿಂದ ತನ್ನದೇಹಕ್ಕೆ ತಂದುಕೊಳ್ಳುವ ಅಸ್ವಸ್ಥತೆಯೊಂದು.

೩೨೨. ಕುದಿದು—ಸಂತಪಿಸಿ, ಇಟ್ಟುದಂ—ಸುರಿಸಿದ, ಶ್ಲೇಷ್ಮದ ಕಣ್ಣೀರಂ—ಶ್ಲೇಷ್ಮದಿಂದ ಕೂಡಿದ ಕಣ್ಣೀರನ್ನು ಪರೇತಂ—ಪರ+ಇತ=ಪರಲೋಕಹೊಂದಿದವನು ಸತ್ತವನು, ಈಂಟುಗುಂ—ಕುಡಿವನು, ಅವಶಂ—ಸ್ವಾಧೀನತೆಯಿಲ್ಲದವನಾಗಿ, ಅರ್ಪನಿತು—ಶಕ್ತಿಯಿರುವಷ್ಟು.

೩೨೪. ಬೊಲ್ಲದಂ—ಕೆಟ್ಟುದನ್ನು, ಮಗುೞ್ದು—ಮತ್ತೆ.

೩೨೫. ಕಟ್ಟಿಡಱೊಳ್—ಕಡಿದು+ಎಡಱ್, ಮಹಾಸಂಕಟದಲ್ಲಿ, ದಲ್—ನಿಶ್ಚಯ, ಕಟ್ಟೈಸಿರಿ—ಕಡಿದು+ಐಸಿರಿ, ಮಹೈಶ್ವರ್ಯ; ಇಟ್ಟಣಿಸಿರೆ—ಒತ್ತಾಗಿ ಸೇರಿರಲು, ತೊಟ್ಟನೆ—ಥಟ್ಟನೆ.

೩೨೬. ತೊಳಗುವಂ—ಪ್ರಕಾಶಿಸುವನು, ಓಲಗಿಸುತೆ—ಸೇವಿಸುತ್ತ, ಭಾರ್ಯೆಯೆಂಗುಂ—ಮಡದಿಯೆಂದು ಹೇಳಲ್ಪಡುವಳು.

೩೨೭. ಸ್ನೇಹಿತರು ತಮ್ಮ ಸ್ನೇಹಿತರಿಗೆ ಪ್ರತ್ಯುಪಕಾರಮಾಡುವಂತೆ ಆ ಸ್ನೇಹಿತರೂ ತಮ್ಮ ಸ್ನೇಹಿತರಾದುದರಿಂದ ಅವರಿಗೂ ಉಪಕಾರಮಾಡುವರೆಂದು ತಾತ್ಪರ್ಯ.

೩೨೮. ಸುಶ್ರುತರಿಂ—ಚೆನ್ನಾಗಿ ಶಾಸ್ತ್ರತಿಳಿದವರಾದ, ಪರಿಚಿಂತಿತಂ—ಆಲೋಚಿಸಲ್ಪಟ್ಟುದು, ಬೇಱೆಯಾಗದು—ಅನ್ಯಥಾ ಆಗುವುದಿಲ್ಲ ಎಂದರೆ ಅವರು ಆಲೋಚಿಸಿದಂತೆಯೆ ನೆರವೇರುವುದೆಂದರ್ಥ.

೩೨೯. ಚಲವಾಂತು—ಛಲವನ್ನು ಹೊಂದಿ, ಅಗ್ಗಳಂ—ಅಧಿಕನು, ಉರ್ಕಿಂ—ಉದ್ಧತಭಾವದಿಂದ, ಪಲ್ಲಿಡಿದ—ದಂತಮುರಿದುಹೋದ, ಪಲ್ಲಮುರಿವೋಲ್—ಆನೆಯಂತೆ, ಮರಲ್ವಂ—ಹಿಂತಿರುಗುವನು.

೩೩೦. ಕವಡು—ಕಪಟ (ಸಂ) ನಚ್ಚಿನ—ಪ್ರೀತಿಯ (ನಂಬುಗೆಯೆಂದೂ ಅರ್ಥವುಂಟು) ಬಲ್ಲೊಡೆಯನೊಳಂ—ಬಲಿಷ್ಠನಾದ ಸ್ವಾಮಿಯಲ್ಲಿಯೂ, ಅಱಲಂ.

ದುಃಖವನ್ನು, ಜನವಱಲಸಱಪಿ ಎಂಬುದಕ್ಕೆ ಬದಲಾಗಿ ಜನವಱಪಿ ಎಂದು ಮೂಲ ದಲ್ಲಿ ಅಚ್ಚಿನತಪ್ಪುಬಿದ್ದಿದೆ.

೩೩೧. ನಿರಿಕಿಸಿ—ನೋಡಿ, ಪರಮಾರ್ಥಂ—ಯಥಾರ್ಥವಾದ ಸಂಗತಿ.

೩೩೨. ಸಾಸಿಗರ್—ಸಾಹಸಿಗಳು, ಸಾಸ—ಸಾಹಸ (ಸಂ) ಅರಯ್ದು—ವಿಚಾರಮಾಡಿ. ಒಱಲ್ದು—ಪ್ರೀತಿಸಿ,

೩೩೩. ಅಂಶಂ—ಭಾಗ, ಪೊರೆವ—ಪೋಷಿಸುವ,

೩೩೪. ಪರಿಪೀಡನತಾಪದಿಂದ—ಹಿಂಸೆಮಾಡುವುದರಿಂದುಂಟಾದ ಸಂಕಟ ದಿಂದ, ಐದೆ—ಚೆನ್ನಾಗಿ,

೩೩೫. ಕಣ್ಣಿಲಿಗಳ್ಗೆ—ಕಣ್ಣಿಲ್ಲದವರಿಗೆ,

೩೩೬. ಫಲವೆಳಪ—ಫಲವನ್ನು ಅಪೇಕ್ಷಿಸುವ, ಅಲಸದೆ—ಆಲಸ್ಯಪಡದೆ, ದಾನಮಾನಾದಿಗಳಿಂ—ಕುಡುವುದು ಸನ್ಮಾನಿಸುವುದು ಮುಂತಾದವುಗಳಿಂದ, ತೋಟಗಾರನ ವಿಷಯದಲ್ಲಿ=ದಾನ—ಕತ್ತರಿಸುವುದು, ಮಾನ—ಅಳೆತೆ ಎಂದರೆ ಅಳೆತೆಗೆ ತಕ್ಕಂತೆ ಗಿಡಗಳನ್ನು ಕತ್ತರಿಸುವುದು ಮುಂತಾದವುಗಳಿಂದ ಎಂದರ್ಥ.

೩೩೭. ಮೊಳಕೆ ಚಿಕ್ಕದಾದರೂ ಅದನ್ನು ಅಕ್ಕರೆಯಿಂದ ಪೋಷಿಸಿದರೆ ಅದು ದೊಡ್ಡದಾಗಿ ಎಂತು ಫಲವನ್ನು ಕುಡುವುದೋ ಅಂತು ಪ್ರಜೆಗಳನ್ನು ಅಲ್ಪರೆಂದು ಅಲಕ್ಷ್ಯಮಾಡದೆ ಪ್ರೀತಿಯಿಂದ ಪೋಷಿಸಿದರೆ ಅಭಿವೃದ್ಧಿಪಡೆದ ಅವರಿಂದಲೂ ತಕ್ಕ ಫಲವುಂಟಾಗುವುದೆಂದು ತಾತ್ಪರ್ಯ.

೩೩೮. ಪೊನ್ನಂ—ಚಿನ್ನವೂ, ಬೇರೆಡೆಯಲ್ಲಿ ಅರ್ಥಾಂತರ ಗೊಬ್ಬರ; ಕೆನ್ನಂ-ವಿಶೇಷವಾಗಿ, ರಾಜನಿಗೆ ಇರುವ ಸಕಲೈಶ್ವರ್ಯವೂ ಪ್ರಜೆಗಳಿಂದ ಬಂದುದಾದಕಾರಣ ಅವರನ್ನು ಅನಾದರಿಸಬಾರದೆಂದು ಭಾವವು.

೩೩೯. ಪರಿಚರಿಸಲ್ಬಾರದು—ಸೇವಿಸಬಾರದು, ಕರಂ—ಹೆಚ್ಚಾಗಿ,

೩೪೦. ಕುಲೀನಂ—ಉತ್ತಮಕುಲದಲ್ಲಿ ಹುಟ್ಟಿದವನು. ತೊೞ್ತಂ—ಸೇವಕನನ್ನು, ಸಿರಿವೇೞ್ಪ—ಸಂಪತ್ತುಬೇಕೆಂಬ.

೩೪೧. ಸರಿಸದ—ಸಮೀಪದ, ಪರಿತೋಷಿತರ್—ಸಂತೋಷಪಡಿಸಲ್ಪಟ್ಟವರು. ಒಱಲ್ದು—ಪ್ರೀತಿಗೊಂಡು,

೩೪೨. ಲಾಘುವಮಂ—ಅಲ್ಪತನವನ್ನು, (ಲಘುವಿನಭಾವ) ಲಾಘವ ಎಂಬುದಕ್ಕೆ ಬದಲಾಗಿ ಕೆಲವರು ಅಲಾಘವ ಎಂದು ಮಾತನಾಡುವರು, ಇದು ಸರಿಯಲ್ಲ; ಅಲಾಘವವೆಂದರೆ ಗೌರವವೆಂದೇ ಅರ್ಥ.

೩೪೩. ತ್ರಪೆಯುಂ—ಲಜ್ಜೆಯೂ,

೩೪೪. ಉಜಿಗೆ—ಬಿಡಬೇಕು. ಒಬ್ಬನಿಂದ ಕುಲವು ಕಿಡುವಂತಿದ್ದರೆ ಅಂತವನನ್ನು ಬಿಟ್ಟುಬಿಡಬೇಕು. ಅವನನ್ನು ಸೇರಿಸಿಕೊಂಡು ಕುಲವನ್ನು ಕಿಡಿಸಬಾರದು. ಒಬ್ಬ ಹೋದರೂ ಕೊರತೆಯಿಲ್ಲ, ಕುಲವು ಚೆನ್ನಾಗಿರಬೇಕು. ಕುಲದಿಂದ ಊರಿಗೇ ಕೇಡಾಗುವಂತಿದ್ದರೆ ಅಂತಹ ಕುಲವನ್ನು ಬಿಟ್ಟುಬಿಡಬೇಕು. ಊರಿಂದ ದೇಶಕ್ಕೇ ಕೇಡಾಗುವಂತಿದ್ದರೆ ಅಂತಹ ಊರನ್ನು ಬಿಟ್ಟುಬಿಡಬೇಕು. ದೇಶದಿಂದ ತನಗೇ ಕೇಡಾಗುವಂತಿದ್ದರೆ ಅಂತಹ ದೇಶವನ್ನೇ ಬಿಟ್ಟುಬಿಡಬೇಕೆಂದು ತಾತ್ಪರ್ಯ.

೩೪೫. ಅಪನ್ನಾಶಕೆ—ಬರತಕ್ಕ ಅಪತ್ತನ್ನು ಪರಿಹರಿಸಿಕೊಳ್ಳುವುದಕ್ಕೋಸ್ಕರ, ಕಾಪಿಡುವುದು—ಕಾಪಾಡುವುದು, ಎಲ್ಲೊತ್ತುಂ—ಯಾವಾಗಲೂ.

೩೪೭. ನಲ್ಲದಱಿನೊ, ಪೊಲ್ಲದಱಿನೊ ಎಂಬೀ ಗುಣವಾಚಕಗಳೆರಡೂ ಉಪಾಯದಿಂ ಎಂಬುದಕ್ಕೆ ವಿಶೇಷಣಗಳು; ಒಳ್ಳೆಯ ಉಪಾಯದಿಂದಲೋ ಕೆಟ್ಟ ಉಪಾಯದಿಂದಲೋ ಎಂದರೆ ಯಾವುದಾದರೂ ಒಂದು ಉಪಾಯದಿಂದೆಂದರ್ಥ.

೩೪೮. ಎಗ್ಗರ್—ಮೂಢರು, ಮನಂನಿಱಿಪಿ—ಮನವಿಟ್ಟು, ಇರಿಸು ಎಂಬರ್ಥದಲ್ಲಿ ನಿಱಿಸು ಎಂದು ಬೇರೆ ಧಾತುವುಂಟು, ಅೞಿವುದುಂ—ನಾಶವಾಗುತ್ತಲೂ,

೩೪೯. ಕಾರ್ಯವು ಅನುಕೂಲಿಸಲಾರದೆಂದು ತೋರಿದರೂ "ನಾನು ಪ್ರಯತ್ನವನ್ನು ಮಾಡದೆ ಹೋದೆ, ಮಾಡಿದ್ದರೆ ಕಾರ್ಯವು ಆಗುತಿದ್ದಿತೋ ಏನೋ" ಎಂದು ಮುಂದೆ ಕೊರತೆಪಡಲು ಅವಕಾಶವಾಗದಂತೆ ಮಾಡತಕ್ಕ ಪ್ರಯತ್ನವನು ಮಾಡಲೇಬೇಕೆಂದು ತಾತ್ಪರ್ಯ.

೩೫೦. ೧೮೭ ನೆಯ ಪದ್ಯದ ಟಿಪ್ಪಣವನ್ನು ನೋಡಿ.

೩೫೧. ಪಗೆಯದ—ದ್ವೇಷಿಸದ, ಪಗೆಯೆಂಬುದು ಧಾತುವೂ ನಾಮವಾಚಕವೂ, ಭಾವನಾಮವೂ ಆಗುವುದು. ಮಱುಮೆಯ್ಗಳೊಳ್—ಜನ್ಮಾಂತರಗಳಲ್ಲಿ ಸಂದೆಗಂ—ಸಂದೇಹ.

೩೫೨. ಪರಕೃತಿಯುಂ—ಇತರರ ಕಾರ್ಯವನ್ನು, ಸಮಿಾರಂ—ಗಾಳಿ. ಬಿರುಗಾಳಿ ಗಿಡವನ್ನು ಥಟ್ಟನೆ ಉರುಳಿಸಬಲ್ಲುದೆ ಹೊರತು ಎಂತು ಮೇಲಕ್ಕೆ ಎತ್ತಲಾ

ರದೋ ಅಂತು ದುಷ್ಟನು ಪರರ ಕಾರ್ಯವನ್ನು ಹಾಳುಮಾಡಬಲ್ಲನೇ ಹೊರತು ಅದನ್ನು ನೆರವೇರಿಸಲಾರನೆಂದು ತಾತ್ಪರ್ಯ.

೩೫೩. ಪಗೆಯುಂ—ಶತ್ರುವನ್ನು, ಕುತ್ತಮುಂ—ರೋಗವನ್ನು, ಒಗೆದೊಡನೆಯೆ—ಹುಟ್ಟಿದಾಗಲೆ, ಕಡುಬಲ್ಮೆಗಂ—ಮಹಾಬಲಿಷ್ಠನು, ಬಳೆದ—ವೃದ್ಧಿಹೊಂದಿದ.

೩೫೪. ಕುಲಚಕ್ರಮದಿಂದ—ಕುಲದಲ್ಲಿ ಹುಟ್ಟಿದ ಪೂರ್ವಿಕರ ಪರಂಪರೆಯಿಂದ, ಸಹಜಂಪಗೆಗಡ—ಸಹಜಶತ್ರುವಲ್ಲವೆ, ವಧ್ಯಂ—ಕೊಲ್ಲಲ್ಪಡತಕ್ಕವನು.

೩೫೫. ಪ್ರವೇಶಂಗುಡೆ—ಪ್ರವೇಶಕ್ಕೆ ಅವಕಾಶಕೊಡಲು, ನಿಜಪದದೊಳ್—ತನ್ನ ಸ್ಥಾನದಲ್ಲಿ, ನಿಂದು—ನೆಲಸಿ, ಆ ಪದಮನೆ—ಆಸ್ಥಾನವನ್ನೆ ಆತನಂ ನಾಶಿಸಲ್ಕೆ ಎಂದನ್ವಯ, ಆತನಂ—ತನಗೆ ಪ್ರವೇಶಿಸಲು ಅವಕಾಶಕೊಟ್ಟಾತನನ್ನು, ಅಂತಪ್ಪವರ್ಗೆ—ಅಂತವರಿಗೆ, ಜಾರಂ—ವಿಟ.

೩೫೬. ಕಡಿದಾಗಿಸಿ—ಕಠಿನಮಾಡಿಕೊಂಡು, ಪೊಲ್ಲೆಸಗಿದನಂ—ಅಪಕಾರ ಮಾಡಿದವನನ್ನು,

೩೫೭. ಕಡುಚದುರಂ—ಅತಿನಿಪುಣನು, ನಿಜೇಷ್ಟಮುಮಂ—ತನ್ನ ಇಷ್ಟಾರ್ಥವನ್ನೂ.

೩೫೮. ಸದೆಯಲ್ಕೆ ಆಗದುದುಂ—ಅವಧ್ಯವಾದುದು, ಎಯ್ದಲಾಗದುದುಂ—ದುರ್ಗಮವಾದುದು, ಗೆಯಲಾಗದುದುಂ—ದುಷ್ಕರವಾದುದೂ, ಅದಂ—ಆ ಬುದ್ಧಿಯನ್ನು, ವಿದ್ವಾಂಸರ ಬುದ್ಧಿಗೆ ಸಕಲವೂ ಸಾಧ್ಯವಾದುದರಿಂದ ಅಂತಹ ಬುದ್ಧಿಯನ್ನು ಉಪಯೋಗಿಸಬೇಕೆಂದು ತಾತ್ಪರ್ಯ.

೩೫೯. ಅಗಮ್ಯನಂ—ಹೊಂದಲಸಾಧ್ಯನಾದವನನ್ನು, ಅಸೇವ್ಯರುಮಂ—ಸೇವೆಗೆ ಅರ್ಹನಲ್ಲದವನನ್ನೂ, ಏವೇೞ್ಪೆಂ—ಏನಂ+ಪೇೞ್ದಪೆಂ, ಅೞಿವಾಂಪಂ—ನಾಶಹೊಂದುವನು, ಅಶ್ವತರಿಯವೋಲ್—ಹೇಸರಕತ್ತೆಯಂತೆ.

೩೬೦. ತಕ್ಕುದಂ—ಯೋಗ್ಯವಾದುದನ್ನು, ಮಾಡವೇೞ್ಪುದು—ಮಾಡಬೇಕು, ಸುಟ್ಟುದರ್ಕೆ—ಸುಡಲ್ಪಟ್ಟುದಕ್ಕೆ, ಸಿಂಪಿಪ್ಪುದುಂ—ಚಿಮಿಕಿಸುವುದೂ, ಮೇಲ್ಗಡ—ಉತ್ತಮವಲ್ಲವೆ.

೩೬೧. ಪರಿಪಕ್ವತೆಯಿಂ—ಫಲಾವಸ್ಥೆಯಿಂದ ಆಗಲ್ಕೆ ತಕ್ಕುದು—ಆಗಬೇಕಾದುದು.

೧೬೨. ಪುರುಡಿಸುವಾತಂಗೆ—ಸ್ಪರ್ಧೆ ಮಾಡುವವನಿಗೆ, ಬಿನ್ನಮುಂ—ಭಂಗವೂ.

೧೬೩. ಸಿಂದುರದ—ಆನೆಯ, ಸಿಂಧುರ (ಸಂ) ದಾನಾರ್ಥಿ—ಮದೋದಕವನ್ನು ಅಪೇಕ್ಷಿಸುವುದು, ಅಣಂ—ವಿಶೇಷವಾಗಿ.

೧೬೪. ಕೂರ್ಮೃಗವಿಂಡುಗಳ್—ಕ್ರೂರವಾದ ಮೃಗಗಳ ಗುಂಪುಗಳು, ನೆಗಳ್ಗಳಿಂದೆ—ಮೊಸಳೆಗಳಿಂದ, ಪಿಸುಣರಿಂದೆ—ಚಾಡಿಕೋರರಿಂದ, ತಳ್ತ—ವ್ಯಾಪ್ತವಾದ.

೧೬೫. ಅನಲ್ಪಫಲಮಂ—ವಿಶೇಷಫಲವುಳ್ಳ, ದುಸ್ಸಾಧಮಂ—ಸಾಧಿಸಲಸದಳವಾದ, ಕಾರ್ಯಸಂಚಯಮಂ—ಕಾರ್ಯಸಮೂಹವನ್ನು, ಸಾಮದೊಳೇ—ಸಾಮೋಪಾಯದಿಂದಲೇ, ಅಲ್ಪಫಲಾತ್ಯಸಾರಕೃತಿಯಂ—ಸ್ವಲ್ಪಫಲವುಳ್ಳುದೂ ಅತ್ಯಂತ ನಿಸ್ಸಾರವೂ ಆದ ಕಾರ್ಯವನ್ನು, ನೀತಿಶಾಸ್ತ್ರಜ್ಞರೆನಿಸಿ ಹೆಚ್ಚಾದ ಫಲವುಳ್ಳ ಅಸಾಧ್ಯವಾದ ಕಾರ್ಯಗಳನ್ನು ಸಾಮದಿಂದಲೇ ತೀರ್ಮಾನಿಸಶಕ್ಕವರು ಸನ್ಮಂತ್ರಿಗಳೆನಿಸುವರು. ಹಾಗಲ್ಲದೆ ನೀತಿಮಾರ್ಗವನ್ನು ಬಿಟ್ಟು ಅಲ್ಪಫಲವುಳ್ಳ ಅಸಾಧ್ಯವಾದ ಕಾರ್ಯಗಳನ್ನು ದಂಡಗಳಿಂದ ತೀರ್ಮಾನಿಸುವವರು ತಮ್ಮ ದುರ್ನೀತಿಯಿಂದ ರಾಜನ ಸಿರಿಯನ್ನು ತಕ್ಕಡಿಯಲ್ಲಿಡುವರು—ಎಂದರೆ ತಕ್ಕಡಿಯಲ್ಲಿಟ್ಟುದು ಎಂತು ಕೆಳಕ್ಕೂ ಮೇಲಕ್ಕೂ ತೂಗಾಡುತ್ತ ಸರಿಯಾದೊಂದು ರೀತಿಯಲ್ಲಿ ನಿಲ್ಲದಿರುವುದೋ ಅಂತು ನೀತಿಜ್ಞರಲ್ಲದ ದುರ್ಮಂತ್ರಿಗಳ ನಡೆವಳಿಯಿಂದ ರಾಜನ ಸಿರಿಯೂ ಸರಿಯಾದ ಸ್ಥಿತಿಯಲ್ಲಿ ನಿಲ್ಲದೆ ಹೋಗುವುದೆಂದು ತಾತ್ಪರ್ಯ.

೧೬೬. ದಂಡಂಬರಂ—ದಂಡೋಪಾಯದವರೆಗೆ, ವಿಧಾತ್ರಂ—ಬ್ರಹ್ಮನು, ಉರುಪಾಪಿ—ಮಹಾಪಾಪವುಳ್ಳುದು.

೧೬೭. ಇನಿಸಕ್ಕರೆಯಿಂದೆ—ಮಧುರವಾದ ಸಕ್ಕರೆಯಿಂದ, ಇನಿದು+ಸಕ್ಕರೆ, ಶರ್ಕರಾ (ಸಂ) ಕೈಪೆವಡವಲದಿಂದೆ—ಕಹಿಯಾದ ಪಡವಲದಿಂದ.

೧೬೮. ಅಪ್ಪ—ಆಗುವ, ಎಸಕಂಗಳ್—ಕಾರ್ಯಂಗಳು, ಹದಂಗಿಡವು—ಹದಗೆಡುವುದಿಲ್ಲ.

೧೬೯. ಚಂದಿರನಿಂದೆ—ಚಂದ್ರನಿಂದ, ಬಿಸುಗದಿರನಿಂದಮುಂ—ಸೂರ್ಯನಿಂದಲೂ, ಬೆಚ್ಚನೆಕದಿರ್ಗಳ್ ಆವಂಗೊಳವೊ ಅವಂ ಬಿಸುಗದಿರಂ; ಸಂದಣಿಸಿದ—ಪ್ರಾಪ್ತವಾದ, ಪಗೆಯಿಂ—ಹಗೆತನದಿಂದ.

೧೭೦. (೧೫೯ ನೆಯ ಪದ್ಯದ ಟಿಪ್ಪಣಿಯನ್ನು ನೋಡಿ)

೩೨೧. ಪರಿಹರಿಸಲೆಬಲ್ಲಂ—ಹಾಳುಮಾಡುವುದಕ್ಕೆ ಮಾತ್ರವೇ ತಿಳಿವಳಿಕೆಯುಳ್ಳವನು, ನೆಱೆದಪುದು—ಸಮರ್ಥವಾಗಿರುವುದು.

೩೨೨. ತಗದರಂ—ಅಯೋಗ್ಯರನ್ನು, ಎಡೆಗೊಳ್ವ—ಹತ್ತಿರಸೇರಿಸುವ, ಮಿಗೆ—ವಿಶೇಷವಾಗಿ, ಸಂಕಟಕರಮಂ—ಸಂಕಟವನ್ನುಂಟುಮಾಡುವ, ಮಗುಳ್ಕೆ—ಹಿಂತಿರುಗುವುದಕ್ಕೆ, ಎಡೆಗುಡದುದಂ—ಅವಕಾಶವೀಯದ, ವಿಪತ್ಪಂಜರಮಂ—ಆಪತ್ತೆಂಬ ಬೋನನ್ನು.

೩೨೩. ಖಳನಂ—ದುಷ್ಟನಾದ, ಇಳೆಯಾಣ್ಮಂ—ರಾಜನು, ಅಗಮ್ಯಂ—ಸೇರಲನರ್ಹನು, ತಿಳಿಸವಿನೀರಿಂದೆ—ಸ್ವಚ್ಛವಾದ ಸೀನೀರಿಂದ ಕೂರ್ನೆಗಱಂ—ಕ್ರೂರವಾದ ಮೊಸಳೆಯನ್ನು.

೩೨೪. ಬಿಸವಂದದ—ಆಶ್ಚರ್ಯದ, ಸವಿಗತೆಗಳಂ—ಮಧುರವಾದ ಕಥೆಗಳನ್ನು, ಬಿನದಿಪರೋ—ವಿನೋದಪಡುತ್ತಿರುವರೋ, ನಿಸದಂ—ನಿಶ್ಚಯ, ಸಿರಿಯಿಂ—ರಾಜ್ಯಲಕ್ಷ್ಮಿಯಿಂದ, ಬಿಲ್ಲನ್ನು ಹಿಡಿದು ಕೆಲಸಮಾಡದೆ ಆಲಸರಾಗಿ ಸವಿನುಡಿಗಳನಾಡುತ್ತ ಕಾಲಹರಣಮಾಡುವ ಸೇವಕರೊಡನೆ ವಿನೋದಗೊಳ್ಳುತ್ತಿರುವ ರಾಜರ ರಾಜ್ಯಲಕ್ಷ್ಮಿಯನ್ನು ಶತ್ರುಗಳು ವಶಮಾಡಿಕೊಂಡು ತಾವು ವಿನೋದಪಡುತ್ತಿರುವರೆಂದು ತಾತ್ಪರ್ಯ.

೩೨೫. ಬಾಗಿಸಲಾಗದುದು—ಬಗ್ಗಿಸುವುದಕ್ಕೆ ಆಗದಿರುವ, ಉಪಲದಲ್ಲಿ—ಕಲ್ಲಲ್ಲಿ, ಕೂರಸಿಯು—ಕ್ರೂರವಾದ ಕತ್ತಿಯು, ಇದು ಸಾಧ್ಯವಲ್ಲದ ಕಾರ್ಯ; ಇದರಂತೆಯೆ ಶಿಷ್ಯನಲ್ಲದವನಿಗೆ ಬೋಧಿಸುವುದೂ ಅಸಾಧ್ಯವೆಂದು ಭಾವವು; ಈ ವಿಷಯದಲ್ಲಿ ಸೂಚೀಮುಖವೆಂಬ ಪಕ್ಷಿ, ಕೋತಿಗಳಿಗೆ ಬೋಧನೆಮಾಡಿ ಕಡೆಗೆ ತಾನೇ ನಾಶವನ್ನೈದಿತು, ಇದನ್ನು ನೀನು ತಿಳಿ—ಎಂದು ತಾತ್ಪರ್ಯವು.

೩೨೬. ತನ್ನ ಕಾರ್ಯಸಿದ್ಧಿಯಾಗಬೇಕೆಂದು ಕೋರುವವನು ಆಗಾಗ ಕಾರ್ಯವಿಘಾತವುಳ್ಳವನನ್ನೂ, ಜೂಜುಗಾರನನ್ನೂ, ಸೋತವನನ್ನೂ ಮಾತನಾಡಿಸಬಾರದು ಮಾತನಾಡಿಸಿದರೆ ತನ್ನಮೇಲೆ ವಿಶೇಷವಾಗಿ ರೇಗುವರು; ಆದಕಾರಣ ಆಗ ಸುಮ್ಮನಿದ್ದು ಬೇರೆ ಕಾಲದಲ್ಲಿ ಅವರಿಂದ ಕಾರ್ಯವನ್ನು ಸಾಧಿಸಿಕೊಳ್ಳಬೇಕೆಂದು ಭಾವವು.

೩೨೭. ಗಾವಿಲನಂ—ಮೂಢನನ್ನು, ಗ್ರಾಮೀಣ (ಸಂ) ಶಮಮಂ—ಉಪಶಾಂತಿಯನ್ನು, ಕೇವಲವಿಷವರ್ಧನಂ—ಬರಿಯವಿಷವನ್ನುಮಾತ್ರ ಹೆಚ್ಚಿಸುವುದು.

೩೭೯. ಅಪರಿತಜ್ಞಾತಪ್ರಕೃತಿಯೊಳ್—ಯಾವನ ಸ್ವಭಾವವು ಗೊತ್ತಿಲ್ಲವೋ ಅಂತವನಲ್ಲಿ, ಕಪಿಮೂರ್ಖಂ—ಮೂರ್ಖನಾದ ಕಪಿ, ಮುಱಿದಿಟ್ಟಿತ್ತು—ಮುರಿದು ಹಾಕಿತು.

೩೮೦. ಕರಚರಣದೆ—ಕೈಕಾಲುಗಳಿಂದ (ಸಮಾಹಾರದ್ವಂದ್ವವಾದುದರಿಂದ ಏಕವಚನಾಂತವಾಗಿದೆ) ಕೋಡಿಂ—ಶೈತ್ಯದಿಂದ, ಕೋಡು ಎಂಬುದಕ್ಕೆ ಶೈತ್ಯ ಶೃಂಗ ಭಯ—ಎಂದು ನಾನಾರ್ಥಗಳುಂಟು.

೩೮೧. ವಿದುಷಿಯು—ವಿದ್ವತ್ತ್ವವುಳ್ಳವಳ, ಪುಲ್ಲಿಂಗದಲ್ಲಿ ವಿದ್ವಾಂಸ, ಸ್ತ್ರೀ ಲಿಂಗದಲ್ಲಿ ವಿದುಷಿ; ಜಱುಚುತೆ—ವ್ಯರ್ಥವಾಗಿ ನುಡಿಯುತ್ತ, ಜಱುಚು—ವ್ಯರ್ಥಾಲಾಪೆ ಎಂದು ಧಾತ್ವರ್ಥ.

೩೮೨. ಸಡ್ಡೆಯಿಂ—ಶ್ರದ್ಧಾ (ಸಂ) ಬೆಸಗೊಳ್ವಂಗಂ—ಪ್ರಶ್ನೆಮಾಡುವವನಿಗೂ, ಅಱ್ವುದರ್ಕೆ—ಅಳುವುದಕ್ಕೆ,

೩೮೩. ಕಡುಗಱ್ತಲೆಯಿಂ—ಗಾಢಾಂಧಕಾರದಿಂದ, ಇಡಿದಡಸಿದ—ಹೆಚ್ಚಾಗಿ ವ್ಯಾಪಿಸಲ್ಪಟ್ಟ; ದೀಪಂಬೊಲ್—ದೀಪದಂತೆ, ಪೊಲ್ಲಡೆಯೊಳ್—ಅಯೋಗ್ಯತಾದ ಸ್ಥಳದಲ್ಲಿ, ಏವುದೋ—ಏನು ಪ್ರಯೋಜನಕ್ಕೆ ಬರುವುದೋ,

೩೮೪—೩೮೫. "ಜಾತ ಅನುಜಾತ ಅತಿಜಾತ ಅಪಜಾತ" ಎಂದು ಮಕ್ಕಳು ನಾಲ್ಕುಪ್ರಕಾರವುಳ್ಳವರೆಂದು ಶಾಸ್ತ್ರಜ್ಞರು ಹೇಳುವರು:—ಜಾತನು ತಾಯಿ ಗುಣದಂತೆ ಗುಣವುಳ್ಳವನು; ಅನುಜಾತನು—ತಂದೆಯ ಗುಣದಂತೆ ಗುಣವುಳ್ಳವನು, ಅತಿಜಾತನು ತಂದೆಗೂ ಮಿಗಿಲಾದವನು; ಅಪಜಾತನು ಅಧಮಾಧಮನು.

೩೮೬. ಕಡಿವಡೆದು ಕಡಿಯಂ+ಪಡೆದು—ಛೇದವನ್ನು ಹೊಂದಿ, ಛೇದಿಸಲ್ಪಟ್ಟು, ಕಬಂಧಂ—ತಲೆಯಿಲ್ಲದ ಶರೀರ.

೩೮೮. ಒಳ್ಳುಡುಗೆತೊಡುಗೆಯುಂ—ಉತ್ತಮವಾದ ವಸ್ತ್ರಾಭರಣಗಳನ್ನು, ನಡೆನುಡಿಯುಂ—ನಡತೆಗಳನ್ನೂ ಮಾತುಗಳನ್ನೂ,

೩೮೯. ಎನ್ನೆವರಂ—ಎಷ್ಟರವರೆಗೆ, ಅನ್ನೆವರಂ—ಅಷ್ಟರವರೆಗೆ, ಬಿಜ್ಜಪಣಮುಂ ಶಿಲ್ಪಂ—ಬಿಜ್ಜೆಯುಂ ಪಣಮುಂ ಶಿಲ್ಪಮುಂ—ಎಂದು ಸಮುಚ್ಚಯವು ಮೂರಕ್ಕೂ ಸೇರುವುದು. ಶಿಲ್ಪಮುಂ—ಕೈಗಾರಿಕೆಯೂ,

೩೯೦. ಕಲೆಯುಂ—ವಿದ್ಯೆಯನ್ನು, ಪೆಱನಾಡೊಳ್—ಅನ್ಯದೇಶದಲ್ಲಿ,

೩೯೧. ಮನೀಷಿ—ಬುದ್ಧಿಶಾಲಿ ಅದಱ—ಆ ಧನದ,

೩೯೨. ಬಾನೊಳ್ ಆಕಾಶದಲ್ಲಿ, ವಿಹಗಂಗಳ್—ಪಕ್ಷಿಗಳು, ಪಲಮಂ—ಮಾಂಸವನ್ನು.

೩೯೩. ಲೋಷ್ಟದಂತೆವೊಲ್—ಮಣ್ಣು ಹೆಂಟೆಯ ಹಾಗೆ, ಭೂತಂಗಳ್—ಪ್ರಾಣಿಗಳು, ತಿರೆಯೊಳ್—ಭೂಮಿಯಲ್ಲಿ, ಸ್ಥಿರಾ (ಸಂ)

೩೯೪. ಆರಯ್ವವರ್—ವಿಚಾರಣೆಮಾಡುವರು, ಸಕ್ಕಿಗಳಂ—ಸಾಕ್ಷಿಗಳನ್ನು, ಸಾಕ್ಷಿ (ಸಂ) ಪವಣ್—ಪ್ರಮಾಣ (ಸಂ) ಅವಂದಿರ್—ಆ ಸಾಕ್ಷಿಗಳು, ದಿವ್ಯಮಂ—ಜಲದಿವ್ಯ ಅಗ್ನಿದಿವ್ಯಮುಂತಾದುವುಗಳನ್ನು, ಜಲದಿವ್ಯವೆಂದರೆ ಆಳವಾದ ನೀರಲ್ಲಿ ಮುಳುಗಿ ಪ್ರಮಾಣಮಾಡುವುದು, ಅಗ್ನಿದಿವ್ಯವೆಂದರೆ ಅಗ್ನಿಯನ್ನು ಕೈಲಿ ಹಿಡಿದುಕೊಂಡು ಪ್ರಮಾಣಮಾಡುವುದು ಇವುಗಳಿಂದ ಉಪಹತಿಯೇನೂ ಆಗದಿದ್ದರೆ ಸತ್ಯವೆನ್ನುವರು.

೩೯೫. ಅಂತ್ಯಜಂ—ಚಂಡಾಲನು, ನೀಚಜನ್ಮವುಳ್ಳ ಚಂಡಾಲನು ಸಾಕ್ಷಿಯಾಗಿ ಇದ್ದರೂ ದಿವ್ಯವೆಂಬ ಪ್ರಮಾಣದ ಆವಶ್ಯಕತೆಯಿಲ್ಲವೆಂದು ಹೇಳುವಾಗ ದೇವತೆಗಳೆ ಸಾಕ್ಷಿಗಳಾಗಿರುವಾಗ ವಿತರ್ಕವೇನಿರುವುದು? ಮುಖ್ಯವಾಗಿ ಸಾಕ್ಷಿಗಳಿರಬೇಕೆಂಬುದು ಅಭಿಪ್ರಾಯವು.

೩೯೬. ಎಲರ್—ವಾಯು, ಅನಿಲಂ—ಅಗ್ನಿ, ಜವಂ—ಯಮ (ಸಂ) ಆವೆರಡು ಸಂಜೆಗಳ್—ಪ್ರಾತಸ್ಸಂಧ್ಯೆ ಸಾಯಂಸಂಧ್ಯೆ, ಅಱನುಂ—ಧರ್ಮವೂ, ತವೆ—ಚೆನ್ನಾಗಿ, ತಿಳಿಗುಗುಂ—ಇಲ್ಲಿ ತಿಳಿಧಾತುವಿನಮೇಲೆ ಗುಂ ಎಂಬುದಕ್ಕೆ ಬದಲಾಗಿ ಗುಗುಂ ಎಂಬುದು ಹತ್ತಿದೆ. ಮಾನಿಸನಾ—ಮನುಷ್ಯನ, ಮಾನುಷ (ಸಂ) ಚರಿತಮಂ—ನಡೆತೆಯನ್ನು.

೩೯೭. ಪಿಂಗದೆ—ಹಿಂಜರಿಯದೆ, ಪೊಂಗುವ—ವ್ಯಕ್ತವಾಗುವ,

೩೯೮. ಬೆಣ್ಣೆಗೆ ಸಮಂ—ಎಂದರೆ ಬೆಣ್ಣೆಯಂತೆ ಅತಿಮೃದುವಾದುದೆಂದರ್ಥ, ಕೂರ್ಪಂ—ತೀಕ್ಷ್ಣಭಾವವನ್ನು.

೩೯೯. ಜಲದದ—ಮೇಘದ, ಮಲಮುಗುವೆಡೆ—ಮಲವಿಸರ್ಜನಸ್ಥಾನ.

೪೦೦. ಅಲಘುಭರವಾಂತ—ಅಧಿಕಭಾರವುಳ್ಳ, ತುಲೆಯಂ—ತಕ್ಕಡಿಯನ್ನು, ಸಂದೆಯಂ—ಸಂದೇಹ.

೪೦೧. ಬೀಡೊಳ್—ವಾಸಸ್ಥಾನದಲ್ಲಿ, ಐಸಿರಿಯ—ಐಶ್ವರ್ಯವನ್ನು.

೪೦೬. ಪಿರಿದುಂ—ಪ್ರಾಯಶಃ, ಸೌಭಾಗ್ಯಸಂಪನ್ನನಂ—ಒಳ್ಳೆಯ ಅದೃಷ್ಟವುಳ್ಳವನನ್ನು, ಕೃಪಣರ್—ಲೋಭಿಗಳು, ವದಾನ್ಯನಂ—ಮಹೌದಾರ್ಯವುಳ್ಳವನನ್ನು, ಅಕೌಟಿಲ್ಯಾತ್ಮನಂ—ಋಜುಸ್ವಭಾವವುಳ್ಳವನನ್ನು, ಕೊಂಕಿದರ್—ಕುಟಿಲರು, ಬಱವರ್—ಬಡವರು, ಶ್ರೀಯುತನಂ—ಸಂಪತ್ತುಳ್ಳವನನ್ನು.

೪೦೭. ಪಗೆವರ್—ಮಚ್ಚರಿಸುವರು, ವ್ರತಿಗಳ್ಗೆ—ವ್ರತವುಳ್ಳವರಿಗೆ, ಅಸತಿಯರ್—ಜಾರೆಯರು, ಸತಿಯರ್ಗಂ—ಸಾಧ್ವಿಯರಿಗೂ,

೪೦೮. ಜಾರೆ—ಕೆಟ್ಟ ನಡೆತೆಯುಳ್ಳವಳು, ವಲಂ—ವಿಶೇಷವಾಗಿ, ದಂಭಾಚಾರಂ—ದಾಂಭಿಕನು, ಇನಿವಾತಂ—ಸವಿನುಡಿಯನ್ನು,

೪೧೦. ಕಂದಾ—ಮಗುವೆ! ಮಿೞ್ತಿಗೆ—ಮೃತ್ಯುವಿಗೆ, ನೂರ್ವರಿಸಂ—ನೂರು ವರುಷ, ಮೃತಿ—ಸಾವು.

೪೧೧. ತುಱುಗಳುಮಂ—ಧೇನುಗಳನ್ನೂ, ನಿರ್ಭರದಿಂ—ಅತಿಶಯದಿಂದ,

೪೧೨. ವಿಶ್ವಾಸಹಂ—ನಂಬುಗೆಗೆ ಭಂಗವನ್ನುಂಟುಮಾಡುವವನು, ಆವಸಿಪರ್—ವಾಸಮಾಡುವರು.

೪೧೩. ಭೂಮಿ ಹಾಳಾದರೂ, ನಿಪುಣನಾದ ಸೇವಕನು ಹಾಳಾದರೂ ರಾಜನು ಹಾಳಾಗುವನು; ಆದರೆ ಸೇವಕನಿಗೂ ಭೂಮಿಗೂ ಸಾಮ್ಯವನ್ನು ಹೇಳುವುದು ಉಚಿತವಲ್ಲ; ಏಕೆಂದರೆ ಭೂಮಿ ಹಾಳಾದರೆ ಮತ್ತೆ ದೊರೆಯುವುದು, ಸೇವಕರು ಹಾಳಾದರೆ ಮತ್ತೆ ದೊರೆಯರು. ಆದುದರಿಂದ ಸಮರ್ಥನಾದ ಸೇವಕನು ವಿಶೇಷವಾಗಿ ಸಂಮಾನ್ಯನೆಂದು ಭಾವವು.

೪೧೫. ತೆಗಱಲಾಗದು—ಹಳಿಯಬಾರದು, ಬನ್ನಂ—ಭಂಗ.

೪೧೬. ಸಮುಚಿತದಯೆಯಿರದ—ತಕ್ಕ ದಯಾರಸವಿಲ್ಲದ, ಅರಸು—ರಾಜನು, ನಾಣಿಲಿವೆಣ್—ಲಜ್ಜೆಯಿಲ್ಲದ ಹೆಂಗಸು, ಕುಮತಿ—ನೀಚಬುದ್ಧಿಯುಳ್ಳ, ನೆರಂ—ಸಹಾಯನು, ಮಾರ್ನುಡಿವ—ಎದುರುಮಾತಾಡುವ, ಪ್ರಮತ್ತಂ—ಜಾಗರೂಕನಲ್ಲದ,

೪೧೭. ಅಧಿಪನಯಂ—ರಾಜನೀತಿ, ವಿಟೀಜನಂಬೊಲ್—ವೇಶ್ಯಾಜನದಂತೆ, ಇಲ್ಲಿ ರಾಜನೀತಿಗೂ, ವೇಶ್ಯಾಜನಕ್ಕೂ ಹೋಲಿಕೆ ಹೇಳಿದೆ. ದಿಟಮುಂ ಪುಸಿಯುಂ, ಪ್ರಿಯಮುಂ ಕಟುವುಂ, ಕ್ರೂರಂ ದಯಾಳು, ಲೋಭಿ ವದಾನ್ಯಂ, ಜಟಿಲಧನಾಯವ್ಯಯಮುಂ, ಇಂತು ಸಂದರ್ಭಾನುಸಾರದಿಂದ ಪರಸ್ಪರವಿರುದ್ಧವಾದ ಈ ಯೆರಡು

ಗುಣಗಳನ್ನೂ ಹೊಂದಿರುವುದೆಂದು ತಾತ್ಪರ್ಯ. ವದಾನ್ಯಂ—ಅಧಿಕವಾದ ಔದಾರ್ಯವುಳ್ಳುದು, ಬಹುಲಧನಾಯವ್ಯಯಮುಂ—ಹೆಚ್ಚಾಗಿ ಹಣದ ಆದಾಯವೂ ವ್ಯಯವೂ ಉಳ್ಳುದು.

೪೧೮. ಉಪಟಳವೆಸಗದವಂ—ಉಪದ್ರವಮಾಡದವನು, ಅಹಿಗಳಂ—ಸರ್ಪಗಳನ್ನು, ಖಗಪತಿಯುಂ—ಗರುಡನನ್ನು,

೪೧೯. ಅಶೋಚ್ಯರಂ—ಯಾರ ವಿಷಯದಲ್ಲಿ ಶೋಚಿಸತಕ್ಕುದಿಲ್ಲವೋ ಅಂತವರನ್ನು, ಜಾಣ್ನುಡಿಗಳುಮಂ—ಜಾಣತನದ ಮಾತುಗಳನ್ನೂ, (ಪ್ರಜ್ಞಾವಾದಗಳನ್ನೂ)